ಗುರುವಾರ, ಮೇ 21, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆಲ್ಫಿ ಸಂಭ್ರಮ

ದಾವಣಗೆರೆಯ ಎವಿಕೆ ಕಾಲೇಜಿನಲ್ಲಿ ನಡೆದ 2025–26ನೇ ಸಾಲಿನ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿನಿಯರ ಸೆಲ್ಫಿ ಸಂಭ್ರಮ

ಕುರಿ ಮಾರಾಟ ಜೋರು

ಬಕ್ರೀದ್ ಪ್ರಯುಕ್ತ ಜಮ್ಮು ಮತ್ತು ಕಾಶ್ಮೀರದ ಶ್ರೀನಗರ ಮಾರುಕಟ್ಟೆಗೆ ವಿವಿಧೆಡೆಯಿಂದ ಕುರಿ ಮೇಕೆಗಳನ್ನು ಮಾರಾಟಕ್ಕಾಗಿ ತರಲಾಗಿದೆ



PRM/KA/RERA/1251/310/PR/200526/008667
WWW.RERA.KARNATAKA.GOV.IN

A "spacious" hall where the sofa and TV adjust for space.

A balcony that's a laundry zone... with a "garden view" by one small plant.

Pakkad mane folks so close... they and their noses live in your business.

Kids adjusting between corridors and car parks for play area.

"Prime location" that's still not connected to everything important.

What if life was less about swalpa adjusting... and a lot more about living?

Bengaluru, #No more "swalpa adjust maadi"

LAUNCHING **CASAGRAND MOONDANCE** OFF MYSORE RD. 15 mins from RR Nagar

Spacious 2 & 3 BHK Apartments at an Unbelievable Price from ₹73 L – ₹1.08 Cr*

MARKET PRICE	LAUNCH PRICE	EARLY BIRD PRICE
~~₹7499~~/sft.	~~₹5599~~/sft.	₹5199/sft. (For 25 bookings only)

*T & C apply

#NoMoreSwalpaAdjustMaadi

PRM/KA/RERA/1251/310/PR/200526/008667
WWW.RERA.KARNATAKA.GOV.IN

LAUNCHING

CASAGRAND MOONDANCE

OFF MYSORE RD.
15 mins from RR Nagar

Spacious 2 & 3 BHK Apartments starting at an Unbelievable Price from ₹73 L – ₹1.08 Cr*

MARKET PRICE	LAUNCH PRICE	EARLY BIRD PRICE (FOR FIRST 25 BOOKINGS)
~~₹7499~~/sft.	~~₹5599~~/sft.	₹5199/sft.

Handover in 30 months

TYPE	SIZE	LAUNCH PRICE	EARLY BIRD PRICE (FOR FIRST 25 BOOKINGS)
2 BHK	1171 sft. - 1470 sft.	~~₹77L - ₹92L~~	₹73L - ₹86L
3 BHK	1641 sft. - 1866 sft.	~~₹1.03Cr - ₹1.14Cr~~	₹97L - ₹1.08Cr

No. of Units: 504 | Units Sold: 247 | Units Available: 257

Stop adjusting Start living

Community
8.6 acres with just 504 homes, 4.5 acres of open space, & 3 central courtyards across 71,500 sft.

Lifestyle
65+ amenities, a 20,300 sft. grand clubhouse & 100% vehicle-free podium

Planning
100% vaastu-compliant homes with convertible balconies for 3x light & ventilation

Space
12ft wide living & dining spaces, 13ft bedrooms & expansive 8ft windows, largest in the segment

Premium Specifications
Grand main door with digital door lock, premium CP sanitary fittings & more

*T & C apply

65+ World-class Amenities

Outdoor Amenities

FEATURES & ENTERTAINMENT
1. Walking & Jogging Track
2. Cycling Track
3. Senior Citizen Court
4. Reflexology Pathway
5. Aromatic Garden
6. Multi-Purpose Lawn
7. Pets Park With Wash Area
8. Outdoor Board Games **& 8 more**

KIDS
17 Sensory Walk
18. Skating Rink
19. Adventure Play Area
20. Play Mound **& 5 more**

SPORTS, FITNESS & WELLBEING
26. Multipurpose Court
27. Badminton Court
28. Mini-Golf Putting
29. Outdoor Gym **& 4 more**

SWIMMING POOL
34. Adults Pool
35. Kid's Pool
36. Pool Volley Ball
37. Poolside Café
38. Jacuzzi **& 5 more**

Clubhouse Amenities

FEATURES & ENTERTAINMENT
44. Multipurpose Hall with Pantry
45. Minitheatre

INDOOR GAMES
46. Table Tennis
47. Billiard Table
48. Subsoccer
49. Indoor Mini Golf **& 4 more**

FITNESS & WELLBEING
54. Gym
55. Yoga / Aerobics

KIDS PLAY AREA
56. Ball Pool with Slide **& 2 more**

CO-WORKING SPACE
59. Conference Room
60. Co-Working Space
61. Learning Centre

TERRACE
62. Sky Cinema **& 2 more**

CONVENIENCE
65. Ironing Shop
66. Convenio Store **& 3 more**

Connectivity

Mysore Road	5 mins
Challaghatta Metro	6 mins
Rajarajeshwari Hospital	7 mins
Don Bosco Institute	8 mins
NICE Road Junction	10 mins
RV College Belt	15 mins
Global Tech Park	15 mins
Gopalan Arcade Mall	18 mins

Location Map



SCAN FOR LOCATION MAP


SWIMMING POOL

SKY CINEMA

LIVING ROOM

WHY CASAGRAND?

- **Top 7** ranked in India
- **Top 2** ranked in South India
- **No.1** ranked in Chennai for last 8 years*
- **22+ years** of trust & legacy
- **7000+** homes sold (June'24 - May'25)
- **6 Cities** - Chennai, Bengaluru, Hyderabad, Pune, Coimbatore & Dubai
- **2 months** guaranteed rental
- **6 months** guaranteed resale
- **7 years** warranty
- **10 years** maintenance by us
- **2000+** quality checks
- **On-time** delivery of projects

FOR BOOKING CALL: **93840 54982**
CREDAI
Exclusive site visit available. Visit model house at site.

SCAN TO EXPERIENCE THE UN-ADJUSTMENT WAY OF LIFE

CASAGRAND
building aspirations

Promoter Address: No. 34/1, 4th Floor Salma Bizhouse Meanee Avenue Road, Halasuru, Karnataka 560 042.

*Based on CBRE report 2024

Casagrand Premier Builder Limited is proposing, subject to receipt of requisite approvals, market conditions and other considerations, to make an initial public offer of its equity shares and has filed a draft red herring prospectus ("DRHP") with the Securities and Exchange Board of India ("SEBI"). The DRHP is available on the website of our Company, at www.casagrand.co.in, the SEBI at www.sebi.gov.in as well as on the websites of the book running lead managers Motilal Oswal Investment Advisors Limited and DAM Capital Advisors Limited at www.motilaloswalgroup.com and www.dam-capital.in respectively, and the websites of the stock exchange(s) at www.nseindia.com and www.bseindia.com, respectively. Any potential investor should note that investment in equity shares involves a high degree of risk and for details relating to such risk, see "Risk Factors" of the RHP, when available. Potential investors should not rely on the DRHP filed with SEBI for making any investment decision.

The Equity Shares have not been and will not be registered under the U.S. Securities Act of 1933, as amended ("U.S. Securities Act") or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold outside the United States in "offshore transactions" as defined in and in compliance with Regulation S under the U.S. Securities Act and the applicable laws of the jurisdiction where those offers and sales occur.

ಕ್ಯಾಮರಾನ್ ಗ್ರೀನ್ ಮಿಂಚು
ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಕ್ಯಾಮರಾನ್ ಗ್ರೀನ್ ಅವರು ಬುಧವಾರ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಎರಡು ವಿಕೆಟ್ ಗಳಿಸಿ ಮಿಂಚಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 75,318 | ನಿಫ್ಟಿ 23,659 | $/₹ 96.86 | ಚಿನ್ನ (Std. 10g) ₹1,63,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,77,500 (ಬೆಂಗಳೂರು)

ಪಾಲಿಕೆ ಚುನಾವಣೆ: ಕೊನೇ ಗಡುವು

ಆಗಸ್ಟ್ ಅಂತ್ಯದೊಳಗೆ ಐದು ಪಾಲಿಕೆಗಳಿಗೆ ಚುನಾವಣೆ ನಡೆಸಿ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಪಂಚ ಪಾಲಿಕೆಗಳ ಚುನಾವಣೆ ಪ್ರಕ್ರಿಯೆ ಮುಗಿಸಲು ಅಂತಿಮ ಅವಕಾಶವಾಗಿ ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಆಗಸ್ಟ್ 31ರವರೆಗೆ ಹೆಚ್ಚುವರಿ ಸಮಯ ನೀಡಿದೆ.

ಮೇಲ್ಮನವಿಯ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಪಂಚೋಲಿ ಅವರನ್ನೊಳಗೊಂಡ ಪೀಠವು, ಗಡುವನ್ನು ಜೂನ್ 30ರಿಂದ ಆಗಸ್ಟ್ 30ರ ವರೆಗೆ ವಿಸ್ತರಿಸಿತು. 'ಮತ್ತೆ ಗಡುವಿನ ವಿಸ್ತರಣೆ ಮಾಡುವುದಿಲ್ಲ' ಎಂದು ನ್ಯಾಯಪೀಠವು ಸ್ಪಷ್ಟಪಡಿಸಿತು.

ಜನಗಣತಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್), ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿ ನಿರತರಾಗುವುದರಿಂದ ಪಾಲಿಕೆಗಳ ಚುನಾವಣೆ ಮುಗಿಸಲು ಸೆಪ್ಟೆಂಬರ್ ಅಂತ್ಯದ ವರೆಗೆ ಕಾಲಾವಕಾಶ ನೀಡಬೇಕು ಎಂದು ರಾಜ್ಯ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗ ಮನವಿ ಸಲ್ಲಿಸಿದ್ದವು.

3A

ಆಯೋಗ, ಸರ್ಕಾರದ ವಾದ?

ಎರಡು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದ ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗ, ಚುನಾವಣೆ ಮುಗಿಸಲು ಸೆಪ್ಟೆಂಬರ್ 30ರವರೆಗೆ ಸಮಯ ಕೋರಿದವು.

ನ್ಯಾಯಾಲಯದ ನಿರ್ದೇಶನದಂತೆ ಚುನಾವಣೆಗಳನ್ನು ಪೂರ್ಣಗೊಳಿಸಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಆಯೋಗವು ತನ್ನ ಅರ್ಜಿಯಲ್ಲಿ ತಿಳಿಸಿತ್ತು.

'ಆದಾಗ್ಯೂ, ಕೇಂದ್ರ ಸರ್ಕಾರವು ಜನಗಣತಿಗೆ ಆದೇಶಿಸಿರುವುದರಿಂದ ರಾಜ್ಯ ಸರ್ಕಾರಿ ಅಧಿಕಾರಿಗಳು ವ್ಯಕ್ತಪಡಿಸಿದ ಕಳವಳಗಳು ಮೇಲ್ನೋಟಕ್ಕೆ ನಿಜವೆಂದು ತೋರುತ್ತವೆ. ಚುನಾವಣೆಗಳನ್ನು ನಡೆಸಲು ರಾಜ್ಯ ಚುನಾವಣಾ ಆಯೋಗಕ್ಕೆ ಸಹಾಯ ಮಾಡುವ ಜವಾಬ್ದಾರಿಗಳನ್ನು ಹೊಂದಿರುವ ಅಧಿಕಾರಿಗಳ ಸಂಪೂರ್ಣ ಸಮಯ ಮತ್ತು ಗಮನವನ್ನು ಎಸ್‌ಐಆರ್ ಆಕ್ರಮಿಸಿಕೊಂಡಿದೆ. ಆದ್ದರಿಂದ, ಚುನಾವಣೆಗಳನ್ನು ನಡೆಸುವಲ್ಲಿ ಕೋರಿದ ಸಮಯ ವಿಸ್ತರಣೆಯು ವಿಶ್ವಾಸಾರ್ಹವಾಗಿದೆ' ಎಂದು ಆಯೋಗ ಹೇಳಿತ್ತು.

3A

ಪೀಠದ ಮುಂದೆ ಇರಿಸಿರುವ ದಾಖಲೆಗಳು ಹಾಗೂ ಪ್ರಸ್ತುತ ಸನ್ನಿವೇಶವನ್ನು ಪರಿಗಣಿಸಿ ಚುನಾವಣೆ ನಡೆಸುವ ಕಾಲಾವಕಾಶವನ್ನು ಆಗಸ್ಟ್ ಅಂತ್ಯದ ವರೆಗೆ ವಿಸ್ತರಿಸಲಾಗಿದೆ. ಮತ್ತೊಮ್ಮೆ ವಿಸ್ತರಣೆ ನೀಡುವುದಿಲ್ಲ
ನ್ಯಾಯಪೀಠ

ಆಗಸ್ಟ್ 30ರ ಒಳಗೆ ಚುನಾವಣೆ ಮಾಡಲು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಅಧಿಕಾರಿಗಳ ಜೊತೆ ಚರ್ಚಿಸಿ ಈ ದಿನಾಂಕದ ಒಳಗೆ ಆಯುಕ್ತರು ಚುನಾವಣೆ ನಡೆಸಲಿದ್ದಾರೆ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಾಂಗ್ರೆಸ್‌ನ ಆಂತರಿಕ ಸಮೀಕ್ಷೆಗಳ ಪ್ರಕಾರ ಜಿಬಿಎಯ 5 ಪಾಲಿಕೆಗಳಲ್ಲಿ ಸೋಲು ಖಚಿತವಾಗಿದೆ. ಆದ್ದರಿಂದ ಚುನಾವಣೆಯನ್ನು ಉದ್ದೇಶಪೂರ್ವಕವಾಗಿ ಮುಂದೂಡುತ್ತಿದೆ
ಆರ್.ಅಶೋಕ, ವಿಧಾನಸಭೆಯ ವಿಪಕ್ಷ ನಾಯಕ

ಚುನಾವಣೆ ಸಿದ್ಧತೆ ಸುತ್ತಮುತ್ತ...

198 ವಾರ್ಡ್ 2020ರ ಸೆ. 10ರಂದು ಬಿಬಿಎಂಪಿ ಕೌನ್ಸಿಲ್ ಮುಗಿದಾಗ ಇದ್ದ ಕಾರ್ಪೊರೇಟರ್‌ಗಳ ಸಂಖ್ಯೆ

243 ವಾರ್ಡ್, 2021ರ ಜ.29ರಂದು ಬಿಬಿಎಂಪಿಯ ವಾರ್ಡ್ ಸಂಖ್ಯೆಗಳನ್ನು ಮರುವಿಂಗಡಿಸಿ ಬಿಜೆಪಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು

225 ವಾರ್ಡ್ ಬಿಬಿಎಂಪಿ ವ್ಯಾಪ್ತಿಯಲ್ಲಿ ವಾರ್ಡ್‌ಗಳನ್ನು ಮರುರಚಿಸಿ 2023ರ ಸೆ.25ರಂದು ಕಾಂಗ್ರೆಸ್ ಸರ್ಕಾರ ಅಧಿಸೂಚಿಸಿತ್ತು

5 ನಗರ ಪಾಲಿಕೆ, ಬಿಬಿಎಂಪಿಯ ಬದಲು ಜಿಬಿಎ ಸ್ಥಾಪಿಸಿ, ಅದರಡಿ ಐದು ನಗರ ಪಾಲಿಕೆಗಳನ್ನು ರಚಿಸಿ 2025ರ ಸೆಪ್ಟೆಂಬರ್ 2ರಂದು ಅಧಿಸೂಚಿಸಲಾಗಿತ್ತು

369 ವಾರ್ಡ್; ಐದು ನಗರ ಪಾಲಿಕೆಗಳ ವಾರ್ಡ್‌ಗಳನ್ನು ಪುನರ್ ವಿಂಗಡಿಸಿ 2025ರ ನವೆಂಬರ್ 19ರಂದು ಅಂತಿಮ ಅಧಿಸೂಚನೆ ಪ್ರಕಟವಾಗಿತ್ತು. ಆ ಬಳಿಕ, ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿತ್ತು

ಮತ್ಸ್ಯಕನ್ಯೆ...

ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಬುಧವಾರ 'ಬೇಸಿಗೆ ಮೇಳ'ದ ಅಂಗವಾಗಿ ಏರ್ಪಡಿಸಿದ್ದ 'ಮತ್ಸ್ಯಕನ್ಯೆ' ಪ್ರದರ್ಶನವನ್ನು ಪ್ರವಾಸಿಗರು ವೀಕ್ಷಿಸಿದರು

ಕೆಪಿಎಸ್ ಮಕ್ಕಳಿಗೆ ಪ್ರತ್ಯೇಕ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) ವಿದ್ಯಾರ್ಥಿಗಳಿಗೆ ಖಾಸಗಿ ಶಾಲೆಗಳ ಮಾದರಿಯಲ್ಲೇ ಪ್ರತ್ಯೇಕ ಸಾರಿಗೆ ಸೌಕರ್ಯ ಸಿಗಲಿದ್ದು, ಹೊಸ ಯೋಜನೆಯನ್ನು 2026–27ನೇ ಶೈಕ್ಷಣಿಕ ಸಾಲಿನಿಂದಲೇ ಜಾರಿಯಾಗಲಿದೆ.

ಪ್ರತಿ ಕೆಪಿಎಸ್‌ನಲ್ಲೂ ಪೂರ್ವ ಪ್ರಾಥಮಿಕ ಹಂತದಿಂದ ಪಿಯುಸಿವರೆಗೂ 1,200 ಮಕ್ಕಳಿಗೆ ಪ್ರವೇಶ ನೀಡಲಾಗುತ್ತಿದೆ. ಸುತ್ತಮುತ್ತಲ ಹಳ್ಳಿ, ವಾರ್ಡ್‌ಗಳಿಂದ ಬರುವ ಮಕ್ಕಳನ್ನು ಶಾಲಾ ಬಸ್‌ಗಳಲ್ಲೇ ಕರೆತಂದು, ಮನೆಗೆ ಬಿಡಲಾಗುವುದು. ಇಂತಹ ಸೌಲಭ್ಯ ಪಡೆಯುವ ಮಕ್ಕಳಿಗೆ ಖಾಸಗಿ ಶಾಲೆಗಳು ಪ್ರತ್ಯೇಕ ಶುಲ್ಕ ವಿಧಿಸುತ್ತವೆ. ಆದರೆ, ಕೆಪಿಎಸ್ ಶಾಲಾ ಮಕ್ಕಳಿಗೆ ಈ ಸವಲತ್ತು ಸಂಪೂರ್ಣ ಉಚಿತ.

3A

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಬಿಸಿಯೂಟ, ಉಚಿತ ಪಠ್ಯ, ನೋಟ್‌ಬುಕ್, ಶೂ, ಸಾಕ್ಸ್, ಸಮವಸ್ತ್ರದ ಜತೆಗೆ ಬಸ್ ಸೌಕರ್ಯವನ್ನೂ ಕಲ್ಪಿಸಲಾಗುತ್ತಿದೆ. ಮಕ್ಕಳನ್ನು ಸರ್ಕಾರಿ ಶಾಲೆಗೇ ಸೇರಿಸಲು ಪೋಷಕರ ಮನವೊಲಿಸಬೇಕು
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಶಾಲಾ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಮಧು ಬಂಗಾರಪ್ಪ ಇದ್ದರು

ಹೊಸದಾಗಿ 800 ಕೆಪಿಎಸ್ ಶಾಲೆ

'ಹೊಸದಾಗಿ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ತ್ವರಿತವಾಗಿ ಟೆಂಡರ್ ಕರೆಯಬೇಕು' ಎಂದು ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಮುಂದಿನ ಎರಡು ವರ್ಷಗಳಲ್ಲಿ ಎಲ್ಲ ಶಾಲೆಗಳೂ ಕಾರ್ಯಾರಂಭ ಮಾಡಬೇಕು. ರಾಜ್ಯದಾದ್ಯಂತ ಜೂನ್ 1ರಂದು ಶಾಲೆಗಳನ್ನು ಆರಂಭಿಸಲಾಗುತ್ತಿದ್ದು, ಅಂದೇ ಶಿವಮೊಗ್ಗದಲ್ಲಿ ಹೊಸ ಕೆಪಿಎಸ್‌ಗೆ ಚಾಲನೆ ನೀಡಲಾ ಗುವುದು' ಎಂದು ಮಾಹಿತಿ ನೀಡಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸಫಾರಿ: ತೆರೆದ ವಾಹನಗಳಿಗೆ ಅವಕಾಶವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ ಮತ್ತು ವನ್ಯಜೀವಿಧಾಮಗಳ ಸಫಾರಿಯಲ್ಲಿ ತೆರೆದ ವಾಹನಗಳ (ಕ್ಯಾಂಪರ್) ಬದಲಿಗೆ ಸುರಕ್ಷಿತ ಬಸ್ ಬಳಕೆ ಮಾಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ದುಬಾರೆ ಆನೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾಳಗದ ವೇಳೆ ಪ್ರವಾಸಿ ಮಹಿಳೆ ಮೃತಪಟ್ಟ ಕಾರಣ ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಹೆಚ್ಚಿನ ಗಮನ ಹರಿಸುವಂತೆ ಅವರು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸ್ಪಷ್ಟ ನಿರ್ದೇಶನ ನೀಡಿದರು. ಈ ಬಾರಿ ದಸರಾ ಮಹೋತ್ಸವಕ್ಕೆ 'ಕಂಜನ್' ಆನೆ ಬಳಕೆ ಮಾಡುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಬಂಡೀಪುರ, ನಾಗರಹೊಳೆ, ಕಾಳಿ, ಬಿಳಿಗಿರಿರಂಗನ ಬೆಟ್ಟ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ಬೆಟ್ಟ, ದಾಂಡೇಲಿ, ಕೆ.ಗುಡಿ ಸೇರಿದಂತೆ ರಾಜ್ಯದ ವಿವಿಧ ವನ್ಯಜೀವಿಧಾಮ ಮತ್ತು ಅರಣ್ಯಗಳಲ್ಲಿ ಸಫಾರಿ ನಡೆಯುತ್ತಿದೆ. ದೇಶ–ವಿದೇಶಗಳಿಂದಲೂ ಪ್ರವಾಸಿಗರು, ವನ್ಯಜೀವಿ ಪ್ರಿಯರು ಇಲ್ಲಿಗೆ ಆಗಮಿಸುತ್ತಾರೆ. ಅದೃಷ್ಟವಶಾತ್ ಈವರೆಗೆ ಸಫಾರಿ ಪ್ರದೇಶಗಳಲ್ಲಿ ಆನೆಗಳು, ಹುಲಿಗಳು ಸೇರಿ ಯಾವುದೇ ವನ್ಯಮೃಗ ಸಫಾರಿ ವಾಹನಗಳ ಮೇಲೆ ದಾಳಿ ಮಾಡಿ ಜೀವಹಾನಿ ಮಾಡಿದ ಘಟನೆ ಸಂಭವಿಸಿಲ್ಲ. ಆದಾಗ್ಯೂ ಅನಾಹುತ ಸಂಭವಿಸುವ ಮೊದಲೇ ಎಚ್ಚೆತ್ತುಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಇನ್ನು ಮುಂದೆ ತೆರೆದ ಕ್ಯಾಂಪರ್ ಬದಲಿಗೆ ಸುರಕ್ಷಿತ ಬಸ್‌ಗಳನ್ನೇ ಬಳಸಬೇಕು. ಈಗ ಬಳಕೆಯಲ್ಲಿರುವ ಕ್ಯಾಂಪರ್‌ಗಳಿಗೆ ಕಬ್ಬಿಣದ ಸರಳುಗಳಿಂದ ಕೂಡಿದ ಜಾಲರಿಗಳನ್ನು ಅಥವಾ ಒಡೆಯಲಾಗದ ಗಾಜು ಅಳವಡಿಸಿ ಬಳಸುವ ಬಗ್ಗೆ ಕ್ರಮವಹಿಸಬೇಕು. ಪ್ರವಾಸಿಗರು ಅರಣ್ಯದಲ್ಲಿ ಹೊರಗೆ ಇಳಿಯಲು ಅವಕಾಶ ನೀಡದಂತೆ ಮತ್ತು ಪ್ರತಿ ಸಫಾರಿ ವಾಹನದಲ್ಲಿ ಪ್ರಥಮ ಚಿಕಿತ್ಸೆಯ ಕಿಟ್ ಹಾಗೂ ಸಫಾರಿ ಕೇಂದ್ರಗಳಿಗೆ ಸಮೀಪದಲ್ಲಿ ಆ್ಯಂಬುಲೆನ್ಸ್ ವಾಹನ ಇರುವುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ಆನೆ ಶಿಬಿರ: ಜಾರಿಯಾಗದ ಶಿಫಾರಸು 7

Toyota i-CONNECT | Toyota Mobility Service Conversion | Fleet | Leasing | TOYOTA U TRUST Buy | Sell | Exchange - Used car | TOYOTA FINANCIAL SERVICES

Bharat Toyota (Formerly Ravindu Toyota) **Bangalore:** [Rajajinagar, K R Puram, Magadi Rd, Marathahalli, Domlur, Victoria Rd, Magadi Road, Yeshwantpur]: 8058245555 **Kolar:** 9606090040 **Tumkur:** 9379189796

Nandi Toyota **Bangalore:** [Banashankari,Banaswadi, Bannerghatta, Bommanahalli, Whitefield]: 7022340713 Hosur Road: 7353628633 Kanakapura Rd: 9916627733 Queens Rd: 9741310066

Viva Toyota **Bangalore:** [Hebbal, Vidyaranyapura]: 9900027736 [Airport Rd, Kogilu]: 9900030617 Mysore Rd: 9900030620

Sundaram Toyota **Bangalore:** [Madavara, Tumkur Rd]: 9741100111

Shodha Toyota **Bagalkot:** 8147599463 **Belagavi:** Shahapur: 8147599461 Poona-Bangalore Road: 7899305505, 7760963774 **Bijapur:** 9606484983 **Davangere:** 9008952277 **Hubli:** 7204818810, 8123047553

Palace Toyota **Hunsur:** 9663709743 **Kushalnagar:** 8971524206 **Madikeri:** 7022671919 **Mandya:** 9538874907 **Mysore:** Hootagalli: 9538874906 Krishnamurthy Puram: 9538874923

United Toyota **Mangalore:** [Bunt's Hostel, Padil & Puttur], 9686687581 **Udupi, Karkala, Kundapur, Uttara Kannada:** 8123777582

Shakti Toyota **Chikkamagaluru, Channarayapatna, Hassan, Kadur:** 9980532064 **Shivamogga:** 8123865980, 8044187330; **Sagara:** 9686652728

Patson Toyota **Belagavi:** Shahapur P.B Road: 9036954788; Udhyambagh: 9686203850

Karuna Toyota **Gulbarga:** 7618772056 **Raichur:** 7829992909

BJS Toyota **Hospet:** 7829927943 **Bellary:** 7829927957 **Koppal:** 7829927968 **Chitradurga:** 7829927933 **Gangavathi:** 7829927943

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

‘ಕುಲಪತಿ ನೇಮಕ: ಶೋಧನಾ ಸಮಿತಿಗೆ ನಿಯಮ ಉಲ್ಲಂಘಿಸಿ ಆಯ್ಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಸಂಬಂಧಿಸಿದ ಶೋಧನಾ ಸಮಿತಿಗೆ ಸಿಂಡಿಕೇಟ್ ಪ್ರತಿನಿಧಿಯಾಗಿ ತಜ್ಞರೊಬ್ಬರ ಹೆಸರನ್ನು ನಿಯಮ ಉಲ್ಲಂಘಿಸಿ ಸೇರ್ಪಡೆ ಮಾಡಲಾಗಿದೆ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಿಕ್ಷಕರ ಸಂಘ ಆರೋಪಿಸಿದೆ.

‘ಶೋಧನಾ ಸಮಿತಿಗೆ ಸದಸ್ಯರೊಬ್ಬರನ್ನು ಆಯ್ಕೆ ಮಾಡಲು ಈಚೆಗೆ ವಿಶೇಷ ಸಿಂಡಿಕೇಟ್ ಸಭೆ ಆಯೋಜಿಸಲಾಗಿತ್ತು. ಇದರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ದಯಾನಂದ ಅಗಸರ್ ಹೆಸರನ್ನು ಸಮಿತಿಯ ಸದಸ್ಯ ಸ್ಥಾನಕ್ಕೆ ಸೂಚಿಸಲು ತೆಗೆದುಕೊಂಡಿರುವ ನಿರ್ಧಾರ ಕಾನೂನು ಪ್ರಕಾರ ತಪ್ಪಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

‘ಮೇ 4ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗೆ ಆಕ್ಷೇಪ ವ್ಯಕ್ತಪಡಿಸಲಾಗಿದೆ. ಅಲ್ಲದೆ ಇದನ್ನು ಬದಲಾಯಿಸುವಂತೆ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧಾರ ಕೈಗೊಂಡು, ರಾಜ್ಯಪಾಲರು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ’ ಎಂದು ತಿಳಿಸಿದೆ.

ಪದ್ಮಾ ಶೇಖರ್ ಹೆಸರನ್ನು ಏಳು ಮಂದಿ ಸಿಂಡಿಕೇಟ್ ಸದಸ್ಯರು ಸೂಚಿಸಿದರೂ ಕುಲಪತಿ ಒಪ್ಪಿಕೊಂಡಿಲ್ಲ. ದಯಾನಂದ ಅಗಸರ್ ಅವರ ಹೆಸರನ್ನು ಶಿಫಾರಸು ಮಾಡಿರುವುದು ಪ್ರಮಾದಕ್ಕೆ ಕಾರಣವಾಗಿದೆ ಎಂದು ತಿಳಿಸಲಾಗಿದೆ.

ಮೆಟ್ರೊ: ಸೌರಶಕ್ತಿ ಬಳಕೆ ಪರಿಶೀಲನೆ

ನೀಲಿ ಮಾರ್ಗ: ಐಐಎಸ್‌ಸಿ ವರದಿ ಬಗ್ಗೆ ಬಿಎಂಆರ್‌ಸಿಎಲ್ ಅಧಿಕಾರಿಗಳ ಹೇಳಿಕೆ

ನಮ್ಮ ಮೆಟ್ರೊ ನೀಲಿ ಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ನೀಲಿ ಮಾರ್ಗದಲ್ಲಿ ಸೌರ ವಿದ್ಯುತ್‌ನಿಂದ ರೈಲು ಓಡಿಸಲು ಸಾಧ್ಯವಿದೆ. ಇದರಿಂದ ವಾರ್ಷಿಕ ಸರಾಸರಿ ₹ 61 ಕೋಟಿ ಉಳಿತಾಯವಾಗಬಹುದು ಎಂದು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸಲ್ಲಿಸಿರುವ ವರದಿಯ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ರೇಷ್ಮೆ ಮಂಡಳಿಯಿಂದ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದ ಕಾಮಗಾರಿಗಳು ಬಹುತೇಕ ಅಂತಿಮ ಹಂತಕ್ಕೆ ಬಂದಿವೆ. ಮುಂದಿನ ವರ್ಷ ರೈಲುಗಳು ಸಂಚರಿಸಲಿವೆ. ಯೋಜನೆಯಂತೆ ವಿದ್ಯುದ್ದೀಕರಣಕ್ಕೆ ಸಂಬಂಧಿಸಿದ ಟೆಂಡರ್‌ಗಳೆಲ್ಲ ಮುಗಿದು ಕೆಲಸಗಳು ನಡೆಯುತ್ತಿವೆ. ಈಗ ಸೌರಶಕ್ತಿಯಿಂದ ರೈಲು ಸಂಚರಿಸುವ ಯೋಜನೆ ರೂಪಿಸಿದರೆ ಹೆಚ್ಚುವರಿ ಹೊರೆಯಾಗಲಿದೆ ಎಂದು ‘ನಮ್ಮ ಮೆಟ್ರೊ’ದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಸೌರ ವಿದ್ಯುತ್ ಬಳಕೆ ಲಾಭದಾಯಕ ಎಂದು ವರದಿಯಲ್ಲಿ ತಿಳಿಸಲಾಗಿದೆ. ಅನುಷ್ಠಾನಗೊಳಿಸಿದ ಮೇಲೆ ಮೊದಲ ಐದು ವರ್ಷ ಅಷ್ಟಾಗಿ ಖರ್ಚು ಬರುವುದಿಲ್ಲ. ಅದನ್ನೆಲ್ಲ ಲಾಭ ಎಂದು ಲೆಕ್ಕ ಹಾಕಲು ಬರುವುದಿಲ್ಲ. ಬ್ಯಾಟರಿ ಬದಲಾಯಿಸುವುದೂ ಸೇರಿದಂತೆ ವಿವಿಧ ಖರ್ಚುಗಳು ಆಮೇಲೆ ಹೆಚ್ಚಾಗುತ್ತವೆ. ಎಲ್ಲವನ್ನೂ ಪರಿಗಣಿಸಬೇಕಾಗುತ್ತದೆ ಎಂದು ಹೇಳಿದರು.

> **ಇದು ಕೇವಲ ಸಂಶೋಧನೆಯಲ್ಲ, ದಶಕಗಳ ಕಾಲ ಲಾಭ ನೀಡುವ ಮತ್ತು ತಕ್ಷಣವೇ ಜಾರಿಗೆ ತರಬಹುದಾದ ಮೂಲಸೌಕರ್ಯ ಹೂಡಿಕೆ.**
> **ಆಶಿಶ್ ವರ್ಮಾ,** ಸಂಶೋಧಕ, ಐಐಎಸ್‌ಸಿ ಸುಸ್ಥಿರ ಸಾರಿಗೆ ಪ್ರಯೋಗಾಲಯದ ಸಂಚಾಲಕ

ಹಸಿರು ಮಾರ್ಗದ ವಿಸ್ತರಣಾ ನಿಲ್ದಾಣಗಳಲ್ಲಿ ಅಂದರೆ ನಾಗಸಂದ್ರದಿಂದ ಮಾದಾವರವರೆಗಿನ ನಿಲ್ದಾಣಗಳಲ್ಲಿ, ಹಳದಿ ಮಾರ್ಗದ ನಿಲ್ದಾಣಗಳಲ್ಲಿ ಈಗಾಗಲೇ ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಲಾಗಿದೆ. ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ನಿಲ್ದಾಣಗಳಲ್ಲಿಯೂ ಅವಕಾಶ ಇರುವಲ್ಲಿ ಸೌರ ವಿದ್ಯುತ್ ಬಳಕೆಯನ್ನು ಜಾರಿಗೊಳಿಸಲಾಗುವುದು. ಆದರೆ, ಅವೆಲ್ಲ ನಿಲ್ದಾಣಕ್ಕೆ ಸೀಮಿತವಾಗಿದ್ದು, ರೈಲು ಸಂಚಾರಕ್ಕೆ ಅಲ್ಲ ಎಂದರು.

‘ಐಐಎಸ್‌ಸಿ ವರದಿ ಸಲ್ಲಿಸಿದೆ. ಇದನ್ನು ಮಂಡಳಿ ಸಭೆಯಲ್ಲಿ ಚರ್ಚಿಸಲಾಗುವುದು. ಸಾಧಕ–ಬಾಧಕಗಳನ್ನು ಪರಿಶೀಲಿಸಲಾಗುವುದು’ ಎಂದು ತಿಳಿಸಿದರು.

20 ಮೆಗಾವಾಟ್ ವಿದ್ಯುತ್ ಉತ್ಪಾದನೆ

ಅವಕಾಶ ಇರುವ ನಿಲ್ದಾಣಗಳಲ್ಲಿ ಸೌರವಿದ್ಯುತ್ ಫಲಕಗಳನ್ನು ಅಳವಡಿಸಲಾಗಿದೆ. ಸುಮಾರು 20 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವರದಿಯಲ್ಲಿ ಏನಿದೆ?

- ಬಿಎಂಆರ್‌ಸಿಎಲ್‌ಗೆ ಸೇರಿದ ಜಾಗವನ್ನು ಮಾತ್ರ ಬಳಸಿಕೊಂಡು ನೀಲಿ ಮಾರ್ಗವನ್ನು ಶೇ 100 ರಷ್ಟು ಸೌರಶಕ್ತಿ ಆಧಾರಿತ ವ್ಯವಸ್ಥೆಯನ್ನಾಗಿ ಮಾಡಬಹುದು
- 21 ರೈಲುಗಳು ಪ್ರತಿ 2 ನಿಮಿಷದ ಅಂತರದಲ್ಲಿ ಸಂಚರಿಸಿದರೆ ವರ್ಷಕ್ಕೆ 152 ಗಿಗಾವಾಟ್ ವಿದ್ಯುತ್ ಬೇಕಾಗುತ್ತದೆ. ಸೌರ ಫಲಕಗಳನ್ನು ಅಳವಡಿಸಿಕೊಂಡರೆ ಇಷ್ಟು ವಿದ್ಯುತ್ ಉತ್ಪಾದನೆ ಸಾಧ್ಯವಾಗಲಿದೆ. ಮೆಟ್ರೊ ನಿಲ್ದಾಣಗಳ ಚಾವಣಿ, ಹಳಿಗಳ ಬದಿ (ವಯಾಡಕ್ಟ್) ಮತ್ತು ಡಿಪೊಗಳಲ್ಲಿ ಅಷ್ಟು ಫಲಕ ಅಳವಡಿಸಲು ಸ್ಥಳ ಲಭ್ಯವಿದೆ.
- ಮೆಟ್ರೊ ರೈಲುಗಳ ಬ್ರೇಕ್ ಹಾಕಿದಾಗ ಉತ್ಪತ್ತಿಯಾಗುವ ವಿದ್ಯುತ್ ಶೇ 29ರಷ್ಟು ಇಂಧನವನ್ನು ಉಳಿಸುತ್ತದೆ. ಸೌರಶಕ್ತಿಯೊಂದಿಗೆ ಸೇರಿದರೆ ಇದು ಶೇ 61 ರಷ್ಟು ಆಗುತ್ತದೆ.
- ಮೊದಲ ವರ್ಷವೇ ₹36.4 ಕೋಟಿ ವಿದ್ಯುತ್ ಬಿಲ್ ಉಳಿಸಬಹುದು. ದೀರ್ಘಾವಧಿ ತೆಗೆದುಕೊಂಡರೆ 25 ವರ್ಷಗಳಲ್ಲಿ ಅಂದಾಜು ₹2,600 ಕೋಟಿಗೂ ಅಧಿಕ ಹಣ ಉಳಿತಾಯವಾಗಬಹುದು.
- ಪ್ರತಿ ವರ್ಷ 44,526 ಟನ್ ಹೊಗೆ (ಇಂಗಾಲದ ಡೈ ಆಕ್ಸೈಡ್) ಹೊರಸೂಸುವಿಕೆಯನ್ನು ತಡೆಯಬಹುದು. ಹಾಲಿ ಇರುವ ವ್ಯವಸ್ಥೆಯನ್ನು ಬದಲಾಯಿಸಬೇಕಿಲ್ಲ.

ಪ್ರಾಜೆಕ್ಟ್ ಸುರಕ್ಷಾ ಯೋಜನೆಯಡಿ ಆತ್ಮಹತ್ಯೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಪ್ರಾಯೋಗಿಕವಾಗಿ ಜಾರಿ ಮಾಡಿದ್ದ ‘ಪ್ರಾಜೆಕ್ಟ್ ಸುರಕ್ಷಾ’ ಯೋಜನೆಯಡಿ ಆಯ್ದ ಪ್ರಕರಣಗಳಲ್ಲಿ ಆತ್ಮಹತ್ಯೆ ಪ್ರಯತ್ನ ತಡೆಯುವಲ್ಲಿ ಯಶಸ್ವಿಯಾಗಿದೆ.

ಸಂಸ್ಥೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಯೋಜನೆಯ ವರದಿಯನ್ನು ಬಿಡುಗಡೆ ಮಾಡಲಾಯಿತು. ನಿಮ್ಹಾನ್ಸ್‌ನ ಆತ್ಮಹತ್ಯೆ ತಡೆಗಟ್ಟುವಿಕೆ, ಸಂಶೋಧನೆ, ಅನುಷ್ಠಾನ ತರಬೇತಿ ಮತ್ತು ತೊಡಗಿಸಿಕೊಳ್ಳುವಿಕೆ ಕೇಂದ್ರವು (ಎನ್‌-ಸ್ಪ್ರೈಟ್) ಹಿಮಾಲಯ ವೆಲ್ನೆಸ್ ಕಂಪನಿ ಸಹಯೋಗದಲ್ಲಿ ಈ ಯೋಜನೆಯನ್ನು ರೂಪಿಸಿದೆ.

2023ರಲ್ಲಿ ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ಪ್ರಾಯೋಗಿಕವಾಗಿ ಯೋಜನೆಯನ್ನು ಜಾರಿ ಮಾಡಲಾಗಿತ್ತು. ಅಲ್ಲಿ ಆತ್ಮಹತ್ಯೆ ಪ್ರಯತ್ನ ಮಾಡಿದವರಿಗೆ ಈ ಯೋಜನೆಯಡಿ ಸಮಾಲೋಚನೆ, ಕಣ್ಗಾವಲು ಸೇರಿ ವಿವಿಧ ಕ್ರಮಗಳ ಮೂಲಕ ಪ್ರಾಣಾಪಾಯದಿಂದ ಪಾರು ಮಾಡಲಾಗಿದೆ. ಯೋಜನೆಯನ್ನು ರಾಮನಗರ ಜಿಲ್ಲೆಯ ಎಲ್ಲ ತಾಲೂಕುಗಳಿಗೆ ವಿಸ್ತರಿಸುವುದಾಗಿ ನಿಮ್ಹಾನ್ಸ್ ಘೋಷಿಸಿದೆ.

ತಂಡಗಳ ರಚನೆ: ‘15ರಿಂದ 29 ವರ್ಷದವರ ಮರಣ ಪ್ರಕರಣಗಳಲ್ಲಿ ಆತ್ಮಹತ್ಯೆ ಪ್ರಮುಖ ಕಾರಣವಾಗಿದೆ. ಆದ್ದರಿಂದ ಭಾರತದ ರಾಷ್ಟ್ರೀಯ ಆತ್ಮಹತ್ಯೆ ತಡೆಗಟ್ಟುವಿಕೆ ಕಾರ್ಯತಂತ್ರ, ವಿಶ್ವ ಆರೋಗ್ಯ ಸಂಸ್ಥೆಯ ‘ಲೈವ್ ಲೈಫ್’ ಚೌಕಟ್ಟಿಗೆ ಅನುಗುಣವಾಗಿ 2023ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು ಎಂದು ಪ್ರಾಧ್ಯಾಪಕ ಡಾ. ಅನಿಶ್ ವಿ. ಚೆರಿಯನ್ ವಿವರಿಸಿದರು. ಯೋಜನೆಯಡಿ ಶಾಲಾ–ಕಾಲೇಜುಗಳಲ್ಲಿ 14,294 ವಿದ್ಯಾರ್ಥಿಗಳನ್ನು ಸಂಪರ್ಕಿಸಿ, ಅರಿವು ಮೂಡಿಸಿದ್ದಾರೆ’ ಎಂದರು.

> **ಆತ್ಮಹತ್ಯೆ ಸಂಕೀರ್ಣ ಸಾರ್ವಜನಿಕ ಅನಾರೋಗ್ಯ ಸಮಸ್ಯೆಯಾಗಿದ್ದು, ಇದನ್ನು ಆಸ್ಪತ್ರೆಯ ಗೋಡೆಗಳೊಳಗೆ ಮಾತ್ರ ಪರಿಹರಿಸಲು ಸಾಧ್ಯವಿಲ್ಲ. ಸಮಾಜದ ಪಾತ್ರವೂ ದೊಡ್ಡದು**
> **ಡಾ. ಪ್ರಭಾ ಎಸ್. ಚಂದ್ರ,** ನಿಮ್ಹಾನ್ಸ್ ನಿರ್ದೇಶಕಿ

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರಭಾ ಎಸ್. ಚಂದ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಡಾ. ರಜಿನಿ ಪಾರ್ಥಸಾರಥಿ, ಹಿಮಾಲಯ ವೆಲ್ನೆಸ್ ಕಂಪನಿಯ ಮಾನವ ಸಂಪನ್ಮೂಲ ನಿರ್ದೇಶಕ ಕೆ.ಜಿ. ಉಮೇಶ್ ಉಪಸ್ಥಿತರಿದ್ದರು.

1,261 ಪ್ರಕರಣ

‘ಆತ್ಮಹತ್ಯೆ ಪ್ರಯತ್ನ ಮಾಡಿದ ವ್ಯಕ್ತಿಗಳಿಗೆ ಈ ಯೋಜನೆಯಡಿ 24 ತಿಂಗಳ ಸಮಾಲೋಚನೆ ನಡೆಸಲಾಗಿದೆ. ಸ್ವಯಂ ಹಾನಿ ನೋಂದಣಿಯಲ್ಲಿ ಒಟ್ಟು 1,261 ಪ್ರಕರಣಗಳನ್ನು ದಾಖಲಿಸಲಾಗಿದ್ದು, ನಿಗದಿತ ವ್ಯಕ್ತಿಗಳು ಆತ್ಮಹತ್ಯೆಗೆ ಮರುಪ್ರಯತ್ನ ನಡೆಸಿರುವುದು ವರದಿಯಾಗಿಲ್ಲ. ಸಹಾಯವಾಣಿ, ಜಾಗೃತಿ ಸಾಮಗ್ರಿಗಳ ಮೂಲಕವೂ ಆತ್ಮಹತ್ಯೆಯಂತಹ ನಿರ್ಧಾರದಿಂದ ಹೊರಬರಲು ನೆರವಾಗುತ್ತಿದ್ದೇವೆ’ ಎಂದು ಡಾ. ಅನಿಶ್ ವಿ. ಚೆರಿಯನ್ ಹೇಳಿದರು.

JAWAHAR NAVODAYA VIDYALAYA,
DODDABALLAPURA, BANGALORE RURAL DISTRICT
Date: 21.05.2026

SHORT RE-TENDER NOTIFICATION

Sealed tenders are invited from the reputed firms/manufactures only for the supply of 1.Eggs, 2. Poultry (Chicken/Mutton) 3.Stationery Items (Office Stationery) 4. M & R(Electrical and Plumbing items) 5. Wastage of Mess food Items details of which are in tender document. Interested Firms/Parties and well-established firms/manufacturers may obtain the tender schedule with conditions and specifications from this office by paying Rs.200/- (Each) cash or Payment of Rs.200/- Two Hundred only Through DD/online transfer to the Principal, Jawahar Navodaya Vidyalaya, Bangalore Rural at Bashettihalli, during the office hours on working day from 21.05.2026 to 25.05.2026 between 10.00 am to 5.00pm. The sealed tender document should be submitted on or before 05.00 pm on 26.05.2026.The date of Tender Opening is 26.05.2026 at 11.00 am in the Vidyalaya premises.

Sd/- PRINCIPAL
JNV-BANGALORE RURAL

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ)
ವೆಬ್‌ಸೈಟ್: www.irel.co.in
ಸಿಐಎನ್: U15100MH1950GOI008187
Unleashing Values
Azadi Ka Amrit Mahotsav
ಐಎಸ್‌ಒ9001:2015, ಐಎಸ್‌ಒ 14001:2015 ಮತ್ತು ಐಎಸ್‌ಒ 45001:2018 ಕಂಪನಿ
ಉಲ್ಲೇಖ: ಜಾಹೀರಾತು ಸಂ. 26–27/3 ಟೆಂಡರ್ ಪ್ರಕಟಣೆ ದಿನಾಂಕ: 16.05.2026
ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವರ ಇವರು ಕೆಳಕಂಡ ಐಟಂ/ಜಾಬ್ ವಿವರಗಳಿಗೆ ಬಿಡ್ ಆಹ್ವಾನಿಸಿದ್ದಾರೆ.

ಇವೆಂಟ್ ನಂ. (ಜಿಇಎಂ)	ಜಾಬ್/ ಐಟಂ ವಿವರ
ಜಿಇಎಂ/2026/ಬಿ/7548510	ಐಆರ್‌ಇಎಲ್ ಚವರ ಘಟಕದಲ್ಲಿ ಅಗೆದು ತೆಗೆದಿರುವ ಸುಮಾರು 1,00,000 ಎಂಟಿ ಖನಿಜ ಮರಳು ಸಂಗ್ರಹಣೆ, ಲೋಡಿಂಗ್ ಮತ್ತು ಟ್ರಾನ್ಸ್‌ಪೋರ್ಟೇಶನ್

ಬಿಡ್‌ದಾರರರು http://irel.co.in ಅಥವಾ http://gem.gov.in ವೆಬ್‌ಸೈಟ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಸದರಿ ಟೆಂಡರ್‌ಗೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತದೆ.
CBC 48139/11/0004/2627 ಸಹಿ/– ಮುಖ್ಯಸ್ಥರು, ಚವರ

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇವಿ/ಬೆಂನ/ಎಇ–1/ಟೆಂಡರ್/09/2026–27 ದಿನಾಂಕ:19.05.2026

ಕೆ.ಪಿ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್(ಏಕ–ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ **MLA, MP, 4202 Toilet Grants** ಅನುಮೋದನೆಯಾಗಿರುವ ಕಾಮಗಾರಿಗೆ ದ್ವಿ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ:05.06.2026 ರ ಸಂಜೆ 4.00** ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/752/ಶಿರಡಿ ಸಾಯಿ/2026–27

ಕನಕಪುರ ಯೋಜನಾ ಪ್ರಾಧಿಕಾರ
ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ,
ತುಂಗಣಿ ಅಂಚೆ, ಕನಕಪುರ ತಾ॥, ಬೆಂಗಳೂರು ದಕ್ಷಿಣ ಜಿಲ್ಲೆ.
ದೂ : 080–29762005/29762006. ಇ–ಮೇಲ್: kkpaplan@gmail.com
ಸಂ: ಕಯೋಪ್ರಾ/ಆ.ಶಾ./ಲಿಫ್ಟ್/2026–27 ದಿನಾಂಕ: 20.05.2026

ಇ–ಟೆಂಡರ್ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರ ಕಛೇರಿಯಲ್ಲಿ ಅಳವಡಿಸಿರುವ Teknix Elevators Pvt Ltd. ಲಿಫ್ಟ್ Model: XSG608 ಕಾರ್ಯಸ್ಥಗಿತ ಗೊಂಡಿದ್ದು, ಪ್ರಸ್ತುತ ಪ್ರಾಧಿಕಾರದಲ್ಲಿ ಲಿಫ್ಟ್ ದುರಸ್ಥಿಗೊಳಿಸಲು ಉದ್ದೇಶಿಸಿದ್ದು ಆಸಕ್ತಿಯುಳ್ಳ ಕಂಪನಿಯವರಿಂದ ಟೆಂಡರ್ ಆಹ್ವಾನಿಲಾಗಿದ್ದು, ಈ ಕೆಳಕಂಡ ಕೆಲಸಗಳನ್ನು ನಿರ್ವಹಿಸಲು ತಗಲುವ ವೆಚ್ಚವನ್ನು ಆಸಕ್ತಿಯುಳ್ಳ ಅರ್ಹ ಕಂಪನಿಯವರು **ದಿನಾಂಕ: 05.06.2026 ರಂದು ಸಂಜೆ 5.30 ಗಂಟೆ** ಒಳಗೆ ಕನಕಪುರ ಯೋಜನಾ ಪ್ರಾಧಿಕಾರಕ್ಕೆ ಮುಚ್ಚಿದ ಲಕೋಟೆಯಲ್ಲಿ ಕೊಟೇಷನ್ ಸಲ್ಲಿಸಬಹುದಾಗಿದೆ ಹಾಗೂ ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳನ್ನು ಕಛೇರಿ ವೇಳೆಯಲ್ಲಿ ಭೇಟಿ ಮಾಡಿ ಪಡೆಯಬಹುದಾಗಿದೆ.

Sl. No.	Description of work
01.	MOD- Replacement of Main Motor
02.	Limit Switch
03.	Cartop Wiring
04.	Labour Charges

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು
DIPR/BSD/62/SA/2026-27

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್
TeamLease® Putting India to Work
CIN: L74140KA2000PLC118395
ನೋಂದಾಯಿತ ಕಚೇರಿ: ಕಛೇರಿ: ಇನ್ಫಿನಿಕ್ಸ್ ಸ್ಕ್ವೇರ್, ಬಿ–4, ಬಿ–5, ಬಿ–6, ಎಚ್‌ಎಎಲ್ ಇಂಡಸ್ಟ್ರಿಯಲ್ ಎಸ್ಟೇಟ್, ಎಚ್‌ಎಎಲ್ ಜಿಬಿ ಕ್ವಾರ್ಟರ್ಸ್, ವಿಭೂತಿಪುರ, ಬೆಂಗಳೂರು – 560 037, ಕರ್ನಾಟಕ, ಭಾರತ.
ಈ–ಮೇಲ್: corporateaffairs@teamlease.com | ವೆಬ್‌ಸೈಟ್: https://group.teamlease.com

ಮಾರ್ಚ್ 31, 2026 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಲೆಕ್ಕಪರಿಶೋಧಿತ, ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳು

ಆಡಿಟ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ, ಮೇ 20, 2026 ರಂದು ನಡೆದ ಸಭೆಯಲ್ಲಿ ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ ("ಟೀಮ್‌ಲೀಸ್/ಕಂಪನಿ") ನಿರ್ದೇಶಕರ ಮಂಡಳಿಯು ಮಾರ್ಚ್ 31, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಲೆಕ್ಕಪರಿಶೋಧಿತ, ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ, ಇವುಗಳನ್ನು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 33 ರ ಪ್ರಕಾರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆ. ಎಸ್.ಆರ್. ಬ್ಯಾಟ್ಲಿಬಾಯ್ & ಅಸೋಸಿಯೇಟ್ಸ್, ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್, ಇವರ ಪರಿಶೀಲನೆಗೆ ಒಳಪಡಿಸಲಾಗಿದೆ.

ಪರಿಶೋಧಿತ ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳ ಸಂಪೂರ್ಣ ಪಾಠವು ಸ್ಟಾಕ್ ಎಕ್ಸ್‌ಚೇಂಜುಗಳ ಬಿಎಸ್‌ಇ (www.bseindia.com) ಮತ್ತು ಎನ್‌ಎಸ್‌ಇ (www.nseindia.com) ವೆಬ್‌ಸೈಟುಗಳಲ್ಲಿ ಮತ್ತು ಕಂಪನಿಯ https://group.teamlease.com/investor/quarterly-results/ ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ. ಕೆಳಗೆ ನೀಡಲಾದ ಕ್ವಿಕ್ ರೆಸ್ಪಾನ್ಸ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕವೂ ಇದನ್ನು ಪಡೆಯಬಹುದು:

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕಂಪನಿಯ ವೆಬ್‌ಸೈಟಿನಲ್ಲಿರುವ ಫಲಿತಾಂಶಗಳನ್ನು ನೋಡಬಹುದು.

ಸ್ಥಳ: ಬೆಂಗಳೂರು
ದಿನಾಂಕ: ಮೇ 20, 2026

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ,
ಮತ್ತು ಅದರ ಪರವಾಗಿ
ಸಹಿ/–
ಸುಪರ್ಣ ಮಿತ್ರ
ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ
DIN : 07135817

ನೈರುತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ
ಬಿ/ಟಿಆರ್‌ಡಿ.2026–27/06 ದಿನಾಂಕ: 15.05.2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಸೋಮನಾಯಕನಪಟ್ಟಿ, ಯಶವಂತಪುರ, ಹಿಂದೂಪುರ, ಗೌರಿಬಿದನೂರು, ರಂಗೇಪಲ್ಲಿ, ಶ್ರೀ ಸತ್ಯ ಸಾಯಿ ಪ್ರಶಾಂತಿ ನಿಲಯಂ, ಬಸಂಪಲ್ಲೆ ಮತ್ತು ಮಕ್ಕಾಜಿಪಲ್ಲಿ ನಿಲ್ದಾಣಗಳಲ್ಲಿ ಎಲಿಮೆಂಟರಿ ವಿಭಾಗ ವಿಭಜನೆ ಮತ್ತು ಛತ್ರಿ ರಚನೆಗಳ ಮಾರ್ಪಾಡು.	ರೂ. 91,03,534.98/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05–06–2026 ರಂದು 15.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ, ಬೆಂಗಳೂರು
ಪಿಯುಬಿ/134/ಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27
ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಕ್ಯೂಎ&ಕ್ಯೂಸಿ) ವಲಯ–1,
ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು–560092
ಸಂಖ್ಯೆ:ಬೆಂಉನಪಾ/ಕಾಪಾಅ/(ಕ್ಯೂಎ/ಕ್ಯೂಸಿ)/ಟೆಂಡರ್/03/26–27 ದಿನಾಂಕ:20–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಉತ್ತರ ನಗರ ಪಾಲಿಕೆ (ಬೆಂ.ಉ.ನ.ಪಾ) ಗುಣಮಟ್ಟ ಖಾತ್ರಿ/ಗುಣಮಟ್ಟ ನಿಯಂತ್ರಣ ವಿಭಾಗ, ವಲಯ–1, ಇವರು ಆಯುಕ್ತರು, (ಬೆಂ.ಉ.ನ.ಪಾ) ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ತದ್ರೂಪಿ ಕೆಲಸಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿ/ಸಂಸ್ಥೆಗಳಿಂದ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆಗೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸಲು ಕೆಪಿಪಿ ಪೋರ್ಟಲ್ ಮೂಲಕ ಪ್ರಸ್ತಾವನೆ ಕೋರಿಕೆಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ವಾರ್ಡ್ ಸಂಖ್ಯೆ–47 ದೇವರಜೀವನಹಳ್ಳಿಯ ತಂಗಮಲೈನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವ ಕಾಮಗಾರಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆಗಾಗಿ ಸಮಾಲೋಚಕ ಸೇವೆಗಳನ್ನು (ಪಿಎಂಸಿ) ಒದಗಿಸುವುದು. **ಯೋಜನೆ ಮೊತ್ತ: ₹.300.00 ಲಕ್ಷಗಳು, ಪಿಎಂಸಿಗಾಗಿ ಕಾಯ್ದಿರಿಸಿದ ಮೊತ್ತ: ₹.3.00 ಲಕ್ಷಗಳು, ಇಎಂಡಿ ಮೊತ್ತ: ₹.10,000.00**
2	ದೇವರಜೀವನಹಳ್ಳಿ ವಾರ್ಡ್‌ನ ದೊಡ್ಡಮ್ಮನಗರ ಕಾಲೋನಿ ಮತ್ತು ಇ ಬ್ಲಾಕ್ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವ ಕಾಮಗಾರಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆಗಾಗಿ ಸಮಾಲೋಚಕ ಸೇವೆಗಳನ್ನು (ಪಿಎಂಸಿ) ಒದಗಿಸುವುದು. **ಯೋಜನೆ ಮೊತ್ತ: ₹.200.00 ಲಕ್ಷಗಳು, ಪಿಎಂಸಿಗಾಗಿ ಕಾಯ್ದಿರಿಸಿದ ಮೊತ್ತ: ₹.2.00 ಲಕ್ಷಗಳು, ಇಎಂಡಿ ಮೊತ್ತ: ₹.10,000.00**

ಟೆಂಡರ್ ವೇಳಾಪಟ್ಟಿ: (1) ಬಿಡ್–ಪೂರ್ವಭಾವಿ ಸಭೆಯನ್ನು ದಿನಾಂಕ **29–05–2026**ರ ಬೆಳಿಗ್ಗೆ **11:30** ಗಂಟೆಗೆ ನಡೆಸಲಾಗುವುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **03–06–2026**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **04–06–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಕ್ಯೂಎ&ಕ್ಯೂಸಿ ವಿಭಾಗ, ವಲಯ–1, ಬೆಂ.ಉ.ನ.ಪಾ

ಬೆಂಗಳೂರು ಪೂರ್ವ ನಗರ ಪಾಲಿಕೆ
ಆಯುಕ್ತರವರ ಕಛೇರಿ, ಫಿನೆಕ್ಸ್ ಮಾಲ್ ಎದುರು, ಐಟಿಪಿಎಲ್ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು – 560048
ನಂ.: ಆಯುಕ್ತರು/ಬೆಂಪೂನಪಾ/ಪಿಎಸ್/ಇ–190011/2025–26 ದಿನಾಂಕ: 18.05.2026

ನಮೂನೆ–I
ಪ್ರಕಟಣೆ {ಸೆಕ್ಷನ್ 14ಬಿ(4)(i)}ರಂತೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ(4) ರಡಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, **ಮಹದೇವಪುರ ವಿಧಾನಸಭಾ ಕ್ಷೇತ್ರದ (ಬಿಎಸ್‌ಡಬ್ಲ್ಯುಎಂಎಲ್) ಹೂಡಿ ವಾರ್ಡ್‌ನಲ್ಲಿ ಬಯೋಮೀಥನೇಷನ್ ಘಟಕ ಒಣ ಮತ್ತು ಹಸಿ ತ್ಯಾಜ್ಯ ನಿರ್ವಹಣೆಗಾಗಿ** ಆಯುಕ್ತರು, ಬೆಂಗಳೂರು ಪೂರ್ವ ನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯವಿರುತ್ತದೆ. ಸಾರ್ವಜನಿಕ ಉದ್ದೇಶಕ್ಕೆ ಅವಶ್ಯವಾಗಿ ಬೇಕಾಗಿರುವ ಪ್ರದೇಶಗಳ ಭೂ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ತಮ್ಮ ಸಂಬಂಧಪಟ್ಟ ದಾಖಲೆಗಳ ಪ್ರತಿಯೊಂದಿಗೆ ಅಂದರೆ, (1) ಮಾರಾಟ/ವಿಭಾಗ/ಇತರೆ ಮಾಲೀಕತ್ವದ ಡೀಡ್‌ಗಳು, (2) ಇತ್ತೀಚಿನ ಆರ್‌ಟಿಸಿಗಳು, (3) ಮ್ಯುಟೇಷನ್ ಪ್ರತಿ, (4) ತೆರಿಗೆ ಪಾವತಿ ರಸೀದಿಗಳು, (5) ಕೃಷಿಯೇತರ ಬಳಕೆಗಾಗಿ ಭೂ ಪರಿವರ್ತನಾ ಆದೇಶ, (6) ಕಂದಾಯ ಸ್ಕೆಚ್, (7) ಆಕಾರ್ ಬಂದ್ ಇತರೆಗಳನ್ನು ಈ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಕೆಳಗಿನ ವಿಳಾಸದಲ್ಲಿ ಸೂಚಿಸಿರುವಂತೆ ಸ್ಥಳದಲ್ಲಿ ಖುದ್ದಾಗಿ ಹಾಜರಾಗಿ ಅಂತಹ ಭೂಮಿಯ ಮೇಲಿನ ತಮ್ಮ ಹಿತಾಸಕ್ತಿಯನ್ನು ತಿಳಿಸಬೇಕು.

ಭೂ ಮಾಲೀಕರು/ಆಸಕ್ತ ವ್ಯಕ್ತಿಗಳು ಹಾಜರಾಗಬೇಕಾದ ಹಾಗೂ ಅವರ ಹಕ್ಕುಗಳನ್ನು ಸಲ್ಲಿಸಬಹುದಾದ ಸ್ಥಳ	ವಿಭಾಗೀಯ / ಉಪ ವಿಭಾಗೀಯ / ಶಾಖೆ ಕಛೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (ಎಲ್‌ಎಕ್ಯೂ & ಟಿಡಿಆರ್), ಬೆಂಪೂನಪಾ, ಆಯುಕ್ತರವರ ಕಛೇರಿ, ಫಿನೆಕ್ಸ್ ಮಾಲ್ ಎದುರು, ಐಟಿಪಿಎಲ್ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು – 560048	ಕಾರ್ಯಪಾಲಕ ಅಭಿಯಂತರರು, ಕಾಡುಗೋಡಿ ವಿಭಾಗ, ಹೂಡಿ ಮುಖ್ಯರಸ್ತೆ, ಹೂಡಿ, ಮಹದೇವಪುರ ವಲಯ–2	ಅಧಿಸೂಚನೆ ದಿನಾಂಕದಿಂದ 30 ದಿನಗಳು, ಸಮಯ: ಬೆಳಗ್ಗೆ 10:00 ರಿಂದ ಸಂಜೆ 5:00 ಗಂಟೆವರೆಗೆ

ಸ್ವಾಧೀನಪಡಿಸಿಕೊಳ್ಳಬೇಕಾದ ನಿಗದಿತ ಆಸ್ತಿಗಳ ಭೂಮಾಲೀಕರು / ಆಸಕ್ತ ವ್ಯಕ್ತಿಗಳು ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗೆ ಆಯುಕ್ತರು, ಬೆಂಗಳೂರು ಪೂರ್ವ ನಗರ ಪಾಲಿಕೆ ಅವರಿಗೆ ಒಪ್ಪಿಗೆ ನೀಡಬೇಕು.
ಆರ್ಥಿಕ ಪರಿಹಾರಗಳ ಬದಲಾಗಿ ಸ್ವಾಧೀನಕ್ಕೊಳಪಟ್ಟ ಭೂಮಿಯ ಎರಡರಷ್ಟು ಭೂಪ್ರದೇಶವನ್ನು ಭೂ ಮಾಲೀಕರು ಡಿಆರ್‌ಗಳಂತೆ (ಪರಿಗಣಿಸಲಾದ ಭೂಮಿ) ಹಾಗೂ ಕಟ್ಟಡವನ್ನು ಕಟ್ಟಿರುವ ಭೂಮಿಯ ಮಾರುಕಟ್ಟೆ ಮೌಲ್ಯವನ್ನು, ಒಪ್ಪಿಸಿದ ಕಟ್ಟಡ ಪ್ರದೇಶದ ಮೌಲ್ಯವನ್ನು ಭಾಗಿಸಿದ ಅಂದಾಜಿನಂತೆ ಎರಡು ಬಾರಿ ಕಟ್ಟಡ ಪ್ರದೇಶವನ್ನು ಪಡೆಯುತ್ತಾರೆ. ಮೂಲ ಪ್ಲಾಟ್ ಮತ್ತು ಸ್ವೀಕರಿಸಿದ ಪ್ಲಾಟ್‌ಗಳ ಮಾರುಕಟ್ಟೆ ಮೌಲ್ಯವನ್ನು ಅಪವರ್ತನ ಮಾಡಿಕೊಂಡು ಪರಿಗಣಿಸಲಾಗದ ಭೂಮಿಯನ್ನು ಬಳಸಬಹುದಾಗಿದೆ. ಪರಿಗಣಿಸಲಾಗದ ಭೂಮಿಯು ಎಫ್‌ಎಆರ್‌ಗೆ ಅರ್ಹವಾಗಿದ್ದು, ಅಭಿವೃದ್ಧಿ ಹಕ್ಕುಗಳು ನಿಯಮಗಳು, 2016ರಂತೆ ಸೂಚಿಸಲಾದ ನಿಯಮ ಮತ್ತು ಷರತ್ತುಗಳಂತೆ ಸ್ವೀಕರಿಸಲಾದ ಪ್ಲಾಟ್‌ಗಳಲ್ಲಿ ಹೆಚ್ಚುವರಿ ಬಿಲ್ಟಪ್ ಪ್ರದೇಶವಾಗಿ ಬಳಸಬಹುದು.
ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿ ಮತ್ತು ಭೂ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳ ವಿವರಗಳ ಬಗ್ಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತದೆ ಮತ್ತು ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿ) ನೀಡಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ವಿಶೇಷ ಭೂ ಸ್ವಾಧೀನ ಅಧಿಕಾರಿ, ಉಪ ಆಯುಕ್ತರು (ಎಲ್‌ಎಕ್ಯೂ & ಟಿಡಿಆರ್) ರವರ ಕಛೇರಿ, ಬೆಂಪೂನಪಾಗೆ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ ತಿಳಿಸಬೇಕು.

ಷೆಡ್ಯೂಲ್

ಮಹದೇವಪುರ ವಿಧಾನಸಭಾ ಕ್ಷೇತ್ರದ (ಬಿಎಸ್‌ಡಬ್ಲ್ಯುಎಂಎಲ್) ಹೂಡಿ ವಾರ್ಡ್‌ನಲ್ಲಿ ಬಯೋಮೀಥನೇಷನ್ ಘಟಕ ಒಣ ಮತ್ತು ಹಸಿ ತ್ಯಾಜ್ಯ ನಿರ್ವಹಣೆಗಾಗಿ ಅಗತ್ಯವಿರುವ ಭೂ ಸ್ವಾಧೀನ.

Name of the District: **Bengaluru Urban** Name of the Taluk: **Bengaluru East** Name of the Village: **Sadaramangala**

Sl. No.	Sy. No. / Khata No.	Type of land		Nature of Land			Dimension of the land / plot and extent in Sq.m		Boundaries of the land / plot				Building Details			Present activity on land / Building (Specify Specific activity such as shop, office, factory, apartment, individual house etc.,)	Market (guide lines) value of the land per Sqm*			Name and address of the owner of the plot / land for which DRC is to be issued / already issued
		Vacant	Built up	Agriculture	Converted undeveloped	Approved layout / developed land Building site	Dimension	Extent	North	South	East	West	Extent in Sq.m	Type of Construction and No. of floors	Floor Area Ratio		Agriculture/ B-Khatha	Converted undeveloped	Developed Site	
1	59/2	Vacant		Converted Land			8634.57		Sy No.61 (Govt Lake)	Govt Road and Sy.No.60	Remaining Portion of Sy.No. 59/2 and Sy.No.58	Sy No.59/1, 59/3 and 60	-	-	-	-	-	-	48,000/-	K.A. Manjunath, S/o. Late K.G. Adavishaiah & The Commissioner Bengaluru East City Corporation

ಗಮನಿಸಿ:
- ಮಾರ್ಗಸೂಚಿ ಮೌಲ್ಯ: ಮುಖ್ಯ ಆಯುಕ್ತರವರ ಸುತ್ತೋಲೆ ಸಂಖ್ಯೆ C.Comm/PSR/J/1802/2024-25, Date: 21.09.2024 ರಂತೆ. (GO No: CVC/99/2023-24, Date: 08.01.2023 SRO Mahadevapura Page No- 174 Sl No 733 Site Value per Sq.m. 48,000/-

ಸಹಿ/–,
ಆಯುಕ್ತರು, ಬೆಂಗಳೂರು ಪೂರ್ವ ನಗರ ಪಾಲಿಕೆ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.
ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/04/2026–27 ದಿನಾಂಕ : 19.05.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ–ಪಾವತಿ ರೂಪದಲ್ಲಿ ಪ್ರತಿ ಕೆಲಸದ ಐಟಂ (ಮರುಪಾವತಿಸಲಾಗದ) ಮುಂದೆ ನಿಗದಿತ ಶುಲ್ಕವನ್ನು ಪಾವತಿಸುವ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್ ಸೈಟ್ (https://kppp.karnataka.gov.in) ನಿಂದ ಟೆಂಡರ್ ದಾಖಲೆಗಳನ್ನು ಡೌನ್ ಲೋಡ್ ಮಾಡಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್‌ದಾರರು ಬಿಡ್ ಅನ್ನು ಸಲ್ಲಿಸಬೇಕು.

ಕ್ರ ಸಂ	ಕಾಮಗಾರಿಗಳ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಇಎಂಡಿ (ಮೊತ್ತ ರೂ.ಗಳಲ್ಲಿ)	ಸೇವಾ ಒಪ್ಪಂದದ ನಿಗದಿತ ಅವಧಿ
1	Inert Landfill Area Protection and Nuisance Reduction Works in and around Hullahalli Inert Landfill Site in Bengaluru South Constituency, including enzyme spraying, safety measures and allied basic infrastructure works.	1600.17	Rs. 1.00 lakh through e-payment under the following i.e. online /RTGS/ NEFT/ OTC and the balance Rs.15,00,170/- by Bank Gurantee/FDR issued by Nationalised/Scheduled Bank	09 ತಿಂಗಳು

ಟೆಂಡರ್ ಕಾರ್ಯಸೂಚಿ : (1) ಬಿಡ್ ಪೂರ್ವ ಪ್ರಶ್ನೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **25.05.2026 ರಂದು ಮಧ್ಯಾಹ್ನ 15.00 ಗಂಟೆಯವರೆಗೆ** (2) ಬಿಡ್ ಪೂರ್ವ ಸಭೆಯು ದಿನಾಂಕ : **25.05.2026 ರಂದು ಮಧ್ಯಾಹ್ನ 15:00 ಗಂಟೆಗೆ** ಸಿಇ & ಸಿಜಿಎಂ–2, (ಟೆಕ್) ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು ರವರ ಕಚೇರಿಯಲ್ಲಿ ನಡೆಯಲಿದೆ (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **29.05.2026 ರಂದು ಸಂಜೆ 16.00 ಗಂಟೆಯವರೆಗೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30.05.2026 ರಂದು 16.30 ಗಂಟೆಗೆ** (5) ತಾಂತ್ರಿಕವಾಗಿ ಅರ್ಹ ಬಿಡ್ದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಸೂಚನೆ:
1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸದ ಆಕಾಂಕ್ಷಿ ಬಿಡ್ಡರ್‌ಗಳು/ಗುತ್ತಿಗೆದಾರರು ಭಾಗವಹಿಸುವ ಮೊದಲು ವೆಬ್‌ಸೈಟ್ (https://kppp.karnataka.gov.in) ನಲ್ಲಿ ನೋಂದಾಯಿಸಿಕೊಳ್ಳಬೇಕು.
2. ಯಾವುದೇ ತಿದ್ದುಪಡಿ/ಸಂಶೋಧನೆ ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/755/ಶಿರಡಿ ಸಾಯಿ/2026–27

‘ಕ್ರಿಮಿನಲ್ ಪ್ರಕರಣ ದಾಖಲಿಸಿ’

ಬೌರಿಂಗ್ ಆಸ್ಪತ್ರೆ ಗೋಡೆ ಕುಸಿತ ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌರಿಂಗ್ ಆಸ್ಪತ್ರೆಯ ಗೋಡೆ ಸಮೀಪ ಅವೈಜ್ಞಾನಿಕವಾಗಿ ಮಣ್ಣು ಹಾಗೂ ನಿರ್ಮಾಣ ತ್ಯಾಜ್ಯವನ್ನು (ಡೆಬ್ರಿಸ್) ಸುರಿದ ಗುತ್ತಿಗೆದಾರರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಆರೋಗ್ಯ ಇಲಾಖೆಗೆ ಸೂಚಿಸಿದ್ದಾರೆ.

ಬೌರಿಂಗ್ ಆಸ್ಪತ್ರೆಯ ಗೋಡೆ ಏಪ್ರಿಲ್ 29ರಂದು ಕುಸಿದು, ಏಳು ಜನ ಮೃತಪಟ್ಟಿದ್ದರು. ಈ ಸ್ಥಳಕ್ಕೆ ಮೇ 14ರಂದು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದ ಶಾಲಿನಿ ರಜನೀಶ್, ಗೋಡೆ ಕುಸಿತಕ್ಕೆ ಕಾರಣವಾದ ಮಾಹಿತಿಯನ್ನು ಪಡೆದುಕೊಂಡಿದ್ದರು. ಗೋಡೆಯ ಸಮೀಪ ಸುಮಾರು 3,600 ಕ್ಯೂಬಿಕ್ ಮೀಟರ್ ತ್ಯಾಜ್ಯ–ಮಣ್ಣನ್ನು ಅವೈಜ್ಞಾನಿಕವಾಗಿ ಸುರಿಯಲಾಗಿತ್ತು. ಇದರ ಒತ್ತಡ ಹೆಚ್ಚಾದ್ದರಿಂದ ಗೋಡೆ ಕುಸಿದಿದೆ ಎಂದು ವರದಿ ತಿಳಿಸಿದೆ.

‘ಆಸ್ಪತ್ರೆಯ ಆವರಣದಲ್ಲಿ ಹೊಸ ವೈದ್ಯಕೀಯ ಕಾಲೇಜು ನಿರ್ಮಿಸಲು 2019ರಲ್ಲಿ ಖಾಸಗಿ ಕಂಪನಿಗೆ ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆದಾರರು ಗೋಡೆಯ ಸಮೀಪ ನಿರ್ಮಾಣ ತ್ಯಾಜ್ಯವನ್ನು ಸುರಿದಿದ್ದಾರೆ ಎಂದು ಹೇಳಲಾಗಿದೆ. ಆರೋಗ್ಯ ಇಲಾಖೆ ನೀಡಿದ್ದ ಕಾರ್ಯಾದೇಶದಲ್ಲಿ, ನಿರ್ಮಾಣ ತ್ಯಾಜ್ಯವನ್ನು ನಗರದ ಹೊರಭಾಗದಿಂದ ಕನಿಷ್ಠ 30 ಕಿಲೋಮೀಟರ್ ದೂರಕ್ಕೆ ಸಾಗಿಸಿ ವಿಲೇವಾರಿ ಮಾಡಬೇಕು ಎಂದಿದೆ. ಅದಕ್ಕಾಗಿ ₹11.54 ಲಕ್ಷದ ವೆಚ್ಚವನ್ನೂ ನಮೂದಿಸಲಾಗಿತ್ತು’ ಎಂದು ವರದಿಯಲ್ಲಿ ತಿಳಿಸಿರುವುದನ್ನು ಮುಖ್ಯ ಕಾರ್ಯದರ್ಶಿಯವರು ಉಲ್ಲೇಖಿಸಿದ್ದಾರೆ.

ನಿರ್ಮಾಣ ಯೋಜನೆಯ ಜವಾಬ್ದಾರಿಯನ್ನು ಹೊಂದಿದ್ದ ಆರೋಗ್ಯ ಇಲಾಖೆಯ ನಾಲ್ವರು ಎಂಜಿನಿಯರ್‌ಗಳ ಮೇಲೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

ಪರಿಶೀಲನೆಗೆ ಸೂಚನೆ

2019ರಲ್ಲಿ ಯೋಜನೆ ನಿರ್ಮಾಣ ಕಾರ್ಯ ಆರಂಭವಾಗಿದ್ದು, ಈ ಕಟ್ಟಡ ನಿರ್ಮಾಣದ ಕಾಮಗಾರಿ ಆರಂಭಿಸುವ ಪ್ರಮಾಣ ಪತ್ರ (ಸಿಸಿ) ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲಾಗಿರುವ ದಾಖಲೆಗಳಲ್ಲಿನ ಲೋಪ–ದೋಷಗಳನ್ನು ಪರಿಶೀಲಿಸಲು ನಗರಾಭಿವೃದ್ಧಿ ಇಲಾಖೆಗೆ ಶಾಲಿನಿ ರಜನೀಶ್ ಸೂಚಿಸಿದ್ದಾರೆ. ನಿರ್ಮಾಣ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಲಾಗಿದೆ ಎಂಬುದನ್ನು ಪರಿಶೀಲಿಸದೆ ಒಸಿ ಮತ್ತು ಸಿಸಿಯನ್ನು ಹೇಗೆ ನೀಡಲಾಯಿತು ಎಂಬ ಬಗ್ಗೆಯೂ ಪರಿಶೀಲನೆ ನಡೆಸಲು ಸೂಚಿಸಲಾಗಿದೆ.

‘200 ಮೀಟರ್ ಉದ್ದದ ಈ ಕಾಂಪೌಂಡ್ ಅನ್ನು ವೈಜ್ಞಾನಿಕವಾಗಿ ಮರು ನಿರ್ಮಾಣ ಮಾಡಬೇಕು. ಇಲ್ಲಿರುವ ಮಳೆನೀರು ಕಾಲುವೆಯನ್ನು ಸ್ವಚ್ಛಗೊಳಿಸಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಚಿಟಿಕೆ ಸುದ್ದಿ

ಜಲಮಂಡಳಿ ಫೋನ್ ಇನ್ ನಾಳೆ

ಬೆಂಗಳೂರು: ಜಲಮಂಡಳಿಯ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಮೇ 22ರ ಬೆಳಿಗ್ಗೆ 09.30ರಿಂದ 10.30 ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರು ಕುಡಿಯುವ ನೀರು, ಒಳಚರಂಡಿ ಸಮಸ್ಯೆ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಿಸಬಹುದಾದ ದೂರವಾಣಿ: 080-22945119, 22229639

ಕೆಪಿಎಸ್‌ಗೆ ವಿರೋಧ

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕಿನಲ್ಲಿ ಕೆಪಿಎಸ್ ಮ್ಯಾಗ್ನೆಟ್ ಶಾಲಾ ಯೋಜನೆಯನ್ನು ತರಾತುರಿಯಲ್ಲಿ ಜಾರಿಗೊಳಿಸಲಾಗುತ್ತಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ಹಾಗೂ ‘ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ’ ದೂರಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎ. ಮುರಿಗೆಪ್ಪ, ಎಐಡಿಎಸ್‌ಒ ರಾಜ್ಯ ಘಟಕದ ಉಪಾಧ್ಯಕ್ಷೆ ಸಿ.ಎಂ. ಅಪೂರ್ವಾ, ‘ಈಗಾಗಲೇ ಮೂರು ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ತೆರೆದು, ಅವುಗಳ ಸುತ್ತಮುತ್ತಲಿನ 40ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಸಿದ್ಧತೆ ನಡೆದಿದೆ’ ಎಂದು ತಿಳಿಸಿದರು.

ಪ್ರತಿ ವಾರ್ಡ್‌ನಲ್ಲಿ ನಿರ್ಮಾಣಕ್ಕೆ ಆಯುಕ್ತರ ಸೂಚನೆ

10 ಕಿ.ಮೀ. ಸ್ವಚ್ಛ ಪಾದಚಾರಿ ಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ನಗರ ಪಾಲಿಕೆಯ ಪ್ರತಿಯೊಂದು ವಾರ್ಡ್‌ನಲ್ಲೂ ತಲಾ 10 ಕಿ.ಮೀ. ಸ್ವಚ್ಛವಾದ, ಅಡೆತಡೆ-ಇಲ್ಲದ ಪಾದಚಾರಿ ಮಾರ್ಗವನ್ನು ನಿರ್ಮಿಸಬೇಕು ಎಂದು ಆಯುಕ್ತ ಪೊಮ್ಮಲ ಸುನಿಲ್‌ಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಉತ್ತರ ನಗರ ಪಾಲಿಕೆಯ ‘ಬಜೆಟ್‌ನಿಂದ ಕ್ರಿಯಾಯೋಜನೆ’ ಕಾರ್ಯಾಗಾರ ಹಾಗೂ ಕರಡು ಕ್ರಿಯಾಯೋಜನೆಗಳ ಸಮಗ್ರ ಪರಿಶೀಲನೆ ಸಭೆಯಲ್ಲಿ ಬುಧವಾರ ಅವರು ಮಾತನಾಡಿದರು.

ಸಭೆಯಲ್ಲಿ ವಿವಿಧ ಸಂಘ–ಸಂಸ್ಥೆಗಳು ತಮ್ಮ ಪ್ರಾಜೆಕ್ಟ್ ಪ್ರಸ್ತಾವನೆಗಳು, ಕಾರ್ಯಯೋಜನೆಗಳು ಹಾಗೂ ವೆಚ್ಚ ಅಂದಾಜುಗಳನ್ನು ಮಂಡಿಸಿದವು. ಡಬ್ಲ್ಯುಆರ್‌ಐ– ಇಂಡಿಯಾ ನೇತೃತ್ವದಲ್ಲಿ ವಾಕಲೂರು, ಬಯೋಮಿ, ವೆಲ್ ಲ್ಯಾಬ್, ಸಿ40 ಸಿಟೀಸ್, ಹಸಿರು ದಳ, ಸಿಜಿಬಿಎಂಟಿ, ಸೇ ಟ್ರೀಸ್, ಬಿಪ್ಯಾಕ್ ಹಾಗೂ ಜನ್ ಸಾಹಸ್ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ವಿವಿಧ ವಿಷಯಗಳ ಕುರಿತು ತಮ್ಮ ಸಲಹೆಗಳನ್ನು ನೀಡಿದರು.

ಕ್ರಿಯಾ ಯೋಜನೆಯಡಿ ಪ್ರತಿ ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಸುಮಾರು ₹25 ಲಕ್ಷ ಅನುದಾನ ನೀಡಲಾಗುತ್ತಿದ್ದು, ಅದರಡಿ ವಿವಿಧ ಸಂಘ–ಸಂಸ್ಥೆಗಳು ನೀಡುವ ಪ್ರಸ್ತಾವಗಳನ್ನು ಅನುಷ್ಠಾನಗೊಳಿಸಲು ಬಳಸಿಕೊಳ್ಳಬಹುದಾಗಿದೆ ಎಂದು ಆಯುಕ್ತರು ತಿಳಿಸಿದರು. ಎಲ್ಲ ವಿಭಾಗಗಳು ಕಾರ್ಯಯೋಜನೆಗಳನ್ನು ಆದ್ಯತೆ ಮೇಲೆ ಸಿದ್ಧಪಡಿಸಿ, ಡಿಸೆಂಬರ್ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಪ್ರಗತಿ ಪರಿಶೀಲನೆ ಹಾಗೂ ಅಗತ್ಯ ಕ್ರಮಗಳಿಗಾಗಿ ಪ್ರತಿ ತಿಂಗಳು ಸಮೀಕ್ಷಾ ಸಭೆ ನಡೆಸುವುದಾಗಿ ಹೇಳಿದರು.

10 ದಿನದಲ್ಲಿ ಕ್ರಮ: ಪುಟ್ಟೇನಹಳ್ಳಿ ಕೆರೆ ಸಮೀಪ ನೀರು ನಿಲ್ಲದಂತೆ ಕ್ರಮ ಕೈಗೊಂಡು, ಕೊಳಚೆ ನೀರು ತಿರುವು ಕಾಮಗಾರಿಯನ್ನು ಹತ್ತು ದಿನಗಳಲ್ಲಿ ಪೂರ್ಣಗೊಳಿಸಬೇಕು ಎಂದು ಪೊಮ್ಮಲ ಸುನೀಲ್ ಕುಮಾರ್ ಸೂಚಿಸಿದರು.

ಪುಟ್ಟೇನಹಳ್ಳಿ ಕೆರೆ ಸಮೀಪದ ರಮಣಶ್ರೀ ಕ್ಯಾಲಿಫೋರ್ನಿಯಾ ಗಾರ್ಡನ್ಸ್ ಹಾಗೂ ಎಸ್ಟೀಮ್ ನಾರ್ತ್ ವುಡ್ ಅಪಾರ್ಟ್‌ಮೆಂಟ್ ಪ್ರದೇಶಗಳಲ್ಲಿ ಬುಧವಾರ ಪರಿಶೀಲನೆ ನಡೆಸಿದರು.

ಕೆರೆಗಳಿಗೆ ಸಂಸ್ಕರಿತ ನೀರು

ಕೌದೇನಹಳ್ಳಿ, ವೆಂಗಯ್ಯನ ಕೆರೆ, ದೇವರ ಬೀಸನಹಳ್ಳಿ ಕೆರೆಗೆ ಸಂಸ್ಕರಿಸಿದ ನೀರು ಹರಿಸಲು 20 ದಿನಗಳಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಜಲಮಂಡಳಿ ಅಧಿಕಾರಿಗಳಿಗೆ ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಸೂಚಿಸಿದರು. ವೆಂಗಯ್ಯನ ಕೆರೆ ಪ್ರದೇಶದಲ್ಲಿ ತಲಾ 30 ಎಂಎಲ್‌ಡಿ ಸಾಮರ್ಥ್ಯದ ಎರಡು ಎಸ್‌ಟಿಪಿಗಳಿದ್ದು, ಒಂದು ಸ್ಥಗಿತವಾಗಿದೆ, ಮತ್ತೊಂದು ನವೀಕರಣ ಹಂತದಲ್ಲಿದೆ. ಕೆರೆಗೆ ಅಶುದ್ಧ ನೀರು ಸೇರುತ್ತಿದ್ದು, ಕೊಳವೆ ಮಾರ್ಗ ಅಳವಡಿಸಲು ಅನುಮತಿ ಪಡೆದು, ಸಂಸ್ಕರಿಸಿದ ನೀರನ್ನು ಹರಿಸಬೇಕು ಎಂದು ಸೂಚಿಸಿದರು. ದೇವರ ಬೀಸನಹಳ್ಳಿ ಕೆರೆ ಪ್ರದೇಶದಲ್ಲಿ ಎರಡು ಎಸ್‌ಟಿಪಿಗಳಿದ್ದು, ಯಾವುದೇ ಕೊಳಚೆ ನೀರು ಹರಿಯದಂತೆ ಕ್ರಮವಹಿಸಬೇಕು. ಸಂಸ್ಕರಿಸಿದ ನೀರನ್ನು ಮಾತ್ರ ಕೆರೆಗೆ ಹರಿಸಬೇಕು ಎಂದು ಹೇಳಿದರು.

ಬೀದಿ ನಾಯಿ ಆಶ್ರಯ ತಾಣಕ್ಕೆ ವೇಗ

ಸುಮನಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಬೀದಿನಾಯಿಗಳ ಆಶ್ರಯ ತಾಣ ನಿರ್ಮಾಣಕ್ಕೆ ವೇಗ ನೀಡಬೇಕು. ಇನ್ನೊಂದು ತಿಂಗಳಲ್ಲಿ ಕನಿಷ್ಠ ನೂರು ಬೀದಿ ನಾಯಿಗಳಿಗೆ ಆಶ್ರಯ ನೀಡುವಂತಾಗಬೇಕು ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಸೂಚಿಸಿದರು. ಬುಧವಾರ ಸ್ಥಳ ಪರಿಶೀಲನೆ ನಡೆಸಿದ ಅವರು, ಅದೇ ಸಂಕೀರ್ಣದಲ್ಲಿ ಪ್ರಾಣಿ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಕೇಂದ್ರ ಹಾಗೂ ಘನ ತ್ಯಾಜ್ಯ ನಿರ್ವಹಣೆ ಘಟಕವಿದ್ದು, ಘನ ತ್ಯಾಜ್ಯ ನಿರ್ವಹಣೆ ಘಟಕವನ್ನು ಪಕ್ಕದ ಸ್ಥಳಕ್ಕೆ ಸ್ಥಳಾಂತರಿಸಿ, ಎಬಿಸಿ ಸಾಮರ್ಥ್ಯ ಹೆಚ್ಚಿಸುವಂತೆ ನಿರ್ದೇಶಿಸಿದರು.

₹35 ಕೋಟಿ ಮೌಲ್ಯದ 'ಎಂಡಿಎಂಎ' ಜಪ್ತಿ

ದೆಹಲಿ, ಹರಿಯಾಣ, ಗುರುಗ್ರಾಮದಲ್ಲಿ ನಗರ ಪೊಲೀಸರ ಕಾರ್ಯಾಚರಣೆ; ಎಂಟು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೃಹತ್ ಮೊತ್ತದ ಸಿಂಥೆಟಿಕ್ ಡ್ರಗ್ಸ್ ಜಪ್ತಿ ಮಾಡುವಲ್ಲಿ ನಗರ ಪೊಲೀಸರು ಯಶಸ್ವಿ ಆಗಿದ್ದಾರೆ. ಈ ತಂಡಕ್ಕೆ ₹2 ಲಕ್ಷ ಬಹುಮಾನ ನೀಡಲಾಗುವುದು

ಸೀಮಾಂತ್‌ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಡ್ರಗ್ಸ್

ಬೆಂಗಳೂರು: ಡ್ರಗ್ಸ್ ವಿರುದ್ಧದ ವಿಶೇಷ ಕಾರ್ಯಾಚರಣೆಯಲ್ಲಿ ನಗರದ ಹೆಬ್ಬಾಳ ಠಾಣೆಯ ಪೊಲೀಸರು, ₹35 ಕೋಟಿ ಮೌಲ್ಯದ ಸಿಂಥೆಟಿಕ್ ಡ್ರಗ್ಸ್ (ಎಂಡಿಎಂಎ) ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ. ಅಲ್ಲದೇ ವಿದೇಶ, ಹೊರ ರಾಜ್ಯಕ್ಕೆ ಸೇರಿದ ಒಟ್ಟು ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ.

ದೆಹಲಿಯ ರೀನಾ ಅಲಿಯಾಸ್ ರೀನಾ ಯಾದವ್(50), ದೇಬಾಸಿಸ್ ಬ್ಯಾನರ್ಜಿ ಅಲಿಯಾಸ್ 'ದೆಬು' (66), ಧೀರಜ್(30) ಹಾಗೂ ಸಾನಿಯಾ (34), ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಪಿ.ಮೊಹಮ್ಮದ್ ಮನ್ಸೂರ್ (30), ಬಂಟ್ವಾಳದ ಅಬ್ದುಲ್ ಸಮದ್ ಹಾಗೂ ಸೆನೆಗಲ್‌ನ ದನ್ಫಾ ಗೆರಾಲ್ಡ್ ಅಲಿಯಾಸ್ ಡೇವಿಡ್, ತಾಂಜಾನಿಯಾದ ಮಗ್ರೇತ್ ಲಿಗಿನಿಕೊ ಚಾಲೆ ಹಾಗೂ ಒಬಿಯನ್ ರಿಟಾ ಬಂಧಿತರು.

ಬಂಧಿತರಿಂದ ₹35 ಕೋಟಿ ಮೌಲ್ಯದ 17 ಕೆ.ಜಿ 500 ಗ್ರಾಂ ಎಂಡಿಎಂಎ ಕ್ರಿಸ್ಟಲ್, ಎರಡು ಕಾರು ವಶಕ್ಕೆ ಪಡೆಯಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದರು.

ಕಳೆದ ವಾರ ಯಶವಂತಪುರ ಠಾಣೆ ಪೊಲೀಸರು ವಿವಿಧೆಡೆ ನಡೆಸಿದ್ದ ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯಲ್ಲಿ 9 ಮಂದಿಯನ್ನು ಬಂಧಿಸಿದ್ದರು. ವಿಚಾರಣೆ ವೇಳೆ ಆರೋಪಿಗಳು ನೀಡಿದ್ದ ಸುಳಿವು ಆಧರಿಸಿ ದೆಹಲಿ, ನೊಯ್ಡಾ ಹಾಗೂ ಗುರುಗ್ರಾಮದಲ್ಲಿ ಕಾರ್ಯಾಚರಣೆ ನಡೆಸಲಾಯಿತು. 32 ಮಂದಿಯ ವಿಶೇಷ ಪೊಲೀಸ್ ತಂಡವು ದೆಹಲಿಯಲ್ಲೇ 16 ದಿನ ವಾಸ್ತವ್ಯ ಮಾಡಿ ಕಾರ್ಯಾಚರಣೆ ನಡೆಸಿ, 8 ಆರೋಪಿಗಳನ್ನು ಬಂಧಿಸಿದೆ ಎಂದು ಮಾಹಿತಿ ನೀಡಿದರು.

ಸೆನೆಗಲ್ ಹಾಗೂ ತಾಂಜಾನಿಯಾದ ಪ್ರಜೆಗಳು ಪ್ರವಾಸಿ ವೀಸಾದ ಮೇಲೆ ಭಾರತಕ್ಕೆ ಬಂದಿದ್ದರು. ಹರಿಯಾಣ ಹಾಗೂ ದೆಹಲಿಯಲ್ಲಿ ನೆಲಸಿ ಡ್ರಗ್ಸ್ ದಂಧೆ ನಡೆಸುತ್ತಿದ್ದರು. 2009ರಲ್ಲಿ ದೆಹಲಿಯ ನೆಬಸರಾಯಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ರೀನಾ ಯಾದವ್ 13 ವರ್ಷ ಜೈಲು ಶಿಕ್ಷೆ ಅನುಭವಿಸಿ, ಇತ್ತೀಚೆಗೆ ಬಿಡುಗಡೆ ಆಗಿದ್ದರು. ಬಿಡುಗಡೆಯಾದ ಮೇಲೆ ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದರು ಎಂದು ಪೊಲೀಸರು ಹೇಳಿದರು.

ಗಿಫ್ಟ್ ಪ್ಯಾಕ್‌ನಲ್ಲಿ ಡ್ರಗ್ಸ್ ಸಾಗಣೆ: ನೈಜೀರಿಯಾ ಸೇರಿದಂತೆ ಬೇರೆ ಬೇರೆ ದೇಶಗಳಿಂದ ದನ್ಫಾ ಗೆರಾಲ್ಡ್ ಅಲಿಯಾಸ್ ಡೇವಿಡ್ ಹಾಗೂ ಮಗ್ರೇತ್ ಲಿಗಿನಿಕೊ ಚಾಲೆ ದೆಹಲಿಗೆ ಎಂಡಿಎಂಎ ಡ್ರಗ್ಸ್ ತರಿಸಿಕೊಳ್ಳುತ್ತಿದ್ದರು. ಅಲ್ಲಿಂದ ಬೆಂಗಳೂರಿಗೆ 'ಗಿಫ್ಟ್ ಪ್ಯಾಕ್' ಹಾಗೂ ಇಸ್ತ್ರಿ ಮಾಡಲು ಬಳಸುವ ಪುಟ್ಟ ಟೇಬಲ್ ಒಳಗೆ ಎಂಡಿಎಂಎ ಕ್ರಿಸ್ಟಲ್ ತುಂಬಿ ರೈಲುಗಳ ಮೂಲಕ ಬೆಂಗಳೂರಿಗೆ ರವಾನೆ ಮಾಡುತ್ತಿದ್ದರು. ಹೆಬ್ಬಾಳದ ಆನಂದನಗರದ ಉನ್ನತಿ ಲೇಔಟ್ ಮುಖ್ಯರಸ್ತೆಯ ಅಪಾರ್ಟ್‌ಮೆಂಟ್ ಬಳಿ, ಉದ್ಯಾನ, ಪೇಯಿಂಗ್ ಗೆಸ್ಟ್, ಹಾಸ್ಟೆಲ್‌ಗಳ ಬಳಿ ಮಧ್ಯವರ್ತಿಗಳು ಸಿಂಥೆಟಿಕ್ ಡ್ರಗ್ಸ್ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

'ಈ ಜಾಲದ ಹಿಂದೆ ಇನ್ನೂ ಯಾರೆಲ್ಲ ಇದ್ದಾರೆ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ. ಎಲ್ಲ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಕಮಿಷನರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ, ಎಸಿಪಿ ಕೆ.ಎಸ್. ತನ್ವೀರ್, ಹೆಬ್ಬಾಳ ಠಾಣೆಯ ಇನ್‌ಸ್ಪೆಕ್ಟರ್ ಭೈರ ಹಾಜರಿದ್ದರು.

70 ಕೆ.ಜಿ ಬೆಳ್ಳಿ ಕದ್ದ ಆರೋಪಿಗಳ ಸೆರೆ

ಹೆಸರಘಟ್ಟ ಮುಖ್ಯರಸ್ತೆಯ ಹಾವನೂರು ಬಡಾವಣೆಯ ಎಂ.ಬಿ. ಜ್ಯುವೆಲರಿ ಮಳಿಗೆಯ ಹಿಂಭಾಗದ ಗೋಡೆ ಕೊರೆದು, 70 ಕೆ.ಜಿ ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿದ್ದ ಮೂವರನ್ನು ಬಾಗಲಗುಂಟೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಸುರೇಶ್, ಧನರಾಮ್, ನೇಮಿಚಂದ್ರ ಬಂಧಿತರು. ಆರೋಪಿಗಳಿಂದ 29 ಕೆ.ಜಿ ಬೆಳ್ಳಿ ಸಾಮಗ್ರಿ ವಶಕ್ಕೆ ಪಡೆಯಲಾಗಿದೆ. ಪ್ರಮುಖ ಆರೋಪಿ ಮಹೇಂದ್ರ ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಮಳಿಗೆ ಮಾಲೀಕ ಕೆ.ಮಹೇಂದ್ರ ಕುಮಾರ್ ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಲಾಗಿತ್ತು ಎಂದು ಪೊಲೀಸರು ಹೇಳಿದರು.

ಆರೋಪಿಗಳು ವ್ಯವಸ್ಥಿತವಾಗಿ ಸಂಚು ರೂಪಿಸಿ ಕೃತ್ಯ ಎಸಗಿರುವುದು ತನಿಖೆ ವೇಳೆ ಪತ್ತೆಯಾಗಿದೆ.

ಕಳ್ಳತನ ಮಾಡಿದ ಬಳಿಕ ಮೂವರೂ ಹೈದರಾಬಾದ್‌ಗೆ ತೆರಳಿ ಬೆಳ್ಳಿ ಮಾರಾಟ ಮಾಡಿ ರಾಜಸ್ಥಾನಕ್ಕೆ ಹೋಗಿದ್ದರು. ರಾಜಸ್ಥಾನಕ್ಕೆ ತೆರಳಿದ್ದ ವಿಶೇಷ ಪೊಲೀಸ್ ತಂಡವು ತಾಂತ್ರಿಕ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ ಎಂದು ಮೂಲಗಳು ಹೇಳಿವೆ.

ಆರ್.ಎಸ್.ಕೆ ಕಟ್ಟಡದಲ್ಲಿ ಕೆ. ಮಹೇಂದ್ರ ಕುಮಾರ್ ಅವರು ಚಿನ್ನಾಭರಣ ಅಂಗಡಿ ನಡೆಸುತ್ತಿದ್ದಾರೆ. ಮಳಿಗೆಗೆ ಹೊಂದಿಕೊಂಡಂತೆ ಸೆರಾಮಿಕ್ಸ್ ಗೋದಾಮು ಇದೆ. ಏ.27ರಂದು ಮಳಿಗೆ ಹಿಂಬದಿಯ ಗೋಡೆ ಕೊರೆದು ಆರೋಪಿಗಳು ಒಳ ಪ್ರವೇಶಿಸಿದ್ದರು. ಅಲ್ಲದೇ ಮಳಿಗೆಯಲ್ಲಿದ್ದ ಸುಮಾರು 70 ಕೆ.ಜಿ ಬೆಳ್ಳಿ ಆಭರಣ, ₹5 ಲಕ್ಷ ನಗದು ಹಾಗೂ ಇತರೆ ವಸ್ತುಗಳು ಸೇರಿದಂತೆ ₹1.20 ಕೋಟಿ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

₹3 ಕೋಟಿ ಮೌಲ್ಯದ ಆಭರಣ ದೋಚಿ ಪರಾರಿ

ಆಭರಣ ಖರೀದಿಸುವುದಾಗಿ ನಂಬಿಸಿ, ಜ್ಯುವೆಲರಿ ಮಳಿಗೆಯ ಸಿಬ್ಬಂದಿಯಿಂದ ₹3 ಕೋಟಿ ಮೌಲ್ಯದ ಚಿನ್ನಾಭರಣ ದೋಚಿ ಪರಾರಿ ಆಗಿರುವ ಘಟನೆ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ನಡೆದಿದೆ. ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಕ್ಕಪೇಟೆಯ ಮಹೇಂದ್ರ ಕುಮಾರ್ ಡಿ. ಜೈನ್ ನೀಡಿದ ದೂರಿನ ಮೇಲೆ ಮಲ್ಲೇಶ್ವರದ ಪರೇಶ್ ಸೋನಿ, ಚಂದ್ರಶೇಖರ್ ಮತ್ತು ಶ್ಯಾಮ್ ವಿರುದ್ಧ ಪ್ರಕರಣ ದಾಖಲಾಗಿದೆ. ₹3 ಕೋಟಿ ಮೌಲ್ಯದ 1 ಕೆ.ಜಿ 850 ಗ್ರಾಂ ಚಿನ್ನಾಭರಣವನ್ನು ಆರೋಪಿಗಳು ದೋಚಿ ಪರಾರಿ ಆಗಿದ್ದಾರೆ ಎಂದು ಪೊಲೀಸರು ಹೇಳಿದರು.

ನಗರ್ತಪೇಟೆಯ 'ಮೆಹ್ತಾ ಗೋಲ್ಡ್ ಮಳಿಗೆ'ಯ ಮಾರಾಟ ವಿಭಾಗದ ವ್ಯವಸ್ಥಾಪಕರಾಗಿ ಮಹೇಂದ್ರ ಕುಮಾರ್ ಜೈನ್ ಹಾಗೂ ಸಹಾಯಕ ವ್ಯವಸ್ಥಾಪಕರಾಗಿ ಗೌತಮ್ ಕೆಲಸ ಮಾಡುತ್ತಿದ್ದಾರೆ. ಮಲ್ಲೇಶ್ವರದ ಮಾಹಿ ಎಂಟರ್‌ಪ್ರೈಸಸ್ ಸಂಸ್ಥೆಯ ಮಾಲೀಕ ಪರೇಶ್ ಸೋನಿ ಅವರು ಮೇ 16ರಂದು ಗೌತಮ್‌ಗೆ ಕರೆ ಮಾಡಿ 'ತಮ್ಮ ಸಂಸ್ಥೆಗೆ ಭಾರಿ ಪ್ರಮಾಣದ ಆಭರಣಗಳು ಬೇಕಾಗಿದೆ ಎಂಬುದಾಗಿ ಹೇಳಿದ್ದರು. ಹೀಗಾಗಿ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ಕಚೇರಿಗೆ ಚಿನ್ನಾಭರಣಗಳ ಮಾದರಿಯನ್ನು ತಂದು ತೋರಿಸುವಂತೆ ಕೋರಿದ್ದರು. ಮಹೇಂದ್ರ ಕುಮಾರ್ ಜೈನ್ ಮತ್ತು ಸಿಬ್ಬಂದಿ ಪ್ರಕಾಶ್ ಮಲ್ಲೇಶ್ವರದಲ್ಲಿರುವ ಮಾಹಿ ಕಚೇರಿಗೆ ಆಭರಣಗಳ ಜತೆಗೆ ತೆರಳಿದ್ದರು' ಎಂದು ಪೊಲೀಸರು ಹೇಳಿದರು.

ಫೋಟೊ ತೆಗೆಯುವ ನೆಪ – ನಾಪತ್ತೆ: 'ಆರೋಪಿಗಳಾದ ಪರೇಶ್ ಸೋನಿ, ಶ್ಯಾಮ್ ಹಾಗೂ ಚಂದ್ರಶೇಖರ್ ಅವರು ಚಿನ್ನಾಭರಣಗಳ ಮಾದರಿಯನ್ನು ನೋಡಿ, ಆಭರಣಗಳ ಫೋಟೊ ತೆಗೆಯುವ ನೆಪದಲ್ಲಿ ಪಕ್ಕದ ಕೋಣೆಗೆ ಆಭರಣಗಳನ್ನು ಕೊಂಡೊಯ್ದಿದ್ದರು. ಸಮಯ ಕಳೆದರೂ ಆರೋಪಿಗಳು ಕೋಣೆಯಿಂದ ಹೊರಕ್ಕೆ ಬಂದಿರಲಿಲ್ಲ. ಕೋಣೆಯ ಒಳಗೆ ಹೋಗಿ ಪರಿಶೀಲಿಸಿದಾಗ, ಆಭರಣ ಸಹಿತ ಆರೋಪಿಗಳು ನಾಪತ್ತೆ ಆಗಿರುವುದು ಪತ್ತೆಯಾಗಿತ್ತು' ಎಂದು ಮೂಲಗಳು ಹೇಳಿವೆ.

'ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಮೆಹ್ತಾ ಗೋಲ್ಡ್ ಮಳಿಗೆ ಹಾಗೂ ಮಲ್ಲೇಶ್ವರ ಮಾಹಿ ಎಂಟರ್‌ಪ್ರೈಸಸ್ ಸಂಸ್ಥೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

'ಚುನಾವಣೆ ಮುಂದೂಡುವುದು ಜನರಿಗೆ ಮಾಡಿದ ದ್ರೋಹ'

ಬೆಂಗಳೂರು: 'ಸೋಲುವ ಭಯದಿಂದ ಐದು ನಗರ ಪಾಲಿಕೆಗಳ ಚುನಾವಣೆಯನ್ನು ರಾಜ್ಯ ಸರ್ಕಾರ ಮುಂದೂಡುತ್ತಿದೆ. ಇದು ಜನರಿಗೆ ಮಾಡಿದ ದ್ರೋಹ' ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಇದ್ದ 198 ವಾರ್ಡ್‌ಗಳ ಆಧಾರದ ಮೇಲೆ ಚುನಾವಣೆ ನಡೆಸಿದ್ದರೆ, ಈ ವೇಳೆಗಾಗಲೇ ಚುನಾವಣೆ ಮುಗಿದಿರುತ್ತಿತ್ತು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಅಧಿಕಾರ ಹಸ್ತಾಂತರ ಪೂರ್ಣಗೊಳ್ಳುವ ಮೊದಲು ಚುನಾವಣೆ ನಡೆಯಬಾರದು ಎಂಬ ಬಯಕೆ ಇದೆ. ಕಾಂಗ್ರೆಸ್ ಒಳಜಗಳದ ಪರಿಣಾಮವಾಗಿ ಬೆಂಗಳೂರಿನ ಬೀದಿ ಬೀದಿಗಳಲ್ಲಿ ಕಸದ ರಾಶಿ ಬಿದ್ದಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಕೋರ್ಟ್ ಮತ್ತೊಮ್ಮೆ ಕೊನೆಯ ಗಡುವು ನೀಡಿದೆ. ಅಷ್ಟರೊಳಗೆ ಚುನಾವಣೆ ನಡೆಸಬೇಕು. ಬಿಜೆಪಿ ಚುನಾವಣೆಗೆ ಸಂಪೂರ್ಣ ಸಿದ್ಧವಾಗಿದ್ದು, ಕೂಡಲೇ ಚುನಾವಣೆ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಸಮೀಕ್ಷೆಯಲ್ಲಿ ಗೆಲ್ಲುತ್ತೇವೆ ಎನ್ನುವ ವಿಶ್ವಾಸ ಇದ್ದರೆ ಚುನಾವಣೆ ಏಕೆ ನಡೆಸುತ್ತಿಲ್ಲ? ಏನೇ ಸಮಸ್ಯೆ ಬಂದರೂ ಅದನ್ನು ವಿರೋಧ ಪಕ್ಷಗಳ ಮೇಲೆ ಹಾಕುವುದು ಕಾಂಗ್ರೆಸ್ ಚಾಳಿಯಾಗಿದೆ ಎಂದರು.

ಎಸ್ಐಆರ್ ಹಾಗೂ ಸರ್ವೆ ನೆಪ ಹೇಳಿ ಚುನಾವಣೆ ಮುಂದೂಡುವುದು ಕೇವಲ ರಾಜಕೀಯ ತಂತ್ರ. ಚುನಾವಣೆ ನಡೆಸುವ ಮನಸ್ಸಿದ್ದರೆ ಯಾವುದೂ ದೊಡ್ಡ ಸಮಸ್ಯೆಯಲ್ಲ. ಮೊದಲೇ ನಿಗದಿಪಡಿಸಿದ ವೇಳಾಪಟ್ಟಿಯಂತೆ ಚುನಾವಣೆ ನಡೆಸಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಹಾಲಿನ ದರ ಏರಿಕೆ, ಮದ್ಯದ ದರ, ವಿದ್ಯುತ್ ದರ, ಆಸ್ತಿ ತೆರಿಗೆ ಹೆಚ್ಚಳ, ಹೊಸ ಖಾತಾ ವ್ಯವಸ್ಥೆ ಸೇರಿ ಜನರ ಮೇಲೆ ನಿರಂತರ ಹೊರೆ ಹಾಕಿರುವುದರಿಂದ ಜನರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದಾರೆ ಎಂದು ಅಶೋಕ ಹೇಳಿದರು.

ಮನೋತ್ಸವಕ್ಕೆ ಪ್ರಸ್ತಾವ ಆಹ್ವಾನ

ಬೆಂಗಳೂರು: ರೋಹಿಣಿ ನಿಲೇಕಣಿ ಫಿಲಾಂತ್ರೊಪಿಸ್ ಫೌಂಡೇಷನ್, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಾಗೂ ರಾಷ್ಟ್ರೀಯ ಜೈವಿಕ ವಿಜ್ಞಾನಗಳ ಸಂಸ್ಥೆ (ಎನ್‌ಸಿಬಿಎಸ್) ಜಂಟಿಯಾಗಿ ಹಮ್ಮಿಕೊಂಡಿರುವ 'ಮನೋತ್ಸವ'ಕ್ಕೆ ಪ್ರಸ್ತಾವ ಆಹ್ವಾನಿಸಲಾಗಿದೆ.

ಮಾನಸಿಕ ಆರೋಗ್ಯ ಹಬ್ಬವಾದ ಮನೋತ್ಸವದ ಮೂರನೇ ಆವೃತ್ತಿ ಡಿ.5, 6 ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣ, ವಿಷಯ ತಜ್ಞರ ಜತೆಗೆ ಸಂವಾದ ಮತ್ತು ಚರ್ಚೆ, ಕಾರ್ಯಾಗಾರ, ಉಪನ್ಯಾಸ ಸೇರಿ ಹಲವು ಕಾರ್ಯಕ್ರಮಗಳನ್ನು ಈ ಉತ್ಸವ ಒಳಗೊಳ್ಳಲಿದೆ.

ಮಾನಸಿಕ ಆರೋಗ್ಯ ಮತ್ತು ಈ ಕ್ಷೇತ್ರದ ವಿವಿಧ ಆಯಾಮಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಉತ್ಸವದ ಭಾಗವಾಗಲು ಅವಕಾಶವಿದ್ದು, ತಮ್ಮ ಕಾರ್ಯಕ್ರಮದ ಬಗ್ಗೆ ಪ್ರಸ್ತಾವ ಸಲ್ಲಿಸಬಹುದಾಗಿದೆ.

ಅರ್ಜಿಗಳನ್ನು ಸಲ್ಲಿಸಲು ಮೇ 31 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ. ಅರ್ಜಿ ನಮೂನೆ ಹಾಗೂ ವಿವರಕ್ಕೆ: www.nationalmentalhealthfestival.com

ನಿಧನ ವಾರ್ತೆ

ಉಮೇಶ್ ಕುಮಾರ್

ಸಿ.ಎನ್. ಉಮೇಶ್ ಕುಮಾರ್

ಬೆಂಗಳೂರು: ನಗರದ ಯಲಚೇನಹಳ್ಳಿ ನಿವಾಸಿಯಾಗಿದ್ದ ರೈಲ್ವೆ ಇಲಾಖೆಯ ನಿವೃತ್ತ ನೌಕರ ಸಿ.ಎನ್. ಉಮೇಶ್ ಕುಮಾರ್ (67) ಬುಧವಾರ ನಿಧನರಾದರು.

ಗುರುವಾರ ಮಧ್ಯಾಹ್ನ 12 ಗಂಟೆಗೆ ಬನಶಂಕರಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರಿಗೆ ಪತ್ನಿ, ಮಗ, ಮಗಳು ಇದ್ದಾರೆ. ಕುಟುಂಬದವರ ಸಂಪರ್ಕ ಸಂಖ್ಯೆ: 9008889612

ಪಾಲಿಕೆ ಚುನಾವಣೆಗೆ ಕೊನೇ ಗಡುವು

ಒಂದನೇ ಪುಟದಿಂದ...

ಜೂನ್ 30ರೊಳಗೆ ಚುನಾವಣೆಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಿದ್ದ ಜನವರಿ 12ರ ಆದೇಶವನ್ನು ಮಾರ್ಪಡಿಸುವಂತೆ ಕೋರಿದ್ದವು.

ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ, ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಜೂನ್‌ನಲ್ಲಿ ಆರಂಭವಾಗಲಿದೆ. ಈ ಕೆಲಸದಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿ ಭಾಗಿಯಾಗಲಿದ್ದಾರೆ. ಹೀಗಾಗಿ, ಈ ಸಮಯದಲ್ಲಿ ಚುನಾವಣೆ ನಡೆಸುವುದು ಕಷ್ಟಕರ. ಚುನಾವಣೆ ನಡೆಸಲು ಸೆಪ್ಟೆಂಬರ್ ಅಂತ್ಯದವರೆಗೆ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಹಿರಿಯ ವಕೀಲ ಕೆ.ಪರಮೇಶ್ವರ ತೀವ್ರ ವಿರೋಧ ವ್ಯಕ್ತಪಡಿಸಿದರು. 'ಜೂನ್ ಅಂತ್ಯದೊಳಗೆ ಚುನಾವಣೆ ನಡೆಸುವುದಾಗಿ ರಾಜ್ಯ ಸರ್ಕಾರವು ಈ ಹಿಂದೆ ಭರವಸೆ ನೀಡಿತ್ತು. ಅದರ ಆಧಾರದಲ್ಲೇ ಜೂನ್ 30ರ ಗಡುವನ್ನು ನ್ಯಾಯಪೀಠ ನೀಡಿತ್ತು. ಈಗ ಮತ್ತೆ ಸಮಯಾವಕಾಶ ಕೇಳುತ್ತಿರುವುದು ಸರಿಯಲ್ಲ' ಎಂದು ವಾದಿಸಿದರು.

ಚುನಾವಣೆ ನಡೆಸಲು ಎಲ್ಲ ಸಿದ್ಧತೆಗಳನ್ನು ಮಾಡಲಾಗಿದೆ. ಆದರೆ, ಎಸ್‌ಐಆರ್‌ನಿಂದಾಗಿ ಮಾನವ ಸಂಪನ್ಮೂಲದ ಸಮಸ್ಯೆಗಳು ಉಂಟಾಗುತ್ತವೆ. ಆದ್ದರಿಂದ, ಕನಿಷ್ಠ ಎರಡರಿಂದ ಮೂರು ತಿಂಗಳುಗಳ ವಿಸ್ತರಣೆಯ ಅಗತ್ಯ ಇದೆ

ಅಭಿಷೇಕ್ ಮನುಸಿಂಘ್ವಿ, ಹಿರಿಯ ವಕೀಲ

ಆಯೋಗ, ಸರ್ಕಾರದ ವಾದವೇನು?

ಒಂದನೇ ಪುಟದಿಂದ...

'ರಾಜ್ಯ ಸರ್ಕಾರದ ಸಹಾಯದಿಂದ ಆಯೋಗವು ಚುನಾವಣೆಗಳನ್ನು ನಡೆಸುತ್ತದೆ. ಆದರೆ, ಜನಗಣತಿ, ಎಸ್‌ಐಆರ್ ಇತ್ಯಾದಿಗಳನ್ನು ನಡೆಸಲು ರಾಜ್ಯ ಸರ್ಕಾರವು ಮಾನವ ಸಂಪನ್ಮೂಲವನ್ನು ನಿಯೋಜಿಸಿದೆ. ಹೀಗಾಗಿ, ಅಗತ್ಯವಿರುವ ಮಾನವ ಸಂಪನ್ಮೂಲ ಮತ್ತು ಇತರ ಸೌಕರ್ಯಗಳು ರಾಜ್ಯ ಸರ್ಕಾರದಲ್ಲಿ ಲಭ್ಯವಿಲ್ಲದಿರಬಹುದು' ಎಂದು ಆಯೋಗ ಅಭಿಪ್ರಾಯಪಟ್ಟಿತ್ತು.

'ಚುನಾವಣಾ ಪ್ರಕ್ರಿಯೆಗೆ ಹಣವನ್ನು ಈಗಾಗಲೇ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿದೆ. ಯಾವುದೇ ಹಣಕಾಸಿನ ಕೊರತೆಯಿಂದಾಗಿ ರಾಜ್ಯವು ಈ ವಿಸ್ತರಣೆ ಕೋರುತ್ತಿಲ್ಲ' ಎಂದು ರಾಜ್ಯ ಸರ್ಕಾರ ತನ್ನ ಅರ್ಜಿಯಲ್ಲಿ ತಿಳಿಸಿತ್ತು.

'ಬದಲಿಗೆ, ಸಂಪೂರ್ಣ ಆಡಳಿತಾತ್ಮಕ ಮತ್ತು ಕ್ಷೇತ್ರ ಮಟ್ಟದ ಸಿಬ್ಬಂದಿಯನ್ನು ಪ್ರಸ್ತುತ ಜನಗಣತಿ ಚಟುವಟಿಕೆಗಳು, ಎಸ್‌ಐಆರ್ ಮತ್ತು ಪರೀಕ್ಷೆಗಳನ್ನು ನಡೆಸಲು ನಿಯೋಜಿಸಲಾಗಿದೆ. ಸಿಬ್ಬಂದಿಯ ತೀವ್ರ ಕೊರತೆಯಿಂದಾಗಿ ಕಾಲಾವಕಾಶದ ವಿಸ್ತರಣೆ ಅತೀ ಅಗತ್ಯ' ಎಂದು ಸರ್ಕಾರ ಹೇಳಿತ್ತು.

ಅಂತಿಮ ವಾರ್ಡ್ ಮೀಸಲಾತಿ ಅಧಿಸೂಚನೆಗಳನ್ನು ಪ್ರಕಟಿಸುವುದು ಸೇರಿದಂತೆ ತನ್ನ ಎಲ್ಲ ಜವಾಬ್ದಾರಿಗಳನ್ನು ಚುನಾವಣಾ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರದಂತೆ ಶ್ರದ್ಧೆಯಿಂದ ಪೂರ್ಣಗೊಳಿಸಲಾಗಿದೆ ಎಂದು ಸರ್ಕಾರ ಸ್ಪಷ್ಟಪಡಿಸಿತ್ತು.

ನಡೆದ ಹಾದಿ...

ಬಿಬಿಎಂಪಿಯ ಸದಸ್ಯರ ಅವಧಿ 2020ರ ಸೆಪ್ಟೆಂಬರ್ 10ಕ್ಕೆ ಮುಗಿದಿತ್ತು

ಆ ಬಳಿಕ, ಬಿಬಿಎಂಪಿಗೆ ಆಡಳಿತಾಧಿಕಾರಿ ನೇಮಿಸಲಾಗಿತ್ತು

ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಹೈಕೋರ್ಟ್ 2020ರ ಡಿಸೆಂಬರ್ 4ರಂದು ನಿರ್ದೇಶನ ನೀಡಿತ್ತು

ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ- 2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆಯನ್ನು ಎಂಟು ವಾರಗಳಲ್ಲಿ ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ 2022ರಲ್ಲಿ ನಿರ್ದೇಶನ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಎಲ್ಲ ಐದು ಪಾಲಿಕೆಗಳ ವಾರ್ಡ್‌ಗಳ ಮರು ವಿಂಗಡಣೆಯ ಅಂತಿಮ ಅಧಿಸೂಚನೆ ಪ್ರಕಟಿಸಲು ರಾಜ್ಯ ಸರ್ಕಾರಕ್ಕೆ 15 ದಿನಗಳ ಕಾಲಾವಕಾಶವನ್ನು ಸುಪ್ರೀಂ ಕೋರ್ಟ್ 2025ರ ನವೆಂಬರ್‌ನಲ್ಲಿ ನೀಡಿತ್ತು.

ಜೂನ್ 30ರೊಳಗೆ ಐದು ಪಾಲಿಕೆಗಳ ಚುನಾವಣಾ ಪ್ರಕ್ರಿಯೆ ನಡೆಸುವಂತೆ ಸುಪ್ರೀಂ ಕೋರ್ಟ್ 2026ರ ಜನವರಿ 12ರಂದು ನಿರ್ದೇಶನ ನೀಡಿತ್ತು.

ಕೆಪಿಎಸ್ ಮಕ್ಕಳಿಗೆ ಪ್ರತ್ಯೇಕ ಬಸ್

ಒಂದನೇ ಪುಟದಿಂದ...

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಗತಿ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಪರಿಶೀಲನೆ ನಡೆಸಿದರು.

'ಕೆಪಿಎಸ್ ಶಾಲೆಗಳಿಗೆ ದೂರದ ಹಳ್ಳಿ, ಪ್ರದೇಶಗಳಿಂದ ಮಕ್ಕಳು ಬರುತ್ತಾರೆ. ಶಾಲೆಗೆ ಬಂದು ಹೋಗಲು ಸಾರಿಗೆ ಸೌಲಭ್ಯ ಕಲ್ಪಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಇದೇ ಶೈಕ್ಷಣಿಕ ವರ್ಷದಿಂದಲೇ ಸೌಲಭ್ಯ ಕಲ್ಪಿಸಲು ನಿರ್ಧರಿಸಲಾಗಿದೆ. ಅಗತ್ಯವಿರುವಷ್ಟು ಬಸ್‌ಗಳನ್ನು ಹೊಸದಾಗಿ ಖರೀದಿಸಬೇಕೇ, ಖಾಸಗಿ ಕಂಪನಿಗಳಿಂದ ಗುತ್ತಿಗೆಗೆ ಪಡೆಯಬೇಕೇ ಅಥವಾ ಸಾರಿಗೆ ನಿಗಮಗಳ ಜತೆ ಒಪ್ಪಂದ ಮಾಡಿಕೊಂಡು ಆಯಾ ಭಾಗಗಳಲ್ಲಿ ಸೇವೆ ಪಡೆಯಬೇಕೇ ಎನ್ನುವ ಸಾಧ್ಯತೆಗಳನ್ನು ಪರಿಶೀಲಿಸಿ, ತಕ್ಷಣ ವರದಿ ನೀಡಬೇಕು' ಎಂದು ಅವರು ಸೂಚಿಸಿದರು.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, 'ಮುಖ್ಯಮಂತ್ರಿ ನೀಡಿದ ನಿರ್ದೇಶನವನ್ನು ಪಾಲಿಸಿದ್ದರಿಂದ ಈ ಬಾರಿಯ ಎಸ್‌ಎಸ್‌ಎಲ್‌ಸಿ, ಪಿಯುನಲ್ಲಿ ಐತಿಹಾಸಿಕ ಫಲಿತಾಂಶ ಪಡೆಯಲು ಸಾಧ್ಯವಾಗಿದೆ. ಅತಿಥಿ ಶಿಕ್ಷಕರ ಬಳಕೆ, ಪಠ್ಯ ಆಧಾರಿತ ಅಧ್ಯಯನ ಕ್ರಮ, ರಾಜ್ಯಮಟ್ಟದಲ್ಲಿ ನಡೆಸಿದ ಪೂರ್ವಭಾವಿ ಪರೀಕ್ಷೆಗಳು. ಶಿಕ್ಷಕರಿಗೆ ನೀಡಿದ ತರಬೇತಿಗಳು ಫಲಿತಾಂಶ ವೃದ್ಧಿಗೆ ಸಹಕಾರಿಯಾದವು. ಕೆಪಿಎಸ್ ಶಾಲೆಗಳ ಪಾತ್ರವೂ ಮಹತ್ವದ್ದಾಗಿದೆ' ಎಂದರು.

15 ಸಾವಿರ ಶಿಕ್ಷಕರ ನೇಮಕ

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ 2026–27ನೇ ಸಾಲಿನಲ್ಲಿ 15 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಿದ್ದು, ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಮಧು ಬಂಗಾರಪ್ಪ ಹೇಳಿದರು.

'ಶಿಕ್ಷಕರ ಕೊರತೆ ನೀಗಿಸಲು ಶಾಲಾ ಆರಂಭದ ದಿನದಿಂದಲೇ ಅತಿಥಿ ಶಿಕ್ಷಕರ ಸೇವೆ ಬಳಸಿಕೊಳ್ಳಲಾಗುತ್ತಿದೆ. ಕಲ್ಯಾಣ ಕರ್ನಾಟಕ ಸೇರಿದಂತೆ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಲಾಗಿದೆ. ಈ ವರ್ಷ 15 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು' ಎಂದರು.

'ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳೊಂದಿಗೆ ನೋಟ್‌ಬುಕ್ ಉಚಿತವಾಗಿ ವಿತರಿಸಲು ಎಷ್ಟು ಬೇಕಿದೆ ಎಂದು ಪರಿಶೀಲಿಸಲಾಗುತ್ತಿದೆ. ಬಿಸಿಯೂಟಕ್ಕೆ ಸಿದ್ಧತೆ ಆಗಿದೆ. ಸಮವಸ್ತ್ರ, ಶೂ ವಿತರಣೆಗೆ ಕ್ರಮಕೈಗೊಳ್ಳಲಾಗಿದೆ' ಎಂದು ಹೇಳಿದರು.

₹20 ಸಾವಿರ ಲಂಚ: ಕಚೇರಿ ಸಹಾಯಕ ಸೆರೆ

ಬೆಂಗಳೂರು: ಶಿಕ್ಷಕರೊಬ್ಬರ ಸೇವಾ ದಾಖಲೆ ಪುಸ್ತಕವನ್ನು ಮಹಾ ಲೆಕ್ಕಪರಿಶೋಧಕರ (ಎ.ಜಿ) ಕಚೇರಿಗೆ ಕಳುಹಿಸಲು ₹20 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಕರ್ನಾಟಕ ಪಬ್ಲಿಕ್ ಶಾಲೆಯ ಕಚೇರಿ ಸಹಾಯಕರೊಬ್ಬರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ಬಸಾಪುರದ ರಾಘವೇಂದ್ರಸ್ವಾಮಿ ಬಡಾವಣೆಯ ನಿವಾಸಿ ಆರ್. ಸುರೇಶ್ ಅವರು ಶಿಕ್ಷಕ ವೃತ್ತಿಯಿಂದ ನಿವೃತ್ತಿ ಆಗಲಿದ್ದಾರೆ. ನಿವೃತ್ತಿ ವೇತನ, ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಸುರೇಶ್ ಅವರಿಗೆ ಮಂಜೂರು ಮಾಡಲು ಸೇವಾ ದಾಖಲೆ ಪುಸ್ತಕವನ್ನು ಎ.ಜಿ ಕಚೇರಿಗೆ ರವಾನೆ ಮಾಡಬೇಕಿರುತ್ತದೆ. ಈ ಸಲುವಾಗಿ ಸುರೇಶ್ ಅವರು ತಾವು ಕಾರ್ಯ ನಿರ್ವಹಿಸುತ್ತಿರುವ ನಗರದ ಮಿನರ್ವ ವೃತ್ತದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಗೆ ಅರ್ಜಿ ಸಲ್ಲಿಸಿದ್ದರು. ಅವರ ಅರ್ಜಿಯಂತೆ ಕ್ರಮವಹಿಸಿ, ಸೇವಾ ದಾಖಲೆ ಪುಸ್ತಕವನ್ನು ಎಜಿ ಕಚೇರಿಗೆ ರವಾನೆ ಮಾಡಲು ಈ ಕರ್ತವ್ಯ ನಿರ್ವಹಿಸುವ ಕಚೇರಿ ಸಹಾಯಕ ಕೆ.ಎಸ್. ರೇಣುಕಾರಾಧ್ಯ ₹20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಸುರೇಶ್ ಅವರು ದೂರು ನೀಡಿದ್ದರು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದರು.

ಆರೋಪಿಯಿಂದ ಲಂಚದ ಹಣವನ್ನು ವಶಕ್ಕೆ ಪಡೆಯಲಾಗಿದೆ ಎಂದಿದ್ದಾರೆ.

ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಅವರನ್ನು ಬುಧವಾರ ಭೇಟಿ ಮಾಡಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಮಾಜಿ ಶಾಸಕ ಎಚ್‌.ಎಂ.ರಮೇಶ್‌ಗೌಡ, ರಾಜ್ಯಸಭೆಯ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಇದ್ದರು

ಬೆಂಗಳೂರು ಆರ್‌ಐಟಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಾದ ಕೆ.ಆರ್ ನಂದೀಶ್, ಉಮಂಗ್ ಕುಮಾರ್ ಪ್ರಸಾದ್, ಪಿಯೂಶ್ ಸಿಂಗ್ ಅವರನ್ನು ಶುಭಾ ವಿ. ಅಯ್ಯಂಗಾರ್, ಜ್ಯೋತಿಲಕ್ಷ್ಮಿ ಆರ್., ರಾಜೀವ್ ಗುಪ್ತ ಅಭಿನಂದಿಸಿದರು

ಆರ್‌ಐಟಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ

ಬೆಂಗಳೂರು: ಮೈಸೂರು ಕ್ಯಾಂಪಸ್‌ನಲ್ಲಿ ಎಲ್ ಆ್ಯಂಡ್ ಟಿ ಟೆಕ್ನಾಲಜಿ ಸರ್ವೀಸಸ್ ಆಯೋಜಿಸಿದ್ದ 'ಟೆಕ್‌ಜಿಯಂ' 9ನೇ ಆವೃತ್ತಿಯ ಸ್ಪರ್ಧೆಯಲ್ಲಿ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಆರ್‌ಐಟಿ) ವಿದ್ಯಾರ್ಥಿಗಳು ವಿಜೇತರಾಗಿದ್ದಾರೆ.

ಜ್ಯೋತಿಲಕ್ಷ್ಮೀ ಆರ್. ಮಾರ್ಗದರ್ಶನದಲ್ಲಿ ಆರ್‌ಐಟಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಕೆ.ಆರ್.ನಂದೀಶ್, ಉಮಂಗ್ ಕುಮಾರ್ ಪ್ರಸಾದ್ ಹಾಗೂ ಪೀಯೂಷ್ ಸಿಂಗ್ ಅವರ ತಂಡ ಸ್ಪರ್ಧೆಯಲ್ಲಿ ಭಾಗವಹಿಸಿತ್ತು. ಶೈಕ್ಷಣಿಕ ಮತ್ತು ಉದ್ಯಮದ ಮಧ್ಯೆ ಅಂತರವನ್ನು ಕಡಿಮೆ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಏರ್ಪಡಿಸಿದ್ದ ಮುಕ್ತ ನಾವೀನ್ಯ ಸ್ಪರ್ಧೆ ಇದಾಗಿತ್ತು.

ಈ ಸ್ಪರ್ಧೆಯಲ್ಲಿ ದೇಶದ 540 ಕಾಲೇಜುಗಳಿಂದ 62,000 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಮುಖ ಶಿಕ್ಷಣ ಸಂಸ್ಥೆಗಳಾದ ಐಐಐಟಿ ಜಬಲ್ಪುರ, ಪಿಎಸ್‌ಜಿ ಟೆಕ್ ಕೊಯಮತ್ತೂರು ಹಾಗೂ ವಿಐಟಿಯಂತಹ ಸಂಸ್ಥೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

'ನೆಕ್ಸ್ಟ್ ಜೆನ್ ಸೆಲ್ಫ್ ಚಾರ್ಜಿಂಗ್ ಹೈಬ್ರಿಡ್ ಸ್ಕೂಟರ್' ಶೀರ್ಷಿಕೆಯಲ್ಲಿ ಪ್ರಾಜೆಕ್ಟ್ ಪ್ರದರ್ಶಿಸಲಾಗಿತ್ತು. ಸಾಂಪ್ರದಾಯಿಕ 125 ಸಿಸಿ ಇಂಟರ್ನಲ್ ಕಂಬಶ್ಚನ್ ಎಂಜಿನ್ (ಐಸಿಇ) ಸ್ಕೂಟರ್ ಅನ್ನು ಸರಣಿ ಹೈಬ್ರಿಡ್ ಎಲೆಕ್ಟ್ರಿಕ್ ಪವರ್ ಟ್ರೇನ್ ಮೂಲಕ ಪುನರ್ ರೂಪಿಸುವ ಮತ್ತು ಜೋಡಿಸುವ ವಿಧಾನ ಇದಾಗಿತ್ತು.

ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಸೀತಾರಾಮ್, ಉಪಾಧ್ಯಕ್ಷ ಎಂ.ಆರ್. ಜಾನಕಿರಾಮ್, ಕಾರ್ಯದರ್ಶಿ ಎಂ.ಆರ್. ಆನಂದರಾಮ್, ಆರ್‌ಐಟಿ ನಿರ್ದೇಶಕರಾದ ಎಂ.ಆರ್. ಸಂಪಂಗಿರಾಮ್. ಎಂ.ಆರ್. ಕೋದಂಡರಾಮ್, ಆರ್‌ಐಟಿ ಪ್ರಾಂಶುಪಾಲರು ವಿಜಯಿ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

'ಗ್ಲೋಬಲ್ ವಾಟರ್ ಸಮಿಟ್- 2026'ರ ಮೂರು ವಿಭಾಗದ ಟಾಪ್ 5ರಲ್ಲಿ ಸ್ಥಾನ

ಜಲಮಂಡಳಿಗೆ ಜಾಗತಿಕ ಮನ್ನಣೆ

ಪ್ರಜಾವಾಣಿ ವಾರ್ತೆ

ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆದ ಗ್ಲೋಬಲ್ ವಾಟರ್ ಸಮಿಟ್‌ನಲ್ಲಿ ಜಲಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ಮಾತನಾಡಿದರು

ಬೆಂಗಳೂರು: ನೀರು ಸರಬರಾಜು ಹಾಗೂ ಸಂಸ್ಕರಣೆಯಲ್ಲಿ ಮುಂಚೂಣಿಯಲ್ಲಿ ಇರುವ ಜಲಮಂಡಳಿಯು ಜಾಗತಿಕ 5 ಅತ್ಯುತ್ತಮ ಸಂಸ್ಥೆಗಳಲ್ಲಿ ಒಂದಾಗಿದೆ.

ಸ್ಪೇನ್ ದೇಶದ ಮ್ಯಾಡ್ರಿಡ್‌ನಲ್ಲಿ ಆಯೋಜಿಸಲಾಗಿರುವ ಪ್ರತಿಷ್ಠಿತ 'ಗ್ಲೋಬಲ್ ವಾಟರ್ ಸಮಿಟ್– 2026'ನಲ್ಲಿ 3 ಪ್ರಮುಖ ವಿಭಾಗಗಳಲ್ಲಿ ಜಾಗತಿಕ ಟಾಪ್ 5ರಲ್ಲಿ ಸ್ಥಾನ ಪಡೆದ ಭಾರತದ ಏಕೈಕ ನೀರು ಸರಬರಾಜು ಸಂಸ್ಥೆ ಎಂಬ ಹೆಗ್ಗಳಿಕೆಗೆ ಜಲಮಂಡಳಿ ಪಾತ್ರವಾಗಿದೆ.

ಗ್ಲೋಬಲ್ ವಾಟರ್ ಸಮಿಟ್‌ನಲ್ಲಿ ಬೆಂಗಳೂರು ಜಲಮಂಡಳಿಯನ್ನು ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಪ್ರತಿನಿಧಿಸಿದ್ದರು. ಈ ವೇಳೆ ವಿಶ್ವದ ಪ್ರಮುಖ ಜಲ ನಿರ್ವಹಣಾ ನಾಯಕರು, ತಜ್ಞರನ್ನು ಭೇಟಿಯಾದ ಅವರು, ಬೆಂಗಳೂರಿನಲ್ಲಿ ಅಳವಡಿಸಿಕೊಂಡಿರುವ ನವೀನ ಜಲ ನಿರ್ವಹಣಾ ಕ್ರಮಗಳ ಬಗ್ಗೆ ಚರ್ಚಿಸಿದರು.

'ಬೆಂಗಳೂರಿನಲ್ಲಿ ನೀರಿನ ಸದ್ಬಳಕೆ, ಮರುಬಳಕೆ ಹಾಗೂ ಸಮರ್ಥ ನಿರ್ವಹಣೆಗೆ ಜಲಮಂಡಳಿ ಅಳವಡಿಸಿಕೊಂಡಿರುವ ಪಂಚಸೂತ್ರಗಳು ಮಾದರಿಯಾಗಿವೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ ಪಾಲಿಸುತ್ತಿರುವ ಜಲಮಂಡಳಿ ಮಾದರಿಗಳು ಗಮನ ಸೆಳೆದಿವೆ. ಈ ವಿಭಾಗದಲ್ಲಿ ಚಿಲಿ ದೇಶದ ಅಗುವಾಸ್ ನ್ಯೂವಾಸ್, ಮಲೇಷ್ಯಾದ ಇಂಡಾ ವಾಟರ್ ಕನ್ಸೋರ್ಷಿಯಮ್, ಬ್ರೆಜಿಲ್‌ನ ಸನಾಸಾ, ಪರಾನಾದ ಸನೇಪರ್ ಸಂಸ್ಥೆಗಳ ಜೊತೆಗೆ ಜಲಮಂಡಳಿಯು ವಿಶ್ವದ ಐದರ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದೆ' ಎಂದು ಡಾ.ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಮೂರು ವರ್ಷಗಳಲ್ಲಿ ನೀರು ಪೂರೈಕೆ, ನೈರ್ಮಲ್ಯ ಹಾಗೂ ಹೊಸ ತಂತ್ರಜ್ಞಾನಗಳ ಯಶಸ್ವಿ ಅಳವಡಿಕೆ ಪರಿಗಣಿಸಿ, ವಿಶ್ವದ ಅತ್ಯಂತ ಪ್ರತಿಷ್ಠಿತ 'ಯುಟಿಲಿಟಿ ಆಫ್ ದಿ ಇಯರ್' ಪ್ರಶಸ್ತಿಯ ಅಂತಿಮ ಐದರ ಪಟ್ಟಿಯಲ್ಲಿ ಜಲಮಂಡಳಿ ಸ್ಥಾನ ಪಡೆದಿದೆ.

ಇದರ ಜೊತೆಗೆ, 'ಕಾವೇರಿ 5ನೇ ಹಂತ'ದ ಕುಡಿಯುವ ನೀರಿನ ಯೋಜನೆಯು ಪ್ರತ್ಯೇಕವಾಗಿ ಜಾಗತಿಕ ಟಾಪ್ 5 ಪಟ್ಟಿಯಲ್ಲಿ ಸ್ಥಾನ ಪಡೆದು ಜಲ ನಿರ್ವಹಣಾ ತಜ್ಞರ ವಿಶೇಷ ಪ್ರಶಂಸೆಗೆ ಪಾತ್ರವಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE

GOVERNMENT OF KARNATAKA
Office of the Deputy Commissioner and District Magistrate
Bangalore District, Bangalore,
No. MAG(2)/ENT/02/2013/14
Dated : 04.05.2026
FORM C
(See Rules 25(1) and 117)
Notice by the Licensing Authority under the Karnataka Cinemas
(Regulation) Rules 2014

Whereas Sri Vijaya.T S/o Thammanna.L, authorized Signatory of Mantri Tropicana Habitats Pvt Ltd, C-5, Richhouse, No.5/1, Richmond Road, Bengaluru-560025, GPA Holder of (1) M/s PVK Infrastructure Projects (India) Pvt -Ltd, No.201, Margosa Mansion, # 98, Margosa Road, Malleswaram, Bengaluru-03, (2) M/s Hasco Infrastructure Company Pvt. Ltd, No.301, Margosa Mansion, # 98, Margosa Road, Malleswaram, Bengaluru-03 and (3) Sri P.Vijayakumar, S/o P.Ramaswamy Raju, No.62/1, 15th 'A' Cross, 6th Main, Malleswaram, Bengaluru-03, Have applied to me for grant of No Objection Certificate, for the location of a permanent Multiplex Cinema (11 Screens) Multiplex on the land belongs to Karnataka Co-operative Milk Producer's Federation, a Co-operative Society having its registered Office at KMF Complezx Dr. M.H.IViarigowda Road, Bengaluru-29 bearing the Municipal No.5 and 5/1, 80 feet Main Road, ward No.68, Koramangala, Bengaluru-95 measuring by a 9645.61 Sq Meters and bounded as under.

EAST : KHB Games Village Residential area.
WEST : Intermediate Ring Road.
NORTH : 80 feet Road [Koramangala Main Road]
SOUTH : Internal Road Koramangala 6th Block.

Notice is hereby given that any person having any objection to Grant of No Objection Certificate as aforesaid should lodge his objection in writing with under signed by the 41h Day of June 2026 Any objection received beyond the date will not be taken into consideration.

Given under my hand this day 4th Day of May 2026.
JAGADEESHA G
06-05-2026
Deputy Commissioner & District Magistrate
Bengaluru Urban District Bengaluru

CHANGE OF NAME

I, **SANTHOSH KUMARI K.R,** R/at No.B-205, Garuda Blossom Apartments, Basavanapura Main Road, Bhattarahalli, Bengaluru-560049, have changed my name to **SANTHOSH KUMARI JUJARE** vide affidavit dated 16-05-2026 sworn before notary M.K.Devaki, Bengaluru. Henceforth I shall be called as **SANTHOSH KUMARI JUJARE** only.

I, MANJUNATHA S/o Muniyappa aged about 65 years resident at 2nd Nagarthapet Ward no 10 Sidlaghatta, Chikkaballapur 562105. Have changed my name to S M Manjunatha vide affidavit dated 28.04.2026 before Notary Bhaskar B P Sidlaghatta. Henceforth I Shall be called as S M Manjunatha only.

CHANGE OF NAME

I,**GAYATHRI. R,** Residing at No. 9, 3rd Floor, 4th Cross, Official Quarters, Byrasandra, Jayanagar, Bengaluru- 560011, have changed my name to **ZAINAB. Z,** vide affidavit dated 20.05.2026 before Notary B.G. Sriram, Bengaluru.

Lost

DOCUMENT LOST

I, **Shankar Gopal V,** residing at No. 56, New No. 294, 5th Cross, HAL 3rd Stage, Bhoomi Reddy Colony, New Thippasandra, Bengaluru-560075, have lost my **Original Sale Deed of Shankar Gopal V, Document No./ Identification: 1668/1988-89.** While in transit. If found please contact: **9686768002**

PERSONAL

Change of Name

I, SYED WASIF RAZA S/O MIR MOHAMMED KOWSER residing at Alipur, Gauribidanur taluk, Chikkaballapur district, Karnataka. have changed my daughter's name. SYEDA FATHIME MARYAM (new name) SYEDA SUHAINA ALEESA (old name) vide affidavit dated 16.05.2026 before notary MS ANANDA, Gauribidanur.

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

‘ಎಚ್‌ಡಿಕೆ ಪಂಥಾಹ್ವಾನಕ್ಕೆ ಸಿದ್ಧ’

ಬಿಡದಿ ಟೌನ್ ಶಿಪ್: ರೈತ ಪ್ರತಿನಿಧಿಗಳ ಜೊತೆ ಡಿಕೆಶಿ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಡದಿ ಟೌನ್‌ಶಿಪ್ ವಿಚಾರವಾಗಿ ಕುಮಾರಸ್ವಾಮಿಯ ಪಂಥಾಹ್ವಾನ ಸ್ವೀಕರಿಸಲು ಸಿದ್ಧ. ಜಾಗ ಮತ್ತು ಸಮಯವನ್ನು ಅವರೇ ನಿರ್ಧರಿಸಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಬಿಡದಿ ಟೌನ್‌ಶಿಪ್ ಯೋಜನೆಯ ಕುರಿತಂತೆ ಆ ಭಾಗದ ರೈತರ ಜೊತೆ ಬುಧವಾರ ಚರ್ಚೆ ನಡೆಸಿದ ಬಳಿಕ ಸುದ್ದಿ-ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನನಗೆ ಮೂರು ದಿನ ಸಮಯ ಸಾಕು. ನೀವು (ಕುಮಾರಸ್ವಾಮಿ) ಯಾವತ್ತು ಸಮಯ ನಿಗದಿ ಮಾಡುತ್ತಿರೋ ನಾನು ತಯಾರಿದ್ದೇನೆ’ ಎಂದರು.

ಸಭೆಯಲ್ಲಿ ಭಾಗವಹಿಸಿದ ರೈತರು, ಪರಿಹಾರದ ಜತೆಗೆ ನಿವೇಶನ ನೀಡುವಂತೆ ಬೇಡಿಕೆ ಇಟ್ಟರು. ರೈತರ ಅಹವಾಲುಗಳನ್ನು ಆಲಿಸಿದ ಶಿವಕುಮಾರ್, ಕಾನೂನು ರೀತಿಯಲ್ಲಿ ಸಹಾಯ ಮಾಡುವ ಭರವಸೆ ನೀಡಿದರು.

ಪರಿಹಾರ ಹಣ ಶೀಘ್ರ ಬಿಡುಗಡೆ: ‘ಈ ಯೋಜನೆಗೆ ಶೇ 80ರಷ್ಟು ರೈತರು ಒಪ್ಪಿದ್ದಾರೆ. ಆದಷ್ಟು ಬೇಗ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ. ಜೂನ್ ಮೊದಲ ವಾರದಿಂದ ಪರಿಹಾರ ಹಣ ಬಿಡುಗಡೆಗೆ ಕ್ರಮವಹಿಸುತ್ತೇನೆ. ಮೂರು, ಮೂರು ಹಳ್ಳಿಗಳನ್ನು ಸೇರಿಸಿ ಪ್ರತ್ಯೇಕವಾದ ಅಂತಿಮ ಹಂತದ ಅಧಿಸೂಚನೆ ಹೊರಡಿಸಲಾಗುವುದು’ ಎಂದರು.

‘ಈ ಯೋಜನೆ ನಾನು ಮಾಡಿದ್ದಲ್ಲ. ಕುಮಾರಸ್ವಾಮಿ ಅವರ ಕಾಲದಲ್ಲೇ ಅಧಿಸೂಚನೆ ಮಾಡಲಾಗಿತ್ತು. ಅವರ ಕಾಲದಲ್ಲೇ ಎಂಟು ಸಾವಿರ ಅಡಿ ಕೊಡಬೇಕೆಂದು ತೀರ್ಮಾನಿಸಲಾಗಿತ್ತು. ಈ ಯೋಜನೆಯನ್ನು ಡಿಎಲ್‌ಎಫ್ ಕಂಪನಿಗೆ ನೀಡಿದ್ದರು. ಯೋಜನೆ ಕಾರ್ಯಸಾಧು ಇಲ್ಲವೆಂದು ಆ ಕಂಪನಿಯವರು ಹಣ ವಾಪಸ್ ತೆಗೆದುಕೊಂಡು ಹೋದರು’ ಎಂದರು.

ರಿಯಲ್ ಎಸ್ಟೇಟ್ ಮಾಫಿಯಾ ಮಾಡಿದವರು ಯಾರು? ಡಿಎಲ್‌ಎಫ್‌ಗೆ ಮಾರಿದವರು ಯಾರು? ಪಂಥಾಹ್ವಾನ ನೀಡಿರುವ ಮಗನ (ಕುಮಾರಸ್ವಾಮಿ) ಜೊತೆ ಅವರೂ (ದೇವೇಗೌಡ) ಚರ್ಚೆಗೆ ಬರಲಿ

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

‘ಜೂನ್ 30ರ ಒಳಗೆ ಎಲ್ಲ ಅಧಿಸೂಚನೆ’

‘ಈ ಯೋಜನೆಗೆ ಜೂನ್ 30ರ ಒಳಗೆ ಎಲ್ಲ ಅಧಿಸೂಚನೆಗಳನ್ನು ಹೊರಡಿಸಲಾಗುವುದು. ಅಷ್ಟರ ಒಳಗೆ ಒಪ್ಪಿಗೆ ನೀಡುವ ರೈತರಿಗೆ ಪೂರ್ಣ ಪ್ರಮಾಣದ ಪರಿಹಾರ ನೀಡುತ್ತೇವೆ. ಒಪ್ಪಿಗೆ ನೀಡದವರಿಗೆ ಕೋರ್ಟ್‌ನಲ್ಲಿ ಠೇವಣಿ ಇಟ್ಟು ಕೆಲಸ ಮುಂದುವರಿಸುತ್ತೇವೆ’ ಎಂದು ಶಿವಕುಮಾರ್ ತಿಳಿಸಿದರು.



ರೈತ ಪ್ರತಿನಿಧಿಗಳ ಜತೆ ಡಿ.ಕೆ.ಶಿವಕುಮಾರ್ ಸಮಾಲೋಚನೆ ನಡೆಸಿದರು. ಶಾಸಕ ಎಚ್‌.ಸಿ.ಬಾಲಕೃಷ್ಣ, ಮುಖಂಡ ಗಾಣಕಲ್ ನಟರಾಜ್, ರೈತ ಮುಖಂಡರಾದ ರಾಜಣ್ಣ ಹೊಸೂರು, ಸಿದ್ದರಾಜು, ಮಂಜುನಾಥ, ಶಿವರಾಮು, ಜಯರಾಮಯ್ಯ, ಕೃಷ್ಣಮೂರ್ತಿ, ವಿಶ್ವನಾಥ್ ಇದ್ದರು

‘ಕೇತಗಾನಹಳ್ಳಿ ಬಿಎಂಐಸಿಪಿ ವ್ಯಾಪ್ತಿಗೆ ಏಕೆ’

‘ದೇವೇಗೌಡರ ಕುಟುಂಬದವರು ಹಾಸನದಲ್ಲೇ ಜಮೀನು ಖರೀದಿ ಮಾಡಬಹುದಿತ್ತಲ್ಲವೇ? ಇಲ್ಲಿ ಅವರು, ತಮ್ಮಣ್ಣ, ಅವರ ಪತ್ನಿ ಸೇರಿ ಅವರ ಬೀಗರು ಇಲ್ಲಿ ಜಮೀನು ಖರೀದಿಸಿದ್ದಾರೆ. ದೇವಗೆರೆಯಲ್ಲಿ ರೇವಣ್ಣ ಅವರು ಸೇರಿದಂತೆ 200 ಎಕರೆ ಜಮೀನು ತೆಗೆದುಕೊಂಡಿದ್ದಾರೆ. ಬಿಎಂಐಸಿಪಿ ವ್ಯಾಪ್ತಿಯಲ್ಲಿ ದೇವಗೆರೆ ಹಾಗೂ ಕೇತಗಾನಹಳ್ಳಿಯನ್ನು ಸೇರಿಸಿಕೊಂಡಿದ್ದಾರೆ. ರೈತರ ಹಿತ ಕಾಪಾಡುವವರಾಗಿದ್ದರೆ, ಎಲ್ಲರಿಗೂ ಒಂದೇ ನ್ಯಾಯ ಇರಬೇಕು. ದೇವಗೆರೆಯಲ್ಲಿ ಹಾಗೂ ಕೇತಗಾನಹಳ್ಳಿಯಲ್ಲಿರುವ ಅವರ ಜಮೀನು ಬಿಎಂಐಸಿಪಿ ಯೋಜನೆ ವ್ಯಾಪ್ತಿಯಲ್ಲಿ ಬರಬೇಕು, ಆದರೆ ಭೂಸ್ವಾಧೀನ ಮಾತ್ರ ಆಗಬಾರದು ಎಂದರೆ ಹೇಗೆ? ಅಲ್ಲಿ 38 ಎಕರೆ ಜಾಗವನ್ನು ಬೇರೆಯವರ ಹೆಸರಿನಲ್ಲಿ ಪಡೆದು, ಈಗ ಪರಿಹಾರವನ್ನು ನಮಗೆ ಕೊಡಿ ಎಂದು ಕೇಳುತ್ತಿದ್ದಾರೆ’ ಎಂದರು.

‘ಜಗದೀಶ ಶೆಟ್ಟರ್, ಬೊಮ್ಮಾಯಿ ಅವರ ಅವಧಿಯಲ್ಲಿ ಕೆಐಎಡಿಬಿಯವರು 1 ಸಾವಿರ ಎಕರೆ ಸ್ವಾಧೀನಪಡಿಸಿಕೊಂಡಿದ್ದರು. ಆಗ ಕುಮಾರಸ್ವಾಮಿ ಅವರನ್ನು ರೈತರು ಪ್ರಶ್ನಿಸಿದಾಗ, ‘ನಾನೇ ಮಾಡಿಸಿದ್ದು ಈಗ ಏನು ಮಾಡಲು ಆಗಲ್ಲ ಎಂದರಂತೆ’ ಎಂದರು.

ಕುಮಾರಸ್ವಾಮಿ ಯಾಕೆ ಮಾಡಲಿಲ್ಲ?: ‘ಈ ಯೋಜನೆಗೆ ಅಧಿಸೂಚನೆ ಹೊರಡಿಸಿದವರು ಕುಮಾರಸ್ವಾಮಿ. ಈ ಯೋಜನೆ ಕೈಬಿಡುವುದಾದರೆ ಅವರೇ ಡಿನೋಟಿಫಿಕೇಶನ್ ಮಾಡಬಹುದಿತ್ತಲ್ಲವೇ? ಬಿಜೆಪಿ ಸರ್ಕಾರದಲ್ಲಿ 900 ಎಕರೆಯನ್ನು ಕೆಐಎಡಿಬಿಗೆ ಜಮೀನು ನೀಡಿದಾಗ ಕುಮಾರಸ್ವಾಮಿ ಯಾಕೆ ಮಾತನಾಡಲಿಲ್ಲ’ ಎಂದು ಪ್ರಶ್ನಿಸಿದರು.

‘ಆ ಹುಡುಗನಿಗೆ ಉತ್ತರಿಸುವುದಿಲ್ಲ’

ಬೆಂಗಳೂರು: ‘ಆ ಹುಡುಗನಿಗೆ (ನಿಖಿಲ್ ಕುಮಾರಸ್ವಾಮಿ) ನಾನು ಉತ್ತರ ಕೊಡುವುದಿಲ್ಲ. ಆತನಿಗೆ ಉತ್ತರ ಕೊಡಲು ಸ್ಥಳೀಯ ನಾಯಕರಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘136 ಜನ ಶಾಸಕರಿದ್ದರೂ ಏನು ಹರಿದಿದ್ದೀರಿ’ ಎಂದು ಶಿವಕುಮಾರ್ ಅವರನ್ನು ಉದ್ದೇಶಿಸಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯವಾಗಿ ಮಂಗಳವಾರ ಪ್ರಶ್ನಿಸಿದ್ದರು.

ಈ ಬಗ್ಗೆ ಸುದ್ದಿಗಾರರು ಕೇಳಿದಾಗ ಗರಂ ಆದ ಶಿವಕುಮಾರ್, ‘ಅವರ ಸ್ಥಾನಮಾನ ಏನೆಂದು ನನಗೆ ಗೊತ್ತಿಲ್ಲ. ಪಕ್ಷದ ಅಧ್ಯಕ್ಷರಾದ ಮೇಲೆ ಉತ್ತರ ನೀಡಬಹುದು’ ಎಂದರು.

‘ಮಾತನಾಡುವ ಮುನ್ನ ಎಚ್ಚರಿಕೆ ಇರಲಿ’

ಹಾಸನ: ‘ಅಧಿಕಾರ ಯಾರಿಗೂ ಶಾಶ್ವತವಲ್ಲ. ಮಾತನಾಡುವ ಮುನ್ನ ಎಚ್ಚರಿಕೆಯಿಂದ ಮಾತನಾಡಿ. ದುರಹಂಕಾರ ಬೇಡ’ ಎಂದು ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿದರು.

ಚನ್ನರಾಯಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಡದಿ ರೈತರೆಂದು ಸಭೆ ಮಾಡಿದ್ದೀರಾ. ನಿಜವಾದ ರೈತರ ಗೋಳನ್ನು ಒಮ್ಮೆಯಾದರೂ ಕೇಳಿದ್ದೀರಾ? ರಿಯಲ್ ಎಸ್ಟೇಟ್ ಬ್ರೋಕರ್‌ಗಳು, ದಲ್ಲಾಳಿಗಳು, ಕಮಿಷನ್ ಏಜೆಂಟ್‌ಗಳು ಸೇರಿದಂತೆ ಕಾಂಗ್ರೆಸ್ ಮುಖಂಡರನ್ನು ಕರೆದು ಸಭೆ ಮಾಡಿದ್ದು ಯಾವ ಪುರುಷಾರ್ಥಕ್ಕೆ’ ಎಂದು ಪ್ರಶ್ನಿಸಿದರು.

‘ಜನ ನಿಮಗೆ 136 ಸ್ಥಾನ ಕೊಟ್ಟು ಗೆಲ್ಲಿಸಿದ್ದಾರೆ. ಕುಣಿಯಲಾರದವಳು ನೆಲ ಡೊಂಕು ಅಂದಂಗೆ ಮಾತಾಡ್ತಿದ್ದಾರೆ. ಮಿಸ್ಟರ್ ಶಿವಕುಮಾರ್ ನಮ್ಮ ಬಗ್ಗೆ ತಲೆ ಕೆಡಿಸಿಕೊಳ್ಳೋದು ಬೇಡ. ನಿಖಿಲ್ ಏನು ಅಂತ ಜನ ತೋರಿಸಿಕೊಡುತ್ತಾರೆ’ ಎಂದರು.

ಭೂಸ್ವಾಧೀನ ರೈತ ದ್ರೋಹ ಕೃತ್ಯ– ಅಶೋಕ

ಬೆಂಗಳೂರು: ‘ಬಿಡದಿಯಲ್ಲಿ ಭೂಸ್ವಾಧೀನ ಮಾಡಲು ಸರ್ಕಾರ ಮುಂದಾಗಿರುವುದು ರೈತರಿಗೆ ಮಾಡುತ್ತಿರುವ ದ್ರೋಹ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡದಿ ಭಾಗದಲ್ಲಿ ತೆಂಗು, ಮಾವು, ರೇಷ್ಮೆ ಮತ್ತು ಹೈನುಗಾರಿಕೆ ಸಮೃದ್ಧವಾಗಿರುವ ಫಲವತ್ತಾದ ಕೃಷಿ ಭೂಮಿ ಇದೆ. ಅಂತಹ ಪ್ರದೇಶವನ್ನು ಒತ್ತುವರಿ ಮಾಡಿ ರೈತರನ್ನು ಬೀದಿಗೆ ತರುವ ಕೆಲಸ ನಡೆಯುತ್ತಿದೆ ಎಂದು ಅವರು ಹೇಳಿದರು.

‘ಸರ್ಕಾರ ಆಯೋಜಿಸಿದ ಸಭೆಗಳಿಗೆ ನಕಲಿ ರೈತರನ್ನು ಕರೆತಂದು ಯೋಜನೆಯು ರೈತರ ಪರವಾಗಿದೆ ಎಂದು ಬಿಂಬಿಸಲಾಗುತ್ತಿದೆ. ಆದರೆ, ನಿಜವಾದ ರೈತರು ಜಮೀನು ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಬಿಜೆಪಿ ಆರಂಭದಿಂದಲೂ ಬಿಡದಿ ರೈತರ ಹೋರಾಟಕ್ಕೆ ಬೆಂಬಲ ನೀಡಿದ್ದು, ಮುಂದೆಯೂ ರೈತರ ಪರವಾಗಿ ನಿಲ್ಲಲಿದೆ’ ಎಂದು ಹೇಳಿದರು.

ಬೆಂಗಳೂರು ಸುತ್ತಮುತ್ತ ಈಗಾಗಲೇ ಸಾಕಷ್ಟು ಜಾಗ ಖಾಲಿ ಇದೆ. ಕೆಂಪೇಗೌಡ ಲೇಔಟ್, ಶಿವರಾಮ ಕಾರಂತ ಲೇಔಟ್ ಸೇರಿ ಹಲವು ಬಡಾವಣೆಗಳಲ್ಲಿ ಲಕ್ಷಾಂತರ ನಿವೇಶನಗಳು ಖಾಲಿ ಇವೆ. ಈ ಮಧ್ಯೆ ಹೊಸ ಲೇಔಟ್‌ಗಳ ಅವಶ್ಯ ಏನಿದೆ ಎಂದು ಅಶೋಕ ಪ್ರಶ್ನಿಸಿದರು.

ಸಾಂಸ್ಕೃತಿಕ ಮುನ್ನೋಟ



‘ಜೀಕೆ ಮಾಸ್ತರರ ಪ್ರಣಯ ಪ್ರಸಂಗ’ ನಾಟಕ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡವು ಇದೇ 24ರಂದು ಸಂಜೆ 7ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ‘ಜೀಕೆ ಮಾಸ್ತರರ ಪ್ರಣಯ ಪ್ರಸಂಗ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಚಂದ್ರಶೇಖರ ಕಂಬಾರ ಅವರ ಕಾದಂಬರಿ ಆಧಾರಿತ ನಾಟಕ ಇದಾಗಿದೆ. ಭಾಸ್ಕರ್ ನೀನಾಸಂ ಅವರ ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನ ಕಾಣಲಿದೆ. ಈ ಕಾದಂಬರಿಯ ವಸ್ತು ಪ್ರೀತಿ ಮತ್ತು ಪ್ರೇಮ. ಪ್ರತಿಷ್ಠಿತ ಕಾಲೇಜೊಂದರ ಪ್ರಾಂಶುಪಾಲರು ತಮ್ಮದೇ ಕಾಲೇಜಿನ ವಿದ್ಯಾರ್ಥಿನಿ ‘ರೋಜಾ’ ಎನ್ನುವ ಹುಡುಗಿಯ ಪ್ರೇಮದ ಬಲೆಯಲ್ಲಿ ಬಿದ್ದು, ಅವರ ಜೀವನದಲ್ಲಿ ಮುಂದೆ ಏನೆಲ್ಲ ಘಟನೆಗಳು ಸಂಭವಿಸುತ್ತವೆ ಎಂಬುದನ್ನು ಈ ನಾಟಕ ಅನಾವರಣ ಮಾಡಲಿದೆ.

ನಾಟಕದ ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವೆಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9945977184

ಸಂಗೀತ ಕಛೇರಿ

ಬೆಂಗಳೂರು: ಕೆ.ಎನ್. ಕೃಷ್ಣಮೂರ್ತಿ ಅವರ ಜನ್ಮಶತಮಾನೋತ್ಸವದ ಅಂಗವಾಗಿ ವಿದ್ವಾನ್ ಶ್ರೀ ಕೆ.ಎನ್.ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್ ಇದೇ 23 ಮತ್ತು 24 ರಂದು ಮಲ್ಲೇಶ್ವರದ ಸೇವಾ ಸದನದಲ್ಲಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

23ರಂದು ಸಂಜೆ 4 ಗಂಟೆಗೆ ಮೈಸೂರು ವಿಜಯಸೂರ್ಯ ಮತ್ತು ಚಂದ್ರಶೇಖರ ಜಿ. ಅವರಿಂದ ನಾದಸ್ವರ, ಬಿಕ್ಕಂಬಟ್ಟ ಬಿ.ಆರ್. ವೆಂಕಟೇಶ್, ಬೆಂಗಳೂರು ಎಂ. ಮುರುಗೇಶ್ ಅವರಿಂದ ತವಿಲ್ ವಾದನ ನಡೆಯಲಿದೆ. ಸಂಜೆ 5.30ರಿಂದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಂಜೆ 6.30ರಿಂದ ಸಂಗೀತ ಕಛೇರಿ ನಡೆಯಲಿದ್ದು, ಎಂ.ಎಸ್. ಶೀಲಾ ಅವರಿಂದ ಗಾಯನ ನಡೆಯಲಿದೆ. ಅಪೇಕ್ಷಾ ಅಪ್ಪಲಾ ಅವರು ಗಾಯನದಲ್ಲಿ ಸಾಥ್ ನೀಡಲಿದ್ದಾರೆ. ಎಚ್.ಎಂ. ಸ್ಮಿತಾ ಅವರಿಂದ ಪಿಟೀಲು, ಕೆ.ಯು. ಜಯಚಂದ್ರ ಅವರಿಂದ ಮೃದಂಗ ಹಾಗೂ ಯು. ಗಿರಿಧರ ಉಡುಪ ಅವರಿಂದ ಘಟ ವಾದನ ನಡೆಯಲಿದೆ.

24ರಂದು ಬೆಳಿಗ್ಗೆ 9.30ರಿಂದ ಸಂಜೆ 7ರ ವರೆಗೆ ಸಂಗೀತ ಕಛೇರಿ ನಡೆಯಲಿದೆ. ಆನೂರು ಅನಂತಕೃಷ್ಣ ಶರ್ಮ, ಮೈಸೂರು ಎಂ. ನಾಗರಾಜ್, ಮೈಸೂರು ಎಂ. ಮಂಜುನಾಥ್ ಸೇರಿ ಹಲವರು ಪಾಲ್ಗೊಳ್ಳಲಿದ್ದಾರೆ.

ಎಂ.ಎಸ್.ಶೀಲಾ

ಪೂರ್ವಿ ಕಶ್ಯಪ್ ರಂಗಪ್ರವೇಶ

ಬೆಂಗಳೂರು: ನಾಟ್ಯ ನಿಕೇತನ ನೃತ್ಯ ಶಾಲೆಯು ಇದೇ 24ರಂದು ಸಂಜೆ 6ಕ್ಕೆ ದೊಡ್ಡಕಲ್ಲಸಂದ್ರದಲ್ಲಿರುವ ಮೀನಾಕ್ಷಿ ರಂಗಮಂಚದಲ್ಲಿ ಪೂರ್ವಿ ಕಶ್ಯಪ್ ಅವರ ಭರತನಾಟ್ಯ ರಂಗಪ್ರವೇಶ ಹಮ್ಮಿಕೊಂಡಿದೆ.

ಭರತನಾಟ್ಯ ಕಲಾವಿದ ಪಿ. ಪ್ರವೀಣ್ ಕುಮಾರ್, ಕುಮಾರನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ನಿರ್ದೇಶಕಿ ದೀಪಾ ಶ್ರೀಧರ್ ಹಾಗೂ ನೃತ್ಯ ವಿಮರ್ಶಕ ನಂಜುಂಡ ರಾವ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಪೂರ್ವಿ ಅವರು 12 ವರ್ಷಗಳಿಂದ ರೇವತಿ ನರಸಿಂಹನ್ ಅವರ ಮಾರ್ಗ-ದರ್ಶನದಲ್ಲಿ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪೂರ್ವಿ ಕಶ್ಯಪ್

‘ಕಲಾ ಸ್ಪಂದನ’ ಸಂಗೀತ–ನೃತ್ಯ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಮತ್ತು ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಇದೇ 23ರಂದು ಸಂಜೆ 6ಕ್ಕೆ ಜಯನಗರದ 4ನೇ ಬ್ಲಾಕ್‌ನಲ್ಲಿರುವ ಸನಾತನ ಕಲಾಕ್ಷೇತ್ರದಲ್ಲಿ ‘ಕಲಾ ಸ್ಪಂದನ’ ಶಾಸ್ತ್ರೀಯ ಸಂಗೀತ, ನೃತ್ಯ ತಿಂಗಳ ಕಾರ್ಯಕ್ರಮ ಹಮ್ಮಿಕೊಂಡಿದೆ.

ಪಾರ್ಥ ಪಿ. ಕೆರೂರ ಅವರಿಂದ ಭರತನಾಟ್ಯ, ವಸುಧಾ ಬಾಲಕೃಷ್ಣ (ಗಾಯನ), ಬಾಲಕೃಷ್ಣ (ಮೃದಂಗ), ಕಾರ್ತಿಕ್ ಸಾಥವಳ್ಳಿ (ಕೊಳಲು), ನಿಖಿತಾ ಮಂಜುನಾಥ್ (ನಟುವಾಂಗಂ) ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಜೀವ್ ಕೊರ್ತಿ ಅವರ ಶಿಷ್ಯರಾದ ಚಕ್ಷಶ್ರವ ಕಶ್ಯಪ್, ಚೈತ್ರ ಅರ್ಚಕ್, ದ್ವೈತ ಜೋಶಿ, ದರ್ಶನ್ ಹೆಗ್ಡೆ, ಅನೀಷ್ ರಾವ್, ರೋಹನ್ ಕುಮಾರ್ ಸಿತಾರ್ ವಾದನ ನಡೆಯಲಿದೆ.

‘ಅಯೋಮಯ’ ನಾಟಕ ಪ್ರದರ್ಶನ

ಬೆಂಗಳೂರು: ಯುವಕ ಸಂಘದ ‘ಫ್ರೀ ಸ್ಪೇಸ್’ ವೇದಿಕೆಯು ಇದೇ 23ರಂದು ಸಂಜೆ 7ಕ್ಕೆ ಎನ್. ಆರ್. ಕಾಲೊನಿಯಲ್ಲಿರುವ ಸಿ. ಅಶ್ವಥ್ ಕಲಾಭವನದಲ್ಲಿ ‘ಅಯೋಮಯ - ಜಾನಕಿ ರಾಮ್ ಸ್ಟೋರಿ’ ಎಂಬ ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಗೌರೀಶ್ ಜೋಶಿ ಅವರು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಈ ನಾಟಕವು ಆಧುನಿಕ ಬದುಕಿನ ಜಂಜಾಟದಲ್ಲಿ ಕಳೆದುಹೋಗುವ ಸಾಮಾನ್ಯ ವ್ಯಕ್ತಿಯೊಬ್ಬರ ಕಥೆಯನ್ನು ಒಳಗೊಂಡಿದೆ. ಜೀವನದ ವಾಸ್ತವತೆ ಮತ್ತು ಟಿವಿ ಧಾರಾವಾಹಿಗಳ ಪ್ರಭಾವದ ನಡುವಿನ ಗೊಂದಲಗಳನ್ನು ಹಾಸ್ಯಭರಿತವಾಗಿ ಬಿಂಬಿಸಲಾಗಿದೆ.

ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

‘ಅನವರತ’ ನಾಟಕ

ಬೆಂಗಳೂರು: ಬೆಂಗಳೂರು ಪ್ಲೇಯರ್ಸ್ ರಂಗ ತಂಡವು ಇದೇ 23ರಂದು ಸಂಜೆ 7ಕ್ಕೆ ‘ಅನವರತ’ ಸಂಗೀತ ನೃತ್ಯ ರೂಪಕ ನಾಟಕ ಪ್ರದರ್ಶನವನ್ನು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಹಮ್ಮಿಕೊಂಡಿದೆ.

ಚಿದಾನಂದ ಎಸ್. ಅವರು ಈ ನಾಟಕವನ್ನು ರಚಿಸಿ, ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋ ದಲ್ಲಿ ಲಭ್ಯ.

‘ಸೀತಾ ಸ್ವಯಂವರಂ’ ನಾಟಕ

ಬೆಂಗಳೂರು: ಅಭಿಜ್ಞಾ ತಂಡವು ಇದೇ 23ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ರಂಗಶಂಕರದಲ್ಲಿ ‘ಸೀತಾಸ್ವಯಂವರಂ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಮಂಜುನಾಥ್ ಎಲ್. ಬಡಿಗೇರ್ ಅವರು ಈ ನಾಟಕ ನಿರ್ದೇಶಿಸಿದ್ದಾರೆ. ಇದು ರಾಮಾಯಣ ಆಧಾರಿತ ಕಥಾವಸ್ತುವನ್ನು ಒಳಗೊಂಡಿದ್ದು, ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ವಜ್ರ ಮಹೋತ್ಸವ ಸಂಭ್ರಮಾಚರಣೆ

ಬೆಂಗಳೂರು: ಉದಯಭಾನು ಕಲಾಸಂಘವು ತನ್ನ ವಜ್ರಮಹೋತ್ಸವ ಸಂಭ್ರಮಾಚರಣೆ ಪ್ರಯುಕ್ತ ಇದೇ 24ರಿಂದ 29ರವರೆಗೆ ಪ್ರತಿ ದಿನ ಸಂಜೆ 6.30ಕ್ಕೆ ಗವಿಪುರದಲ್ಲಿರುವ ಉದಯಭಾನು ಸಾಂಸ್ಕೃತಿಕ ಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ.

24ರಂದು ಆರ್.ಕೆ. ಶಂಕರ್ ಮತ್ತು ತಂಡದಿಂದ ವೀಣಾನಾದ ವೈಭವ, 25 ರಂದು ನೃತ್ಯಕೂಟ ತಂಡದಿಂದ ನೃತ್ಯ ವೈಭವ, 26ರಂದು ಬೆಳ್ಳಿಗೆಜ್ಜೆ ನಾಟ್ಯಾಲಯ ತಂಡದವರಿಂದ ಸುಗಮ ಸಂಗೀತ ಹಾಗೂ ಭರತನಾಟ್ಯ, 27ರಂದು ಉದಯಭಾನು ಕಲಾಸಂಘದ ಭರತನಾಟ್ಯ ತರಬೇತಿ ಕೇಂದ್ರದಿಂದ ಭರತನಾಟ್ಯ, 28 ರಂದು ಸೃಷ್ಟಿಕಲಾ ವಿದ್ಯಾಲಯ ತಂಡದಿಂದ ಭಾರತೀಯ ಜಾನಪದ ನೃತ್ಯ, 29 ರಂದು ಆನಿ ಮ್ಯೂಸಿಕ್ ಅಕಾಡೆಮಿ ತಂಡದವರಿಂದ ಕನ್ನಡ ಚಲನಚಿತ್ರ ಗೀತೆಗಳ ಗಾಯನ ನಡೆಯಲಿದೆ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

‘ಕಾಯ್ದಿರಿಸದ ಟಿಕೆಟ್: ಕ್ಯೂಆರ್ ಕೋಡ್ ಬಳಕೆ ಪ್ರಮಾಣ ಏರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲು ನಿಲ್ದಾಣಗಳಲ್ಲಿ ಕ್ಯೂಆರ್ ಕೋಡ್ ಮೂಲಕ ಟಿಕೆಟ್ ಖರೀದಿಸುವವರ ಪ್ರಮಾಣ ಶೇ 29.94ಕ್ಕೆ ಏರಿದೆ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ತಿಳಿಸಿದರು.

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ವತಿಯಿಂದ ಬುಧವಾರ ನಡೆದ ವಿಭಾಗೀಯ ರೈಲ್ವೆ ಬಳಕೆದಾರರ ಸಮಾಲೋಚನಾ ಸಮಿತಿ (ಡಿಆರ್‌ಯುಸಿಸಿ) ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2024–25ರಲ್ಲಿ ಶೇ 11.19ರಷ್ಟು ಪ್ರಯಾಣಿಕರು ಕ್ಯೂಆರ್ ಕೋಡ್ ಬಳಸಿದ್ದರು. ಡಿಜಿಟಲ್ ಟಿಕೆಟಿಂಗ್ ವ್ಯವಸ್ಥೆಯನ್ನು ಸುಗಮಗೊಳಿಸಲು ಮತ್ತು ಪ್ರಯಾಣಿಕರ ಅನುಕೂಲವನ್ನು ಹೆಚ್ಚಿಸಲು ಎಂ-ಯು.ಟಿ.ಎಸ್ ಸಹಾಯಕ್ ವ್ಯವಸ್ಥೆ ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಪರಿಚಯಿಸಲಾಗಿದೆ ಎಂದು ಮಾಹಿತಿ ನೀಡಿದರು.

10.99 ಕೋಟಿ ಜನರು ಪ್ರಯಾಣಿಸಿದ್ದು, ಅದು ಹಿಂದಿನ ವರ್ಷಕ್ಕಿಂತ ಶೇ 6.05ರಷ್ಟು ಅಧಿಕವಾಗಿದೆ. 2025–26ನೇ ಹಣಕಾಸು ವರ್ಷದಲ್ಲಿ ಬೆಂಗಳೂರು ವಿಭಾಗವು ಪ್ರಯಾಣಿಕರಿಂದ ₹2,428.60 ಕೋಟಿ ವರಮಾನ ಗಳಿಸಿದ್ದು, ಕಳೆದ ವರ್ಷಕ್ಕಿಂತ ಶೇ 9.41ರಷ್ಟು ಹೆಚ್ಚಾಗಿದೆ. ಸರಕು ಸಾಗಣೆಯಲ್ಲಿ ಶೇ 7.24ರಷ್ಟು ಹೆಚ್ಚಳವಾಗಿದ್ದು, ₹351.45 ಕೋಟಿ ವರಮಾನ ಬಂದಿದೆ. ಪಾರ್ಸೆಲ್‌ನಿಂದ ₹140.32 ಕೋಟಿ, ಕೇಟರಿಂಗ್‌ನಿಂದ ₹ 17.38 ಕೋಟಿ, ಜಾಹೀರಾತಿನಿಂದ ₹15.75 ಕೋಟಿ, ಟಿಕೆಟ್ ತಪಾಸಣೆ ಮೂಲಕ ₹39.68 ಕೋಟಿ ವರಮಾನ ಬಂದಿದೆ ಎಂದು ವಿವರಿಸಿದರು.

ನಮ್ಮ ನಕ್ಷೆ.ಕಾಮ್ ಮೂಲಕ ಪ್ರಮುಖ ನಿಲ್ದಾಣಗಳ ನಕ್ಷೆಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದರು.

ಅಮೆರಿಕದ 42 ಯುದ್ಧ ವಿಮಾನ, ಡ್ರೋನ್‌ಗಳಿಗೆ ಹಾನಿ

ವಾಷಿಂಗ್ಟನ್ (ಪಿಟಿಐ): ಇರಾನ್ ಮೇಲೆ ನಡೆಸಿದ ದಾಳಿ ಸಂದರ್ಭದಲ್ಲಿ ಅಮೆರಿಕದ 42 ಯುದ್ಧ ವಿಮಾನಗಳು ಮತ್ತು ಡ್ರೋನ್‌ಗಳು ನಾಶವಾಗಿವೆ ಅಥವಾ ಹಾನಿಗೊಂಡಿವೆ.

ಹಾನಿಗೊಂಡಿರುವ ಅಥವಾ ನಾಶವಾಗಿರುವ ಯುದ್ಧವಿಮಾನಗಳ ಸಂಖ್ಯೆಯಲ್ಲಿ ಪರಿಷ್ಕರಣೆಯಾಗಬಹುದು ಎಂದು ಅಮೆರಿಕದ ‘ಕಾಂಗ್ರೆಸ್‌ನಲ್ ರಿಸರ್ಚ್ ಸರ್ವೀಸ್’(ಸಿಆರ್‌ಎಸ್) ವರದಿ ತಿಳಿಸಿದೆ.

ನಾಲ್ಕು ಎಫ್–15ಇ ಸ್ಟ್ರೈಕ್ ಈಗಲ್ ಯುದ್ಧ ವಿಮಾನ, ಏಳು ಕೆಸಿ–135 ಸ್ಟ್ರಾಟೊಟ್ಯಾಂಕರ್ ಇಂಧನ ಮರುಪೂರೈಕೆ ಯುದ್ಧವಿಮಾನ, ಎರಡು ಎಂಸಿ–130 ಜೆ ಕಮಾಂಡೊ II ವಿಶೇಷ ಕಾರ್ಯಾಚರಣಾ ವಿಮಾನ, ತಲಾ ಒಂದು ಎಫ್–35ಎ ಲೈಟನಿಂಗ್ II ಯುದ್ಧ ವಿಮಾನ, ಎ–10 ತಂಡರ್‌ಬೋಲ್ಟ್ II ಗ್ರೌಂಡ್ ಅಟ್ಯಾಕ್ ಯುದ್ಧವಿಮಾನ, ಇ–3 ಸೆಂಟ್ರಿ ಎಡಬ್ಲ್ಯುಎಸಿಎಸ್ ಯುದ್ಧವಿಮಾನ, ಎಚ್‌ಎಚ್–60ಡಬ್ಲ್ಯು ಜಾಲಿ ಗ್ರೀನ್ II ಹೆಲಿಕಾಪ್ಟರ್ ಹಾಗೂ 24 ಎಂಕ್ಯು–9 ರೀಪರ್ ಡ್ರೋನ್‌ಗಳು ಮತ್ತು ಒಂದು ಎಂಕ್ಯು–4ಸಿ ಟ್ರಿಟಾನ್ ಡ್ರೋನ್ ನಾಶ ಅಥವಾ ಹಾನಿಗೊಂಡಿವೆ.

ಮೇ 12ರಂದು ನಡೆದ ಸಂಸತ್ತಿನ ಉಪಸಮಿತಿಯೊಂದರ ವಿಚಾರಣೆ ವೇಳೆ, ‘ಇರಾನ್ ವಿರುದ್ಧ ಕಾರ್ಯಾಚರಣೆಯಿಂದಾಗಿ ಇಲಾಖೆಯ ವೆಚ್ಚ 29 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದರಲ್ಲಿ ಬಹುಪಾಲು ಹಣ ಉಪಕರಣಗಳ ದುರಸ್ತಿ ಮತ್ತು ಬದಲಾವಣೆಗೆ ವೆಚ್ಚವಾಗಿದೆ’ ಎಂದು ಪೆಂಟಗಾನ್ ಹೇಳಿತ್ತು.

ರಾಮನ್ ಸ್ಪೋರ್ಟ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ರಾಮನ್ ಸ್ಪೋರ್ಟ್ಸ್ ಅಕಾಡೆಮಿ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ (ದಕ್ಷಿಣ ವಲಯ) ಪಂದ್ಯದಲ್ಲಿ ಬುಧವಾರ 5–1ರಿಂದ ಆರ್.ಟಿ.ನಗರ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ರಾಮನ್ ಸ್ಪೋರ್ಟ್ಸ್ ತಂಡದ ಇಶಾನ್ ಮಾಧವನ್ (9ನೇ ಹಾಗೂ 23ನೇ ನಿ.) ಅವಳಿ ಗೋಲು ಗಳಿಸಿದರು. ಪವನ್ ಜಿ. ನಾಯರ್ (55ನೇ ನಿ.), ನಮೀಶ್ ವರ್ಮಾ (30 + 1ನೇ ನಿ.) ಹಾಗೂ ಜೈಗುರುದೇವ್ (56ನೇ ನಿ.) ತಲಾ ಒಂದು ಗೋಲು ಹೊಡೆದರು. ಆರ್.ಟಿ ನಗರ ತಂಡದ ಅದ್ರಾನ್ (58ನೇ ನಿ.) ಒಂದು ಗೋಲು ದಾಖಲಿಸಿದರು.

ಎ ಗುಂಪಿನ ಇತರ ಪಂದ್ಯಗಳಲ್ಲಿ ಸಮಂತ್ ಸ್ಪೋರ್ಟ್ಸ್ ಅಕಾಡೆಮಿ ತಂಡ 1–0ಯಿಂದ ಬೆಂಗಳೂರು ಬಾಲಾಹರ್ಕ ಎಫ್‌ಸಿ ತಂಡದ ವಿರುದ್ಧ ಹಾಗೂ ಜಿಆರ್‌ಕೆ ಯೂತ್ ಕ್ಲಬ್ ತಂಡ 2–1ರಿಂದ ಬೆಂಗಳೂರು ಉತ್ತರ ಎಫ್‌ಸಿ ತಂಡದ ವಿರುದ್ಧ ಜಯ ಸಾಧಿಸಿದವು.

ಬಿ ಗುಂಪಿನ ಪಂದ್ಯಗಳಲ್ಲಿ ಗೋಪಾಲನ್ ಎಫ್‌ಸಿ ತಂಡ 2–0ಯಿಂದ ಸ್ಟೇಡಿಯಂ ಎಫ್‌ಸಿ ವಿರುದ್ಧ; ಅಲ್ಕೆಮಿ ಇಂಟರ್‌ನ್ಯಾಷನಲ್ ಫುಟ್‌ಬಾಲ್ ಅಸೋಸಿಯೇಶನ್ ತಂಡ 8–0ಯಿಂದ ಚಿತ್ರದುರ್ಗ ಎಫ್‌ಸಿ ವಿರುದ್ಧ ಮತ್ತು ಸಾಂಬಾ ಎಫ್‌ಸಿ ತಂಡ 4–0ಯಿಂದ ಹಾಕ್ಸ್ ಯುನೈಟೆಡ್ ಅಕಾಡೆಮಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

‘ಲೋಕಸಭಾ ಕ್ಷೇತ್ರಗಳ ಹೆಚ್ಚಳ: ಕೇಂದ್ರದ ಹುನ್ನಾರ’

ಪ್ರಜಾವಾಣಿ ವಾರ್ತೆ

ಮಹದೇವಪ್ಪ

ಬೆಂಗಳೂರು: ‘ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸಬೇಕಾದ ಕೇಂದ್ರದ ಬಿಜೆಪಿ ಸರ್ಕಾರವು ಜನಸಂಖ್ಯಾ ನಿಯಂತ್ರಣದ ಬಗ್ಗೆ ಅರಿವು ಮೂಡಿಸಿ, ಕಾರ್ಯಕ್ರಮ ಹಮ್ಮಿಕೊಳ್ಳುವುದನ್ನು ಬಿಟ್ಟು, ಚುನಾವಣಾ ರಾಜಕೀಯ ದೃಷ್ಟಿಯಿಂದ ಅತಾರ್ಕಿಕವಾಗಿ ಲೋಕಸಭಾ ಕ್ಷೇತ್ರಗಳ ಹೆಚ್ಚಳಕ್ಕೆ ಮುಂದಾಗಿರುವುದು ಅತ್ಯಂತ ಕೆಟ್ಟ ಸಂಗತಿ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

‘ಜನಸಂಖ್ಯೆ ಆಧರಿಸಿ ಉತ್ತರದ ರಾಜ್ಯಗಳಿಗೆ ಹೆಚ್ಚಿನ ಚುನಾವಣಾ ಕ್ಷೇತ್ರಗಳನ್ನು ನೀಡಿ, ದಕ್ಷಿಣದ ರಾಜ್ಯಗಳಿಗೆ ಕಡಿಮೆ ಚುನಾವಣಾ ಕ್ಷೇತ್ರಗಳನ್ನು ನೀಡುವ ಕೇಂದ್ರದ ಹುನ್ನಾರವು ದಕ್ಷಿಣ ಭಾರತ ವಿರೋಧಿ ನಡೆಯಾಗಿದೆ' ಎಂದಿದ್ದಾರೆ.

‘ತೆರಿಗೆ ಪಾವತಿಯಿಂದ ಹಿಡಿದು, ದೇಶದ ಅಭಿವೃದ್ಧಿಯ ಎಲ್ಲ ಮಗ್ಗುಲುಗಳಲ್ಲೂ ದಕ್ಷಿಣ ಭಾರತದ ರಾಜ್ಯಗಳು ತನ್ನದೇ ಆದ ಕೊಡುಗೆ ನೀಡಿವೆ. ಕೇಂದ್ರದ ಬಿಜೆಪಿ ಸರ್ಕಾರ, ದಕ್ಷಿಣದ ರಾಜ್ಯಗಳ ರಾಜಕೀಯ ಅಸ್ಮಿತೆಗೆ ಕೊಡಲಿ ಪೆಟ್ಟು ನೀಡುವ ದುರುದ್ದೇಶದಿಂದ ಉತ್ತರ ಭಾರತಕ್ಕೆ ಹೆಚ್ಚು ಮತ್ತು ದಕ್ಷಿಣ ಭಾರತಕ್ಕೆ ಕಡಿಮೆ ಮತ ಕ್ಷೇತ್ರಗಳನ್ನು ಹಂಚಿಕೆ ಮಾಡಲು ಹೊರಟಿರುವುದನ್ನು ದಕ್ಷಿಣದ ರಾಜ್ಯಗಳು ಖಂಡಿಸಬೇಕು’ ಎಂದಿದ್ದಾರೆ.

‘ಮತ ಕ್ಷೇತ್ರಗಳ ಹೆಚ್ಚಳದ ಮಸೂದೆಯನ್ನು ಈಗಾಗಲೇ ಅನುಮೋದಿತವಾಗಿದ್ದ ಮಹಿಳಾ ಮೀಸಲಾತಿ ಮಸೂದೆಯ ಒಳಗಿಟ್ಟು, ದಕ್ಷಿಣದ ರಾಜ್ಯಗಳನ್ನು ಹಣಿಯಲು ಕೇಂದ್ರದ ಬಿಜೆಪಿಗರು ಸಂಚು ರೂಪಿಸಿದ್ದರು. ಅಲ್ಲದೆ, ಮತ ಕ್ಷೇತ್ರಗಳ ಹೆಚ್ಚಳ ಕಾಯ್ದೆಯನ್ನು, ಮುನ್ನೆಲೆಗೆ ತಾರದೇ, ಒಳಗಿಂದೊಳಗೆಯೇ ಮಾಡುವ ಉದ್ದೇಶವು ಕೇಂದ್ರ ಸರ್ಕಾರದ ಕುತಂತ್ರವಾಗಿದೆ’ ಎಂದಿದ್ದಾರೆ.

ಕನ್ನಡ ಜನಶಕ್ತಿ ಕೇಂದ್ರದಿಂದ ಮಲ್ಲಿಕಾ ಘಂಟಿ ಅವರಿಗೆ ಯಶೋಧರಾ ದಾಸಪ್ಪ ಪ್ರಶಸ್ತಿ ಪ್ರದಾನ

‘ಮಹಿಳಾ ಮೀಸಲಾತಿ ಜಾರಿ ಮಾಡಿ’

ಪ್ರಜಾವಾಣಿ ವಾರ್ತೆ

‘ಬೆಂಗಳೂರು: ‘ಎಲ್ಲಾ ರಾಜಕೀಯ ಪಕ್ಷಗಳು ಸಮನ್ವಯ ಸಾಧಿಸಿ ಲೋಕಸಭೆ ಹಾಗೂ ವಿಧಾನ ಸಭೆಯಲ್ಲಿ ಶೇ 33ರಷ್ಟು ಮಹಿಳಾ ಮೀಸಲಾತಿ ಜಾರಿಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು’ ಎಂದು ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಸಲಹೆ ನೀಡಿದರು.

ಕನ್ನಡ ಜನಶಕ್ತಿ ಕೇಂದ್ರವು ಕನ್ನಡ ಸಾಹಿತ್ಯ ಪರಿಷತ್ತು ಕುವೆಂಪು ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಎಸ್.ಘಂಟಿ ಅವರಿಗೆ ‘ಯಶೋಧರಾ ದಾಸಪ್ಪ’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಹಿಂದೆ ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ಮಹಿಳಾ ಮೀಸಲಾತಿ ತರುವ ಪ್ರಯತ್ನ ಮಾಡಿದ್ದರು. ನಂತರ ಸೋನಿಯಾ ಗಾಂಧಿ ಅವರು ಇದಕ್ಕೆ ಬಲ ತುಂಬಿದ್ದರು. ಮೂರು ವರ್ಷದ ಹಿಂದೆ ಎನ್‌ಡಿಎ ಸರ್ಕಾರ ಮರು ಪ್ರಯತ್ನ ಆರಂಭಿಸಿ ಸುಮ್ಮನಾದರೂ ಈಗ ಏಕಾಏಕಿ ಅದನ್ನು ತರುವ ಪ್ರಯತ್ನ ಮಾಡಿತು. ಆದರೆ, ಇದರ ಹಿಂದೆ ಬೇರೆ ಉದ್ದೇಶ ಇದ್ದಂತೆ ಇತ್ತು. ರಾಜಕೀಯ ಬಿಟ್ಟು ಮೀಸಲಾತಿ ಮೂಲಕ ಮಹಿಳೆಯರಿಗೆ ಶಕ್ತಿ ತುಂಬುವ ಪ್ರಯತ್ನ ಎಲ್ಲಾ ಪಕ್ಷಗಳಿಂದ ಆಗಬೇಕು. ಮಹಿಳೆಯರು ಇದನ್ನು ಗಟ್ಟಿಯಾಗಿ ಕೇಳಬೇಕು’ ಎಂದು ಅವರು ಹೇಳಿದರು.

ನಗರದಲ್ಲಿ ಬುಧವಾರ ‘ಕನ್ನಡ ಜನಶಕ್ತಿ ಕೇಂದ್ರ’ ಆಯೋಜಿಸಿದ್ದ ಸಮಾರಂಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಎಸ್.ಘಂಟಿ ಅವರಿಗೆ ಯಶೋಧರಾ ದಾಸಪ್ಪ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಧಾನ ಪರಿಷತ್ತಿನ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ಸಂಚಾಲಕ ವಿನಯ್ ಕುಮಾರ್, ಪಿ.ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಸ್ವೀಕರಿಸಿದ ಮಲ್ಲಿಕಾ ಎಸ್. ಘಂಟಿ ಮಾತನಾಡಿ, ‘ಹಿಂದಿನ ರಾಜಕಾರಣ ಈಗಿಲ್ಲ. ಯಾವುದೇ ಹೋರಾಟ, ಬರಹಕ್ಕೂ ಬೆಲೆ ಇಲ್ಲದಾಗಿದೆ. ಅಷ್ಟರ ಮಟ್ಟಿಗೆ ಸಮಾಜ ಕಲುಷಿತಗೊಂಡಿದೆ. ಈಗ ಏನಾದರೂ ಬರೆದರೆ ಮುಖ ಇಲ್ಲದ ವಿಶ್ವವಿದ್ಯಾಲಯ-ಗಳಾಗಿರುವ ಸಾಮಾಜಿಕ ಮಾಧ್ಯಮಗಳ ಮೂಲಕ ಹೊಡೆತ ನೀಡಲು ಹಲವರು ಕಾಯ್ದುಕೊಂಡಿರುತ್ತಾರೆ. ಹಾಗೆಂದು ಸತ್ಯ ಹೇಳದೇ ಇರಲು ಆಗುವುದಿಲ್ಲ. ಒಂದಿಷ್ಟು ಮೌನ ವಹಿಸಿದರೂ ನನ್ನ ಪೂರ್ಣ ಧ್ವನಿಯಂತೂ ಅಡಗಿಲ್ಲ’ ಎಂದು ಅವರು ಹೇಳಿದರು.

‘ಯಶೋಧರಮ್ಮ ದಾಸಪ್ಪ ಅವರು ಪಾನ ನಿಷೇಧ ಮಾಡದ್ದಕ್ಕೆ ಸಚಿವ ಸ್ಥಾನವನ್ನೇ ತ್ಯಜಿಸಿ ಮಾದರಿಯಾದರು. ಈಗ ರಾಜಕಾರಣದಲ್ಲಿ ಅದನ್ನೆಲ್ಲ ನಿರೀಕ್ಷಿಸಲು ಆಗುವುದಿಲ್ಲ. ಕುರ್ಚಿ ಬಿಟ್ಟು ಏಳದವರು, ಎಷ್ಟೇ ಜಗ್ಗಿದರೂ ಅಧಿಕಾರ ಬಿಟ್ಟುಕೊಡದವರು ಹೆಚ್ಚಾಗಿದ್ದಾರೆ. ಇದರ ನಡುವೆ ಹೆಣ್ಣು ಮಕ್ಕಳು ರಾಜಕೀಯಕ್ಕೆ ಬಂದರೆ ಅವರಿಗೆ ಧ್ವನಿ ಇಲ್ಲದ ಹಾಗೆ ಮಾಡಲಾಗುತ್ತದೆ. ಮೌನ ಗೌರಿಯರನ್ನು ಕೂರಿಸುವಂತಹ ಸ್ಥಿತಿ ನಿರ್ಮಾಣವಾಗಿದೆ’ ಎಂದು ಬೇಸರಿಸಿದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ಕಸಾಪ ನಿಕಟಪೂರ್ವ ಕೋಶಾಧ್ಯಕ್ಷ ಪಿ.ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಬರಗೂರು ರಾಮಚಂದ್ರಪ್ಪ

‘ಅನ್ನದ ಭಾಷೆಯಾಗಿ ಕನ್ನಡ’ ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಬಿ. ರಮೇಶ್, ಉಪಸ್ಥಿತಿ: ನವೀನ್ ಜೋಸೆಫ್ ಎ., ರಮೇಶ್ ಬಿ. ಕುಡೇನಟ್ಟಿ, ಎಂ.ವಿ. ವಿಜಯಲಕ್ಷ್ಮಿ, ಜ್ಯೋತಿ ವೆಂಕಟೇಶ್, ತಾಂಡವಗೌಡ ಟಿ.ಎನ್., ‘ಅನ್ನದ ಭಾಷೆಯಾಗಿ ಕನ್ನಡ’ ಉಪನ್ಯಾಸ: ರಾಜಪ್ಪ ದಳವಾಯಿ, ‘ತಂತ್ರಜ್ಞಾನ ಯುಗದಲ್ಲಿ ಕನ್ನಡ ಭಾಷೆಯ ಬಳಕೆ–ಸಾಧ್ಯತೆ ಮತ್ತು ಸವಾಲುಗಳು’ ಉಪನ್ಯಾಸ: ಕೆ.ವೈ. ನಾರಾಯಣಸ್ವಾಮಿ, ‘ಅಭಿವ್ಯಕ್ತಿ ಭಾಷೆಯಾಗಿ ಕನ್ನಡ’ ವಿಷಯದ ಬಗ್ಗೆ ಉಪನ್ಯಾಸ: ಎಚ್.ಎಲ್. ಪುಷ್ಪ, ಆಯೋಜನೆ: ಕನ್ನಡ ಅಧ್ಯಯನ ಪೀಠ, ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಬೆಳಿಗ್ಗೆ 10

ಗರ್ಭಿಣಿಯರಿಗೆ, ನವಜಾತ ಶಿಶುಗಳಿಗೆ ಅಗತ್ಯ ಪರಿಕರಗಳ ಕಿಟ್ ವಿತರಣೆ: ಅಧ್ಯಕ್ಷತೆ: ಎಂ.ಆರ್. ಶಿವರಾಮ್, ಉಪಸ್ಥಿತಿ: ಉಷಾ ಡೊಂಗ್ರೆ, ಬಿ.ಎಸ್. ಸತ್ಯನಾರಾಯಣ, ಶ್ರೀರಾಮೇಗೌಡ, ಬಿ.ಎಸ್. ಸತ್ಯನಾರಾಯಣ, ಟಿ.ಆರ್. ಸತ್ಯನಾರಾಯಣ, ಆಯೋಜನೆ: ಉದಯಭಾನು ಕಲಾಸಂಘ, ರೋಟರಿ ಬೆಂಗಳೂರು ದಕ್ಷಿಣ, ಸ್ಥಳ: ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಹೆರಿಗೆ ಆಸ್ಪತ್ರೆ, ಎನ್. ಆರ್. ಕಾಲೊನಿ, ಬೆಳಿಗ್ಗೆ 11

ನಮ್ಮ ನಡೆ ಶಿಕ್ಷಣದೆಡೆಗೆ ಕಲಾಜಾಥಾಕ್ಕೆ ಚಾಲನೆ: ಜಿ. ಇಂದ್ರಮ್ಮ, ವೈ.ಕೆ. ದಿನೇಶ್ ಕುಮಾರ್, ಎಸ್.ಬಿ. ರವಿಕುಮಾರ್, ಎಸ್. ಮಂಜು, ಸುಮಂಗಲಾ ಮಲಾಪುರ, ಲತಾಮಣಿ, ಅಧ್ಯಕ್ಷತೆ: ಆರ್. ಗೋಪಿನಾಥ್, ನೀಲಿಮಾ, ಆಯೋಜನೆ: ಸಾಮೂಹಿಕ ಶಕ್ತಿ, ಸ್ಪರ್ಶ ಟ್ರಸ್ಟ್, ಸ್ಥಳ: ಕಾರ್ಮಿಕ ಇಲಾಖೆ, ಬೆಳಿಗ್ಗೆ 11



‘ರಂಗ ವೈವಿಧ್ಯ’ ವಿಭಿನ್ನ ನಾಟಕಗಳ ಉತ್ಸವ: ‘ನಂ ಕಂಪ್ನಿ’ ನಾಟಕ ಪ್ರದರ್ಶನ: ರಚನೆ: ಕೈಲಾಸಂ, ನಿರ್ದೇಶನ: ಋತ್ವಿಕ್ ಸಿಂಹ, ತಂಡ: ವೇದಿಕೆ ಬೆಂಗಳೂರು, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

‘ನೀರಗನ್ನಡಿ’ ನಾಟಕ ಪ್ರದರ್ಶನ: ನಿರ್ದೇಶನ: ಬಿ. ಸುರೇಶ, ಸಂಗೀತ: ಎಂ.ಡಿ. ಪಲ್ಲವಿ, ರಂಗ ವಿನ್ಯಾಸ: ಶಶಿಧರ್ ಅಡಪ, ವಸ್ತ್ರ ವಿನ್ಯಾಸ: ಎನ್. ಮಂಗಳಾ, ಸಂಘಟನೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಆಯೋಜನೆ: ನಟರಂಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಸಂಧ್ಯಾಕಲರವ’ ಕಾಲೇಜು ವಾರ್ಷಿಕೋತ್ಸವ: ಅತಿಥಿಗಳು: ಅರೇನಹಳ್ಳಿ ಧರ್ಮೇಂದ್ರ ಕುಮಾರ್, ರೂಪಿಕಾ, ಪಿ.ಸಿ. ನಾರಾಯಣ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 5

ಪಂಚ ವೀಣಾವಾದನ: ಬಾಲ ತ್ರಿಪುರ ಸುಂದರಿ, ಪದ್ಮಾ ನಾಗರಾಜ್, ವೀಣಾ ರಾವ್, ಶೀತಲ್, ಜಾನ್ಹವಿ, ಮೃದಂಗ: ಮುರಳಿ ನಾರಾಯಣರಾವ್, ಘಟ: ಯಶ್ವಂತ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

ದಾಸವಾಣಿ ಗಾಯನ: ಸಾವಿತ್ರಿ ಮತ್ತು ಅನನ್ಯಾ, ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರತಿ ರೂಪಾಯಿಯೂ ಬೀಜವಿದ್ದಂತೆ. ಬುದ್ಧಿವಂತಿಕೆಯಿಂದ ಅದನ್ನು ಬೆಳೆಸಿದರೆ, ಅದು ನಿಮ್ಮ ಭವಿಷ್ಯವನ್ನು ಬೆಳಗಿಸುತ್ತದೆ
ಮನಿ ಕಟರ್, ಇನ್‌ಸ್ಟಾಗ್ರಾಂ ಖಾತೆಯಿಂದ

ದುಡ್ಡಿನಂಥಾ ಮಾತು

ಅಸ್ಥಿರ ಕಾಲದ ಸ್ಥಿರ ವಲಯಗಳು

2019ರ ನಂತರದಲ್ಲಿ ಹೂಡಿಕೆದಾರರು ಒಂದಲ್ಲ ಒಂದು ಆಘಾತಕ್ಕೆ ಮತ್ತೆ ಮತ್ತೆ ಒಳಗಾಗುತ್ತಿದ್ದಾರೆ. ಒಮ್ಮೆ ಕೋವಿಡ್, ನಂತರ ಯುದ್ಧ, ಆದಾದ ನಂತರ ಸುಂಕ ಸಮರ, ಮತ್ತೆ ಯುದ್ಧ... ಇವೆಲ್ಲ ಜಾಗತಿಕ ಮಾರುಕಟ್ಟೆಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದ್ದರೂ 2 ವಲಯಗಳು ಸ್ಥಿರತೆ ತೋರಿಸಿವೆ

• ಕೃಷ್ಣರಾವ್



ಕಲೆ: ಸಂತೋಷ್ ಸಸಿಹಿತ್ಲು

ಕಳೆದ ಒಂದು ದಶಕದಲ್ಲಿ ಭಾರತದ ಷೇರುಪೇಟೆಗಳು ಹಾಗೂ ಜಾಗತಿಕ ಷೇರು ಮಾರುಕಟ್ಟೆಗಳು ಮತ್ತೆ ಮತ್ತೆ ಸವಾಲುಗಳನ್ನು ಎದುರಿಸಿವೆ. ಕೋವಿಡ್–19 ಸಾಂಕ್ರಾಮಿಕ, ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ, ಅಮೆರಿಕವು ವಿಧಿಸಿದ ಸುಂಕದ ಕಾರಣದಿಂದಾಗಿ ಉಂಟಾದ ಸಮಸ್ಯೆಗಳು, ಈಗ ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧವನ್ನು ಇಲ್ಲಿ ಉಲ್ಲೇಖಿಸಬಹುದು.

ಈ ಪ್ರತಿಯೊಂದು ವಿದ್ಯಮಾನ, ಬಿಕ್ಕಟ್ಟು ಕೂಡ ಷೇರುಪೇಟೆಗಳಲ್ಲಿ ಅಸ್ಥಿರತೆಯನ್ನು, ತೀವ್ರ ಏರಿಳಿತಗಳನ್ನು ಉಂಟುಮಾಡಿದೆ. ಸವಾಲಿನ ಈ ಕಾಲಘಟ್ಟದಲ್ಲಿ ಹೆಚ್ಚು ಸ್ಥಿರವಾಗಿ ನಿಂತಿರುವ ವಲಯಗಳು ಅಂದರೆ ಆರೋಗ್ಯಸೇವಾ ವಲಯ ಹಾಗೂ ಯುಟಿಲಿಟಿ ವಲಯ (ದೂರಸಂಪರ್ಕ ಕಂಪನಿಗಳನ್ನು ಒಳಗೊಂಡಿರುವ ವಲಯ). ಇವು ಏರಿಳಿತಗಳನ್ನು ಕಂಡ ಇತರ ವಲಯಗಳಿಗಿಂತ ಹೆಚ್ಚಿನ ಗಳಿಕೆ ಕಂಡಿವೆ.

ಅಂಕಿ–ಅಂಶ ಆಧಾರಿತ ಅಧ್ಯಯನಗಳ ಪ್ರಕಾರ ಈ ವಲಯಗಳಲ್ಲಿ ರಿಸ್ಕ್ ಕಡಿಮೆ ಇದೆ, ಹೀಗಾಗಿ ಇವು ಇತರ ವಲಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಗಳಿಕೆ ನೀಡುತ್ತವೆ. 2020ರ ಮಾರ್ಚ್‌ನಲ್ಲಿ ಕೋವಿಡ್ ಕಾರಣದಿಂದಾಗಿ ಷೇರುಪೇಟೆ ತೀವ್ರವಾಗಿ ಕುಸಿಯಿತು. ಇದಾದ ನಂತರದ ಮೂರು ತಿಂಗಳಲ್ಲಿ ನಿಫ್ಟಿ ಫಾರ್ಮಾ ಸೂಚ್ಯಂಕವು ಶೇ 57ರಷ್ಟು ಏರಿಕೆ ಕಂಡಿತು. ಈ ಏರಿಕೆಯು ನಿಫ್ಟಿ–50 ಸೂಚ್ಯಂಕ ಕಂಡ ಶೇ 34ರಷ್ಟು ಪ್ರಮಾಣದ ಏರಿಕೆಗಿಂತ ಹೆಚ್ಚಿನ ಮಟ್ಟದ್ದಾಗಿತ್ತು. ಅದೇ ರೀತಿಯಲ್ಲಿ, ಬಿಎಸ್‌ಇ ಟೆಲಿಕಾಂ ಸೂಚ್ಯಂಕವು ಇದೇ ಅವಧಿಯಲ್ಲಿ ಶೇ 50ರಷ್ಟು ಜಿಗಿಯಿತು. ಈ ಎರಡು ವಲಯಗಳ ಗಟ್ಟಿತನವು ಈಚೆಗಿನ ಜಾಗತಿಕ ಮಟ್ಟದ ಸಂಘರ್ಷಗಳ ಸಮಯದಲ್ಲಿಯೂ ಸ್ಪಷ್ಟವಾಗಿ ಕಾಣುತ್ತಿದೆ.

ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷ ಶುರುವಾದ ಫೆಬ್ರುವರಿ 28ರ ನಂತರ ನಿಫ್ಟಿ–50 ಸೂಚ್ಯಂಕವು ಶೇ 6ರಷ್ಟು ಇಳಿಕೆ ಕಂಡಿದೆ. ಇದೇ ಅವಧಿಯಲ್ಲಿ ನಿಫ್ಟಿ ಫಾರ್ಮಾ ಸೂಚ್ಯಂಕವು ಶೇ 4ರಷ್ಟು ಏರಿಕೆ ಕಂಡಿದೆ. ಅಲ್ಲದೆ, ಬಿಎಸ್‌ಇ ಟೆಲಿಕಾಂ ಸೂಚ್ಯಂಕವು ಶೇ 10ರಷ್ಟು ಏರಿಕೆ ದಾಖಲಿಸಿದೆ. ಈ ಅಂಕಿ–ಅಂಶವು ಈ ಎರಡೂ ವಲಯಗಳ ಗಟ್ಟಿತನವನ್ನು ತೋರಿಸುತ್ತಿದೆ. ಅಂದರೆ, ಅನಿಶ್ಚಿತ ಆರ್ಥಿಕ ಸಂದರ್ಭದಲ್ಲಿಯೂ ವೇಗವಾಗಿ ಪುಟಿದೇಳುವ ಹಾಗೂ ಇತರ ವಲಯಗಳಿಗೆ ಹೋಲಿಸಿದರೆ ಗಟ್ಟಿಯಾಗಿ ನಿಲ್ಲುವ ಇವುಗಳ ಶಕ್ತಿಯನ್ನು ಇದು ಹೇಳುತ್ತದೆ.

ಜಾಗತಿಕ ಮಟ್ಟದಲ್ಲಿಯೂ ಈ ವಲಯಗಳು ಗಟ್ಟಿಯಾಗಿ ನಿಂತಿರುವುದನ್ನು ಬಹಳ ಸ್ಪಷ್ಟವಾಗಿ ಗುರುತಿಸಬಹುದು. ಅಮೆರಿಕ ಮತ್ತು ಇರಾನ್ ನಡುವೆ ಸಂಘರ್ಷ ಆರಂಭವಾಗಿ ಸರಿಸುಮಾರು ಒಂದು ತಿಂಗಳ ನಂತರದಲ್ಲಿ ಅಮೆರಿಕ ಫಾರ್ಮಾ ಸೂಚ್ಯಂಕವು ಶೇ 3ರಷ್ಟು ಕುಸಿತ ಕಂಡಿತ್ತು. ಇದು, ಈ ಅವಧಿಯಲ್ಲಿ ಅಮೆರಿಕದ 'ಡೊವ್ ಜೋನ್ಸ್ ಇಂಡಸ್ಟ್ರಿಯಲ್ ಆವರೇಜ್ ಸೂಚ್ಯಂಕ'ವು ಕಂಡಿದ್ದ ಶೇ 5ರಷ್ಟು ಕುಸಿತಕ್ಕೆ ಹೋಲಿಸಿದರೆ ಕಡಿಮೆ. ಇತ್ತ ಅಮೆರಿಕದ ಟೆಲಿಕಾಂ ಸೂಚ್ಯಂಕವು ಅತ್ಯಂತ ಹೆಚ್ಚಿನ ಸ್ಥಿರತೆಯನ್ನು ತೋರಿಸಿತು, ಈ ಒಂದು ತಿಂಗಳ ನಂತರದ ಸಂದರ್ಭದಲ್ಲಿ ಈ ಸೂಚ್ಯಂಕವು ಶೇ 1ರಷ್ಟು ಮಾತ್ರ ಇಳಿಕೆ ಕಂಡಿತ್ತು.

ಫಾರ್ಮಾ

ಫಾರ್ಮಾ ವಲಯದ ಷೇರುಗಳು ಬಡಪೆಟ್ಟಿಗೆ ಕುಸಿಯುವುದಿಲ್ಲ, ಅವು ಬಹಳ ಗಟ್ಟಿತನ ಹೊಂದಿರುತ್ತವೆ. ಔಷಧಗಳು ಹಾಗೂ ಆರೋಗ್ಯಸೇವಾ ವಲಯದ ಉತ್ಪನ್ನಗಳ ಬೆಲೆಯಲ್ಲಿನ ಏರಿಳಿತಗಳು ಅವುಗಳಿಗೆ ಇರುವ ಬೇಡಿಕೆಯ ಮೇಲೆ ಪರಿಣಾಮ ಬೀರುವುದಿಲ್ಲ, ಅವುಗಳಿಗೆ ಬೇಡಿಕೆ ಇದ್ದೇ ಇರುತ್ತದೆ. ಅರ್ಥ ವ್ಯವಸ್ಥೆಯಲ್ಲಿನ ಸ್ಥಿತಿ ಏನೇ ಇದ್ದರೂ, ಈ ವಲಯದ ಉತ್ಪನ್ನ, ಸೇವೆಗಳ ಮೇಲೆ ಅದರಿಂದ ಪರಿಣಾಮ ಆಗುವುದಿಲ್ಲ. ಆರೋಗ್ಯಸೇವೆ ಎಂಬುದು ಅನಿವಾರ್ಯ, ಅದು ಐಚ್ಛಿಕ ಅಲ್ಲ. ಇದುವೇ ಈ ವಲಯದ ಷೇರುಗಳ ಗಟ್ಟಿತನಕ್ಕೆ ಮುಖ್ಯ ಕಾರಣ.

ಅರ್ಥ ವ್ಯವಸ್ಥೆ ಇಳಿಜಾರಿನ ಹಾದಿಯಲ್ಲಿದ್ದಾಗ ಜನ ಹೊಸ ವಾಹನ ಖರೀದಿಸುವುದನ್ನು ಅಥವಾ ಎಲೆಕ್ಟ್ರಾನಿಕ್ಸ್ ಉತ್ಪನ್ನವೊಂದರ ಹೊಸ ಆವೃತ್ತಿಯನ್ನು ಖರೀದಿಸುವುದನ್ನು ಮುಂದಕ್ಕೆ ಹಾಕಬಹುದು. ಆದರೆ ಅಗತ್ಯ ಔಷಧಗಳನ್ನು ಖರೀದಿಸುವುದನ್ನು ಅವರು ಮುಂದೂಡುವುದು ಅಪರೂಪ. ಅದರಲ್ಲೂ ದೀರ್ಘಾವಧಿಯಿಂದ ಇರುವ (ಮಧುಮೇಹ, ಹೃದಯದ ಸಮಸ್ಯೆಗಳು, ಅತಿಯಾದ ರಕ್ತದೊತ್ತಡ ಇತ್ಯಾದಿ) ಸಮಸ್ಯೆಗಳಿಗೆ ನೀಡುವ ಔಷಧಗಳನ್ನು ಖರೀದಿಸುವುದನ್ನಂತೂ ನಿಲ್ಲಿಸಲಾಗದು. ಹೀಗಾಗಿ, ಹಠಾತ್ ಎದುರಾಗುವ ಕಾಯಿಲೆಗಳಿಗಿಂತ ದೀರ್ಘಾವಧಿಯ ಕಾಯಿಲೆಗಳಿಗೆ ಔಷಧಗಳನ್ನು, ಅವುಗಳಿಗೆ ಸಂಬಂಧಿಸಿದ ಆರೋಗ್ಯಸೇವಾ ಉಪಕರಣಗಳನ್ನು ತಯಾರಿಸುವ ಕಂಪನಿಗಳು ಹೆಚ್ಚು ಸ್ಥಿರವಾದ ವರಮಾನವನ್ನು ಹೊಂದಿರುತ್ತವೆ.

ಕಂಪನಿಯು ಮುಂದಿನ ದಿನಗಳಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಿರುವ ಉತ್ಪನ್ನಗಳು, ಕಂಪನಿಯ ತಯಾರಿಕಾ ಘಟಕದ ತಪಾಸಣೆಯ ನಂತರದಲ್ಲಿ ಪೂರಕವಾದ ಪ್ರತಿಕ್ರಿಯೆ ದೊರೆಯುವುದು, ಸ್ಪರ್ಧಾತ್ಮಕತೆಯಲ್ಲಿ ಆಗುವ ಬದಲಾವಣೆ... ಇವೆಲ್ಲ ಫಾರ್ಮಾ ವಲಯದ ಕಂಪನಿಗಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ಜಾಗತಿಕವಾಗಿ ಫಾರ್ಮಾ ಕಂಪನಿಗಳ ಷೇರುಗಳು ಪರಸ್ಪರ ಪೂರಕವಾದ ಬೇರೆ ಬೇರೆ ಬಗೆಯ ಅಂಶಗಳಿಂದ ಪ್ರಭಾವಿತವಾಗುತ್ತವೆ. ಭಾರತದ ಫಾರ್ಮಾ ವಲಯವು ವಹಿವಾಟಿನ ಗಾತ್ರ, ಕೈಗೆಟಕುವ ಬೆಲೆ ಹಾಗೂ ಜೆನರಿಕ್ ಅಂಶಗಳ ಕಾರಣದಿಂದಾಗಿ ಗೆಲುವು ಕಾಣುತ್ತದೆ. ಜಾಗತಿಕ ಮಟ್ಟದ ಫಾರ್ಮಾ ಕಂಪನಿಗಳು ದೀರ್ಘಾವಧಿಯ ಲಾಭಾಂಶದ ಪ್ರಮಾಣ, ಸ್ವಾಮ್ಯತ್ಯ ಮತ್ತಿತರ ಅಂಶಗಳಿಂದ ಮಹತ್ವ ಪಡೆಯುತ್ತವೆ.

ದೂರಸಂಪರ್ಕ

ಫಾರ್ಮಾ ವಲಯದ ಮಾದರಿಯಲ್ಲೇ ದೂರಸಂಪರ್ಕ ವಲಯ ಕೂಡ ಅಗತ್ಯವಾದ ಸೇವಾ ವಲಯವಾಗಿ ಬೆಳೆದಿದೆ. ಇಂದಿನ ಡಿಜಿಟಲ್ ಅರ್ಥ ವ್ಯವಸ್ಥೆಯಲ್ಲಿ ಸಂಪರ್ಕ ಸೌಲಭ್ಯವು ವ್ಯಕ್ತಿಗಳ ಮಟ್ಟದಲ್ಲಿ, ಕಾರ್ಪೊರೇಟ್ ಕಂಪನಿಗಳ ಮಟ್ಟದಲ್ಲಿ ಹಾಗೂ ಸಂಸ್ಥೆ–ಸರ್ಕಾರಗಳ ಮಟ್ಟದಲ್ಲಿ ಕೂಡ ತೀರಾ ಅನಿವಾರ್ಯ. ಕೋವಿಡ್–19 ಸಾಂಕ್ರಾಮಿಕದ ಸಂದರ್ಭವು ಈ ಬದಲಾವಣೆಗೆ ಸ್ಪಷ್ಟವಾದ ನಿದರ್ಶನ.

ಲಾಕ್‌ಡೌನ್ ಕ್ರಮಗಳು ಜಾರಿಯಲ್ಲಿ ಇದ್ದ ಸಂದರ್ಭಗಳಲ್ಲಿ ಡಿಜಿಟಲ್ ಸಂವಹನ ಮಾದರಿಗಳನ್ನು ಅಳವಡಿಸಿಕೊಳ್ಳುವ ಪ್ರವೃತ್ತಿಯು ಬೆಳವಣಿಗೆ ಕಂಡಿತು. ಕಚೇರಿಗಳಲ್ಲಿ ಕೆಲಸ ಮಾಡುವವರು ತಾವು ಇದ್ದ ಸ್ಥಳದಿಂದಲೇ, ಮನೆಗಳಿಂದಲೇ ಕೆಲಸ ಮಾಡುವುದನ್ನು ಶುರುಮಾಡಿದರು. ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಮೂಲಕ ಪಾಠ ಮಾಡಲು ಆರಂಭಿಸಿದವು. ಸರ್ಕಾರಗಳ ಮಟ್ಟದಲ್ಲಿ ಕೂಡ ಡಿಜಿಟಲ್ ವೇದಿಕೆಗಳ ಮೇಲಿನ ಅವಲಂಬನೆಯು ಜಾಸ್ತಿ ಆಯಿತು.

ಹೀಗಾಗಿ ದೂರಸಂಪರ್ಕ ಸೇವಾ ಕಂಪನಿಗಳು, ಜಗತ್ತು ಕಂಡ ಅತಿದೊಡ್ಡ ಪಲ್ಲಟವೊಂದರ ಸಂದರ್ಭ- ದಲ್ಲಿಯೂ ಹೆಚ್ಚಿನ ಪ್ರಮಾಣದ ಬೆಳವಣಿಗೆ ಕಂಡವು. ಇದು ಈ ವಲಯದ ಹಣಕಾಸಿನ ಸಾಧನೆಯಲ್ಲಿ ಗೋಚರಿಸಿತು. ಉದಾಹರಣೆಗೆ ಹೇಳುವುದಾದರೆ, ಭಾರ್ತಿ ಏರ್‌ಟೆಲ್ ಕಂಪನಿಯು 2019–20 ಮತ್ತು 2020–21ನೆಯ ಹಣಕಾಸಿನ ವರ್ಷದಲ್ಲಿ (ಅಂದರೆ ಸಾಂಕ್ರಾಮಿಕವು ಬಹಳ ತೀವ್ರವಾಗಿದ್ದ ಅವಧಿಯಲ್ಲಿ) ಒಳ್ಳೆಯ ಪ್ರಮಾಣದ ವರಮಾನ ಮತ್ತು ಬಡ್ಡಿ, ತೆರಿಗೆ, ಸವಕಳಿ ಪೂರ್ವದ ಗಳಿಕೆ ಕಂಡಿತು.

ಡಿಜಿಟಲ್ ಪಾವತಿ ವ್ಯವಸ್ಥೆಗಳು ಹೆಚ್ಚಳ ಕಂಡಿರುವುದು ಮೊಬೈಲ್ ಸೇವೆಗಳು ಮತ್ತು ಡಿಜಿಟಲ್ ಸಂಪರ್ಕ ವ್ಯವಸ್ಥೆಯು ಬಲಿಷ್ಠವಾಗಿ ಇರಬೇಕಾದುದರ ಹಾಗೂ ತಡೆರಹಿತವಾಗಿ ಇರಬೇಕಾದುದರ ಮಹತ್ವವನ್ನು ಒತ್ತಿಹೇಳುತ್ತಿವೆ. ದೂರಸಂಪರ್ಕ ಸೇವಾ ವಲಯವನ್ನು ಹೊಸದಾಗಿ ಪ್ರವೇಶಿಸಬೇಕು ಎಂದಾದರೆ ಬಹಳಷ್ಟು ಸವಾಲುಗಳನ್ನು ಎದುರಿಸಬೇಕಿದೆ ಎಂಬುದು ಕೂಡ ಈ ವಲಯದಲ್ಲಿನ ಸ್ಥಿರತೆಗೆ ಒಂದು ಕಾರಣವಾಗಿದೆ.

ತರಂಗಾಂತರಗಳ ಮಾಲೀಕತ್ವದ ಅಗತ್ಯ, ಮೂಲಸೌಕರ್ಯ ನಿರ್ಮಾಣಕ್ಕಾಗಿ ಬೃಹತ್ ಪ್ರಮಾಣದ ಹೂಡಿಕೆಯ ಅಗತ್ಯ, ಸೀಮಿತವಾದ ಸ್ಪರ್ಧೆಯು ಈ ವಲಯದಲ್ಲಿ ಭಾರಿ ಬದಲಾವಣೆಗಳು ಬರಬಹುದಾದ ಸಾಧ್ಯತೆಯನ್ನು ಕಡಿಮೆ ಮಾಡುವಂತೆ ಇವೆ. ಇದೇ ಹೊತ್ತಿನಲ್ಲಿ ಈ ಕಾರಣಗಳು ವಲಯದ ಕಂಪನಿಗಳು ಲಾಭದ ಪ್ರಮಾಣ ಉಳಿಸಿಕೊಳ್ಳಲು ಹಾಗೂ ವರಮಾನ ಗಳಿಕೆಯ ಬಗ್ಗೆ ಮುನ್ನಂದಾಜು ನೀಡಲು ಸಾಧ್ಯವಾಗುವಂತೆ ಮಾಡುತ್ತವೆ. ಹಾಗೆ ನೋಡಿದರೆ, ಬದಲಾವಣೆಯ ಕಾಲಘಟ್ಟಗಳು ದೂರಸಂಪರ್ಕ ವಲಯದ ಕಂಪನಿಗಳ ಸೇವೆಗಳನ್ನು ಜನ ಇನ್ನಷ್ಟು ಬಳಸುವುದಕ್ಕೆ ನೆರವಾಗುತ್ತಿವೆ. ಕಚ್ಚಾ ತೈಲದ ಬೆಲೆ ಹೆಚ್ಚಳ ಆಗುತ್ತಿರುವ ಹಿನ್ನೆಲೆಯಲ್ಲಿ ಇಂಧನ ಬಳಕೆಯನ್ನು ಕಡಿಮೆ ಮಾಡುವಂತೆ ಈಚೆಗೆ ಬರುತ್ತಿರುವ ಮನವಿಗಳು, ದೀರ್ಘಾವಧಿಯಲ್ಲಿ ಡಿಜಿಟಲ್ ಮೂಲಸೌಕರ್ಯ ಹಾಗೂ ಸೇವೆಗಳನ್ನು ಬಳಸುವ ವಿಚಾರದಲ್ಲಿ ಆಗಲಿರುವ ಬದಲಾವಣೆಗಳನ್ನು ಹೇಳುತ್ತಿವೆ.

ಒಟ್ಟಾರೆಯಾಗಿ ಹೇಳಬೇಕು ಎಂದಾದರೆ, ಗ್ರಾಹಕರಲ್ಲಿನ ವಿಶ್ವಾಸ ಹಾಗೂ ಆರ್ಥಿಕ ಬೆಳವಣಿಗೆಯ ಮೇಲೆ ಬಹಳಷ್ಟು ನೆಚ್ಚಿಕೊಂಡಿರುವ ವಲಯಗಳಂತಲ್ಲದೆ, ಫಾರ್ಮಾ ಮತ್ತು ದೂರಸಂಪರ್ಕ ವಲಯಗಳು ತೀರಾ ಅಗತ್ಯವಾದ ಸೇವೆಗಳನ್ನು ಒದಗಿಸುತ್ತವೆ.

ಲೇಖಕ ಜೆಎಂ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಈಕ್ವಿಟಿ ಬ್ರೋಕಿಂಗ್ ವಿಭಾಗದ ಎಂ.ಡಿ.

ಷೇರುಪೇಟೆಗೆ ದೇಶದ ಹೂಡಿಕೆದಾರರೇ ಬಲ

2025–26ರ ಆರ್ಥಿಕ ವರ್ಷದಲ್ಲಿ ದೇಶೀಯ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ದೇಶದ ಷೇರುಪೇಟೆಯಲ್ಲಿ ₹8.5 ಲಕ್ಷ ಕೋಟಿಯಷ್ಟು ಬಂಡವಾಳ ಹೂಡಿಕೆ ಮಾಡಿದ್ದಾರೆ. ಇದು ಆರ್ಥಿಕ ವರ್ಷವೊಂದರಲ್ಲಿ ಹೂಡಿಕೆ ಮಾಡಿರುವ ಈ ವರೆಗಿನ ಸಾರ್ವಕಾಲಿಕ ಗರಿಷ್ಠ ಮೊತ್ತವಾಗಿದೆ.

ಇದೇ ಅವಧಿಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ದೇಶದ ಷೇರುಪೇಟೆಯಿಂದ ₹1.8 ಲಕ್ಷ ಕೋಟಿ ಬಂಡವಾಳವನ್ನು ವಾಪಸ್ ಪಡೆದಿದ್ದಾರೆ. ಕಳೆದ ಆರ್ಥಿಕ ವರ್ಷದಲ್ಲಿ ಜಾಗತಿಕ ಮಟ್ಟದಲ್ಲಿ ಉಂಟಾದ ರಾಜಕೀಯ ಬಿಕ್ಕಟ್ಟು, ವ್ಯಾಪಾರದ ಅನಿಶ್ಚಿತತೆ, ಯುದ್ಧಗಳು, ಫೆಬ್ರುವರಿ ಅಂತ್ಯದ ವೇಳೆಗೆ ಪಶ್ಚಿಮ ಏಷ್ಯಾದಲ್ಲಿ ಉಂಟಾದ ಸಂಘರ್ಷವು ಸೇರಿ ಹಲವು ಅಂಶಗಳು ಬಂಡವಾಳ ಹೊರಹರಿವಿಗೆ ಕಾರಣವಾಗಿದೆ.

ಕಳೆದ 10 ವರ್ಷದ ಅಂಕಿ–ಅಂಶಗಳನ್ನು ಗಮನಿಸಿದಾಗ 2015-16ರಲ್ಲಿ ದೇಶದ ಹೂಡಿಕೆದಾರರು ₹78,667 ಕೋಟಿ ಹೂಡಿಕೆ ಮಾಡಿದ್ದರು. ಇದೇ ವೇಳೆ ವಿದೇಶಿ ಹೂಡಿಕೆದಾರರು ₹14,031 ಕೋಟಿ ಹಿಂಪಡೆದಿದ್ದರು.

ದೇಶದ ಹೂಡಿಕೆದಾರರು ಷೇರುಪೇಟೆಯಲ್ಲಿ ಹೂಡಿಕೆ ಮಾಡುವ ಮೊತ್ತವು ಏರಿಕೆ ಆಗುತ್ತಲೇ ಇದೆ. ಈ ಅಂಶಗಳನ್ನು ಗಮನಿಸಿದಾಗ ವಿದೇಶಿ ಹೂಡಿಕೆದಾರರಿಗಿಂತಲೂ ದೇಶದ ಹೂಡಿಕೆದಾರರೇ ಹೆಚ್ಚಾಗಿ ದೇಶದ ಷೇರುಪೇಟೆಯಲ್ಲಿ ಹೂಡಿಕೆ ಮಾಡುವ ಮೂಲಕ ಷೇರುಪೇಟೆಗೆ ಬಲ ತುಂಬುತ್ತಿದ್ದಾರೆ.

5.1%
ಕಳೆದ ಆರ್ಥಿಕ ವರ್ಷದಲ್ಲಿ ನಿಫ್ಟಿ ಇಷ್ಟು ಇಳಿದಿದೆ

9.9%
ಕಳೆದ ಆರ್ಥಿಕ ವರ್ಷದಲ್ಲಿ ರೂಪಾಯಿ ಮೌಲ್ಯ ಇಷ್ಟು ಇಳಿಕೆ ಕಂಡಿದೆ. 2025–26ರ ಏಪ್ರಿಲ್ 1ರಂದು ರೂಪಾಯಿ ಮೌಲ್ಯ 84.3ರಷ್ಟಿತ್ತು. ಮಾರ್ಚ್ 31ಕ್ಕೆ ರೂಪಾಯಿ ಮೌಲ್ಯವು 94.8ಕ್ಕೆ ಕುಸಿದಿದೆ



ಆಧಾರ: ಏಪ್ರಿಲ್ 30ಗಳ ಎನ್‌ಎಸ್‌ಇ ಮಾರ್ಕೆಟ್ ಪಲ್ಸ್ ವರದಿ
• ಮಾಹಿತಿ ಸಂಗ್ರಹ: **ಗಂಜಿ ಆದಿಶೇಷ**

ಜಿಇ ವರ್ನೋವಾ ಟಿ ಆ್ಯಂಡ್ ಡಿ ಇಂಡಿಯಾ

ಬ್ರೋಕರೇಜ್ ಮಾತು

ವಿದ್ಯುತ್ ವಲಯದ 'ಜಿಇ ವರ್ನೋವಾ ಟಿ ಆ್ಯಂಡ್ ಡಿ ಇಂಡಿಯಾ' ಕಂಪನಿಯ ಷೇರಿನ ಬೆಲೆ ₹5,200ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಕಂಪನಿಯು ₹14,800 ಕೋಟಿ ಮೌಲ್ಯದ ಕಾರ್ಯಾದೇಶ ಪಡೆದುಕೊಂಡಿದೆ. ಇದು 2024–25ರ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 37ರಷ್ಟು ಅಧಿಕ. ಪರಿವರ್ತಕಗಳು ಸೇರಿದಂತೆ ಕಂಪನಿಯ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಬಂದಿದ್ದರಿಂದ ಕಾರ್ಯಾದೇಶ ಹೆಚ್ಚಳವಾಗಿದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

ಕಂಪನಿಯ ದೇಶಿ ವರಮಾನ ಶೇ 34ರಷ್ಟು ಏರಿಕೆಯಾಗಿದ್ದು, ₹4,170 ಕೋಟಿಯಷ್ಟಾಗಿದೆ. ಎಚ್‌ವಿಡಿಸಿ ಪರಿವರ್ತಕಗಳಿಗೆ ಹೆಚ್ಚಿದ ಬೇಡಿಕೆಯಿಂದ ₹13,600 ಕೋಟಿ ಮೌಲ್ಯದ ಕಾರ್ಯಾದೇಶ ಪಡೆದುಕೊಂಡಿದೆ. 2024–25ಕ್ಕೆ ಹೋಲಿಸಿದರೆ ಶೇ 81ರಷ್ಟು ಜಿಗಿತ ಕಂಡಿದೆ.

2026–27 ಮತ್ತು 2027–28ರ ಆರ್ಥಿಕ ವರ್ಷದಲ್ಲಿ ಕಂಪನಿಯ ಗಳಿಕೆಯು ಅಂದಾಜು ಕ್ರಮವಾಗಿ ಶೇ 7 ಮತ್ತು ಶೇ 8ರಷ್ಟು ಏರಿಕೆಯಾಗಲಿದೆ. 2025–26ರಿಂದ 2027–28ರವರೆಗೆ ಕಂಪನಿಯ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 29ರಷ್ಟು ಹೆಚ್ಚಳವಾಗಲಿದೆ. ಇದೇ ಅವಧಿಯಲ್ಲಿ ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 31ರಷ್ಟು ಮತ್ತು ತೆರಿಗೆ ನಂತರದ ಲಾಭ ಶೇ 31ರಷ್ಟಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹4,695 ಇದೆ.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH

Unit-1 Prose : A Hero

Dialogue writing:

Imagine that Swami receives advice by his father and granny how would Swami say that he accepts or refuses it? Write a dialogue using the expressions given below:

Accepting:

a) That's a very good idea. Thank you.
b) Of course! I didn't think of it that. Many thanks.
c) Thank you for suggesting it. I think I will.
d) I think I must do that
e) Yes, I will. It's very good of you to make the offer.
f) That's very kind of you. I will. *(....Contd)*

Answer:

Father: Swami, can you think of learning and going on trekking during this summer vacation?
Swami: That's a very good idea. Thank you.
Father: You can start with practicing at rock climbing club in town sports complex during weekends.
Swami: Of course! I didn't think of that. Many thanks.
Father: You may also learn map reading with the help of your school NCC officer.
Swami: Thank you for suggesting it. I think I will.
Father: You may also request him to teach you about using electronic map reading using GPS equipments.
Swami: I think I must do that.
Father: If you master the electronic map reading, I will buy you a GPS navigator.
Swami: Yes, I will. It's very good of you to make the offer.
Father: I will accompany you on your first trek. But for successful trekking, you need good physical strength. Can you start morning exercise and running with me from tomorrow?
Swami: That's very kind of you. I will Imagine that Swami receives advice by his father and granny how would Swami say that he accepts or refuses it?

Write a dialogue using the expressions given below:

Refusing:

a) Thank you for the suggestion. I will certainly think about it.
b) That may be a good idea. Let me think about it.
c) I think, on the whole, I'd rather not. Thank you all the same.
d) It is certainly a possibility. May I think about it?
e) That's very good of you but I am not sure I want to.
f) Do you mind if I didn't? I know you are being kind.

Answer:

Father: Swami, can you think of learning and doing a trekking during this summer vacation?
Swami: Thank you for the suggestion. I will certainly think about it.
Father: You can start with practicing at rock climbing club in town sports complex during weekends.
Swami: That may be good idea. Let me think about it.
Father: You may also learn map reading with help of your school NCC officer.
Swami: I think, on the whole, I would rather not.
Father: If you master the electronic map reading, I will buy you a GPS navigator
Swami: Thank you all the same.
Father: Would you like to increase your physical fitness by accompanying me on morning running?
Swami: It is certainly a possibility. May I think about it?
Father: If you do not want to run with me, would you want to run on your own at school?
Swami: That's very good of you but I am not sure I want to.
Father: Can you at least practice running on the spot at home?
Swami: Do you mind if I didn't? I know you are being kind.

Read and Respond:

Task 1: A man went to the astrologer
Astrologer:- Come my child, your name is Suraj khanna,
Khanna:- yes, indeed!
Astrologer:- You have two sons and two daughters
Khanna:- How true!
Astrologer:- You brought four kilos of sugar and five kilos of rice yesterday, and there are five members of your household remaining after your parents passed away.
Khanna:- I am impressed. But can you tell me about my future?
Astrologer:- Okay then. Come back with your horoscope booklet tomorrow. And, here, take your ration card back

Questions:

1) Mr Khanna was surprised at the astrologer's prediction. What made him feel so?
2) Why astrologer wasn't able to predict Mr Khanna's future?
3) In the conversation given above, who do you think has better common sense?

Answers:

1) Mr Khanna was surprised as astrologer very accurately said his name, details of family members and even details of grocery brought by him on previous day.
2) Astrologer wasn't able to predict the future as Mr Khanna hadn't brought his horoscope.
3) Astrologer has better common sense. He was able to impress Mr Khanna using his ration card.

(Contd…..)

Chemistry

Types of Solutions

Problems:-

4. The density of 10% by mass of KCl solution is 1.06 g cm^{-3}. Calculate the molarity of the solution.

Ans:- ***I. Calculation of volume of the solution:***

Mass of the solution = 100 g
Density of the solution = 1.06 g cm^{-3}

$$\text{Volume of solution} = \frac{\text{Mass of solution}}{\text{Density}} = \frac{100\,g}{1.06\,g\,cm^{-3}} = 94.34\,cm^3$$

II. Calculation of molarity of the solution:

$$\text{Molarity of solution(M)} = \frac{\left(\frac{\text{Mass of KCl}}{\text{Molar mass of KCl}}\right)}{\text{Volume of solution in } dm^3}$$

Mass of the KCl = 10 g
Molar mass of KCl = 39 + 35.5 = 74.5 g mol^{-1}
Volume of the solution = 94.34 cm^3 = 0.0943 dm^3

$$\text{Molarity (M)} = \frac{10g/(74.5\,g\,mol^{-1})}{0.0943\,dm^3} = 1.42\ mol\ dm^{-3} = 1.42\,M$$

5. 3.6 M sulphuric acid solution is 29% H_2SO_4. Calculate the density of the solution.

Soln:- ***I. Calculation of mass of the solution:***

Mass of H_2SO_4 in 3.6 M solution
= (3.6 mol) x (98 g mol^{-1})
= 352.8 g

29% H_2SO_4 means,
29 g of H_2SO_4 are present in solution = 100 g
∴ 352.8 g of H_2SO_4 are present in solution

$$= \frac{100\,g}{29\,g}(352.8\,g) = 1216.5\,g$$

II. Calculation of the density of the solution:

$$\text{Density of the solution} = \frac{\text{Mass of solution}}{\text{Volume of solution}} = \frac{1216.5\,g}{1000\,mL} = 1.22\ g\,mL^{-1}$$

6. The solubility of $Ba(OH)_2.\ 8H_2O$ in water at 298 K is 5.6 g per 100 g of water. What is the molality of the hydroxide ions in a saturated solution of barium hydroxide at 298 K? (Atomic mass of Ba = 137, O = 16)

Soln:- ***I. Calculation of molality of the solution:***

$$\text{Molality of solution(m)} = \frac{\left(\frac{\text{Mass of solute}}{\text{Molar mass of solute}}\right)}{\text{Mass of solvent in kg}}$$

Mass of solute, $Ba(OH)_2.\ 8H_2O$ = 5.6 g
Molar mass of solute, $Ba(OH)_2.\ 8H_2O$
= 137 + 2 x (16 + 1) + 8 x 18 = 315 g mol^{-1}
Mass of the solvent (water) = 100 g = 0.1 kg

$$\text{Molality (m)} = \frac{5.6g/(315\,g\,mol^{-1})}{0.1\ kg} = 0.18\ mol\ kg^{-1} = 0.18\,m$$

II. Calculation of molality of the OH^- ions:

Barium hydroxide ionises in water as follows –

$$Ba(OH)_2 \xrightleftharpoons{(aq)} Ba^{2+}\ (aq) + 2OH^-\ (aq)$$

This shows that the molality of OH^- ions is twice the molaltiy of $Ba(OH)_2$= 2 x 0.18 m = 0.36 m

7. A solution has been prepared by dissolving 0.49 g of sulphuric acid in 100 mL of the solution. Calculate normality of the solution.

Soln:- Normality of solution (N)

$$= \frac{\text{No. of gram equivalents of } H_2SO_4}{\text{Volume of solution in litres}}$$

Mass of H_2SO_4 = 0.49 g
Equivalent Mass of H_2SO_4 =

$$= \frac{\text{Molar mass}}{\text{Basicity}} = \frac{98.0}{2} = 49.0\ g\ equiv^{-1}$$

Volume of the solution = 100 mL

$$= \frac{100}{1000} = 0.1\ L$$

$$\text{Normality of solution(N)} = \frac{\left(\frac{\text{Mass of } H_2SO_4}{\text{Eq. mass of } H_2SO_4}\right)}{\text{Volume of solution in litres}} = \frac{0.49\,g/49\,g\ equiv^{-1}}{0.1L} = 0.1 equiv.L^{-1} = 0.1N$$

8. Calculate the number of molecules of oxalic acid ($H_2C_2O_4.\ 2H_2O$) in 100 mL of 0.2 N oxalic acid solution.

Soln:- ***I. Calculation of mass of the oxalic acid:***

$$\text{Normality of solution} = \frac{\left(\frac{\text{Mass of Oxalic acid}}{\text{Equivalent mass}}\right)}{\text{Volume of solution in litres}} = 0.2\,N = 0.2\ equiv.L^{-1}$$

Equivalent mass of the acid = Molar mass / Basicity

$$= \frac{2\times1+2\times12+4\times16+2\times18}{2} = \frac{126}{2} = 63\ g\ equiv^{-1}$$

Volume of solution = 100 mL

$$= \frac{100}{1000} = 0.1\ L$$

$$\therefore (0.2\ equiv.L^{-1}) = \frac{\text{Mass of oxalic acid}}{(63\ g\ equiv^{-1}) \times (0.1L)}$$

Mass of the oxalic acid

$$= (0.2\ equiv\,L^{-1}) \times (63\ g\ equiv.^{-1}) \times (0.1L) = 1.26\,g$$

Step II. ***Calculation of no. of molecules of oxalic acid***

Molar mass of oxalic acid = 126 g mol^{-1}
Now, 126 g of oxalic acid has molecules = (N_0)
= 6.022 x 10^{23}
1.26 g of oxalic acid has molecules

$$= \frac{6.022\times10^{23}}{126\,g}\ 1.26\,g = 6.022\times10^{21}$$

9. Calculate the osmotic pressure of 8 % sucrose solution at 293 K. (R=8.314J$K^{-1}mol^{-1}$)

Soln:- The osmotic pressure is given by,

$$\pi = \frac{RTw}{MV}$$

Given that – w = 8g, M = 342 g;
($C_{12}H_{22}O_{11}$ – mol.mass is 342) *(Contd.....)*

ವಿಸ್ತೃತ ಪೀಠದ ಗಣನೆಗೆ ಕೋರಿಕೆ

ಯುಎಪಿಎ ಪ್ರಕರಣದಲ್ಲಿ ಜಾಮೀನು ವಿಚಾರ • ದೆಹಲಿ ಪೊಲೀಸರ ವಾದ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾನೂನುಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆಯಡಿ (ಯುಎಪಿಎ) ಜಾಮೀನು ನೀಡುವ ವಿಷಯವನ್ನು ವಿಸ್ತೃತ ಪೀಠ ಪರಿಗಣಿಸಬೇಕಾಗಬಹುದು ಎಂದು ದೆಹಲಿ ಪೊಲೀಸರ ಪರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿದ್ದಾರೆ.

ಈ ಸಂಬಂಧ ಸುಪ್ರೀಂ ಕೋರ್ಟ್‌ನ ಬೇರೆ ಬೇರೆ ಪೀಠಗಳು ನೀಡಿದ ತೀರ್ಪುಗಳು ವ್ಯತಿರಿಕ್ತವಾಗಿ ಇರುವುದರಿಂದ ಅದನ್ನು ವಿಸ್ತೃತ ಪೀಠ ಪರಿಗಣಿಸುವುದು ಸೂಕ್ತ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಪಿ.ಬಿ.ವರಾಳೆ ಪೀಠದ ಮುಂದೆ ಪ್ರತಿಪಾದಿಸಿದರು.

ದೆಹಲಿ ಗಲಭೆಯ ಪಿತೂರಿ ಪ್ರಕರಣದ ಆರೋಪಿಗಳಾದ ತಸ್ಲೀಮ್ ಅಹ್ಮದ್ ಮತ್ತು ಖಾಲಿದ್ ಸೈಫಿ ಅವರಿಗೆ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದ್ದರ ವಿರುದ್ಧ ಸಲ್ಲಿಸಲಾಗಿರುವ ಜಾಮೀನು ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸುತ್ತಿದೆ.

ಸೈಯದ್ ಇಫ್ತಿಕರ್ ಅಂದ್ರಾಬಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮೇ 18ರಂದು ನೀಡಿರುವ ತೀರ್ಪನ್ನು ಪರಿಶೀಲಿಸಲು ಸಮಯ ಬೇಕು ಎಂದು ರಾಜು ಅವರು ಮೇ 19ರಂದು ಕೋರಿದರು. ಇದನ್ನು ಮಾನ್ಯ ಮಾಡಿದ ಪೀಠವು ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು.

ಮೇ 18ರಂದು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ಅಂದ್ರಾಬಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯುಎಪಿಎ ಪ್ರಕರಣಗಳಲ್ಲಿಯೂ 'ಜಾಮೀನು ನಿಯಮ, ಜೈಲು ಅಪವಾದ' ಎಂಬುದನ್ನು ತೀರ್ಪಿನಲ್ಲಿ ಉಲ್ಲೇಖಿಸಿತು. ಅಲ್ಲದೆ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರಿಗೆ ಜಾಮೀನು ನಿರಾಕರಿಸಿದ ಕುರಿತು ಆಕ್ಷೇಪ ವ್ಯಕ್ತಪಡಿಸಿತು.

ಜಾತಿ ಜನಗಣತಿ: ಪಿಐಎಲ್ ವಜಾ

ಜಾತಿ ಆಧಾರಿತ ಜನಗಣತಿ ನಡೆಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿದ್ದ ಪಿಐಎಲ್ ಅನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದ್ದು, ಈ ವಿಷಯ ಆಡಳಿತ ನೀತಿಯ ವ್ಯಾಪ್ತಿಗೆ ಬರುತ್ತದೆ ಎಂದಿದೆ.

ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ಹಿಂದುಳಿದ ಜಾತಿಗಳಿಗೆ ಸೇರಿದ ವ್ಯಕ್ತಿಗಳ ಸಂಖ್ಯೆಯನ್ನು ಸರ್ಕಾರ ತಿಳಿದುಕೊಳ್ಳಬೇಕು ಎಂದು ನ್ಯಾಯಾಲಯ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ಅವರಿದ್ದ ಪೀಠವು, 'ಜನಗಣತಿ ಜಾತಿ ಆಧಾರಿತ ಆಗಿರಬೇಕೋ ಅಥವಾ ಬೇಡವೋ ಎಂಬುದು ಆಡಳಿತ ನೀತಿಗೆ ಸಂಬಂಧಿಸಿದ ವಿಷಯ' ಎಂದಿದೆ.



'ಇದರಲ್ಲಿ ಯಾವ ತಪ್ಪಿದೆ? ಹಿಂದುಳಿದ ವರ್ಗದಲ್ಲಿ ಎಷ್ಟು ಜನ ಇದ್ದಾರೆ, ಅವರಿಗಾಗಿ ಯಾವ ರೀತಿಯ ಕಲ್ಯಾಣ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕಿದೆ. ಈ ವಿಷಯವು ನೀತಿ ನಿರೂಪಣೆಗೆ ಸಂಬಂಧಿಸಿದ್ದು' ಎಂದು ಪಿಐಎಲ್ ವಜಾಗೊಳಿಸಿದ ಸಂದರ್ಭದಲ್ಲಿ ಸಿಜೆಐ ಅವರು ತಿಳಿಸಿದರು.

ರಸ್ತೆಯಲ್ಲಿ ನಮಾಜ್: ಹಿಂದೂಗಳನ್ನು ಬೆದರಿಸುವ ಉದ್ದೇಶ- ವಿಎಚ್‌ಪಿ

ನವದೆಹಲಿ (ಪಿಟಿಐ): ರಸ್ತೆ ಮೇಲೆ ನಮಾಜ್ ಮಾಡುವುದನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿದ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), 'ಇದು ಧಾರ್ಮಿಕ ಆಚರಣೆಯಲ್ಲ. ಹಿಂದೂ ಸಮಾಜ ಮತ್ತು ಆಡಳಿತವನ್ನು ಬೆದರಿಸುವ ಉದ್ದೇಶದಿಂದ ಮಾಡುವ 'ಶಕ್ತಿ ಪ್ರದರ್ಶನ' ಎಂದು ಬುಧವಾರ ಆರೋಪಿಸಿದೆ.

'ರಸ್ತೆಯಲ್ಲಿ ನಮಾಜ್ ಮಾಡುವುದು ಪ್ರಾರ್ಥನೆಯಲ್ಲ ಅಡಚಣೆ. ಇದು ಸಂವಿಧಾನಕ್ಕೆ ಮಾತ್ರವಲ್ಲದೇ ಮಾನವೀಯತೆ ಮತ್ತು ಇಸ್ಲಾಂಗೂ ವಿರುದ್ಧವಾದುದಾಗಿದೆ' ಎಂದು ವಿಎಚ್‌ಪಿ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ರಸ್ತೆಯಲ್ಲಿ ನಮಾಜ್ ಮಾಡುವುದನ್ನು ನಿಷೇಧಿಸಿ ಹಲವು ನ್ಯಾಯಾಲಯಗಳು ಆದೇಶ ನೀಡಿವೆ. ಸುಪ್ರೀಂ ಕೋರ್ಟ್ ಕೂಡ ಈ ಪದ್ಧತಿ ಬಗ್ಗೆ ಅಸಮ್ಮತಿಯನ್ನು ಸೂಚಿಸಿದೆ. ಇದರ ಹೊರತಾಗಿಯೂ ರಸ್ತೆಯಲ್ಲಿ ನಮಾಜ್ ಮಾಡುವುದು ಸಂವಿಧಾನ ಮತ್ತು ನ್ಯಾಯಾಲಯದ ಆದೇಶದ ಉಲ್ಲಂಘನೆ ಯಾಗಿರುತ್ತದೆ' ಎಂದು ಹೇಳಿದ್ದಾರೆ.

'ರಸ್ತೆಯಲ್ಲಿ ನಮಾಜ್ ಮಾಡುವುದರ ವಿರುದ್ಧ ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳು ಕೈಗೊಂಡಿರುವ ಕ್ರಮವನ್ನು ಸ್ವಾಗತಿಸುತ್ತೇವೆ. ದೆಹಲಿಯಲ್ಲಿ ರೈಲು ಹಳಿಯ ಮೇಲೆ ನಮಾಜ್ ಮಾಡುವುದರಿಂದ ಗಂಟೆಗಟ್ಟಲೆ ರೈಲು ಸಂಚಾರದಲ್ಲಿ ವ್ಯತ್ಯಯವಾಗುತ್ತದೆ. ಗುರುಗ್ರಾಮದಲ್ಲಿ ರಸ್ತೆಯಲ್ಲಿ ನಮಾಜ್ ಮಾಡುವುದರಿಂದ 8 ಗಂಟೆ ಸಂಚಾರ ದಟ್ಟಣೆಯಾಗುತ್ತದೆ' ಎಂದು ತಿಳಿಸಿದ್ದಾರೆ.

'ಜನರನ್ನು ಭಯೋತ್ಪಾದನೆಯ ಇನ್ನೊಂದು ಪಥದತ್ತ ತಳ್ಳುವ ಬದಲು ಕಾನೂನನ್ನು ಪಾಲಿಸುವಂತೆ ಮುಸ್ಲಿಂ ಧರ್ಮಗುರುಗಳು ಪ್ರೋತ್ಸಾಹಿಸಬೇಕು' ಎಂದು ಒತ್ತಾಯಿಸಿದ್ದಾರೆ.

KARNATAKA GOVERNMENT SECRETARIAT
Multi Storied Building, Dr. B.R. Ambedkar Veedhi, Bengaluru- 560001.

No. ED/5/EGOV/2026 Date:19.05.2026

RECRUITMENT NOTIFICATION

The Karnataka State Higher Education Academy is an academy under the department of Higher Education, Government of Karnataka invites application from qualified and competent candidates for the position of the **Director, Karnataka State Higher Education Academy. Haliyal Road, Dharwad, Karnataka-580003.** Interested candidates may apply by sending detailed in the prescribed format to **dsuniversities@gmail.com** The details are given below. The last date for receiving email application along with CV is **30.05.2026 (05.00 P.M.).**

- Applicant must be a Professor in a Government Higher Education Institutions of the State/Public Universities (State & Central)/Institute of National Importance of Government of India.
- Ph.D. from a recognized University.
- Minimum 15 years of teaching/research experience in Higher Education and Minimum 5 years in a senior academic administrative position.
- Age must not exceed 60 years as on the closing date of application.
- Must not have any pending disciplinary or vigilance proceedings.
- Appointment for the period of 5 years or till age of 65 years whichever is earlier.
- The Director must draw the his/her own salary and grade during his tenure, addition to director allowance of Rs.10.000/-. If a retired person is appointed as Director, the emoluments shall be reduced by the amount of pension and allowances drawn by him and other emoluments.

For Application format, visit **https://hed.karnataka.gov.in**

Sd/- (V.T. Rajyashree)
Deputy Secretary to the Government (Universities),
Department of Higher Education)

DIPR/CP/JA/751/2026-27

'ದುರಂಧರ್' ಕಳವಳ ಪರಿಹರಿಸಿ: ಹೈಕೋರ್ಟ್

ನವದೆಹಲಿ (ಪಿಟಿಐ): ನಟ ರಣವೀರ್ ಸಿಂಗ್ ಅಭಿನಯದ ಹಿಂದಿ ಸಿನಿಮಾ 'ದುರಂಧರ್– ದಿ ರಿವೆಂಜ್' ಸಿನಿಮಾ ಕುರಿತಂತೆ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ಬಗ್ಗೆ ಗಮನಹರಿಸುವಂತೆ ಕೇಂದ್ರ ಸರ್ಕಾರ ಹಾಗೂ ಸೆನ್ಸಾರ್ ಮಂಡಳಿಗೆ ದೆಹಲಿ ಹೈಕೋರ್ಟ್ ಬುಧವಾರ ಸೂಚಿಸಿದೆ.

'ದುರಂಧರ್– ದಿ ರಿವೆಂಜ್'ನಲ್ಲಿ ದೇಶದ ಗುಪ್ತಚರ ವ್ಯವಸ್ಥೆ ಹಾಗೂ ರಕ್ಷಣಾ ಕಾರ್ಯಾಚರಣೆಗೆ ಸಂಬಂಧಿಸಿದ ಕೆಲ ಸೂಕ್ಷ್ಮ ವಿಚಾರಗಳನ್ನು ಬಹಿರಂಗಪಡಿಸಲಾಗಿದೆ ಎಂದು ಆರೋಪಿಸಿ ಎಸ್‌ಎಸ್‌ಬಿ ಸಿಬ್ಬಂದಿಯೊಬ್ಬರು ಈ ಪಿಐಎಲ್ ಸಲ್ಲಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾ.ತೇಜಸ್ ಕಾರಿಯಾ ಅವರನ್ನೊಳಗೊಂಡ ಪೀಠವು ಅರ್ಜಿಯ ವಿಚಾರಣೆ ನಡೆಸಿ, 'ಅರ್ಜಿದಾರರ ಕಳವಳವನ್ನು ನಿರೂಪಿಸುವ ಯಾವುದೇ ಅಂಶಗಳು ಇಲ್ಲ. ಸಿನಿಮಾವನ್ನು ಮನರಂಜನೆಗಾಗಿ ಮಾಡಲಾಗಿದೆ ಎಂಬುದು ನಿಜವಾಗಿದ್ದರೂ, ಅದು ಬೀರುವ ಪ್ರಭಾವವನ್ನು ತಳ್ಳಿಹಾಕಲಾಗದು. ಹೀಗಾಗಿ ಸೆನ್ಸಾರ್ ಮಂಡಳಿ ಮತ್ತು ಕೇಂದ್ರ ಈ ನಿಟ್ಟಿನಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕು' ಎಂದಿದೆ.

'ವೈದ್ಯಕೀಯ ವಿಮಾ ಮೊತ್ತ ಪರಿಹಾರದಿಂದ ಕಡಿತ ಸಲ್ಲದು'

ಪ್ರಜಾವಾಣಿ ವಾರ್ತೆ

ನವದೆಹಲಿ: ಮೋಟಾರು ವಾಹನ ಕಾಯ್ದೆಯಡಿ, ಮೋಟಾರು ಅಪಘಾತ ಹಕ್ಕುಗಳ ನ್ಯಾಯಮಂಡಳಿ ಲೆಕ್ಕ ಹಾಕಿದಂತೆ ವೈದ್ಯಕೀಯ ವಿಮೆ ಭಾಗವಾಗಿ ಪಡೆದ ಮೊತ್ತವನ್ನು ಪರಿಹಾರದಿಂದ ಕಡಿತಗೊಳಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ವಿಪುಲ್ ಎಂ. ಪಂಚೋಲಿ ಅವರಿದ್ದ ನ್ಯಾಯಪೀಠವು, ವೈದ್ಯಕೀಯ ವಿಮೆ ಹಾಗೂ ವೈದ್ಯಕೀಯ ಪರಿಹಾರವು ವೈದ್ಯಕೀಯ ವೆಚ್ಚಗಳಡಿಯೇ ಬರಲಿದ್ದು, ಈ ಎರಡೂ ಬೇರೆ ಬೇರೆ ಆಗಿರುವುದರಿಂದ ಅದನ್ನು 'ಎರಡು ಲಾಭ' ಎನ್ನಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಒಂದು ಶಾಸನಬದ್ಧವಾದುದು, ಮತ್ತೊಂದು ಒಪ್ಪಂದ. ಈ ಹಿಂದೆ ಪಾವತಿಸಿದ ಪ್ರೀಮಿಯಂಗಳ ಅನುಕ್ರಮವು ಒಂದಾದರೆ, ಮೋಟಾರು ವಾಹನ ಅಪಘಾತದಲ್ಲಿ ಸಂಭವಿಸುವ ಸಾವಿನ ಪರಿಣಾಮದಿಂದಾಗಿ ಅರ್ಹತೆ ಪಡೆದದ್ದು ಇನ್ನೊಂದಾಗಿದೆ ಎಂಬುದನ್ನು ನ್ಯಾಯಾಲಯವು ವಿಚಾರಣೆ ಸಂದರ್ಭ ಗಮನಿಸಿದೆ.

ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ಸಂದರ್ಭದಲ್ಲಿ ನ್ಯಾಯಪೀಠವು, ಮೇ 15ರಂದು ನೀಡಿರುವ ತೀರ್ಪಿನಲ್ಲಿ ಈ ಅರ್ಜಿಯನ್ನು ವಜಾಗೊಳಿಸಿದೆ.

ಟೆಟ್ರಾಪ್ಯಾಕ್‌ನಲ್ಲಿ ಮದ್ಯ ಮಾರಾಟ ನಿಷೇಧ ಕೋರಿ ಅರ್ಜಿ

ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ w(ಪಿಟಿಐ): ಟೆಟ್ರಾ ಪ್ಯಾಕ್ ಮತ್ತು ಸ್ಯಾಚೆಟ್‌ಗಳು ಸೇರಿ 'ಸ್ಪಷ್ಟವಾಗಿ ಗೋಚರವಾಗದಂತಹ' ಪೊಟ್ಟಣಗಳಲ್ಲಿ ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಹಾಗೂ ಎಲ್ಲ ಭಾಗೀದಾರರಿಗೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಈ ಕುರಿತು 'ಕಮ್ಯುನಿಟಿ ಅಗೇನ್‌ಸ್ಟ್ ಡ್ರಂಕ್ ಆ್ಯಂಡ್ ಡ್ರೈವಿಂಗ್' ಎಂಬ ಎನ್‌ಜಿಒ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ಒಪ್ಪಿದ ಸುಪ್ರೀಂ ಕೋರ್ಟ್, ಪ್ರತಿಕ್ರಿಯೆ ನೀಡುವಂತೆ ಎಲ್ಲ ರಾಜ್ಯಗಳ ಅಬಕಾರಿ ಇಲಾಖೆಗಳಿಗೂ ನೋಟಿಸ್ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಂಚೋಲಿ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, 'ಅಬಕಾರಿ ಆಡಳಿತ ವ್ಯವಸ್ಥೆಯಲ್ಲಿ ಬಾಟಲಿ ಕುರಿತ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಈ ಬಗ್ಗೆ ಪ್ರಮಾಣೀಕರಣದ ಅಗತ್ಯ ಇದೆ' ಎಂದು ಅರ್ಜಿದಾರರ ಪರ ವಕೀಲ ವಿಪಿನ್ ನಾಯರ್, ಪೀಠಕ್ಕೆ ತಿಳಿಸಿದರು.

'ಕೆಲ ಮದ್ಯಗಳನ್ನು ಹೊಂದಿರುವ ಟೆಟ್ರಾ ಪ್ಯಾಕ್‌ಗಳ ಮೇಲೆ ಹಸಿರು ಬಣ್ಣದ ಸೇಬಿನ ಚಿತ್ರಗಳನ್ನು ಮುದ್ರಿಸಲಾಗಿರುತ್ತದೆ. ಹಣ್ಣಿನ ರಸ ಹಾಗೂ ಮದ್ಯದ ನಡುವಿನ ವ್ಯತ್ಯಾಸದ ಬಗ್ಗೆ ಗೊಂದಲ ಮೂಡಿಸಲಾಗುತ್ತಿದೆ. ಪ್ಯಾಕೆಟ್ ಮೇಲೆ ಸೇಬು ಹಣ್ಣಿನ ಚಿತ್ರ ಇದ್ದರೂ ಅದರ ಒಳಗೆ ವೋಡ್ಕಾ ಇರುತ್ತದೆ' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಈ ರೀತಿ ಮಾಡುವುದು ವಂಚನೆಯೇ ಸರಿ' ಎಂದು ಹೇಳಿತು.

ಕಾರ್ಯದರ್ಶಿಗಳು, ಬಾಲ ಭವನ ಸೊಸೈಟಿ(ರಿ),
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) ಬೆಂಗಳೂರು.

ಸಂಖ್ಯೆ: ಡಬ್ಲ್ಯೂಸಿಡಿ 108 ಕೆಎಸ್‌ಡಬ್ಲ್ಯೂ 2025 ದಿನಾಂಕ: 13.05.2026

ಮರು ಟೆಂಡರ್ ಅಧಿಸೂಚನೆ.

ಬಾಲ ಭವನದ ಆವರಣದಲ್ಲಿ ನಿಗದಿತ ಜಾಗದಲ್ಲಿ ಮಕ್ಕಳ ಮನರಂಜನಾ ಆಟಿಕೆಗಳಾದ ಕರೋಸೆಲ್ (4000 Sq ft). ಡೈನೋಸಾರ್ ಪಾರ್ಕ್ (1500 Sq ft), ಹೆಲಿಕಾಪ್ಟರ್ ಸವಾರಿ (1500 Sq ft), ಹೊರಾಂಗಣ ನಾಣ್ಯ ಆಟಗಳು (1000 sq ft). ಬೇರ್ ಮ್ಯಾನ್(600sq ft), ಜಿಪ್‌ಲೈನ್, ಟೋರಾ ಟೋರಾ (500 Sq ft), ರಾಕ್ ಕ್ಲೈಂಬಿಂಗ್ ವಾಲ್ (500 Sq ft) ಹಾಗೂ ಟ್ರಾಫಿಕ್ ಪಾರ್ಕ್ (5000 Sq ft) ಒಟ್ಟು 14,600 ಚದರಡಿಯ ಜಾಗದಲ್ಲಿ ಮಕ್ಕಳ ಆಟಿಕೆಗಳನ್ನು ಅಳವಡಿಸಲು ಮತ್ತು ವಾರ್ಷಿಕ ನಿರ್ವಹಣೆ ಮಾಡಲು ಆಸಕ್ತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ಮೂರು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲು ಅರ್ಹ ಬಿಡ್ಡುದಾರರಿಂದ ಟೆಕ್ನಿಕಲ್ ಮತ್ತು ಆರ್ಥಿಕ ಬಿಡ್ ಸಲ್ಲಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KPPP) 1999 ವಿಯಮಗಳು 2000 ಪ್ರಕಾರ e-Procurement ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

- ಟೆಂಡರ್ ದಾಸ್ತಾವೇಜುಗಳನ್ನು **ದಿನಾಂಕ: 13.05.2026** ರಿಂದ **ದಿನಾಂಕ: 19.06.206 ರ ಸಂಜೆ 4.30 ಗಂಟೆಯೊಳಗೆ** ಡೌನಲೋಡ್ ಮಾಡಿ ಆನ್‌ಲೈನ್ ಮುಖಾಂತರ ಸಲ್ಲಿಸುವುದು.
- ಟೆಂಡರ್ ಡಾಕ್ಯುಮೆಂಟ್ ಇ–ಪೋರ್ಟಲ್ ಮುಖಾಂತರ ಅಪ್‌ಲೋಡ್ ಮಾಡಲು ಕೊನೆ **ದಿನಾಂಕ: 19.06.2026 ರ ಅಪರಾಹ್ನ 2.00 ಗಂಟೆ.**
- ಟೆಂಡರ್ ತಾಂತ್ರಿಕ ಲಕೋಟೆಯನ್ನು **ದಿನಾಂಕ: 23.06.2026 ರ ಸಂಜೆ 4.00 ಗಂಟೆಗೆ** ತೆರೆಯಲಾಗುವುದು.
- ಟೆಂಡರ್‌ನ ಹಣಕಾಸಿನ ಲಕೋಟೆಯನ್ನು **ದಿನಾಂಕ: 30.06.2026 ರ ಸಂಜೆ 4.00 ಗಂಟೆಗೆ** ತೆರೆಯಲಾಗುವುದು.
- ಹೆಚ್ಚಿನ ವಿವರಗಳು ಟೆಂಡರ್ ದಾಸ್ತಾವೇಜುಗಳಲ್ಲಿ ಲಭ್ಯವಿದ್ದು **www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿಗಳು, ಬಾಲ ಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಕಾರ್ಯದರ್ಶಿಗಳು, ಬಾಲ ಭವನ ಸೊಸೈಟಿ(ರಿ)
ವಾಸಾಸಂಇ/ಉನಿ–ಸಿ.ಪಿ/744/ಕೆಎಸ್‌ಎಂಸಿಎ/2026–27

ಅಲಿಗಢದಲ್ಲಿ ಮರ್ಯಾದೆಗೇಡು ಹತ್ಯೆ

ಅಲಿಗಢ (ಉತ್ತರ ಪ್ರದೇಶ), (ಪಿಟಿಐ): ನೆರೆ ಮನೆಯ ಯುವಕನನ್ನು ಪ್ರೀತಿಸಿದ್ದಕ್ಕೆ ತಂದೆಯೇ ಮಗಳನ್ನು ಕತ್ತು ಹಿಸುಕಿ ಹತ್ಯೆಗೈದಿರುವ ಘಟನೆ ಉತ್ತರ ಪ್ರದೇಶದ ಜರಾರ ಗ್ರಾಮದಲ್ಲಿ ನಡೆದಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಆರೋಪಿಯನ್ನು ಪೂರನ್ ಸಿಂಗ್ ಎಂದು ಗುರುತಿಸಲಾಗಿದೆ. ಆರೋಪಿಯ ಪುತ್ರಿಯು ನೆರೆಮನೆಯ ಯುವಕನನ್ನು ಪ್ರೀತಿಸುತ್ತಿದ್ದು, ಆತನನ್ನೇ ಮದುವೆಯಾಗುವುದಾಗಿ ಹೇಳಿದ್ದರು. ಯುವಕ ತಮ್ಮ ಜಾತಿಯವರೇ ಆಗಿದ್ದರೂ ಪ್ರೇಮ ವಿವಾಹಕ್ಕೆ ಸಿಂಗ್ ಒಪ್ಪಿರಲಿಲ್ಲ ಎಂದೂ ಪೊಲೀಸರು ತಿಳಿಸಿದ್ದಾರೆ.

ಪ್ರೀತಿಸಿದ ಯುವಕನೊಂದಿಗೆ ಮದುವೆ ಮಾಡಿಸದಿದ್ದರೆ ವಿಷ ಕುಡಿಯುವುದಾಗಿ ಮಗಳು ಬೆದರಿಕೆ ಹಾಕಿದ್ದಳು. ಇದರಿಂದ ಕೋಪಗೊಂಡ ಸಿಂಗ್ ಕತ್ತು ಹಿಸುಕಿ ಆಕೆಯ ಹತ್ಯೆಗೈದು, ಹತ್ತಿರದ ಜಮೀನಿನಲ್ಲಿ ಮೃತದೇಹ ಹೂತಿದ್ದ ಎಂದೂ ಮಾಹಿತಿ ನೀಡಿದ್ದಾರೆ.

ಮಗಳು ನಾಪತ್ತೆಯಾಗಿದ್ದಾಳೆ ಎಂದು ಸಿಂಗ್ ಅವರ ಪತ್ನಿ ದೂರು ನೀಡಿದ ಬಳಿಕ ಪೊಲೀಸರು ತನಿಖೆ ನಡೆಸಿದಾಗ ಈ ವಿಚಾರ ಬಹಿರಂಗವಾಗಿದೆ.

ಪೆರೋಲ್ ಪಡೆದಿದ್ದ ಅಪರಾಧಿ 24 ವರ್ಷಗಳ ಬಳಿಕ ಸೆರೆ

ನವದೆಹಲಿ (ಪಿಟಿಐ): ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಬಳಿಕ 2002ರಲ್ಲಿ ಪೆರೋಲ್ ಮೇಲೆ ಹೊರಬಂದು ತಲೆ ಮರೆಸಿಕೊಂಡಿದ್ದ ಅಪರಾಧಿಯೊಬ್ಬನನ್ನು 24 ವರ್ಷಗಳ ಬಳಿಕ ದೆಹಲಿ ಪೊಲೀಸರು ಬಂಧಿಸಿದ್ದಾರೆ.

'ಅಪರಾಧಿ ರಾಕೇಶ್ ಪಟೇಲ್ ಅಲಿಯಾಸ್ ಪಪ್ಪಿ ತನ್ನ ಗುರುತನ್ನು ಬದಲಿಸಿಕೊಂಡು, ನಂದಲಾಲ್ ವರ್ಮ ಎಂಬ ಹೆಸರಿನಲ್ಲಿ ಪ್ರಯಾಗರಾಜ್‌ನಲ್ಲಿ ನೆಲಸಿದ್ದ. ಅಲ್ಲಿಯೇ ಆಟೊ ಬಿಡಿಭಾಗಗಳ ಅಂಗಡಿ ಇಟ್ಟುಕೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ರಾಕೇಶ್ ತನ್ನ ಇಬ್ಬರು ಸಹಚರರೊಂದಿಗೆ ಸೇರಿ ನೆರೆಮನೆಯ ವ್ಯಕ್ತಿಯನ್ನು 1990ರಲ್ಲಿ ಹತ್ಯೆ ಮಾಡಿದ್ದ. 1995ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. 2002ರಲ್ಲಿ ತನಗೆ ಎರಡನೇ ಮಗು ಹುಟ್ಟಿದ ಕಾರಣಕ್ಕೆ ಎರಡನೇ ಬಾರಿಗೆ ಪೆರೋಲ್ ಪಡೆದು ಹೊರಬಂದಿದ್ದ ರಾಕೇಶ್ ಬಳಿಕ ಜೈಲಿಗೆ ವಾಪಸ್ ಆಗಿರಲಿಲ್ಲ.

'ಆರಂಭದಲ್ಲಿ ತಾನು ನಂದಲಾಲ್ ಎಂದು ಹೇಳಿ ರಾಕೇಶ್ ಪೊಲೀಸರಿಗೆ ಮೋಸ ಮಾಡಲು ಯತ್ನಿಸಿದ್ದ. ತೀವ್ರ ವಿಚಾರಣೆಯ ಬಳಿಕ ತಪ್ಪನ್ನು ಒಪ್ಪಿಕೊಂಡಿದ್ದಾನೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ(ವಿದ್ಯುತ್), 16ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ ಜಿ ರಸ್ತೆ, ಬೆಂಗಳೂರು–560001

ನಂ. ಬಿಸಿಸಿಸಿ/ಕಾಅ/ವಿದ್ಯುತ್/ಪಿಆರ್/57/2026–27 ದಿನಾಂಕ : 20.05.2026

ತಿದ್ದುಪಡಿ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ವಿಷಯ: ಕಾರ್ಯಕ್ರಮಗಳ ಟೆಂಡರ್ ಕಾರ್ಯಸೂಚಿ ಬದಲಾವಣೆಗೆ ಸಂಬಂಧಿಸಿದ ತಿದ್ದುಪಡಿ.

ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: BCCC/EE/ELE/TEND/01/2026-27 ದಿನಾಂಕ: 12.05.2026.

ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: BCCC/EE/ELE/TEND/01/2026-27 ದಿನಾಂಕ: 12.05.2026 ರ ಉಲ್ಲೇಖದೊಂದಿಗೆ, ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಪ್ರಕ್ರಿಯೆಯ ಕಾರ್ಯಕ್ರಮಗಳ ಟೆಂಡರ್ ಕಾರ್ಯಸೂಚಿಯನ್ನು ಈ ಕೆಳಗಿನಂತೆ ಮಾರ್ಪಡಿಸಲಾಗಿದೆ. ಉಳಿದ ಎಲ್ಲಾ ಷರತ್ತುಗಳು ಬದಲಾಗದೆ ಉಳಿದಿವೆ.

ಕ್ರ. ಸಂ.	ಮಾರ್ಪಡಿಸಿರುವ ದಿನಾಂಕ
1.	ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ ದಿನಾಂಕ ಮತ್ತು ಸಮಯ : **25.05.2026 ರಿಂದ 16.30 ಗಂಟೆಯೊಳಗೆ**
2.	ಸ್ಪಷ್ಟೀಕರಣವನ್ನು ಸಲ್ಲಿಸಲು ಕೊನೆಯ ದಿನಾಂಕ: **29.05.2026 ರಂದು ಸಂಜೆ 16.00 ಗಂಟೆಯೊಳಗೆ.**
3.	ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ: **30.05.2026 ರಂದು ಬೆಳಿಗ್ಗೆ 11.30 ಕ್ಕೆ** ಕಾರ್ಯಪಾಲಕ ಅಭಿಯಂತರರವರ ಕಛೇರಿ, (ವಿದ್ಯುತ್), 16ನೇ ಮಹಡಿ, ಪಿಯುಬಿ, ಎಂ ಜಿ ರಸ್ತೆ, ಬೆಂಗಳೂರು–560075.
4.	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿಪಿ) ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **10.06.2026 ರಂದು ಮಧ್ಯಾಹ್ನ 15.00 ಗಂಟೆಯೊಳಗೆ.**
5.	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ **11.06.2026 ರಂದು 16.00 ಗಂಟೆಗೆ.**
6.	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ವಾಣಿಜ್ಯ ಬಿಡ್ (ಸಾಧ್ಯವಾದರೆ) **15.06.2026.**

ಸಹಿ/– ಕಾರ್ಯಪಾಲಕ ಅಭಿಯಂತರರು, (ವಿದ್ಯುತ್), ಬೆಂ.ಕೇಂ.ನ.ಪಾ

ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.
ಇ-ಮೇಲ್: dssavangere@gmail.com

ಸಂ. ಚಿಜಿಆ/ಜಿಎನ್‌ಎಲ್(3)/08/2026-27 ದಿನಾಂಕ: 16.05.2026

ಟೆಂಡರ್ ಪ್ರಕಟಣೆ

ಜಿಲ್ಲಾ ಆಸ್ಪತ್ರೆ, ದಾವಣಗೆರೆ ಇಲ್ಲಿಗೆ ಅಗತ್ಯವಿರುವ ಹೊರಗುತ್ತಿಗೆ ಆಧಾರದ ಮೇಲೆ ''ನಾನ್ ಕ್ಲಿನಿಕಲ್'' ಮತ್ತು ಗ್ರೂಪ್ ''ಡಿ'' ಸಿಬ್ಬಂದಿಗಳು, ಟ್ರಾಮಾಕೇರ್ ವಿಭಾಗಕ್ಕೆ ಅರೆ ವೈದ್ಯಕೀಯ ಸಿಬ್ಬಂದಿಗಳು ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ವೈದ್ಯೇತರ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರ			
1.	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	CGH/GNL(3)/08/2026-27 Dated: 16-05-2026	CGH/GNL(3)/09/2026-27 Dated: 16-05-2026	CGH/GNL(3)/10/2026-27 Dated: 16-05-2026
2.	ಟೆಂಡರ್ ಇಟ್ಟ ಮೊತ್ತ	7.43 ಕೋಟಿಗಳು	59 ಲಕ್ಷಗಳು	75 ಲಕ್ಷಗಳು
3.	ಆನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ ಮತ್ತು ಡೆಂಡರ್‌ಅನ್ನು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ	ದಿ: 16-05-2026ರ ಬೆಳಗ್ಗೆ 11.00 ಗಂಟೆಯಿಂದ, ದಿ:16.06.2026 ರ ಅಪರಾಹ್ನ 4.30 ಗಂಟೆಯವರೆಗೆ.	ದಿ: 16-05-2026ರ ಬೆಳಗ್ಗೆ 11.00 ಗಂಟೆಯಿಂದ, ದಿ: 02.06.2026 ರ ಅಪರಾಹ್ನ 4.30 ಗಂಟೆಯವರೆಗೆ.	ದಿ: 16-05-2026ರ ಬೆಳಗ್ಗೆ 11.00 ಗಂಟೆಯಿಂದ, ದಿ: 02.06.2026 ರ ಅಪರಾಹ್ನ 4.30 ಗಂಟೆಯವರೆಗೆ.
4.	ಆಕ್ಷೇಪಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ದಿನಾಂಕ	ದಿನಾಂಕ: 30-05-2026	ದಿನಾಂಕ: 25-05-2026	ದಿನಾಂಕ: 25-05-2026
5.	ಪೂರ್ವ ಬಿಡ್ ಸಭೆ ದಿನಾಂಕ	ದಿ: 04-06-2026	ದಿ: 27-05-2026ರ ಬೆಳಗ್ಗೆ 11.00 ಗಂಟೆಗೆ	ದಿ: 27-05-2026ರ ಬೆಳಗ್ಗೆ 11.00 ಗಂಟೆಗೆ
6.	ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ	ದಿ: 18-06-2026	ದಿ: 04-06-2026ರ ಬೆಳಗ್ಗೆ 11.00 ಗಂಟೆಗೆ	ದಿ: 04-06-2026ರ ಬೆಳಗ್ಗೆ 11.00 ಗಂಟೆಗೆ
7.	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇಎಂಡಿ ಮೊತ್ತ @5%	37.15 ಲಕ್ಷಗಳು	2.95 ಲಕ್ಷಗಳು	3.75 ಲಕ್ಷಗಳು

DIPR/DVG/DISHA/117/2026-27

ಅಧೀಕ್ಷಕರು/ಜಿಲ್ಲಾ ಶಸ್ತ್ರ ಚಿಕಿತ್ಸಕರು,
ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಅಸಂ/ಟೆಂಡರ್/ಸಿಆರ್–01/2025–26 ದಿನಾಂಕ: 18.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಕಾಲ್–2)
(ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ)

2026–27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ, ಮಾದರಿಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ಮಾನ್ಸೂನ್ ನೆಡುತೋಪು ರಚನೆ ಹಾಗೂ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026–27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್–2 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:03.06.2026 ರ ಸಂಜೆ 4.00 ಗಂಟೆಯವರೆಗೆ 'ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ಹೆಚ್ಚಿನ ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/88/05/257

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.

ಸಂಖ್ಯೆ:ಲೋಇ/ಬಾವಿ/ಪಿಬಿ/ಕೆಡಬ್ಲು/2026–27/00682 ದಿನಾಂಕ: 19–05–2026

ಅವಧಿ ವಿಸ್ತರಣೆ ಪ್ರಕಟಣೆ:–

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–2 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟೆ ವಿಭಾಗದ ಅಡಿಯಲ್ಲಿಯ: ಟೆಂಡರ ಪ್ರಕಟಣೆ ಸಂ:00456 ದಿನಾಂಕ : 07–05–2026 ರಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಟೆಂಡರ ಅವಧಿ ವಿಸ್ತರಣೆ ಮಾಡಲಾಗಿದೆ.

ವರ್ಕ ಇಂಡೆಂಟ್ ನಂ: ಸಾಮಾನ್ಯ: 33734 Call–2
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ. 100.00 ಲಕ್ಷಗಳವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.
ಅ) ಪ್ರೀ ಬಿಡ್ ಮೀಟಿಂಗ್ 21–05–2026 ರಂದು ಬೆಳಿಗ್ಗೆ 11–30 ಘಂಟೆಯವರೆಗೆ, ಬ) ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ: 22–05–2026 ರಂದು ಸಂಜೆ 5–30 ಘಂಟೆಯವರೆಗೆ, ಕ) ಟೆಂಡರ ಸ್ವೀಕರಿಸುವ ದಿನಾಂಕ: 27–05–2026 ರಂದು ಸಂಜೆ 4–00 ಘಂಟೆಯವರೆಗೆ, ಡ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29–05–2026 ರಂದು ಸಂಜೆ 4.30 ಘಂಟೆಯವರೆಗೆ, ಚ) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30–05–2026 ರಂದು ಸಂಜೆ 4.30 ಘಂಟೆಯವರೆಗೆ

–ಃ ಟೆಂಡರ ಪ್ರಕಟಣೆಃ–

ವರ್ಕ ಇಂಡೆಂಟ್ ನಂ: ಸಾಮಾನ್ಯ: 32589, 34543
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ. 100.00 ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.
ಅ)ಪ್ರೀ ಬಿಡ್ ಮೀಟಿಂಗ್ 30–05–2026 ರಂದು ಬೆಳಿಗ್ಗೆ 11–30 ಘಂಟೆಯವರೆಗೆ, ಬ) ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ: 01–06–2026 ರಂದು ಸಂಜೆ 5–30 ಘಂಟೆಯವರೆಗೆ, ಕ) ಟೆಂಡರ ಸ್ವೀಕರಿಸುವ ದಿನಾಂಕ: 06–06–2026 ರಂದು ಸಂಜೆ 4–00 ಘಂಟೆಯವರೆಗೆ, ಡ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:08–06–2026 ರಂದು ಸಂಜೆ 4.30 ಘಂಟೆಯವರೆಗೆ ಚ) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09–06–2026 ರಂದು ಸಂಜೆ 4.30 ಘಂಟೆಯವರೆಗೆ
ಈ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.

DIPR/BGK/RO-NO-57/KSMCA/2026-27

ಕರ್ನಾಟಕ ಸರ್ಕಾರ
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ–577 201
ಫೋನ್: 08182 229933/ 264199, ಫ್ಯಾಕ್ಸ್ : 08182 264100,
www.sims-shimoga.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

No:SIMS/UC/Tender/2026-27 ದಿನಾಂಕ: 18.05.2026

ಈ ಕೆಳಗಿನ ಸೇವಾ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್ ಲೈನ್ ಮುಖಾಂತರ ಆಹ್ವಾನಿಸಲಾಗಿದೆ.

Sl NO	Tender No. & Date	Name of the Item	Publish, Duration, End, Date and time.
1	No: SIMS/Tender/Radiology/ 1452964/2026-27 Dated 16/05/2026	Re-Tender for Tele reporting Service of CT & MRI Scans To Radiology Department Sims	From: 18-05-2026 to 02-06-2026 at 5.00 PM.
2	No: SIMS/Tender/Radiology/ 1452964/2026-27 Dated 16/05/2026	Re-Tender for the Supply of Equipment spares To Workshop Department Sims	From: 18-05-2026 to 02-06-2026 at 5.00 PM.
3	No: SIMS/MGPS/UC/2026-27/ 2094196 Dated 16/05/2026	Re-Tender for the Maintenance of Medical Gas pipeline Systems & Others to SIMS	From: 19-05-2026 to 03-06-2026 at 5.00 PM.
4	No: SIMS/U.C/Pest Control/2026-27 /2084429 Dated 16/05/2026	Re-Tender for the Pest Control Services At Teaching Mc. Gann Hospital SIMS Shivamogga	From: 19-05-2026 to 03-06-2026 at 5.00 PM.
5	No: SIMS/TNDR/Vehicle Parking /2026-27/1924377 Dated 16/05/2026	Re-Tender for Parking Service To SIMS Campus.	From: 19-05-2026 to 03-06-2026 at 5.00 PM.
6	No: SIMS/PRCU/TNDR/28/2026-27/ PSTR-SIMS-SMG/2169308 Dated 18/05/2026	Tender for the Purchase of Printing and Stationary Items To SIMS	From: 01-06-2026 to 15-06-2026 at 5.00 PM.
7	No: SIMS/ACE/MIS/13/2026-27/PSTR-SIMS-SMG Dated 18/05/2026	Tender for the Purchase of VRDL Consumables, Reagents Kits & Chemicals To SIMS	From: 27-06-2026 to 11-06-2026 at 5.00 PM.

ಆನ್ ಲೈನ್‌ನಲ್ಲಿ ಬಿಡ್ ದಾಖಲೆಗಳನ್ನು ವೆಬ್ ಸೈಟ್ http://kppp.karnataka.gov.in ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ತೆರಯುವ ದಿನಾಂಕವನ್ನು ಟೆಂಡರ್ ಪುಸ್ತಕದಲ್ಲಿ ತಿಳಿಸಲಾಗುವುದು. ಟೆಂಡರ್ ಸ್ವೀಕ–ರಿಸುವ ಪ್ರಾಧಿಕಾರವು, ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ/ ರದ್ದುಪಡಿಸುವ ಹಕ್ಕನ್ನು ಕಾಯ್ದಿ–ರಿಸಿಕೊಂಡಿರುತ್ತದೆ.

ಸಹಿ/– ನಿರ್ದೇಶಕರು/ಡೀನ್
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.81-05/ಝೇಂಕಾರ್/2026-27

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಐ.ಎಫ್‌.ಟಿ ಸಂಖ್ಯೆ 04/2026–27 ದಿನಾಂಕ: 18.05.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಒಟ್ಟು 6 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಧಿಸೂಚನೆಯಂತೆ ಕ್ರಮ ಸಂಖ್ಯೆ 1 ರಿಂದ 4, ದಿ: 18.05.2026 ರಿಂದ ಹಾಗೂ ಕ್ರಮ ಸಂಖ್ಯೆ 5 ರಿಂದ 6 ದಿ: 21.05.2026 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಟ 161.18 ಲಕ್ಷಗಳು ಮತ್ತು ಕನಿಷ್ಟ 12.18 ಲಕ್ಷಗಳು, ಗರಿಷ್ಟ ಇ.ಎಂ.ಡಿ ರೂ.2,41,800/– ಮತ್ತು ಕನಿಷ್ಟ ರೂ.30,450/–, ಗುತ್ತಿಗೆ ಕಾಲಾವಧಿ ಗರಿಷ್ಟ 18–ತಿಂಗಳು ಮತ್ತು ಕನಿಷ್ಟ 3–ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ಕ್ರಮ ಸಂಖ್ಯೆ 1 ರಿಂದ 4, ದಿ: 01.06.2026 ರಿಂದ ಹಾಗೂ ಕ್ರಮ ಸಂಖ್ಯೆ 5 ರಿಂದ 6 ದಿ: 05.07.2026 ರಂದು 16.00 ಗಂಟೆವರೆಗೆ ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ವಿಶೇಷ ವಿಭಾಗ, ಹುಣಸೂರು

DIPR/DDMYS/203KSMCA/149/2026-27

ಬಂದ್‌ಗೆ ರಾಜ್ಯದಾದ್ಯಂತ ಮಿಶ್ರ ಪ್ರತಿಕ್ರಿಯೆ

ಆನ್‌ಲೈನ್‌ನಲ್ಲಿ ಔಷಧಗಳ ಮಾರಾಟ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆಸ್ಪತ್ರೆ ಆವರಣದಲ್ಲಿದ್ದ ಔಷಧ ಮಳಿಗೆಗಳು ಎಂದಿನಂತೆ ಕಾರ್ಯ
- ಕಪ್ಪುಪಟ್ಟಿ ಧರಿಸಿ ಬಂದ್‌ಗೆ ಬೆಂಬಲ

ಬೆಂಗಳೂರು: ಆನ್‌ಲೈನ್‌ನಲ್ಲಿ ಔಷಧಗಳ ಮಾರಾಟ ಹಾಗೂ ಅಸಹಜ ರಿಯಾಯಿತಿಗಳ ವಿರುದ್ಧ ಔಷಧಿ ವ್ಯಾಪಾರಿಗಳ ಸಂಘ ಬುಧವಾರ ಕರೆ ನೀಡಿದ್ದ ‘ರಾಷ್ಟ್ರವ್ಯಾಪಿ ಬಂದ್’ಗೆ ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅಪೊಲೊ, ಮೆಡ್‌ಪ್ಲಸ್‌ನಂತಹ ಔಷಧ ಕಂಪನಿಗಳು, ಪ್ರಧಾನಮಂತ್ರಿ ಜನೌಷಧ ಕೇಂದ್ರಗಳು, ಎಲ್ಲ ದೊಡ್ಡ ಆಸ್ಪತ್ರೆಗಳಲ್ಲಿಯ ಔಷಧ ಅಂಗಡಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಬೆಂಗಳೂರು ನಗರ: ಮುಷ್ಕರಕ್ಕೆ ನಗರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬಹುತೇಕ ಮಳಿಗೆಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ಕಪ್ಪುಪಟ್ಟಿ ಧರಿಸಿ ಕಾರ್ಯ ನಿರ್ವಹಿಸುವ ಮೂಲಕ ಕೆಲವರು ನೈತಿಕ ಬೆಂಬಲ ವ್ಯಕ್ತಪಡಿಸಿದರು. ಇನ್ನೂ ಕೆಲವರು ಔಷಧ ವ್ಯಾಪಾರ ನಡೆಸಿದರು.

ಕರ್ನಾಟಕ ಫಾರ್ಮಾ ರಿಟೇಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಬಂದ್‌ಗೆ ನೈತಿಕ ಬೆಂಬಲ ವ್ಯಕ್ತಪಡಿಸಿ, ಕಪ್ಪುಪಟ್ಟಿ ಧರಿಸಿ ಕಾರ್ಯನಿರ್ವಹಿಸುವಂತೆ ಔಷಧ ವ್ಯಾಪಾರಿಗಳಿಗೆ ಕರೆ ನೀಡಿತ್ತು. ಬೆಂಗಳೂರು ಫಾರ್ಮಾ ರಿಟೇಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಫೋರಂ ಔಷಧ ಮಳಿಗೆಗಳನ್ನು ಬಂದ್ ಮಾಡುವಂತೆ ವ್ಯಾಪಾರಿಗಳಿಗೆ ಸೂಚಿಸಿತ್ತು. ನಗರದ ಕೆಲ ಸಣ್ಣ ಔಷಧ ಮಳಿಗೆಗಳು ಮಾತ್ರ ಬಾಗಿಲು ಮುಚ್ಚಿ, ಬಂದ್‌ಗೆ ಬೆಂಬಲ ಸೂಚಿಸಿದವು.

ಶಿವಮೊಗ್ಗ/ದಾವಣಗೆರೆ/ಚಿತ್ರದುರ್ಗ: ಮುಷ್ಕರವನ್ನು ಬೆಂಬಲಿಸಿ ಶಿವಮೊಗ್ಗ ನಗರದಲ್ಲಿ ಔಷಧ ವ್ಯಾಪಾರಿಗಳು ಅಂಗಡಿ ಬಂದ್ ಮಾಡಿ ಬೆಂಬಲ ಸೂಚಿಸಿದರೆ, ದಾವಣಗೆರೆಯಲ್ಲಿ ವ್ಯಾಪಾರಸ್ಥರು ಕೈಗೆ ಕಪ್ಪುಪಟ್ಟಿ ಕಟ್ಟಿಕೊಂಡು ಅಂಗಡಿಗಳಲ್ಲಿ ವ್ಯಾಪಾರ ಮಾಡುತ್ತಾ ಮುಷ್ಕರಕ್ಕೆ ನೈತಿಕ ಬೆಂಬಲ ವ್ಯಕ್ತಪಡಿಸಿದರು.

ದಾವಣಗೆರೆ ಜಿಲ್ಲೆಯಾದ್ಯಂತ ಕೆಲವು ಅಂಗಡಿಗಳಷ್ಟೇ ಬಾಗಿಲು ಮುಚ್ಚಿದ್ದವು. ಔಷಧ ಅಂಗಡಿ ಮಾಲೀಕರ ಸಂಘದ ಪದಾಧಿಕಾರಿಗಳು ಅಲ್ಲಲ್ಲಿ ಪ್ರತಿಭಟನೆ ನಡೆಸಿದರು.ಚಿತ್ರದುರ್ಗ ಜಿಲ್ಲೆಯಲ್ಲಿ ಬಂದ್‌ಗೆ ಬೆಂಬಲ ವ್ಯಕ್ತವಾಗಿಲ್ಲ.

ಮಂಗಳೂರು ವರದಿ: ಬಂದ್ ಪ್ರಯುಕ್ತ ಬುಧವಾರ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬಹುತೇಕ ಔಷಧ ಅಂಗಡಿಗಳು ಬಾಗಿಲು ಮುಚ್ಚಿದ್ದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 1,100 ಔಷಧ ಅಂಗಡಿಗಳು ಬಂದ್ ಆಗಿದ್ದವು. ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್ ಅಸೋಸಿಯೇಷನ್ ಜಿಲ್ಲಾ ಘಟಕದ ಪದಾಧಿಕಾರಿಗಳು ಜಿಲ್ಲಾಧಿಕಾರಿ ದರ್ಶನ್ ಎಚ್‌.ವಿ ಅವರಿಗೆ ಮನವಿ ಸಲ್ಲಿಸಿದರು.

ಹುಬ್ಬಳ್ಳಿ ವರದಿ: ಕಿತ್ತೂರು ಕರ್ನಾಟಕ ವ್ಯಾಪ್ತಿಯ ಧಾರವಾಡ, ಹಾವೇರಿ, ಉತ್ತರ ಕನ್ನಡ ಸೇರಿ ಬಹುತೇಕ ಜಿಲ್ಲೆಗಳಲ್ಲಿ ಔಷಧ ವ್ಯಾಪಾರಸ್ಥರು ಪ್ರತಿಭಟನೆ ನಡೆಸಿದರು. ಜಿಲ್ಲಾ ಕೇಂದ್ರಗಳಲ್ಲಿ ಅಲ್ಲದೇ, ತಾಲ್ಲೂಕು ಕೇಂದ್ರಗಳಲ್ಲೂ ಅಂಗಡಿಗಳು ಮುಚ್ಚಿದ್ದವು.

ಕೆಲ ಕಡೆ ಅವರು ಕೈಗೆ ಕಪ್ಪು ಪಟ್ಟಿ ಧರಿಸಿ ವಹಿವಾಟು ನಡೆಸಿದರು. ಇನ್ನೂ ಕೆಲವೆಡೆ ಮೆರವಣಿಗೆ ಕೈಗೊಂಡು ತಾಲ್ಲೂಕು ಮತ್ತು ಜಿಲ್ಲಾಡಳಿತದ ಅಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿದರು. ವಿಜಯನಗರ ಜಿಲ್ಲೆಯಲ್ಲಿ ಶೇ 90ಕ್ಕಿಂತ ಅಧಿಕ ಔಷಧ ಅಂಗಡಿಗಳು ಮುಚ್ಚಿದ್ದವು. ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 400ಕ್ಕೂ ಹೆಚ್ಚು ಔಷಧ ಅಂಗಡಿಗಳು ಬಂದ್ ಆಗಿದ್ದವು. ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ ಸೇರಿ ಎರಡು ಸಾವಿರಕ್ಕೂ ಹೆಚ್ಚು ಔಷಧ ಅಂಗಡಿಗಳು ಬಂದ್ ಆಗಿದ್ದವು. ಬಾಗಲಕೋಟೆ ಜಿಲ್ಲಾ ಆಸ್ಪತ್ರೆ ಆವರಣದಲ್ಲಿನ ಜನೌಷಧಿ ಕೇಂದ್ರವೂ ಬಂದ್ ಆಗಿತ್ತು. ಚಿಕಿತ್ಸೆ ಪಡೆದ ರೋಗಿಗಳು ಔಷಧಕ್ಕಾಗಿ ಪರದಾಡಿದರು.

ಮೈಸೂರು ವರದಿ: ಮೈಸೂರು ಭಾಗದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಕೊಡಗು ಜಿಲ್ಲೆಯಲ್ಲಿ ಮೆಡಿಕಲ್ ಸ್ಟೋರ್‌ಗಳು ಸಂಪೂರ್ಣ ಬಂದ್ ಆಗಿದ್ದವು. ಮೈಸೂರು ನಗರದಲ್ಲಿ ಚಿಲ್ಲರೆ ಔಷಧ ವ್ಯಾಪಾರಿಗಳ ಸಂಘದವರು ಕೈಗೆ ಕಪ್ಪುಪಟ್ಟಿ ಕಟ್ಟಿಕೊಂಡು ಬೆಂಬಲ ನೀಡಿದರು. ಜಿಲ್ಲಾ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ವೆಲ್‌ಫೇರ್ ಅಸೋಸಿಯೇಷನ್ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ, ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಹಾಸನ ಜಿಲ್ಲೆಯಾದ್ಯಂತ (ಹೊಳೆನರಸೀಪುರ ಹೊರತುಪಡಿಸಿ) ಹಾಗೂ ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ಔಷಧ ಅಂಗಡಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಕೊಪ್ಪಳದಲ್ಲಿ ಬಾಗಿಲು ತೆರೆಯದ ಔಷಧ ಅಂಗಡಿಯೊಂದ ಮುಂದೆ ಮಗು ಎತ್ತಿಕೊಂಡು ನಿಂತಿದ್ದ ಮಹಿಳೆ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ರೋಗಿಗಳ ಪರದಾಟ

ಕಲಬುರಗಿ: ಮುಷ್ಕರಕ್ಕೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಬುಧವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಬಹುತೇಕ ಔಷಧ ಅಂಗಡಿಗಳು ಬಾಗಿಲು ಮುಚ್ಚಿದ್ದವು. ಸಣ್ಣ–ಪುಟ್ಟ ಕಾಯಿಲೆಗಳಿಂದ ಬಳಲುತ್ತಿದ್ದ ರೋಗಿಗಳು ಔಷಧಕ್ಕಾಗಿ ತೀವ್ರ ಪರದಾಡಿದರು. ಆಸ್ಪತ್ರೆಗಳ ಸೇವೆ ಅಬಾಧಿತವಾಗಿತ್ತು. ಒಳರೋಗಿಗಳಿಗೆ ತೊಂದರೆ ಆಗಿಲ್ಲ. ಆದರೆ, ಹೊರರೋಗಿಗಳ ವಿಭಾಗದ ರೋಗಿಗಳು ಔಷಧ ಸಿಗದೆ ಪರದಾಡಿದರು.

‘ವೈದ್ಯಕೀಯ ಕಾಲೇಜು ಆಸ್ಪತ್ರೆಗಳು, ಕಾರ್ಪೊರೇಟ್ ಔಷಧ ಅಂಗಡಿಗಳು ಬಿಟ್ಟು ಎಲ್ಲ ಔಷಧ ಅಂಗಡಿಗಳು ಬಾಗಿಲು ಮುಚ್ಚಿ ಮುಷ್ಕರದಲ್ಲಿ ಪಾಲ್ಗೊಂಡಿದ್ದವು’ ಎಂದು ಕಲಬುರಗಿ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ರವೀಂದ್ರ ಜೋಶಿ ತಿಳಿಸಿದರು.

ರಾಯಚೂರಿನಲ್ಲಿ ಔಷಧ ಅಂಗಡಿಗಳ ಮಾಲೀಕರು ಪ್ರತಿಭಟನಾ ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದರು. ಯಾದಗಿರಿಯಲ್ಲಿ ಕೆಲವು ಔಷಧ ಅಂಗಡಿಗಳಲ್ಲಿ ಕೈಗೆ ಕಪ್ಪುಪಟ್ಟಿ ಕಟ್ಟಿಕೊಂಡು ನೈತಿಕ ಬೆಂಬಲ ವ್ಯಕ್ತಪಡಿಸಿದರು.

ಗ್ರಾಮೀಣ ಭಾಗದಲ್ಲಿ ಮುಚ್ಚಿದ ಅಂಗಡಿ; ತೀವ್ರ ತೊಂದರೆ

ತುಮಕೂರು/ಕೋಲಾರ/ರಾಮನಗರ/ಬೆಂ.ಗ್ರಾಮಾಂತರ: ಮೂರು ಜಿಲ್ಲೆಗಳಲ್ಲೂ ಔಷಧ ವ್ಯಾಪಾರಿಗಳ ಸಂಘಗಳು ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದವು.

ತುಮಕೂರು ಜಿಲ್ಲೆಯಲ್ಲಿ 1,200ಕ್ಕೂ ಹೆಚ್ಚು ಔಷಧ ಮಾರಾಟ ಮಳಿಗೆಗಳಿದ್ದು ಬಹುತೇಕ ಔಷಧ ವ್ಯಾಪಾರಿಗಳು ಅಂಗಡಿ ಮುಚ್ಚಿ ಮುಷ್ಕರದಲ್ಲಿ ಭಾಗವಹಿಸಿದ್ದರು. ಕೋಲಾರ ಜಿಲ್ಲೆಯಲ್ಲಿ 800ಕ್ಕೂ ಹೆಚ್ಚು ಔಷಧ ಅಂಗಡಿಗಳಿದ್ದು ಪ್ರಮುಖ ಮಳಿಗೆಗಳು ಬಂದ್‌ಗೆ ಸಹಕಾರ ನೀಡಿದವು. ಬಂದ್‌ನಿಂದಾಗಿ ಗ್ರಾಮೀಣ ಪ್ರದೇಶದ ಕೆಲ ಭಾಗದಲ್ಲಿ ರೋಗಿಗಳಿಗೆ ಸ್ವಲ್ಪ ತೊಂದರೆ ಉಂಟಾಯಿತು. ನಗರಕ್ಕೆ ಬಂದು ಜೀವರಕ್ಷಕ ಔಷಧ ಕೊಂಡೊಯ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ತಾಲ್ಲೂಕಿನಲ್ಲಿ ಬೆಳಿಗ್ಗೆ 11ರವರಗೆ ಬಂದ್ ಮಾಡಲಾಗಿತ್ತು. ಬಳಿಕ ಅಂಗಡಿ ತೆರೆಯಲಾಯಿತು. ನರ್ಸಿಂಗ್ ಹೋಂಗಳಲ್ಲಿರುವ ಫಾರ್ಮಸಿ ವಿಭಾಗ ಎಂದಿನಂತೆ ಕಾರ್ಯನಿರ್ವಹಿಸಿದವು. ಆನೇಕಲ್ ತಾಲ್ಲೂಕಿನಲ್ಲಿ ಔಷಧ ಅಂಗಡಿ ಮಾಲೀಕರು ಮತ್ತು ಸಿಬ್ಬಂದಿ ಕಪ್ಪುಪಟ್ಟಿ ಧರಿಸಿ ಕೆಲಸ ಮಾಡಿದರು.

ಸುದ್ದಿ 2 ನಿಮಿಷ

24 ಅಕ್ರಮ ಮರಳು ಅಡ್ಡೆಗಳ ಮೇಲೆ ‘ಲೋಕಾ’ ದಾಳಿ

ಬಾಗಲಕೋಟೆ: ಅಕ್ರಮ ಮರಳು ಗಣಿಗಾರಿಕೆ ಹಿನ್ನೆಲೆಯಲ್ಲಿ ಜಿಲ್ಲೆಯ 24 ಸ್ಥಳಗಳ ಮೇಲೆ ಬುಧವಾರ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿತು.

ಇದಕ್ಕೆ ಪೂರಕವಾಗಿ ಬೆಂಗಳೂರಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕ, ಬಾಗಲಕೋಟೆಯ ಉಪನಿರ್ದೇಶಕ, ಜಿಲ್ಲಾಧಿಕಾರಿ ಮತ್ತು ಐವರು ತಹಶೀಲ್ದಾರ್‌ಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿತು.

ಜಿಲ್ಲೆಯಲ್ಲಿ ಹರಿದಿರುವ ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿ ದಂಡೆಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ಬಂದ ದೂರು ಆಧರಿಸಿ ಹುನಗುಂದ, ಇಳಕಲ್, ಮುಧೋಳ ಹಾಗೂ ಬಾದಾಮಿ ತಾಲ್ಲೂಕುಗಳಲ್ಲಿ ದಾಳಿ ನಡೆದಿದೆ.

ಪರಿಸರ ಕಾಯ್ದೆ ಉಲ್ಲಂಘಿಸಿ ಯಂತ್ರೋಪಕರಣಗಳನ್ನು ಬಳಸಿ ನದಿ ದಡದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ಮಾಡುತ್ತಿರುವುದು ದಾಳಿ ವೇಳೆ ಕಂಡುಬಂದಿದೆ.

65 ಟಿಪ್ಪರ್, 18 ಹಿಟಾಚಿ, 14 ಯಾಂತ್ರೀಕೃತ ದೋಣಿಗಳು, ಆರು ಟ್ರ್ಯಾಕ್ಟರ್ ಹಾಗೂ ಒಂದು ಜೆಸಿಬಿ ಬಳಸುತ್ತಿರುವುದು ಪತ್ತೆ ಆಗಿದೆ. ಬಾಗಲಕೋಟೆ ಸೇರಿದಂತೆ ಅಕ್ಕ–ಪಕ್ಕದ ಜಿಲ್ಲೆಗಳ ಲೋಕಾಯುಕ್ತದ 28 ಅಧಿಕಾರಿಗಳು, 90 ಸಿಬ್ಬಂದಿ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಬಿರುಗಾಳಿ–ಮಳೆ: ಬೆಳೆ, ಮನೆಗಳಿಗೆ ಹಾನಿ

ಕಲಬುರಗಿ: ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮಂಗಳವಾರ ಸುರಿದ ಭಾರಿ ಮಳೆ–ಬಿರುಗಾಳಿಗೆ ತೋಟಗಾರಿಕೆ ಬೆಳೆಗಳು ನೆಲಕಚ್ಚಿವೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಅಕಾಲಿಕ ಮಳೆಗೆ ರೈತರು ಕಂಗೆಟ್ಟಿದ್ದಾರೆ. ದೇಗಲಮಡಿ ಗ್ರಾಮದಲ್ಲಿ ಸಾವಿರಾರು ಬಾಳೆ ಗಿಡಗಳು ಧರೆಗುರುಳಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ. ಸೋಮಶೇಖರ ಗೌಡನೂರು ಅವರಿಗೆ ಸೇರಿದ 3,500 ಗಿಡಗಳು, ರಾಜೇಂದ್ರ ಬೀರಪ್ಪ ಅವರ 4,000 ಗಿಡಗಳು ಸೇರಿದಂತೆ ದೇಗಲಮಡಿಯಲ್ಲಿ ಐದಾರು ರೈತರ ತೋಟಗಳಲ್ಲಿ ಬಾಳೆ ಬೆಳೆ ದೊಡ್ಡ ಪ್ರಮಾಣದಲ್ಲಿ ನೆಲಕಚ್ಚಿದೆ. ಸುಮಾರು 12 ಎಕರೆ ಬೆಳೆ ಸಂಪೂರ್ಣ ಹಾನಿಯಾದರೆ, ಭಾಗಶಃ ಹಾನಿಯಾದ ಬೆಳೆ ಪ್ರಮಾಣ ಹೆಚ್ಚಾಗಿದೆ.

ಭಾರಿ ಬಿರುಗಾಳಿ ಮಳೆಗೆ ಚಿಂಚೋಳಿಯ ತಾಲ್ಲೂಕಿನ ಮೊಗದಂಪುರದಲ್ಲಿ ಎರಡು ಮನೆಗಳ ಜಿಂಕ್ ಶೀಟ್ ಹಾರಿ ಹೋಗಿವೆ.

ಮಂಗಳವಾರ ರಾತ್ರಿ ಸುರಿದ ಆಲಿಕಲ್ಲು, ಬಿರುಗಾಳಿ ಮಳೆಗೆ ಬೀದರ್ ತಾಲ್ಲೂಕಿನ ಮಂದಕನಳ್ಳಿಯಲ್ಲಿ ಐದು ಎಕರೆ, ಕೊಳಾರ ಗ್ರಾಮದಲ್ಲಿ 1 ಎಕರೆ ಪಪ್ಪಾಯ ಬೆಳೆ ಹಾಳಾಗಿದೆ. ಬೀದರ್ ತಾಲ್ಲೂಕು ವ್ಯಾಪ್ತಿಯಲ್ಲಿ ಒಟ್ಟು 15 ಮನೆಗಳಿಗೆ ಹಾನಿಯಾಗಿದೆ.

ಚಿಟಿಕೆ ಸುದ್ದಿ

ಹೊಯ್ಸಳೇಶ್ವರ: ಉತ್ತರ ದಿಕ್ಕಿಗೆ ಪ್ರವೇಶ ದ್ವಾರ– ವಿರೋಧ

ಹಳೇಬೀಡು (ಹಾಸನ ಜಿಲ್ಲೆ): ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರಿರುವ ಇಲ್ಲಿನ ಹೊಯ್ಸಳೇಶ್ವರ ದೇವಾಲಯದ ಪ್ರವೇಶ ದ್ವಾರವನ್ನು ಉತ್ತರ ದಿಕ್ಕಿನ ಹೊಯ್ಸಳ ವೃತ್ತದ ಕಡೆಗೆ ಬದಲಾಯಿಸಲು ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮುಂದಾಗಿದ್ದು, ಇದಕ್ಕೆ ಸಾರ್ವಜನಿಕ ವಲಯದಿಂದ ವಿರೋಧ ವ್ಯಕ್ತವಾಗಿದೆ.

ಹೊಯ್ಸಳರ ಕಾಲದಲ್ಲಿ ದಕ್ಷಿಣ ದಿಕ್ಕಿನ ಪ್ರವೇಶ ದ್ವಾರದಲ್ಲಿ ರಾಜರು ಹಾಗೂ ಪರಿವಾರದವರು ದೇವಾಲಯಕ್ಕೆ ಬಂದು ಹೋಗುತ್ತಿದ್ದರು. ಪುರಾತನ ಕಾಲದ ರಾಜಮಾರ್ಗದಲ್ಲಿಯೇ ಪ್ರವಾಸಿಗರು ದೇವಾಲಯ ಪ್ರವೇಶಿಸಬೇಕು ಎಂದು ನಾಲ್ಕು ವರ್ಷದ ಹಿಂದೆ ಉತ್ತರದಿಂದ ದಕ್ಷಿಣ ದಿಕ್ಕಿಗೆ ಪ್ರವೇಶ ಬದಲಿಸಲಾಗಿತ್ತು.

ದಿಢೀರನೆ ಪ್ರವೇಶ ದ್ವಾರ ಬದಲಿಸಲು ಮುಂದಾಗಿರುವುದಕ್ಕೆ ಜನರಿಂದ ಅಸಮಾಧಾನ ವ್ಯಕ್ತವಾಗಿದೆ.

ಕನ್ನಡ ಪ್ರಾಧ್ಯಾಪಕರಿಗೆ ಸಿಐಐಎಲ್ ನಿರ್ದೇಶಕ ಸ್ಥಾನ

ಮೈಸೂರು: ಇಲ್ಲಿನ ಭಾರತೀಯ ಭಾಷಾ ಸಂಸ್ಥಾನದ (ಸಿಐಐಎಲ್) ನಿರ್ದೇಶಕರಾಗಿ ಪ್ರೊ.ಬಸವರಾಜ ಕೊಡಗುಂಟಿ ನೇಮಕಗೊಂಡಿದ್ದು, ಅವರು ಕಾರ್ಯಾರಂಭಿಸಿದ್ದಾರೆ.

ಬಸವರಾಜ ಕೊಡಗುಂಟಿ

ರಾಯಚೂರಿನ ಮಸ್ಕಿ ತಾಲ್ಲೂಕಿನ ಕೊಡಗುಂಟಿ ಗ್ರಾಮದ ಇವರು, ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಮೊದಲು ಸಿಐಐಎಲ್‌ನಲ್ಲಿ ಸಂಶೋಧಕ ಹಾಗೂ ದ್ರಾವಿಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಇದೀಗ ಸಿಐಐಎಲ್ ನಿರ್ದೇಶಕರಾಗಿ ಆಯ್ಕೆಯಾದ ಮೊದಲ ಕನ್ನಡ ಪ್ರಾಧ್ಯಾಪಕ ಎನಿಸಿದ್ದಾರೆ.

ಲೆಕ್ಕಪತ್ರ ವಿವಾದ, ಗೊಂದಲ ಪರಿಹರಿಸಲು ಕ್ರಮ

ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡರ ಸಭೆ; ಮುಖಂಡರು–ಭಕ್ತರ ನಡುವೆ ಚಕಮಕಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿಯಲ್ಲಿ ಬುಧವಾರ ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡರ ಸಭೆ ನಡೆಯಿತು

ಹುಬ್ಬಳ್ಳಿ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಲೆಕ್ಕಪತ್ರ ವಿವಾದ ಬಗೆಹರಿಸಲು ಮತ್ತು ಸಮಾಜವನ್ನು ಒಗ್ಗೂಡಿಸಲು ಲಿಂಗಾಯತ ಪಂಚಮಸಾಲಿ ಸಮಾಜದ ಸಮಾನ ಮನಸ್ಕ ಮುಖಂಡರು ನಗರದಲ್ಲಿ ಬುಧವಾರ ಸಭೆ ನಡೆಸಿದರು.

ಸಭೆಯಲ್ಲಿ ವಚನಾನಂದ ಸ್ವಾಮೀಜಿ ಭಕ್ತರು ಮತ್ತು ಗುರುಪೀಠದ ಟ್ರಸ್ಟ್‌ನ ಮುಖಂಡರ ನಡುವೆ ಏರುಧ್ವನಿಯಲ್ಲಿ ಮಾತಿನ ಚಕಮಕಿ ನಡೆಯಿತು ಎಂದು ತಿಳಿದು ಬಂದಿದೆ.

ಹರಿಹರ ಪೀಠ ಮತ್ತು ಕೂಡಲಸಂಗಮ ಪೀಠದವರನ್ನು ಆಹ್ವಾನಿಸಲಾಗಿತ್ತು ಎಂದು ಮುಖಂಡರು ಹೇಳಿದರೂ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್‌ನ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಸೇರಿ, ಕೂಡಲಸಂಗಮ ಪೀಠದ ಪ್ರಮುಖರು ಗೈರಾಗಿದ್ದರು.

ಸಭೆ ಬಳಿಕ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ‘ಹರಿಹರ ಪೀಠದಲ್ಲಿ ಲೆಕ್ಕಪತ್ರ ವಿಷಯದ ಬಗ್ಗೆ ಆರೋಪ, ಪ್ರತ್ಯಾರೋಪ ಕೇಳಿ ಬಂದಿದ್ದವು. ಇದನ್ನು ಬಗೆಹರಿಸಲು ವಚನಾನಂದ ಸ್ವಾಮೀಜಿ ಭಕ್ತರು, ಗುರುಪೀಠದ ಟ್ರಸ್ಟ್ ಪ್ರಮುಖರ ಸಭೆ ನಡೆಸಿ, ಭಿನ್ನಾಭಿಪ್ರಾಯ, ಗೊಂದಲ ನಿವಾರಿಸುವ ಕೆಲಸ ಮಾಡಲಾಗಿದೆ’ ಎಂದರು.

‘ಪಂಚಮಸಾಲಿ ಸಮಾಜದ ಎರಡೇ ಪೀಠಗಳಿವೆ. ಯಾವುದೇ ಹೊಸ ಪೀಠ ಸ್ಥಾಪಿಸುವ ಉದ್ದೇಶ ಇಲ್ಲ. ಈಗ ಇರುವ ಪೀಠಗಳನ್ನು ಸುಧಾರಿಸಲಾಗುವುದು. ಮೊದಲು ಸಮಾಜ ಒಂದಾಗಬೇಕಿದೆ. ಅದಕ್ಕೆ ಸಭೆಗೆ ಸ್ವಾಮೀಜಿಗಳನ್ನು ಆಹ್ವಾನಿಸಿಲ್ಲ. ನಾವು ಹೇಳಿದ್ದನ್ನೇ ಸ್ವಾಮೀಜಿಗಳು ಕೇಳಬೇಕು’ ಎಂದರು.

ಮಾಜಿ ಸಚಿವ ಮುರುಗೇಶ ನಿರಾಣಿ ಮಾತನಾಡಿ, ‘ಸಮಾಜದ ಗುರುಪೀಠಗಳು, ಟ್ರಸ್ಟ್‌ಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿವೆ. ಮೊದಲ ಹಂತದಲ್ಲಿ ಶೇ 75ರಷ್ಟು ಸಮಸ್ಯೆ ಬಗೆಹರಿಸಲಾಗಿದೆ. ಹಂತ ಹಂತವಾಗಿ ಎಲ್ಲ ಸಮಸ್ಯೆ ನಿವಾರಣೆಯಾಗಲಿದೆ. ಲೆಕ್ಕಪತ್ರ ಸಮಸ್ಯೆ ಬಗೆಹರಿಸುವ ಹೊಣೆಯನ್ನು ಬಸನಗೌಡ ಪಾಟೀಲ ಯತ್ನಾಳ ಅವರಿಗೆ ವಹಿಸಲಾಗಿದೆ’ ಎಂದು ಹೇಳಿದರು.

‘ಸಮಾಜದ 80 ಲಕ್ಷ ಜನಸಂಖ್ಯೆಗೆ ಒಂದೇ ಪೀಠ ಇದ್ದರೆ ಎಲ್ಲರಿಗೂ ಒಂದೇ ಕಡೆ ಹೋಗಲು ಸಾಧ್ಯವಿಲ್ಲ. ಹೀಗಾಗಿ ಒಂದು ಮಹಿಳಾ ಪೀಠ ಸೇರಿ ಪಂಚ ಪೀಠಗಳನ್ನು ಮಾಡುವ ಉದ್ದೇಶ ಇದೆ’ ಎಂದರು.

> **ಗುರುಪೀಠಗಳ ಗೊಂದಲ ನಿವಾರಣೆಗೆ, ಸಮನ್ವಯಕ್ಕೆ 10 ಮಂದಿ ರಾಜಕೀಯೇತರ ಮುಖಂಡರ ಸಮಿತಿ ರಚಿಸಲಾಗುವುದು. ಸಮಿತಿಯ ತೀರ್ಮಾನ ಎಲ್ಲರೂ ಒಪ್ಪಬೇಕು ಎಂಬ ನಿರ್ಣಯ ಕೈಗೊಳ್ಳಲಾಗಿದೆ**
> **ಮುರುಗೇಶ ನಿರಾಣಿ,** ಮಾಜಿ ಸಚಿವ

> **ಇನ್ನೂ ನಾಲ್ಕೈದು ಸಭೆ ನಡೆಸಿ ಲೆಕ್ಕಪತ್ರದ ಗೊಂದಲವನ್ನು ಪರಿಹರಿಸಲಾಗುವುದು. ಸಮಾಜದ ಮುಖಂಡರ ಮಾರ್ಗದರ್ಶನದಲ್ಲಿ ಎಲ್ಲರೂ ಒಂದಾಗಿ ಹೋಗಲು ನಿರ್ಧರಿಸಿದ್ದೇವೆ**
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

ಶಾಸಕ ಅರವಿಂದ ಬೆಲ್ಲದ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಸಚಿವ ಸಿ.ಸಿ. ಪಾಟೀಲ, ಸೋಮಣ್ಣ ಬೇವಿನಮರದ ಇದ್ದರು.

ಹಳ್ಳಿಕೇರಿ ಪ್ರಶಸ್ತಿಗೆ ಬಿಸನಳ್ಳಿ ಆಯ್ಕೆ

ಪ್ರಜಾವಾಣಿ ವಾರ್ತೆ

ವಿಜಯಕುಮಾರ ಬಿಸನಳ್ಳಿ

ಹಾವೇರಿ: ತಾಲ್ಲೂಕಿನ ಹೊಸರಿತ್ತಿಯ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಪ್ರತಿಷ್ಠಾನ ನೀಡುವ 2026ನೇ ಸಾಲಿನ ‘ಗುದ್ಲೆಪ್ಪ ಹಳ್ಳಿಕೇರಿ ಸೇವಾ ಗೌರವ ಪ್ರಶಸ್ತಿ’ಗೆ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ ಬಿಸನಳ್ಳಿ ಆಯ್ಕೆಯಾಗಿದ್ದಾರೆ.

‘ಜೂನ್ 6ರಂದು ಹೊಸರಿತ್ತಿಯಲ್ಲಿ ನಡೆಯುವ ಗುದ್ಲೆಪ್ಪ ಹಳ್ಳಿಕೇರಿಯವರ ಜಯಂತ್ಯುತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ’ ಎಂದು ಪ್ರತಿಷ್ಠಾನದ ಸಂಸ್ಥಾಪಕ ಧರ್ಮದರ್ಶಿ ವೀರಣ್ಣ ಚಕ್ಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಅಧ್ಯಕ್ಷರ ಆಯ್ಕೆ ಅಭಿಪ್ರಾಯ ಸಂಗ್ರಹ ಇಂದು

ಪ್ರಜಾವಾಣಿ ವಾರ್ತೆ

ಶಿವಪ್ರಕಾಶ್ ಅವರನ್ನು ಬಿ.ವೈ. ವಿಜಯೇಂದ್ರ ಅವರು ಸ್ವಾಗತಿಸಿದರು. ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಬಿ.ಸಿ. ಪಾಟೀಲ ಜತೆಗಿದ್ದರು

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಕುರಿತು ಅಭಿಪ್ರಾಯ ಸಂಗ್ರಹಿಸಲು ಪಕ್ಷದ ರಾಷ್ಟ್ರೀಯ ಜಂಟಿ ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್ ಅವರು ಬುಧವಾರ ಸಂಜೆ ಬೆಂಗಳೂರಿಗೆ ಬಂದಿದ್ದಾರೆ.

ಗುರುವಾರ ಇಡೀ ದಿನ ಅಭಿಪ್ರಾಯ ಸಂಗ್ರಹಿಸಿ, ಬಳಿಕ ವರದಿಯನ್ನು ಪಕ್ಷದ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ಸಲ್ಲಿಸಲಿದ್ದಾರೆ.

‘ಪಕ್ಷದ ಪ್ರಮುಖ ನಾಯಕರಿಂದ ಶಿವಪ್ರಕಾಶ್ ಅವರು ಪ್ರತ್ಯೇಕವಾಗಿ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಆ ಬಳಿಕ ಪ್ರಮುಖರ ಸಮಿತಿಯ ಅಭಿಪ್ರಾಯವನ್ನೂ ಆಲಿಸಲಿದ್ದಾರೆ. ಇದೇ 23 ಕ್ಕೆ ಬೆಂಗಳೂರಿಗೆ ಬರುವ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ಮುಂಚಿತವಾಗಿಯೇ ಈ ಕುರಿತು ವರದಿ ಸಲ್ಲಿಸಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಎಲ್ಲ ನಾಯಕರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಶಿವಪ್ರಕಾಶ್ ಬಳಿ ಮುಕ್ತವಾಗಿ ಹೇಳಿಕೊಳ್ಳಬಹುದು. ಬಿ.ವೈ.ವಿಜಯೇಂದ್ರ ಅವರೇ ಅಧ್ಯಕ್ಷರಾಗಿ ಮುಂದುವರಿಯುವ ಸಾಧ್ಯತೆ ಇದ್ದರೂ, ಎಲ್ಲ ನಾಯಕರು ಅವರನ್ನೇ ಮುಂದುವರಿಸಬೇಕು ಎಂದು ಹೇಳುವ ಸಾಧ್ಯತೆಯಂತೂ ಕಡಿಮೆ. ಅಪಸ್ವರ ಎತ್ತುವ ಸಾಧ್ಯತೆಯೂ ಇದೆ. ನಿತಿನ್ ನವೀನ್ ಅವರು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಕುರಿತು ಬೆಂಗಳೂರಿನಲ್ಲಿ ಸಂದೇಶ ನೀಡುವ ಸಾಧ್ಯತೆಯೂ ಇದೆ’ ಎಂದು ಮೂಲಗಳು ಹೇಳಿವೆ.

2028ರ ವಿಧಾನಸಭೆ ಚುನಾವಣೆಗೆ ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು, ಎಲ್ಲೆಲ್ಲಿ ಲೋಪಗಳಿವೆ ಎಂಬ ಮಾಹಿತಿಯನ್ನೂ ಶಿವಪ್ರಕಾಶ್ ಅವರು ಕಲೆ ಹಾಕಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಹುತೇಕ ಎಲ್ಲ ರಾಜ್ಯ ಘಟಕಗಳ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಮುಗಿದ್ದು, ಕರ್ನಾಟಕದಲ್ಲಿ ಆ ಪ್ರಕ್ರಿಯೆ ಬಾಕಿ ಇದೆ. ಶಿವಪ್ರಕಾಶ್ ಅವರು ಆರ್‌ಎಸ್‌ಎಸ್ ಮೂಲದವರಾಗಿದ್ದು, ಸಂಘದ ಪ್ರಮುಖರ ಅಭಿಪ್ರಾಯವನ್ನೂ ಕೇಳಲಿದ್ದಾರೆ.

ರಾಷ್ಟ್ರೀಯ ಕಾರ್ಯದರ್ಶಿಯ ಭೇಟಿ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಬಿ.ವೈ.ವಿಜಯೇಂದ್ರ, ‘ಇದೇ 23 ರಂದು ನಿತಿನ್ ನವೀನ್ ಅವರು ಮೊದಲ ಬಾರಿಗೆ ಭೇಟಿ ನೀಡಲಿದ್ದು, ಮೋದಿಯವರು ಪ್ರಧಾನಿಯಾಗಿ 12 ವರ್ಷ ಪೂರೈಸುತ್ತಿರುವುದರಿಂದ ರಾಜ್ಯದಲ್ಲಿ ಪಕ್ಷ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಶಿವಪ್ರಕಾಶ್ ಅವರು ಪೂರ್ವಭಾವಿ ಸಿದ್ಧತೆಗಳನ್ನು ಪರಿಶೀಲನೆ ನಡೆಸಲಿದ್ದಾರೆ’ ಎಂದು ಹೇಳಿದ್ದಾರೆ.

ಎಚ್‌. ವಿಶ್ವನಾಥ್ ವಿರುದ್ಧ ಎಫ್‌ಐಆರ್

ಕಾಂಗ್ರೆಸ್ ಮುಖಂಡ ಕೋಟೆಹುಂಡಿ ಮಹದೇವ್ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: ಸಾಲ ವಾಪಸ್ ಕೇಳಿದ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ವಿಧಾನಪರಿಷತ್ ಸದಸ್ಯ ಎಚ್‌.ವಿಶ್ವನಾಥ್ ಅವರ ವಿರುದ್ಧ ಇಲ್ಲಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕಾಂಗ್ರೆಸ್ ಮುಖಂಡ ಕೋಟೆಹುಂಡಿ ಮಹದೇವ್ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ.

‘2013ರಲ್ಲಿ ಎಂ.ಟಿ.ಬಿ. ನಾಗರಾಜ್ ಅವರಿಂದ ವಿಶ್ವನಾಥ್ ಹಾಗೂ ಮಗ ಅಮಿತ್ ದೇವರಹಟ್ಟಿಗೆ ₹ 55 ಲಕ್ಷ ಸಾಲ ಕೊಡಿಸಿದ್ದೆ. ಆಗ ಅವರು ಸಂಸದರಾಗಿದ್ದರು. ಹಣ ಹಿಂದಿರುಗಿಸದೆ ಸತಾಯಿಸುತ್ತಿದ್ದಾರೆ. ಹೀಗಾಗಿ ಫೆ.21ರಂದು ಮಧ್ಯಾಹ್ನ ಜಲದರ್ಶಿನಿ ಅತಿಥಿಗೃಹದಲ್ಲಿ ಹಣ ಕೇಳಲು ಹೋಗಿದ್ದೆ. ಅಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ಮಹದೇವ್ ದೂರು ನೀಡಿದ್ದಾರೆ.

ಈ ಬಗ್ಗೆ ಮೊದಲಿಗೆ, ದೇವರಾಜ ಠಾಣೆಯಲ್ಲಿ ಎನ್‌ಸಿಆರ್ ದಾಖಲಿಸಲಾಗಿತ್ತು. ಬಳಿಕ ಮಹದೇವ್ ನಗರದ 4ನೇ ಜೆಎಂಎಫ್‌ಸಿ ನ್ಯಾಯಾಲಯದ ಮೊರೆಹೋಗಿ ಪ್ರಕರಣ ದಾಖಲಿಸುವಂತೆ ಆದೇಶ ತಂದ ಪರಿಣಾಮ ಎಫ್‌ಐಆರ್ ದಾಖಲಾಗಿದೆ.

‘ಈ ಪ್ರಕರಣಕ್ಕೂ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೂ ಸಂಬಂಧವಿಲ್ಲ. ನನಗಾಗಿರುವ ಅನ್ಯಾಯದ ವಿರುದ್ಧ ದೂರು ನೀಡಿದ್ದೇನೆ’ ಎಂದು ಮಹದೇವ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

‘ನನ್ನ ವಿರುದ್ಧ ಯತೀಂದ್ರ ದ್ವೇಷ ಸಾಧನೆ’



‘ಪ್ರಕರಣದ ಹಿಂದೆ ಸಿ.ಎಂ ಸಿದ್ದರಾಮಯ್ಯ ಪುತ್ರ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಕುಮ್ಮಕ್ಕಿದೆ. ಆತನನ್ನು ಟೀಕಿಸಿದ್ದಕ್ಕಾಗಿ ನನ್ನ ವಿರುದ್ಧ ದ್ವೇಷ ಮಾಡುತ್ತಿದ್ದಾನೆ. ಪೊಲೀಸರು ಈ ಹಿಂದೆ ನೋಟಿಸ್ ನೀಡಿದ್ದರು. ಅದಕ್ಕೆ ಉತ್ತರಿಸಿದ್ದೆ.ಆದರೂ ತೇಜೋವಧೆಗಾಗಿಯೇ ಎಫ್‌ಐಆರ್ ಮಾಡಿಸಿದ್ದಾರೆ’
ಎಚ್‌.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

‘ಲಕ್ಕುಂಡಿ: ಸ್ಯಾಟಲೈಟ್ ತಂತ್ರಜ್ಞಾನ ಬಳಕೆ’

ಪ್ರಜಾವಾಣಿ ವಾರ್ತೆ

ಎಚ್‌.ಕೆ. ಪಾಟೀಲ

ಬೆಂಗಳೂರು: ‘ಲಕ್ಕುಂಡಿಯಲ್ಲಿರುವ ನೂರೊಂದು ಬಾವಿ, ನೂರೊಂದು ದೇವಾಲಯಗಳನ್ನು ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ (ಎನ್‌ಐಎಎಸ್) ಸಹಕಾರದಲ್ಲಿ ಸ್ಯಾಟಲೈಟ್ ಇಮೇಜಿಂಗ್ ಟೆಕ್ನಾಲಜಿ ಬಳಸಿ ಶೀಘ್ರ ಪತ್ತೆಹಚ್ಚಿ ಅನಾವರಣಗೊಳಿಸಲಾಗುವುದು’ ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಎನ್‌ಐಎಎಸ್ ವಿಜ್ಞಾನಿಗಳ ಜೊತೆ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿದ ಸಚಿವರು, ‘ಲಕ್ಕುಂಡಿಯಲ್ಲಿ 32 ದೇವಾಲಯಗಳು, 28 ಬಾವಿಗಳು ಹಾಗೂ ಏಳು ಇತರೆ ಸ್ಮಾರಕಗಳನ್ನು ಒಳಗೊಂಡಂತೆ ಒಟ್ಟು 70ಕ್ಕೂ ಹೆಚ್ಚು ಸ್ಮಾರಕಗಳನ್ನು ಈಗಾಗಲೇ ಗುರುತಿಸಲಾಗಿದೆ. ಮುಂಬರುವ ಡಿ. 31ರ ಒಳಗೆ 101 ಬಾವಿ ಹಾಗೂ 101 ದೇವಾಲಯಗಳನ್ನು ಅನಾವರಣಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು’ ಎಂದರು.

‘ಲಕ್ಕುಂಡಿಯನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ (ಯುನೆಸ್ಕೋ) ಸೇರಿಸಲು ಪ್ರಸ್ತಾವ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಉದ್ದೇಶದಿಂದ ಪ್ರಾಚ್ಯಾವಶೇಷಗಳ ಅನ್ವೇಷಣೆ ಭಾಗ-1ನ್ನು ನಡೆಸಿ 1,500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಅನ್ವೇಷಿಸಲಾಗಿದೆ. ಮೇ 2ರಿಂದ ಪ್ರಾಚ್ಯಾವಶೇಷಗಳ ಅನ್ವೇಷಣೆ ಭಾಗ- 2 ನಡೆಸುತ್ತಿದ್ದು, 2ನೇ ಹಂತದಲ್ಲಿ 1,800ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ದೊರೆತಿವೆ. ಎರಡು ಹಂತದ ಪ್ರಾಚ್ಯಾವಶೇಷಗಳನ್ನು ಸೇರಿಸಿ ಜೂನ್ 30ರ ಒಳಗೆ ದಾಖಲೆಯ ರೀತಿಯ 5 ಸಾವಿರಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಅನ್ವೇಷಿಸಿ ಅವುಗಳನ್ನು ಬಯಲು ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲು ಕೂಡಾ ಕ್ರಮ ವಹಿಸಲಾಗಿದೆ’ ಎಂದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಇಸ್ರೊ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಮಾತನಾಡಿ, ‘ಲಕ್ಕುಂಡಿ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆ ಆಗಬೇಕಿದ್ದು, ಈ ಪ್ರಯತ್ನಕ್ಕೆ ಕೈಜೋಡಿಸಲಾಗುವುದು’ ಎಂದರು

2023ರಿಂದ ಇಲ್ಲಿಯವರೆಗೆ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ಚಟುವಟಿಕೆಯ ಕುರಿತು ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ಪ್ರಾತ್ಯಕ್ಷಿಕೆ ಪ್ರಸ್ತುತಪಡಿಸಿದರು.

ಹಜಾರರಾಮ ದೇವಸ್ಥಾನದ ಆವರಣದಲ್ಲಿ ಇದೇ ಮೊದಲ ಬಾರಿಗೆ ಬೆಳಕಿಗೆ

ಹಂಪಿಯಲ್ಲಿ ಭಗ್ನ ಆಳ್ವಾರ್ ವಿಗ್ರಹಗಳು ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆಳ್ವಾರರು ಶ್ರೀ ವೈಷ್ಣವ ಧರ್ಮ ಪ್ರಸಾರ ಮಾಡಿದ ಸಂತರು
- ಹಂಪಿಯ ಕನಿಷ್ಠ 4 ದೇಗುಲಗಳಲ್ಲಿ ಆಳ್ವಾರ್ ಪ್ರತಿಮೆಗಳು
- ಒಂದೊಂದು ಕಡೆಯಲ್ಲೂ 12ರಿಂದ 13 ವಿಗ್ರಹಗಳು ಇದ್ದ ಶಂಕೆ

ಹೊಸಪೇಟೆ (ವಿಜಯನಗರ): ಹಂಪಿಯ ಹಜಾರರಾಮ ದೇವಸ್ಥಾನದ ಉತ್ತರ ಭಾಗದಲ್ಲಿ ನಡೆದಿರುವ ಉತ್ಖನನದ ವೇಳೆ ಎರಡು ಆಳ್ವಾರ್ ಮೂರ್ತಿಗಳ ಭಗ್ನ ಅವಶೇಷಗಳು ಪತ್ತೆಯಾಗಿವೆ.

‘ಹಂಪಿಯಲ್ಲಿ ಈವರೆಗೆ ನಡೆದ ಉತ್ಖನನ ವೇಳೆ ಆಳ್ವಾರ್ ಪ್ರತಿಮೆಗಳು ಸಿಕ್ಕಿದ ನಿದರ್ಶನ ಇಲ್ಲ. ಇದೀಗ ಆಳ್ವಾರ್ ಪ್ರತಿಮೆಗಳ ಅವಶೇಷಗಳು ವಿಜಯನಗರ ಕಾಲದ ಇತಿಹಾಸದತ್ತ ಹೊಸ ಬೆಳಕು ಚೆಲ್ಲಲು ಸಹಕಾರಿ ಆಗಬಹುದು. ಸಾಮಾನ್ಯವಾಗಿ ವಿಷ್ಣು ದೇವಾಲಯಗಳಲ್ಲಿ 12 ರಿಂದ 13 ಆಳ್ವಾರ್ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತದೆ. ಇನ್ನಷ್ಟು ಪ್ರತಿಮೆಗಳು ಸಿಗುವ ನಿರೀಕ್ಷೆಯಿದೆ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕ್ರಿ.ಶ.1565ರಲ್ಲಿ ನಡೆದ ತಾಳಿಕೋಟೆಯ ರಕ್ಕಸತಂಗಡಿಯಲ್ಲಿ ನಡೆದ ಯುದ್ಧದ ಬಳಿಕ ಬಹುಮನಿ ಸುಲ್ತಾನರ ಆಕ್ರಮಣಕ್ಕೆ ತುತ್ತಾದ ಹಂಪಿಯಲ್ಲಿ ಸಾವಿರಾರು ವಿಗ್ರಹಗಳು, ದೇವರ ಮೂರ್ತಿಗಳನ್ನು ಭಗ್ನ ಮಾಡಲಾಗಿತ್ತು. ಮುಖ್ಯವಾಗಿ ವೈಷ್ಣವ ದೇವಾಲಯಗಳೇ ದಾಳಿಯ ಪ್ರಮುಖ ಗುರಿಗಳಾಗಿದ್ದವು. ಈ ಹಿಂದೆ ಅನೇಕ ಭಗ್ನ ಮೂರ್ತಿಗಳು ಸಿಕ್ಕಿದ್ದರೂ ಆಳ್ವಾರರ ಮೂರ್ತಿಗಳು ಸಿಕ್ಕಿದ್ದು ಇದೇ ಮೊದಲು’ ಎಂದು ಅವರು ತಿಳಿಸಿದರು.

ಆಳ್ವಾರ್ ವಿಗ್ರಹದ ಭಗ್ನಗೊಂಡ ರುಂಡದ ಭಾಗದ

ಉತ್ಖನನ ವೇಳೆ ದೊರೆತ ಆಳ್ವಾರರ ಭಗ್ನ ವಿಗ್ರಹಗಳು –ಪ್ರಜಾವಾಣಿ ಚಿತ್ರ

ಯಾರು ಆಳ್ವಾರರು: ದಕ್ಷಿಣ ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ತಮಿಳುನಾಡಿನಲ್ಲಿ ಶ್ರೀ ವೈಷ್ಣವ ಧರ್ಮ ಮತ್ತು ವಿಷ್ಣು ಭಕ್ತಿಯನ್ನು ಪ್ರಸಾರ ಮಾಡಿದ 12 ಮಂದಿ ಮಹಾನ್ ಸಂತರನ್ನು ಆಳ್ವಾರರು ಎಂದು ಕರೆಯಲಾಗುತ್ತದೆ. ಇವರ ಭಕ್ತಿ ಮತ್ತು ಸಾಹಿತ್ಯದ ನೆನಪಿಗಾಗಿ ಅನೇಕ ದೇವಾಲಯಗಳಲ್ಲಿ ಇವರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ.

ಹಂಪಿಯ ಹಲವು ಶಾಸನಗಳಲ್ಲಿ ಆಳ್ವಾರರ ಮೂರ್ತಿಗಳಿಗೆ ನೈವೇದ್ಯ ಅರ್ಪಿಸಲು, ದೀಪ ಹಚ್ಚಲು ಮತ್ತು ವಿಶೇಷ ಉತ್ಸವಗಳನ್ನು ನಡೆಸಲು ರಾಜರು ಹಾಗೂ ಶ್ರೀಮಂತರು ನೀಡಿದ ದಾನ-ದತ್ತಿಗಳ ಉಲ್ಲೇಖವಿದೆ. ಆದರೆ ಹಜಾರರಾಮ ದೇವಸ್ಥಾನದಲ್ಲಿ ಆಳ್ವಾರರ ಸ್ವತಂತ್ರ ಮೂರ್ತಿಗಳು ಇದ್ದವೇ ಎಂಬ ಬಗ್ಗೆ ಇದುವರೆಗೆ ಮಾಹಿತಿ ಇರಲಿಲ್ಲ. ಕಂಬಗಳು ಮತ್ತು ಗೋಡೆಗಳ ಮೇಲಿರುವ ಉಬ್ಬುಶಿಲ್ಪಗಳು ಮಾತ್ರ ಆಳ್ವಾರರನ್ನು ನೆನಪಿಸುವ ಕುರುಹುಗಳಾಗಿದ್ದವು.

ಶಾಲೆ ಮಕ್ಕಳ ದಾಖಲಾತಿ ತಲಾ ₹1 ಸಾವಿರ ಠೇವಣಿ

• ಕಾಶೀನಾಥ ಬಿಳಿಮಗ್ಗದ

ಎಸ್‌.ಎಂ. ಪಾಟೀಲ

ಮುಂಡರಗಿ (ಗದಗ ಜಿಲ್ಲೆ): ಸರ್ಕಾರಿ ಶಾಲೆಯ ಮಕ್ಕಳ ದಾಖಲಾತಿ ವೃದ್ಧಿಸಲು ತಾಲ್ಲೂಕಿನ ಕೇಲೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಎಸ್‌.ಎಂ.ಪಾಟೀಲ ಅವರು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿಗೆ ದಾಖಲಾಗುವ ಪ್ರತಿ ವಿದ್ಯಾರ್ಥಿಗೂ ತಮ್ಮ ಸ್ವಂತ ಖರ್ಚಿನಲ್ಲಿ ತಲಾ ₹1 ಸಾವಿರ ಠೇವಣಿ ಇಡಲು ಮುಂದಾಗಿದ್ದಾರೆ.

ಎಸ್‌.ಎಂ.ಪಾಟೀಲ ಅವರು ಈ ಮೊದಲು ತಾಲ್ಲೂಕಿನ ಕದಾಂಪೂರ ಗ್ರಾಮದ ಶಾಲಾ ಶಿಕ್ಷಣ ಇಲಾಖೆಯ ಸಮೂಹ ಸಂಪನ್ಮೂಲ ವ್ಯಕ್ತಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಮಂಗಳವಾರ ವಷ್ಟೇ ಅವರು ತಾಲ್ಲೂಕಿನ ಕೇಲೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರಾಗಿ ಬಡ್ತಿ ಹೊಂದಿದ್ದಾರೆ.

‘ಪ್ರಸ್ತುತ ವರ್ಷ ಶಾಲೆಯ ಒಂದನೇ ತರಗತಿಗೆ ಎಷ್ಟು ವಿದ್ಯಾರ್ಥಿಗಳು ದಾಖಲಾಗುತ್ತಾರೋ, ಅಷ್ಟೂ ವಿದ್ಯಾರ್ಥಿಗಳಿಗೆ ಠೇವಣಿ ಇಡಲು ನಿರ್ಧರಿಸಿರುವೆ. ಅದಕ್ಕೆ ಅಗತ್ಯವಿರುವ ಹಣವನ್ನು ಶಾಲಾಭಿವೃದ್ಧಿ ಸಮಿತಿ ಪದಾಧಿಕಾರಿಗಳಿಗೆ ನೀಡಿರುವೆ. ಮುಂದಿನ ಐದು ವರ್ಷದವರೆಗೆ ಇದನ್ನು ಮುಂದುವರೆಸುವ ಯೋಜನೆಯಿದೆ’ ಎಂದು ಮುಖ್ಯಶಿಕ್ಷಕ ಎಸ್‌.ಎಂ.ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಕ್ಕಳ ಶಿಕ್ಷಣಕ್ಕೆ ಭದ್ರತೆ ಒದಗಿಸುವುದು, ಮಕ್ಕಳಲ್ಲಿ ಉಳಿತಾಯ ಮನೋಭಾವ ಮೂಡಿಸಿ, ಭವಿಷ್ಯಕ್ಕೆ ಅಡಿಪಾಯ ಹಾಕುವ ಉದ್ದೇಶವಿದೆ. ಮಕ್ಕಳು ಮತ್ತು ಪೋಷಕರು ಇದರ ಪ್ರಯೋಜನ ಪಡೆಯಬೇಕು’ ಎಂದರು.

> **ಸರ್ಕಾರದ ವೇತನ ಪಡೆದು ಶಿಕ್ಷಕ ವೃತ್ತಿ ಮಾಡುವುದರ ಜೊತೆಗೆ ಮಕ್ಕಳಿಗೆ ಉತ್ತೇಜನ ನೀಡಲು ಸ್ವಂತ ಹಣ ಖರ್ಚು ಮಾಡುತ್ತಿರುವ ಎಸ್‌.ಎಂ.ಪಾಟೀಲ ಅವರ ಕಾರ್ಯ ಇತರ ಶಿಕ್ಷಕರಿಗೆ ಮಾದರಿಯಾಗಿದೆ**
> **ಗಂಗಾಧರ ಅಣ್ಣಿಗೇರಿ,** ಬಿಇಒ ಮುಂಡರಗಿ

ಆನೆ ಶಿಬಿರ: ಜಾರಿಯಾಗದ ಶಿಫಾರಸು

ಹೈಕೋರ್ಟ್ ನಿರ್ದೇಶನದಂತೆ ಏಳು ವರ್ಷದ ಹಿಂದೆಯೇ ವರದಿ ನೀಡಿದ್ದ ಸಮಿತಿ

• ಉಮೇಶಭಟ್ಟ ಪಿ.ಎಚ್.

ಬೆಂಗಳೂರು: 'ಆನೆ ಶಿಬಿರಗಳಲ್ಲಿ ವೀಕ್ಷಕರು ಅತಿ ಹತ್ತಿರಕ್ಕೆ ಹೋಗುವುದನ್ನು ತಪ್ಪಿಸಿ' ಎಂದು ಕರ್ನಾಟಕ ಹೈಕೋರ್ಟ್ ರಚಿಸಿದ್ದ ತಜ್ಞರ ಸಮಿತಿ 7 ವರ್ಷಗಳ ಹಿಂದೆ ಶಿಫಾರಸು ಮಾಡಿದ್ದರೂ ಅದನ್ನು ಜಾರಿ ಮಾಡುವ ಗೋಜಿಗೆ ಅರಣ್ಯ ಇಲಾಖೆ ಹೋಗಿಲ್ಲ.

ದುಬಾರೆ ಶಿಬಿರದಲ್ಲಿ ಆನೆಗಳ ನಡುವಿನ ಕಾದಾಟದಲ್ಲಿ ಪ್ರವಾಸಿಯೊಬ್ಬರು ಮೃತಪಟ್ಟಿದ್ದಾರೆ. ಕಾದಾಡಿದ ಆನೆಗಳ ಪೈಕಿ ಒಂದು ಆನೆಯ ಪ್ರಾಣವೂ ಹೋಗಿದೆ. ಸಾರ್ವಜನಿಕರಿಗೆ ಅವಕಾಶ ಇರುವ ವನ್ಯ ಜೀವಿ ಪ್ರದೇಶಗಳಲ್ಲಿ ಸುರಕ್ಷತೆಗೆ ಆದ್ಯತೆ ನೀಡದೇ ಇರುವುದು ಇದಕ್ಕೆ ಕಾರಣ ಎಂಬ ಚರ್ಚೆಯೂ ಶುರುವಾಗಿದೆ. ಇದರ ಬೆನ್ನಲ್ಲೇ, ತಜ್ಞರ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನ ಮಾಡದೇ ಇರುವ ವಿಷಯವೂ ಮುನ್ನೆಲೆಗೆ ಬಂದಿದೆ.

ಹೈಕೋರ್ಟ್ ನಿರ್ದೇಶನ ನೀಡಿದ ನಂತರವೂ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಅರಣ್ಯ ಸಂಬಂಧಿತ ಸ್ವಯಂಸೇವಾ ಸಂಘಟನೆಗಳು ಅಸಮಾಧಾನ ಹೊರಹಾಕಿವೆ.

ಹಿಂದೆ ಇದ್ದ ಆರು, ಹೊಸದಾಗಿ ಆರಂಭಿಸಿದ ನಾಲ್ಕು ಸೇರಿ ಕರ್ನಾಟಕದಲ್ಲಿ ಒಟ್ಟು ಹತ್ತು ಆನೆ ಶಿಬಿರಗಳಿವೆ. ಇವುಗಳಲ್ಲಿ ಮೂರ್ನಾಲ್ಕು ಶಿಬಿರಗಳಲ್ಲಿ ಜನರ ಒಡನಾಟ ಹೆಚ್ಚು ಇದೆ. ಸಮಿತಿ ನೀಡಿದ ಶಿಫಾರಸಿನ ಮೇರೆಗೆ ಹೆಚ್ಚು ಆನೆಗಳಿರುವ ಶಿಬಿರದಿಂದ ಕಡಿಮೆ ಇರುವ ಕಡೆ ಸ್ಥಳಾಂತರಿಸುವುದು ವಿಳಂಬವಾಗಿ ಅನಾಹುತಕ್ಕೆ ದಾರಿ ಮಾಡಿಕೊಡುತ್ತಿರುವುದಕ್ಕೂ ದಾರಿಯಾಗುತ್ತಿದೆ.

ಶಿಬಿರಗಳಲ್ಲಿರುವ ಆನೆಗಳ ಸಂಖ್ಯೆ	
ದುಬಾರೆ	30
ರಾಮಪುರ	25
ಸಕ್ರೆಬೈಲ್	24
ಮತ್ತಿಗೋಡು	15
ಬಳ್ಳೆ	2
ಭೀಮನಕಟ್ಟೆ	2
ಹಾರಂಗಿ	6
ಕಾವೇರಿ	5
ಪನ್ನೋಲಿ	5
ಒಟ್ಟು	114

ಸಾರ್ವಜನಿಕ ಹಿತಾಸಕ್ತಿ ಅರ್ಜಿ: ನಾಗರಹೊಳೆಯ ಮತ್ತಿಗೋಡು ಶಿಬಿರದಲ್ಲಿ ನಡೆದ ಕಾದಾಟದಲ್ಲಿ ಆನೆಯೊಂದು ಮೃತಪಟ್ಟಿತ್ತು. ಈ ವಿಚಾರ ಮುಂದಿಟ್ಟು, ಶಿಬಿರಗಳ ನಿರ್ವಹಣೆ ವಿಚಾರವಾಗಿ ವಕೀಲ ಕೆ.ಎನ್. ಅಮೃತೇಶ್ ಅವರು 2019ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಇದನ್ನು ಆಧರಿಸಿ ವರದಿ ನೀಡುವಂತೆ ಹೈಕೋರ್ಟ್ ಸೂಚನೆ ನೀಡಿತ್ತು. ನಿವೃತ್ತ ಅರಣ್ಯಾಧಿಕಾರಿ ಕೆ.ಎಂ. ಚಿಣ್ಣಪ್ಪ ಅವರ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನೂ ರಚಿಸಿತ್ತು. 2019ರ ಅಕ್ಟೋಬರ್‌ನಲ್ಲಿ 5 ದಿನ ಪ್ರವಾಸ ಕೈಗೊಂಡ ಸಮಿತಿ ಸರ್ಕಾರಕ್ಕೆ ಆಗಲೇ ವರದಿ ಸಲ್ಲಿಸಿತ್ತು.

ಆನೆ ಶಿಬಿರಗಳಿಗೆ ಭೇಟಿ ನೀಡಿದ್ದ ಸಮಿತಿ ಸ್ಥಳ, ನೀರಿನ ಲಭ್ಯತೆ, ಮೂಲಸೌಲಭ್ಯ, ಆರೋಗ್ಯ ನಿರ್ವಹಣೆ, ಪಶುವೈದ್ಯರ ಸೇವೆ, ಆನೆಗಳ ಸ್ಥಿತಿಗತಿ, ಪ್ರಾಣಿಗಳ ಹಿತರಕ್ಷಣೆಗೆ ಕೈಗೊಳ್ಳಲಾಗಿರುವ ಕ್ರಮ ಕುರಿತು ಮಾಹಿತಿ ಸಂಗ್ರಹಿಸಿತ್ತು. ಇದನ್ನು ಆಧರಿಸಿ ಶಿಫಾರಸು ಮಾಡಿದ್ದಲ್ಲದೇ, ಹೈಕೋರ್ಟ್‌ಗೆ ವರದಿ ಸಲ್ಲಿಸಲಾಗಿತ್ತು.

ಕೊಡಗಿನ ದುಬಾರೆ ಆನೆ ಶಿಬಿರ (ಸಂಗ್ರಹ ಚಿತ್ರ)

ಹೊಸ ಶಿಬಿರ ಸ್ಥಾಪನೆ: ಮೊದಲಿದ್ದ ಆರು ಶಿಬಿರಗಳಲ್ಲಿ ದುಬಾರೆ, ಸಕ್ರೆಬೈಲ್ ಆನೆ ಶಿಬಿರಗಳನ್ನು ವಿಂಗಡಿಸಿ ಕೊಡಗಿನಲ್ಲೇ ಮತ್ತೊಂದು ಶಿಬಿರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಆನೆ ಶಿಬಿರ ಸ್ಥಾಪಿಸಲು ತಜ್ಞರ ಸಮಿತಿ ಸೂಚನೆ ನೀಡಿತ್ತು.

ಸಮಿತಿ ವರದಿ ಆಧರಿಸಿ ನಾಲ್ಕು ಆನೆ ಶಿಬಿರಗಳನ್ನು ಕರ್ನಾಟಕ ಅರಣ್ಯ ಇಲಾಖೆ ಆರಂಭಿಸಿದೆ. ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ದೊಡ್ಡ ಹರವೆ ಬಳಿ ಕಾವೇರಿ ಶಿಬಿರದಲ್ಲಿ 5 ಆನೆ, ಹುಣಸೂರು ತಾಲ್ಲೂಕು ಭೀಮನಕಟ್ಟೆಗೆ 2 ಆನೆ ಸ್ಥಳಾಂತರಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ಬೂದಿಪಡಗದಲ್ಲಿ ಪ್ರತ್ಯೇಕ ಶಿಬಿರ ಆರಂಭಿಸಿ ಅಲ್ಲಿಗೂ ಆನೆ ಕಳುಹಿಸಲಾಗುತ್ತಿದೆ.

ಇದರಲ್ಲಿ ಕೊಡಗಿನ ಕುಶಾಲನಗರ ಸಮೀಪದ ಹಾರಂಗಿಯಲ್ಲಿ ಶಿಬಿರ ಆರಂಭಿಸಿದರೂ ಅಲ್ಲಿಗೆ ಹೆಚ್ಚಿನ ಆನೆ ಸ್ಥಳಾಂತರಿಸಿಲ್ಲ. ಇದರಿಂದ ದುಬಾರೆ, ಸಕ್ರೆಬೈಲ್, ರಾಮಪುರದಲ್ಲಿ ಹೆಚ್ಚಿನ ಆನೆಗಳು ಉಳಿದಿದ್ದು, ಒತ್ತಡ ಹೆಚ್ಚಲು ಕಾರಣವಾಗಿದೆ.

'ಆನೆ ಶಿಬಿರ ನಿರ್ವಹಣೆ ವಿಚಾರದಲ್ಲಿ ಎಚ್ಚರಿಕೆ ವಹಿಸುತ್ತಿಲ್ಲ. ಇಂತಹ ಘಟನೆ ಪುನರಾವರ್ತನೆಯಾಗುತ್ತಿದೆ. ಪ್ರವಾಸಿಗರೊಬ್ಬರ ಜತೆಗೆ ಆನೆಯೂ ಮೃತಪಟ್ಟಿದೆ. ಅರಣ್ಯ ಇಲಾಖೆ ತಪ್ಪುಗಳಿಂದ ಪಾಠ ಕಲಿಯುವುದು ಯಾವಾಗ' ಎಂದು ಸ್ವಯಂ ಸೇವಾ ಸಂಘಟನೆಯ ಪ್ರಮುಖರೊಬ್ಬರು ಆಕ್ರೋಶ ಹೊರ ಹಾಕಿದರು.

ಸಮಿತಿಯ ಶಿಫಾರಸುಗಳೇನು?

- ಕೆಲವು ಆನೆ ಶಿಬಿರಗಳಲ್ಲಿ ವೀಕ್ಷಕರ ಒಳಹರಿವಿನ ಪ್ರಮಾಣ ಹೆಚ್ಚಾಗಿದ್ದು, ಇದನ್ನು ತಗ್ಗಿಸಿ
- ಹತ್ತಿರದಿಂದ ಆನೆ ವೀಕ್ಷಿಸುವುದರಿಂದ ಆಗುವ ಒತ್ತಡ ಕಡಿಮೆ ಮಾಡಿ
- ಕೆಲವೆಡೆ ಮಿತಿಗಿಂತ ಹೆಚ್ಚು ಆನೆಗಳಿದ್ದು ಒಂದು ಶಿಬಿರದಲ್ಲಿ 15 ಆನೆ ಇರಿಸುವುದು ಸೂಕ್ತ
- ಆಹಾರ ಕೊರತೆ ನೀಗಿಸಲು ಮುಖ್ಯ ಶಿಬಿರದ ಹತ್ತಿರವೇ ಮೂರ್ನಾಲ್ಕು ಉಪ ಶಿಬಿರ ರೂಪಿಸಿ
- ಸೆರೆ ಹಿಡಿದ ಆನೆಗಳನ್ನು ಕೆಲವೇ ಶಿಬಿರಗಳಲ್ಲಿ ಇರಿಸುತ್ತಿರುವುದನ್ನು ತಪ್ಪಿಸಿ
- ಪಶುವೈದ್ಯಕೀಯ ಸೇವೆ, ಶಸ್ತ್ರ ಚಿಕಿತ್ಸೆಗೆ ಬೇಕಾದ ಸೌಲಭ್ಯಗಳು ಇರಲಿ
- ಆನೆಗಳಿಗೆ ಪೌಷ್ಟಿಕ ಆಹಾರದ ಡಯಟ್ ಪಟ್ಟಿಯನ್ನು ರೂಪಿಸಿ
- ಉತ್ತರ ಪ್ರದೇಶ ಶಿಬಿರಗಳ ಮಾದರಿಯಲ್ಲಿ ಛಾವಣಿ ನಿರ್ಮಿಸಿ

> ತಜ್ಞರ ಶಿಫಾರಸು ಆಧರಿಸಿ ನಾಲ್ಕು ಶಿಬಿರ ಆರಂಭಿಸಿದ್ದೇವೆ. ವರದಿ ಆಧರಿಸಿ ಶಿಬಿರಗಳಿಗೆ ಸೌಕರ್ಯ, ಸುರಕ್ಷತಾ ಕ್ರಮ ಕೈಗೊಳ್ಳಲು ಅನುದಾನ ಮೀಸಲಿಡುತ್ತೇವೆ
>
> **ಕುಮಾರ್ ಪುಷ್ಕರ್,** ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ

> ಹೈಕೋರ್ಟ್ ಸೂಚನೆ ಆಧರಿಸಿ ರಚಿಸಲಾದ ಸಮಿತಿಯು ತ್ವರಿತವಾಗಿಯೇ ವರದಿ ನೀಡಿ ಪ್ರಮುಖ ಶಿಫಾರಸು ಮಾಡಿದೆ. ಆನೆ ಶಿಬಿರಗಳ ನಿರ್ವಹಣೆ ವಿಚಾರದಲ್ಲಿ ಇನ್ನಷ್ಟು ಪರಿಣಾಮಕಾರಿ ಕ್ರಮ ಆಗಬೇಕು
>
> **ಡಾ.ಡಿ.ಎನ್,.ನಾಗರಾಜು,** ವನ್ಯಜೀವಿ ತಜ್ಞ

ಸಿಇಟಿ: ಸೀಟು ಆಯ್ಕೆಗೆ 'ಕೆಇಎ ಕನೆಕ್ಟ್' ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೀಟು ಆಯ್ಕೆ ವೇಳೆ ವಿದ್ಯಾರ್ಥಿಗಳಿಗೆ ನೆರವಾಗಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ 'ಕೆಇಎ ಕನೆಕ್ಟ್' ಆ್ಯಪ್ ಸಿದ್ಧಪಡಿಸಿದ್ದು, ಅನುಭವಿ ಅಧ್ಯಾಪಕರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ಮಾರ್ಗದರ್ಶನ ಮಾಡಲಿದ್ದಾರೆ.

ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ 2026–27ನೇ ಸಾಲಿನಲ್ಲಿ ನೀಟ್, ಸಿಇಟಿ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆಯುವ ವಿದ್ಯಾರ್ಥಿಗಳು ತಮ್ಮ ಆದ್ಯತೆಯ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಕನೆಕ್ಟ್ ಆ್ಯಪ್ ಸಹಾಯ ಮಾಡಲಿದೆ. ನುರಿತ ಅಧ್ಯಾಪಕರ ಜತೆಗೆ, 2025ರಲ್ಲಿ ನೀಟ್, ಸಿಇಟಿ ಮೂಲಕ ಪ್ರವೇಶ ಪಡೆದಿರುವ ಸುಮಾರು 4,500 ವಿದ್ಯಾರ್ಥಿಗಳು ಮೆಂಟರ್‌ಗಳಾಗಿ ನೋಂದಾಯಿಸಿಕೊಂಡಿದ್ದು, ವಿದ್ಯಾರ್ಥಿಗಳಿಗೆ ನೆರವಾಗಲಿದ್ದಾರೆ. ಪ್ರತಿ ಮೆಂಟರ್‌ಗೆ ಇಬ್ಬರು ವಿದ್ಯಾರ್ಥಿಗಳನ್ನು ನಿಯೋಜಿಸಲಾಗುತ್ತಿದ್ದು, ಮಾರ್ಗದರ್ಶನ ಸಂಪೂರ್ಣ ಉಚಿತ.

ಖಾಸಗಿ ಕಂಪನಿಗಳು, ಯೂಟ್ಯೂಬರ್‌ಗಳು ಮೆಂಟರ್‌ಗಳ ಹೆಸರಿನಲ್ಲಿ ಹಣ ಪಡೆದು ವಿದ್ಯಾರ್ಥಿಗಳನ್ನು ವಂಚಿಸುತ್ತಿರುವ ದೂರುಗಳು ಕೆಇಎಗೆ ಬಂದಿದ್ದವು. ಕೆಲವರು ವಿದ್ಯಾರ್ಥಿಗಳಿಗೆ ತಪ್ಪು ಮಾಹಿತಿ ನೀಡಿ, ಆಡಳಿತ ಮಂಡಳಿ ಕೋಟಾ ಆಯ್ಕೆ ಮಾಡಲು ಪ್ರೇರೇಪಿಸಿದ್ದರು. ಇಂತಹ ವಂಚನೆಗಳನ್ನು ತಡೆಯಲು ಕೆಇಎ ಹೊಸ ಆ್ಯಪ್ ಪರಿಚಯಿಸಿದೆ.

ಕಾರ್ಯ ನಿರ್ವಹಣೆ ಹೇಗೆ: ಆಕಾಂಕ್ಷಿಗಳು ಆ್ಯಪ್‌ಗೆ ಲಾಗಿನ್ ಆದ ತಕ್ಷಣ ಐವರು ಮೆಂಟರ್‌ಗಳ ವಿವರ ಕಾಣಿಸುತ್ತದೆ. ಅವರು ಓದುತ್ತಿರುವ ಕೋರ್ಸ್, ಕಾಲೇಜು ಹಾಗೂ ಹೆಸರುಗಳ ಮಾಹಿತಿ ಲಭ್ಯವಾಗುತ್ತದೆ. ವಿದ್ಯಾರ್ಥಿಗಳು ತಮಗೆ ಇಷ್ಟವಾದ ಮೆಂಟರ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ವಿದ್ಯಾರ್ಥಿನಿಯರಿಗೆ ಮಹಿಳಾ ಮೆಂಟರ್, ವಿದ್ಯಾರ್ಥಿಗಳಿಗೆ ಪುರುಷ ಮೆಂಟರ್ ನಿಯೋಜಿಸಲಾಗುತ್ತದೆ.

ಪರಮೇಶ್ವರ ಮುಖ್ಯಮಂತ್ರಿಯಾಗಲಿ ಎಂದು ರಾಜಣ್ಣ ಹೇಳಿದ್ದೇಕೆ: ಡಿಕೆಶಿ

'ಸಿ.ಎಂ ಬದಲಾವಣೆ: ನಾನೆಂದೂ ಹೇಳಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬದಲಾವಣೆಯಾಗಲಿ ಎಂದು ನಾನು ಯಾವತ್ತೂ ಹೇಳಿಲ್ಲ. ಪರಮೇಶ್ವರ ಮುಖ್ಯಮಂತ್ರಿಯಾಗಲಿ ಎಂದು ರಾಜಣ್ಣ ಹೇಳುವ ಮೂಲಕ, ಮುಖ್ಯಮಂತ್ರಿ ಬದಲಾಗಲಿ ಎನ್ನುತ್ತಿರುವುದು ಯಾಕೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ಮುಖ್ಯಮಂತ್ರಿ ಬದಲಾಗುವುದಾದರೆ ಪರಮೇಶ್ವರ ಮುಖ್ಯಮಂತ್ರಿ ಆಗಬೇಕು' ಎಂಬ ಕೆ.ಎನ್. ರಾಜಣ್ಣ ಹೇಳಿಕೆಗೆ ಬುಧವಾರ ಪ್ರತಿಕ್ರಿಯಿಸಿದ ಶಿವಕುಮಾರ್, 'ಮುಖ್ಯಮಂತ್ರಿ ಬದಲಾವಣೆ ಮಾಡಲು ರಾಜಣ್ಣ ಯಾಕೆ ಹೊರಟಿದ್ದಾರೆ' ಎಂದೂ ಕೇಳಿದರು.

'ಮುಖ್ಯಮಂತ್ರಿ ಮುಂದುವರಿಯಲಿ ಎಂದು ಹೇಳುವುದರಲ್ಲಿ ತಪ್ಪೇನಿಲ್ಲ. ಮುಖ್ಯಮಂತ್ರಿ ಬದಲಾಗಬೇಕು ಎಂದು ಎಂದಾದರೂ ನಾನು ಹೇಳಿದ್ದೇನೆಯೇ? ಎಲ್ಲೂ ಹೇಳಿಲ್ಲವಲ್ಲ. ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎನ್ನುವುದಾದರೆ ಈಗಿರುವ ಮುಖ್ಯಮಂತ್ರಿ ಅಧಿಕಾರದಿಂದ ಇಳಿಯಬೇಕು ಎಂಬುದು ರಾಜಣ್ಣ ಅವರ ಮಾತಿನ ಅರ್ಥವೇ' ಎಂದರು.

'ರಾಜಣ್ಣ ಅವರ ಬೇಡಿಕೆ ಈಡೇರಿಲ್ಲವೆಂಬ ಕಾರಣಕ್ಕೆ ಹೀಗೆ ಹೇಳಿರಬೇಕು' ಎಂದಾಗ, 'ಅದರ ಬಗ್ಗೆ ನನಗೆ ಗೊತ್ತಿಲ್ಲ' ಎಂದರು.

ಸಚಿವ ಸ್ಥಾನಕ್ಕೆ ಶಾಸಕರು ಬೇಡಿಕೆ ಇಡುತ್ತಿರುವ ಬಗ್ಗೆ ಕೇಳಿದಾಗ, 'ಸಂಪುಟ ವಿಸ್ತರಣೆ ಮಾಡುತ್ತೇನೆಂದು ಮುಖ್ಯಮಂತ್ರಿ ಹೇಳಿದ್ದಾರೆ. ಅವರನ್ನೇ ಕೇಳಿ' ಎಂದರು.

ಸಚಿವ ಕೆ.ಜೆ. ಜಾರ್ಜ್ ಅವರ ನಿವಾಸದಲ್ಲಿ ಕಾಂಗ್ರೆಸ್ ನಾಯಕರು ಸಭೆ ಮಾಡಿರುವ ಕುರಿತು ಪ್ರಶ್ನಿಸಿದಾಗ, 'ರಾಜ್ಯ ರಾಜಕಾರಣ, ಪಕ್ಷವನ್ನು ಯಾವ ರೀತಿ ಅಧಿಕಾರಕ್ಕೆ ತರಬೇಕು ಎಂದು ನಾವು ಚರ್ಚೆ ಮಾಡಿದ್ದೇವೆ' ಎಂದರು.

'ನೀವು ಕಷ್ಟ ಪಟ್ಟಿದ್ದೀರಾ, ಕೂಲಿ ಕೇಳುತ್ತಿದ್ದೀರಾ' ಎಂದು ಕೇಳಿದಾಗ, 'ನಾನು ಯಾರಿಗೂ ಕೂಲಿ ಕೇಳಿಲ್ಲ' ಎಂದರು. 'ರಾಹುಲ್ ಗಾಂಧಿ ಭೇಟಿಗಾಗಿ ದೆಹಲಿಗೆ ಹೋಗುತ್ತೀರಾ' ಎಂಬ ಪ್ರಶ್ನೆಗೆ, 'ಕರೆದಾಗ ಹೋಗುತ್ತೇನೆ' ಎಂದರು.

ಕಾಂಗ್ರೆಸ್‌ನಲ್ಲಿ ಗೊಂದಲ ಇಲ್ಲ– ಖಂಡ್ರೆ

'ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲ ಇಲ್ಲ. ತಮ್ಮ ಎಲೆಯಲ್ಲಿ ಹೆಗ್ಗಣ ಸತ್ತು ಬಿದ್ದಿದ್ದರೂ, ಬಿಜೆಪಿ ನಾಯಕರು ಬೇರೆಯವರ ಎಲೆಯಲ್ಲಿ ನೊಣ ಹುಡುಕುತ್ತಿದ್ದಾರೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ವ್ಯಂಗ್ಯವಾಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜ್ಯ ಬಿಜೆಪಿಯಲ್ಲಿ ಎಷ್ಟು ಬಣ ಇದೆ. ಅವರಲ್ಲೇ ಒಗ್ಗಟ್ಟಿಲ್ಲ. ಬೇರೆಯವರ ಬಗ್ಗೆ ಮಾತನಾಡಲು ಆ ಪಕ್ಷದ ನಾಯಕರಿಗೆ ನೈತಿಕ ಹಕ್ಕು ಇಲ್ಲ' ಎಂದು ಗುಡುಗಿದರು.

ಸಂಪುಟ ಪುನರ್‌ರಚನೆ ಬಗ್ಗೆ ಕೇಳಿದ ಪ್ರಶ್ನೆಗೆ, 'ಸಚಿವ ಸಂಪುಟ ಪುನರ್‌ರಚನೆ, ವಿಸ್ತರಣೆ ವರಿಷ್ಠರ ತೀರ್ಮಾನ. ಮುಖ್ಯಮಂತ್ರಿಯ ಪರಮಾಧಿಕಾರ' ಎಂದರು.

'ಮಂತ್ರಿಗಳು ಸೋಮಾರಿಗಳಾಗಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಪುಟ ಪುನಾರಚನೆ ಆಗಬೇಕು. ನೀರು ನಿಂತರೆ ಕೆಡುತ್ತದೆ, ಹರಿಯಬೇಕು. ಮುಂದಿನ 2 ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು' ಎಂದು ಸಿ.ಎಂ ಅವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಂತ್ರಿಗಳು ಸೋಮಾರಿಗಳಾಗಿಲ್ಲ. ವಿಧಾನಸೌಧಕ್ಕೆ ಬರುತ್ತಿರುವುದು ಕಡಿಮೆ ಆಗಿಬಹುದು. ಮಂತ್ರಿಗಳು ಸೋಮಾರಿಗಳಾಗಬಾರದು. ಹೆಚ್ಚು ಹೆಚ್ಚು ಬರುವಂತಾಗಬೇಕು. ಅದಕ್ಕಾಗಿ ಸಂಪುಟ ಪುನಾರಚನೆ ಆಗಲಿ' ಎಂದರು. 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದೆ. ಪುನಃ ನಾವು ಅಧಿಕಾರಕ್ಕೆ ಬರಬೇಕು. ಮುಂದಿನ ಎರಡು ವರ್ಷ ಪರಿಣಾಮಕಾರಿ ಆಡಳಿತ ನಡೆಸಬೇಕಿದೆ. ಆದ್ದರಿಂದ, ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರನ್ನು ಬದಲಿಸಬೇಡಿ ಎಂದಿದ್ದೆ. ಅಂತಹ ಪ್ರಸಂಗ ಬಂದರೆ ನೀವೇ ಮುಖ್ಯಮಂತ್ರಿ ಆಗಿ. ನಿಮಗಿಂತ ಬೇರೆ ಯಾರೇ ಆದರೂ ಆ ಮಟ್ಟಕ್ಕೆ ಆಡಳಿತ ನೀಡಲು ಸಾಧ್ಯವಿಲ್ಲ ಎಂದು ಅವರಿಗೆ ಸಲಹೆ ನೀಡಿದ್ದೆ' ಎಂದರು.

'ಅದಕ್ಕೆ ಪ್ರತಿಕ್ರಿಯಿಸಿದ ಖರ್ಗೆ ಅವರು ನನಗೆ ಬೇಡ ವಯಸ್ಸಾಗಿದೆ, ನಿಭಾಯಿಸುವುದು ಕಷ್ಟ. ರಾಹುಲ್ ಗಾಂಧಿ ಮತ್ತು ನಾವು ಸೇರಿ ತೀರ್ಮಾನಿಸುತ್ತೇವೆ ಎಂದು ಹೇಳಿದರು. ಅವರು ಬೇಡ, ಇವರು ಬೇಡ ಎನ್ನಲು ನಾನು ಯಾರು? ಸಿದ್ದರಾಮಯ್ಯ ಅವರೇ ಇರಬೇಕು, ಅವರಿದ್ದರೆ ರಾಜ್ಯದ ಪರಿಸ್ಥಿತಿ ಚೆನ್ನಾಗಿರುತ್ತದೆ. ಖರ್ಗೆ ಅವರು ಹಿರಿಯರು, ಅನುಭವಸ್ಥರು, ದಲಿತ ವರ್ಗಕ್ಕೆ ಸೇರಿದವರು, ಅವರು ಮುಖ್ಯಮಂತ್ರಿ ಆಗಬೇಕು ಎಂಬುದು ನನ್ನ ಇಚ್ಛೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಾರದು ಎಂದು ನಾನೇನು ಹೇಳುತ್ತಿಲ್ಲ. ಮುಂದಿನ ದಿನಗಳಲ್ಲಿ ಯಾರು ಬೇಕಾದರೂ ಆಗಬಹುದು' ಎಂದು ರಾಯರಡ್ಡಿ ಹೇಳಿದರು.

ಮೋದಿ ಆರ್ಥಿಕ ನೀತಿ ಕೆಟ್ಟದ್ದು: ರಾಯರಡ್ಡಿ

'ದೇಶದ ಆರ್ಥಿಕ ಪರಿಸ್ಥಿತಿ ದುಸ್ಥಿತಿಗೆ ಬಂದಿದೆ. ನಮ್ಮ ಕೆಟ್ಟ ಆರ್ಥಿಕ ನೀತಿಯೇ ಇದಕ್ಕೆ ಕಾರಣ. ಯಾರೂ ವಿದೇಶಕ್ಕೆ ಹೋಗಬೇಡಿ, ಬಂಗಾರ ಖರೀದಿಸಬೇಡಿ. ಖಾಸಗಿ ವಾಹನದಲ್ಲಿ ಓಡಾಡಬೇಡಿ, ಮನೆಯಲ್ಲೇ ಕೆಲಸ ಮಾಡಿ ಎಂದೆಲ್ಲಾ ಮೋದಿ ಉಪದೇಶ ಮಾಡುತ್ತಿದ್ದಾರೆ' ಎಂದು ರಾಯರಡ್ಡಿ ಟೀಕಿಸಿದರು.

ಕಲಬುರಗಿ: ವಿಮಾನಯಾನ ಪುನರಾರಂಭ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಳೆದ ಎಂಟು ತಿಂಗಳಿನಿಂದ ಸ್ಥಗಿತಗೊಂಡಿರುವ ಕಲಬುರಗಿ ಮತ್ತು ಬೆಂಗಳೂರು ನಡುವಣ ನಿತ್ಯ ವಿಮಾನ ಸೇವೆಗೆ ಜೂನ್ 10ರಿಂದ ಮತ್ತೆ ಚಾಲನೆ ಸಿಗಲಿದೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಸ್ಟಾರ್ ಏರ್ ಸಂಸ್ಥೆಯು, ನಿತ್ಯ ಸಂಜೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು ಸಂಜೆ 7.10ಕ್ಕೆ ಕಲಬುರಗಿ ತಲುಪಲಿದೆ. ಸಂಜೆ 7.40ಕ್ಕೆ ಕಲಬುರಗಿಯಿಂದ ಹೊರಟು ರಾತ್ರಿ 8.50ಕ್ಕೆ ಬೆಂಗಳೂರು ತಲುಪಲಿದೆ ಎಂದು ಸ್ಪಷ್ಟಪಡಿಸಿದೆ. ಅಲ್ಲದೇ, ಜೂನ್ 10ರಿಂದ ಬುಕಿಂಗ್‌ಗೂ ಅವಕಾಶ ನೀಡಿದೆ. ಈ ನಿರ್ಧಾರವು ಈ ಭಾಗದ ಜನರಲ್ಲಿ ಹರ್ಷ ಮೂಡಿಸಿದೆ.

2025ರ ಅಕ್ಟೋಬರ್ 8ರಂದು ಕಲಬುರಗಿ–ಬೆಂಗಳೂರು ನಡುವೆ ಕೊನೆಯದಾಗಿ ವಿಮಾನ ಹಾರಾಡಿತ್ತು. ಅಂದಿನಿಂದ ಇಂದಿನ ತನಕ ಹೆಲಿಕಾಪ್ಟರ್‌ಗಳು ಹಾಗೂ ವಿಶೇಷ ವಿಮಾನಗಳಿಗೆ ಮಾತ್ರವೇ ಕಲಬುರಗಿ ವಿಮಾನ ನಿಲ್ದಾಣದ ಸೇವೆ ಸೀಮಿತವಾಗಿದೆ. ಕೆಕೆಸಿಸಿಐ ಸೇರಿದಂತೆ ಈ ಭಾಗದ ಅನೇಕ ಸಂಘ–ಸಂಸ್ಥೆಗಳು, ಜನಪ್ರತಿನಿಧಿಗಳು ವಿಮಾನಯಾನ ಪುನರಾರಂಭಕ್ಕೆ ಒತ್ತಾಯಿಸಿದ್ದರು. ವಿಮಾನಯಾನ ಸೇವೆ ಸ್ಥಗಿತವು ಬಿಜೆಪಿ–ಕಾಂಗ್ರೆಸ್ ನಡುವೆ ವಾಕ್ಸಮರಕ್ಕೂ ಕಾರಣವಾಗಿತ್ತು.

ಚಂದ್ರಶೇಖರ ಶಿಕ್ಷಕರ ಸಂಘದ ಅಧ್ಯಕ್ಷ


ಚಂದ್ರಶೇಖರ ನುಗ್ಗಲಿ

ಬೆಂಗಳೂರು: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಚಂದ್ರಶೇಖರ ನುಗ್ಗಲಿ ಪುನರಾಯ್ಕೆ ಆಗಿದ್ದಾರೆ.

ಎಚ್.ಎಸ್.ಚೇತನ್ (ಪ್ರಧಾನ ಕಾರ್ಯದರ್ಶಿ), ಜಿ.ಪದ್ಮಲತಾ, ಆರ್. ಮಾರುತೇಶ (ಉಪಾಧ್ಯಕ್ಷರು), ರಾಜಶೇಖರ ಎಂ. ಹೊನ್ನಪ್ಪನವರ (ಖಜಾಂಚಿ), ಪ್ರಮೀಳಾ ತಿಪ್ಪಣ್ಣ ಕಾಮನಹಳ್ಳಿ, ಜಯಾ ರಾ. ಹೆಬಳಿ (ಸಹ ಕಾರ್ಯದರ್ಶಿಗಳು), ಬಿ.ಎನ್. ಸುಂದರೇಶ್ (ಸಂಘಟನಾ ಕಾರ್ಯದರ್ಶಿ) ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಮೆಹಬೂಬ್ ಪಾಷಾ ಮೂಲಿಮನಿ ಮಾಹಿತಿ ನೀಡಿದ್ದಾರೆ.

ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳು ಹಾಗೂ 239 ತಾಲ್ಲೂಕುಗಳಿಂದ 2,394 ಪ್ರತಿನಿಧಿಗಳು ಆಯ್ಕೆಯಾಗಿದ್ದರು. ಈ ಪ್ರತಿನಿಧಿಗಳ ಮೂಲಕ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದ ಎಂಟು ಪದಾಧಿಕಾರಿಗಳ ಆಯ್ಕೆ ನಡೆದಿದೆ ಎಂದಿದ್ದಾರೆ.

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ B-Smile

ಯೋಜನಾ ಅಭಿಯಂತರರ ಕಚೇರಿ – 04, ಬೆಂಗಳೂರು ಸ್ಮಾರ್ಟ್ ಮೂಲಸೌಕರ್ಯ ನಿಯಮಿತ ನೆಲ ಮಹಡಿ, ಅನೆಕ್ಸ್–2 ಕಟ್ಟಡ, ಜಿಬಿಎ ಪ್ರಧಾನ ಕಚೇರಿ, ಎನ್ ಆರ್ ಸ್ಕೇರ್, ಬೆಂಗಳೂರು–560 002

ಸಂ : ಬೆಂ–ಸ್ಮೈಲ್/ಯೋಅ–04/ಟೆಂಡರ್/01/2026–27 ದಿನಾಂಕ : 20.05.2026

ನೋಟಿಸ್‌ಗಾಗಿ ಟೆಂಡರ್ ಆಹ್ವಾನ (ಎನ್‌ಐಟಿ)
(http://kppp.karnataka.gov.in ಪೋರ್ಟಲ್ ಮೂಲಕ)
(ದ್ವಿ–ಲಕೋಟೆ ಪದ್ಧತಿಯಡಿಲ್ಲಿ ಸ್ಪರ್ಧಾತ್ಮಕ ಬಿಡ್ಡಿಂಗ್))

ಬೆಂಗಳೂರು ನಗರದಲ್ಲಿ ನಿರ್ದಿಷ್ಟ ಮೂಲಸೌಕರ್ಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರವು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಅನ್ನು ಸ್ಥಾಪಿಸಿರುತ್ತದೆ. ಯೋಜನಾ ಅಭಿಯಂತರರು–04 ಇವರು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಇವರು, ಎಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ವಿಧಾನ ಕಾಮಗಾರಿಯ ಅಭಿವೃದ್ಧಿಗಾಗಿ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. ಕಾಮಗಾರಿಯ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ/ ಇಎಂಡಿ/ಕಾಮಗಾರಿಯ ಆವಧಿ
1	Construction of Elevated Corridors from Minverva Circle to Hudson Circle and loop flyover from existing Bala Gangadhara Nath Swamiji flyover to Townhall and Elevated Corridors from Sangolli Rayanna circle (Anandrao Flyover) to Nrupathung road (KR Circle) in Bengaluru City (Length 7.00 kms) using Ultra High-Performance Fiber Reinforced Concrete (UHPFRC) under Engineering, Procurement & Construction (EPC) Mode on Lumpsum, Turkey with allowable Price Escalation based structures including Maintenance for a period of 10 years. Amount put To tender (Excluding GST) : **Rs. 55723.15 Lakhs,** Earnest Money Deposit : **Rs. 558.00 (Rs. 1.00 Lakhs E-payment & Balance through Surety Bond/ E-BG).** Construc tion Period : **18 Months.**

ವೇಳಾಪಟ್ಟಿ : 1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳ ಲಭ್ಯತೆಯ ದಿನಾಂಕ ಮತ್ತು ಸಮಯ: 25.05.2026 ರಂದು ಸಂಜೆ 5.30 ಗಂಟೆಗೆ 2) ಪ್ರೀ ಬಿಡ್ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.06.2026 ರಂದು ಸಂಜೆ 4.00 ಗಂಟೆಗೆ. 3) ಪೂರ್ವ–ಬಿಡ್ ಸಭೆಯು 05.06.2026 ರಂದು ಸಂಜೆ 4:30 ಗಂಟೆಗೆ. 4) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 24.06.2026 ರಂದು ಸಂಜೆ 4.00 ಗಂಟೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 25.06.2026 ರಂದು ಸಂಜೆ 4.30 ಗಂಟೆಗೆ. 6) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು: ಸೂಚನೆ ನೀಡಲಾಗುವುದು. 7) ಬಿಡ್‌ಗಳ ಮಾನ್ಯತೆ : ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದಿಂದ 180 ದಿನಗಳು.

ಸಹಿ/– ಯೋಜನಾ ಅಭಿಯಂತರರು–04,
ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್)

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ: ಎಸ್‌ಯುಪಿ(2)33/2025–26 ದಿನಾಂಕ: 21–05–2026

ಟೆಂಡರ್ ಅಧಿಸೂಚನೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗಗಳ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಉಪಕರಣಗಳಿಗೆ ಟೆಂಡರ್ ಕರೆಯಲಾಗಿದೆ. ಕೆಪಿಪಿ. ಕರ್ನಾಟಕ ಪೋರ್ಟಲ್ (DHFWS/2026-27/IND2487) ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ. 20.06.2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.inನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/DK/KSMCA/239/ 26-27 dt. 20.05.2026

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560041
registrar@rguhs.ac.in ದೂರವಾಣಿ: +91–80–29601928

Date: 19/05/2026

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

The Registrar Rajiv Gandhi University of Health Sciences invites auction to nationalized Banks for Competitive rate of interest for placing surplus funds only in nationalized bank in FD Rs.400 Cr. More Details on the Service are provided in the attached Terms of Reference.

Auction Notice No. RGUHSK/2026-27/AUCTION16

1	ಡೌನ್‌ಲೋಡ್‌ಗಾಗಿ ಹರಾಜು ದಾಖಲೆಗಳ ಲಭ್ಯತೆ	19–05–2026, 16:09 ಗಂಟೆ
2	ವಿಚಾರಣೆ ಸಲ್ಲಿಕೆಗಾಗಿ ಕೊನೆಯ ದಿನಾಂಕ	30–05–2026, 13:00 ಗಂಟೆ
3	ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ದೃಢಪಡಿಸುವ ದಿನಾಂಕ ಹಾಗೂ ಸಮಯ	01–06–2026, 13:30 ಗಂಟೆ
4	ಪರಿಷ್ಕರಣೆಯ ಆರಂಭಿಕ ದಿನಾಂಕ ಹಾಗೂ ಸಮಯ	03–06–2026, 11:30 ಗಂಟೆ
5	ನೇರ ಬಿಡ್ (Live bid)	05–06–2026, 15:00 ರಿಂದ 15.30 ಗಂಟೆಯವರೆಗೆ

ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ಹಣಕಾಸು ಅಧಿಕಾರಿ

ವಾ.ಸಾ.ಸಂ.ಇ/ವಾಪ್ರ/756/ಆಕಾರ್/2026–27

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಬಪಾ/ಟೆಂಡರ್/ಸಿವಿಲ್ ಕಾಮಗಾರಿ/ಸಿಆರ್–01/2026–27 ದಿನಾಂಕ: 16–05–2026

ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ವ್ಯಾಪ್ತಿಯಲ್ಲಿ ಆಯೋಜಿಸಿರುವ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಕರೆಯಲಾಗಿರುತ್ತದೆ. ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: 16–05–2026 ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ನ ವಿಚಾರಣೆಗಳು ಮತ್ತು ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ: 27–05–2026. ನಿಗಧಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 28–05–2026 ರಂದು ಸಂಜೆ 4.00 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ: 30–05–2026 ರಂದು ಬೆಳಿಗ್ಗೆ 11.30 ಗಂಟೆಗೆ.

ಸಹಿ/– ಉಪ ನಿರ್ದೇಶಕರು

ವಾಸಾಸಂಇ/ವಾ.ಪ್ರ/746/ಅಡ್ವರ್ಟೋ/2026–27

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ B-Smile

ಯೋಜನಾ ಅಭಿಯಂತರರ ಕಚೇರಿ – 01, ಬೆಂಗಳೂರು ಸ್ಮಾರ್ಟ್ ಮೂಲಸೌಕರ್ಯ ನಿಯಮಿತ, ಸಂಖ್ಯೆ 30/1, 3ನೇ ಮಹಡಿ, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು–560052

ಸಂ : ಬೆಂ–ಸ್ಮೈಲ್/ಯೋಅ–01/ಟೆಂಡರ್/04/2026–27 ದಿನಾಂಕ : 20.05.2026

ನೋಟಿಸ್‌ಗಾಗಿ ಟೆಂಡರ್ ಆಹ್ವಾನ (ಎನ್‌ಐಟಿ)
(http://kppp.karnataka.gov.in ಪೋರ್ಟಲ್ ಮೂಲಕ)
(ದ್ವಿ–ಲಕೋಟೆ ಪದ್ಧತಿಯಡಿಲ್ಲಿ ಸ್ಪರ್ಧಾತ್ಮಕ ಬಿಡ್ಡಿಂಗ್))

ಬೆಂಗಳೂರು ನಗರದಲ್ಲಿ ನಿರ್ದಿಷ್ಟ ಮೂಲಸೌಕರ್ಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರವು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಅನ್ನು ಸ್ಥಾಪಿಸಿರುತ್ತದೆ. ಯೋಜನಾ ಅಭಿಯಂತರರು–01 ಇವರು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ಇವರು, ಎಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ವಿಧಾನ ಕಾಮಗಾರಿಯ ಅಭಿವೃದ್ಧಿಗಾಗಿ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. ಕಾಮಗಾರಿಯ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ/ ಇಎಂಡಿ/ಕಾಮಗಾರಿಯ ಆವಧಿ
1	Construction of Elevated corridor from Old Madras Road to Electronic City flyovervia Swami Vivekananda Metro Station Indiranagar Old Airport road - Hosur road Silk Board Junction in Bengaluru city (Length 5.20 kms) using Ultra High-Performance Fiber Reinforced Concrete (UHPFRC) under Engineering, Procurement & Construction (EPC) Mode on Lumpsum, Turkey with allowable Price Escalation based structures including maintenance for a period of 10 years. Amount put To tender (Excluding GST) : **Rs. 852.00 Crores,** Earnest Money Deposit : **Rs. 8.52 Crores (Rs. 1.00 Lakhs E-payment & Balance through Surety Bond/ E-BG).** Construc tion Period : **18 Months(In cluding Monsoon Period).**
2	Construction of Elevated Corridors from' Sholay Circle to St. John Hospital Road on Hosur Road via Anepalya Junction and Adugodi Junction (Length 5.30 kms) using UltraHigh-Performance Fiber Reinforced Concrete (UHPFRC) under Engineering, Procurement & Construction (EPC) Mode on Lumpsum, Turkey with allowable Price Escalation based structures including maintenance for a period of 10 years. Amount put To tender (Excluding GST) : **Rs.519.00 Crores.** Earnest Money Deposit : **Rs. 5.19 Crores (Rs. 1.00 Lakhs E-payment & Balance through Surety Bond/ E-BG).** Construc tion Period : **18 Months(In cluding Monsoon Period).**
3	Construction of Elevated Corridor from Doddaballapura road (Police Station Junction) to NH-7(Navayuga Flyover) at Kogilu circle via Old Yelahanka town (Length 1.50kms) using Ultra High-Performance Fiber Reinforced Concrete (UHPFRC) under Engineering, Procurement & Construction (EPC) Mode on Lumpsum, Turkey with allowable Price Escalation based structures including maintenance for a period of 10 years. Amount put To tender (Excluding GST) : **Rs.103.00 Crores.** Earnest Money Deposit : **Rs. 1.03 Crores (Rs. 1.00 Lakhs E-payment & Balance through Surety Bond/ E-BG).** Construc tion Period : **18 Months(In cluding Monsoon Period).**

ವೇಳಾಪಟ್ಟಿ : 1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳ ಲಭ್ಯತೆಯ ದಿನಾಂಕ ಮತ್ತು ಸಮಯ: 25.05.2026 ರಂದು ಸಂಜೆ 5.30 ಗಂಟೆಗೆ 2) ಪ್ರೀ ಬಿಡ್ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.06.2026 ರಂದು ಸಂಜೆ 4.00 ಗಂಟೆಗೆ. 3) ಪೂರ್ವ–ಬಿಡ್ ಸಭೆಯು 05.06.2026 ರಂದು ಮಧ್ಯಾಹ್ನ 2:30 ಗಂಟೆಗೆ. 4) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 24.06.2026 ರಂದು ಸಂಜೆ 4.00 ಗಂಟೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 25.06.2026 ರಂದು ಸಂಜೆ 4.30 ಗಂಟೆಗೆ. 6) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು: ಸೂಚನೆ ನೀಡಲಾಗುವುದು. 7) ಬಿಡ್‌ಗಳ ಮಾನ್ಯತೆ : ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದಿಂದ 180 ದಿನಗಳು.

ಸಹಿ/– ಯೋಜನಾ ಅಭಿಯಂತರರು–01,
ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್)

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ B-Smile

ಯೋಜನೆ ಅಭಿಯಂತರರ–07 ಕಚೇರಿ, ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್, ನೆಲಮಹಡಿ ಅನೆಕ್ಸ್–2 ಕಟ್ಟಡ, ಜಿಬಿಎ ಮುಖ್ಯ ಕಚೇರಿ ನರಸಿಂಹರಾಜು ಚೌಕ, ಬೆಂಗಳೂರು – 560002.

ಸಂಖ್ಯೆ: ಬಿ–ಸ್ಮೈಲ್/ಯೋಅ–07/ಟೆಂಡರ್/01/2026–27 ದಿನಾಂಕ: 20–05–2026

ಟೆಂಡರ್ ಆಹ್ವಾನ ನೋಟಿಸ್ (ಎನ್‌ಐಟಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
(ದ್ವಿಲಕೋಟೆ ಪದ್ಧತಿ ಅಡಿಯಲ್ಲಿ ಸ್ಪರ್ಧಾತ್ಮಕ ಬಿಡ್ಡಿಂಗ್)

ಕರ್ನಾಟಕ ಸರ್ಕಾರವು ಬೆಂಗಳೂರು ನಗರದಲ್ಲಿ ನಿರ್ದಿಷ್ಟ ಮೂಲಭೂತ ಸೌಕರ್ಯಗಳನ್ನು ಅನುಷ್ಠಾನಗೊಳಿಸಲು "ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್" (ಬಿ–ಸ್ಮೈಲ್) ಅನ್ನು ರಚಿಸಿದೆ. ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್" (ಬಿ–ಸ್ಮೈಲ್) ಇವರ ಪರವಾಗಿ ಯೋಜನೆ ಅಭಿಯಂತರರು–07, ಬಿ–ಸ್ಮೈಲ್ ಇವರು, ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ [ಬಿ–ಸ್ಮೈಲ್] ಅಥವಾ ತತ್ಸಮಾನವಾಗಿ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ ರೈಲ್ವೇಸ್/ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತವಾಗಿರುವ ಅರ್ಹ ಗುತ್ತಿಗೆದಾರರಿಂದ ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಮಾದರಿ ಮೂಲಕ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿಯ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಕಾಮಗಾರಿಗಳ ಹೆಸರು
1.	ಮಹಾಲಕ್ಷ್ಮಿ ಬಡಾವಣೆಯಲ್ಲಿ ಪಶ್ಚಿಮ ಕಾರ್ಡ್ ರಸ್ತೆಯಿಂದ ಹೊರವರ್ತುಲ ರಸ್ತೆಯವರೆಗೆ ಪೈಪ್‌ಲೈನ್ ರಸ್ತೆಯಲ್ಲಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಮಾದರಿ ಅಡಿಯಲ್ಲಿ ಒಪ್ಪುವ ದರ ಏರಿಕೆಯೊಂದಿಗೆ ಲಂಪ್‌ಸಮ್, ಟರ್ನ್‌ಕಿ ಮೇಲೆ ಅಲ್ಟ್ರಾ ಹೈ–ಪರ್ಫಾರ್ಮೆನ್ಸ್ ರೀಇನ್‌ಫೋರ್ಸ್ಡ್ ಕಾಂಕ್ರೀಟ್ (ಯುಹೆಚ್‌ಪಿಎಫ್‌ಆರ್‌ಸಿ) ಆಧಾರಿತ ರಚನಾತ್ಮಕಗಳನ್ನು ಬಳಸಿಕೊಂಡು 10 ವರ್ಷಗಳ ನಿರ್ವಹಣೆ ಒಳಗೊಂಡಂತೆ ಗ್ರೇಡ್ ಸಪರೇಟರ್ಸ್ ನಿರ್ಮಾಣ ಮಾಡುವುದು. (2 ಕಿಲೋ ಮೀಟರ್ ಉದ್ದ) **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.327.46 ಕೋಟಿಗಳು, ಇಎಂಡಿ ಮೊತ್ತ: ₹.3.27 ಕೋಟಿಗಳು** (₹.1.00 ಲಕ್ಷ ಇ–ಪಾವತಿ ಮತ್ತು ಶ್ಯೂರಿಟಿ ಬಾಂಡ್/ಇ–ಬಿಜಿ/ಎಫ್‌ಡಿಆರ್ ಮೂಲಕ)
2.	ತುಮಕೂರು ರಸ್ತೆಯಲ್ಲಿ ಆರ್‌ಎನ್‌ಎಸ್ ಶಾಂತಿನಿಕೇತನ ಮುಂಭಾಗ ಎಂಇಐ ಜಂಕ್ಷನ್‌ನಲ್ಲಿ (ಉದ್ದ 0.50 ಕಿಲೋ ಮೀಟರ್) ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಮಾದರಿ ಅಡಿಯಲ್ಲಿ ಒಪ್ಪುವ ದರ ಏರಿಕೆಯೊಂದಿಗೆ ಲಂಪ್‌ಸಮ್, ಟರ್ನ್‌ಕೀ ಮೇಲೆ 10 ವರ್ಷಗಳ ನಿರ್ವಹಣೆ ಒಳಗೊಂಡಂತೆ ವಿಭಜಿತ ಮೇಲ್ಸೆತುವೆ ನಿರ್ಮಾಣ ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.40.50 ಕೋಟಿಗಳು, ಇಎಂಡಿ ಮೊತ್ತ: ₹.4.05 ಕೋಟಿಗಳು** (₹.1.00 ಲಕ್ಷ ಇ–ಪಾವತಿ ಮೂಲಕ ಶ್ಯೂರಿಟಿ ಬಾಂಡ್/ ಇ–ಬಿಜಿ/ಎಫ್‌ಡಿಆರ್ ಮೂಲಕ)

<u>ಟೆಂಡರ್ ವೇಳಾಪಟ್ಟಿ</u>: (1) ಟೆಂಡರ್ ದಾಖಲೆಗಳು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **25–05–2026** ಸಂಜೆ **5:30** ಗಂಟೆಯಿಂದ ಲಭ್ಯವಿರುತ್ತವೆ. (2) ಬಿಡ್ ಪೂರ್ವಭಾವಿ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **04–06–2026**ರ **ಬೆಳಿಗ್ಗೆ 10:00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **05–06–2026**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **24–06–2026**ರ ಸಂಜೆ **4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **25–06–2026**ರ ಸಂಜೆ **4:30** ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವುದನ್ನು ತಿಳಿಸಲಾಗುವುದು

ಸಹಿ/– ಯೋಜನೆ ಅಭಿಯಂತರರು–07
ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2026–27 ದಿನಾಂಕ:19.05.2026

ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸ್ತ್ರೀ ಮತ್ತು ಪ್ರಸೂತಿ ವಿಭಾಗಕ್ಕೆ ಅವಶ್ಯವಿರುವ ವಿವಿಧ ಉಪಕರಣಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಿಮ್ಸ್ ಬೋಧಕ ಆಸ್ಪತ್ರೆಯ ಸ್ತ್ರೀ ಮತ್ತು ಪ್ರಸೂತಿ ವಿಭಾಗಕ್ಕೆ ಅವಶ್ಯವಿರುವ ವಿವಿಧ ಉಪಕರಣಗಳನ್ನು ಪೂರೈಸುವ ಕುರಿತು.	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/01/2026–27 DME/2026-27/IND2340	150.14
2	ರಿಮ್ಸ್ ಬೋಧಕ ಆಸ್ಪತ್ರೆಯ ಸ್ತ್ರೀ ಮತ್ತು ಪ್ರಸೂತಿ ವಿಭಾಗಕ್ಕೆ ಅವಶ್ಯವಿರುವ ಉಪಕರಣವನ್ನು ಪೂರೈಸುವ ಕುರಿತು.	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/02/2026–27 DME/2026-27/IND2341	42.00

1) **ಟೆಂಡರ್‌ಗಳನ್ನು ದಿನಾಂಕ:** 20.05.2026 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದು. 2) **ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 03.06.2026 ರ ಸಾಯಂಕಾಲ 5.00 ಗಂಟೆಯ ವರೆಗೆ 3) **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 05.06.2026 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

DIP/RCR/76/KSMC&A/78/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸತ್ಯದ ಮೂಲಕ ದೇವರ ದಿವ್ಯದರ್ಶನ ಪಡೆಯುವುದೇ ಎಲ್ಲ ಮತ-ಧರ್ಮಗಳ ಮುಖ್ಯ ಗುರಿಯಾಗಿದೆ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಸುರಕ್ಷತಾ ವೈಫಲ್ಯ: ದುಬಾರೆ ಕನ್ನಡಿ ರಚನಾತ್ಮಕ ಬದಲಾವಣೆಗಿದು ಕಾಲ

ಕೊಡಗು ಜಿಲ್ಲೆ ದುಬಾರೆಯ ಆನೆಗಳ ಶಿಬಿರದಲ್ಲಿ ಸಂಭವಿಸಿರುವ ಚೆನ್ನೈನ ಮೂವತ್ತಮೂರು ವರ್ಷದ ಮಹಿಳೆಯ ದುರ್ಮರಣವು ಆಕಸ್ಮಿಕ ಘಟನೆ ಮಾತ್ರವಲ್ಲ; ಅದು, ವಾಣಿಜ್ಯ ಪ್ರವಾಸೋದ್ಯಮ, ಕಳಪೆ ಸುರಕ್ಷತಾ ಯೋಜನೆ ಹಾಗೂ ವನ್ಯಜೀವಿಗಳ ಅನೂಹ್ಯ ನಡವಳಿಕೆ ಒಟ್ಟುಗೂಡಿದಾಗ ಏನಾಗಬಹುದು ಎನ್ನುವುದರ ಗಂಭೀರ ಎಚ್ಚರಿಕೆಯೂ ಹೌದು. ಒಂದು ಕೈಯಲ್ಲಿ ಮಗುವನ್ನು ಅವುಚಿಕೊಂಡು, ಇನ್ನೊಂದು ಕೈಯಿಂದ ಆನೆಯ ಕೆಳಗೆ ಸಿಲುಕಿದ್ದ ಪತ್ನಿಯನ್ನು ಎಳೆದು ರಕ್ಷಿಸಲು ಪ್ರಯತ್ನಿಸುತ್ತಿದ್ದ ಪತಿಯ ಆಕ್ರಂದನದ ದೃಶ್ಯಗಳು ಮನಕಲಕುವಂತಿವೆ. ಕಾವೇರಿ ನದಿಯಲ್ಲಿ ಆನೆಗಳಿಗೆ ಸ್ನಾನ ಮಾಡಿಸುತ್ತಿದ್ದಾಗ ಕಂಜನ್ ಹೆಸರಿನ ಆನೆ ಇದ್ದಕ್ಕಿದ್ದಂತೆ ರೊಚ್ಚಿಗೆದ್ದು, ಮಾರ್ತಾಂಡ ಹೆಸರಿನ ಆನೆಯ ಮೇಲೆ ದಾಳಿ ನಡೆಸಿದಾಗ ಈ ದುರ್ಘಟನೆ ಸಂಭವಿಸಿದೆ. ಸಂಘರ್ಷದಲ್ಲಿ ಸಮತೋಲನ ಕಳೆದುಕೊಂಡು ಕೆಳಗೆಬಿದ್ದ ಮಾರ್ತಾಂಡನ ಕೆಳಗೆ ಸಿಲುಕಿದ ಮಹಿಳೆ ನಜ್ಜುಗುಜ್ಜಾಗಿದ್ದಾರೆ. ಕಂಜನ್ ದಂತದ ಇರಿತಕ್ಕೊಳಗಾಗಿದ್ದ ಮಾರ್ತಾಂಡನೂ ಸಾವಿಗೀಡಾಗಿದ್ದಾನೆ. ಈ ದುರಂತದಷ್ಟೇ ಕಳವಳಕಾರಿ ಸಂಗತಿ, ಅಪಾಯದ ಸಂದರ್ಭಗಳಲ್ಲಿ ನೆರವು ಒದಗಿಸಲು ಅಗತ್ಯವಾದ ತುರ್ತು ಸಿದ್ಧತೆಯ ಗೈರುಹಾಜರಿ. ನೂರಾರು ಪ್ರವಾಸಿಗರನ್ನು ಟನ್‌ಗಟ್ಟಲೆ ತೂಕದ ಆನೆಗಳ ಸಮೀಪಕ್ಕೆ ಕರೆದೊಯ್ಯುವ ಸ್ಥಳದಲ್ಲಿ ಗಟ್ಟಿಯಾದ ತಡೆಗೋಡೆಗಳಾಗಲೀ, ಜನಸಂದಣಿಯನ್ನು ನಿಯಂತ್ರಿಸುವ ಸಮರ್ಪಕ ವ್ಯವಸ್ಥೆಯಾಗಲೀ ಇಲ್ಲದಿರುವುದು ಆಶ್ಚರ್ಯಕರ. ತುರ್ತು ಚಿಕಿತ್ಸಾ ಸೌಲಭ್ಯ ಇಲ್ಲದಿರುವುದು, ಸ್ಥಳದಲ್ಲಿ ಆ್ಯಂಬುಲೆನ್ಸ್ ಲಭ್ಯವಿಲ್ಲದಿರುವುದು ಪ್ರವಾಸಿಗರ ಜೀವಗಳನ್ನು ವ್ಯವಸ್ಥೆ ಲಘುವಾಗಿ ಭಾವಿಸಿರುವ ಸಂಕೇತದಂತಿದೆ.



ದುಬಾರೆಯ ಆನೆ ಶಿಬಿರದಲ್ಲಿನ ದುರಂತವು ಸುರಕ್ಷತಾ ವ್ಯವಸ್ಥೆಯ ವೈಫಲ್ಯವನ್ನು ಹಾಗೂ ಕಟ್ಟುನಿಟ್ಟಿನ ನಿಯಾಮವಳಿ ಅನುಷ್ಠಾನದ ಅಗತ್ಯವನ್ನು ಒತ್ತಿಹೇಳುವಂತಿದೆ.

ಕಂಜನ್ ಆನೆ ಈ ಹಿಂದೆಯೂ ಆಕ್ರಮಣಕಾರಿಯಾಗಿ ವರ್ತಿಸಿರುವ ಉದಾಹರಣೆಗಳಿವೆ. ಇರಿತದಿಂದ ಗಾಯಗೊಂಡಿದ್ದ ಮಾರ್ತಾಂಡ ಮೃತಪಟ್ಟಿರುವುದು ಕಂಜನ್ ದಾಳಿ ಎಷ್ಟು ತೀವ್ರವಾಗಿತ್ತು ಎನ್ನುವುದನ್ನು ಹೇಳುವಂತಿದೆ. ಬಂಧಿಸಿದ ಆನೆಗಳಿಗೆ ತರಬೇತಿ ನೀಡಲಾಗಿದ್ದರೂ, ಅವು ಸ್ವಭಾವತಃ ವನ್ಯಜೀವಿಗಳ ಪ್ರವೃತ್ತಿಯನ್ನೇ ಹೊಂದಿರುತ್ತವೆ. ದುರಂತದ ನಂತರ ಸರ್ಕಾರ ಹೊಸ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಜಾರಿಗೊಳಿಸಲು ನಿರ್ಧರಿಸಿದೆ. ಆನೆಗಳಿಂದ ಪ್ರವಾಸಿಗರು ನೂರು ಅಡಿ ಅಂತರ ಕಾಪಾಡಿಕೊಳ್ಳುವುದು, ಅವುಗಳನ್ನು ಮುಟ್ಟುವುದಕ್ಕೆ ಹಾಗೂ ಆಹಾರ ನೀಡುವುದಕ್ಕೆ ನಿರ್ಬಂಧ, ಸಮೀಪದಿಂದ ಸೆಲ್ಫಿ ತೆಗೆದುಕೊಳ್ಳುವುದಕ್ಕೆ ನಿಷೇಧ ಕ್ರಮಗಳು ಎಸ್‌ಒಪಿಯಲ್ಲಿ ಸೇರಿವೆ. ಈ ಕ್ರಮಗಳ ಮೂಲಕ ಈ ಮೊದಲಿನ ವ್ಯವಸ್ಥೆ ನಿರ್ಲಕ್ಷ್ಯದಿಂದ ಕೂಡಿತ್ತು ಎನ್ನುವುದನ್ನು ಒಪ್ಪಿಕೊಂಡಂತಾಗಿದೆ. ಸುರಕ್ಷತೆಗೆ ಸಂಬಂಧಿಸಿದಂತೆ ನಾವು ಹೊಸತಾಗಿ ಏನನ್ನೂ ಅನ್ವೇಷಿಸಬೇಕಾಗಿಲ್ಲ. ಶ್ರೀಲಂಕಾದ ಪಿನ್ನಾವಾಲಾ ಆನೆಗಳ ಅನಾಥಾಶ್ರಮದಲ್ಲಿನ ನಿಯಮಾವಳಿಗಳನ್ನು ಪಠ್ಯದಂತೆ ಗಮನಿಸಬಹುದು. ಆನೆಗಳ ಸ್ನಾನದ ಸಮಯದಲ್ಲಿ ಪ್ರವಾಸಿಗರನ್ನು ಭೌತಿಕವಾಗಿ ದೂರವಿಡುವ ಹಾಗೂ ಆಕ್ರಮಣಕಾರಿ ಆನೆಗಳನ್ನು ಪ್ರತ್ಯೇಕವಾಗಿ ಇರಿಸುವ ಕ್ರಮಗಳನ್ನು ಅಲ್ಲಿ ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತದೆ. ದೊಡ್ಡ ಪ್ರಮಾಣದ ಸಿಬ್ಬಂದಿ ಹಾಗೂ ತುರ್ತು ರಕ್ಷಣಾ ವ್ಯವಸ್ಥೆಯೂ ಅಲ್ಲಿದೆ. ಅಲ್ಲಿ ಸುರಕ್ಷತೆಗೆ ಆದ್ಯತೆಯೇ ಹೊರತು ಪ್ರದರ್ಶನಕ್ಕಲ್ಲ.

ಪರಿಸರಸಂಬಂಧಿ ಮತ್ತು ನೈತಿಕತೆಗೆ ಸಂಬಂಧಿಸಿದ ಬಹು ಮುಖ್ಯ ಪ್ರಶ್ನೆಗಳನ್ನು ನಾವೀಗ ಎದುರಿಸಲೇಬೇಕಿದೆ. ಮನುಷ್ಯ ಮತ್ತು ವನ್ಯಜೀವಿ ಸಂಘರ್ಷದ ಘಟನೆಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಸೆರೆ ಹಿಡಿದು ಬಂಧನದಲ್ಲಿ ಇರಿಸಿರುವ ಆನೆಗಳನ್ನು ಏನು ಮಾಡಬೇಕು? ಆನೆಗಳ ದಾಳಿಯು ಸಾಮಾನ್ಯವಾಗಿರುವ ಪ್ರದೇಶಗಳಲ್ಲಿ ಪ್ರವಾಸಿ ಆಕರ್ಷಣೆಯ ರೂಪದಲ್ಲಿ ಅಥವಾ ದೇವಸ್ಥಾನಗಳ ಆಸ್ತಿಯ ರೂಪದಲ್ಲಿ ಅವುಗಳನ್ನು ಬಳಸಿಕೊಳ್ಳಬೇಕೆ? ಅವುಗಳ ವಾಸಸ್ಥಳದ ಸಂರಕ್ಷಣೆ ಹಾಗೂ ಮನುಷ್ಯ–ವನ್ಯಜೀವಿ ಸಂಘರ್ಷವನ್ನು ವೈಜ್ಞಾನಿಕ ಕ್ರಮದಲ್ಲಿ ಶಮನಗೊಳಿಸಲು ಸರ್ಕಾರ ದೀರ್ಘಕಾಲೀನ ಹೂಡಿಕೆ ಮಾಡಬೇಕೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದರ ಜೊತೆಗೆ, ಮರುಕಳಿಸುತ್ತಿರುವ ಕಹಿ ಘಟನೆಗಳಿಂದ ಕೊಡಗಿನ ವರ್ಚಸ್ಸಿಗೆ ಧಕ್ಕೆ ಆಗುತ್ತಿರುವುದನ್ನೂ ಗಮನಿಸಬೇಕಾಗಿದೆ. ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಕಳೆದ ಎರಡು ತಿಂಗಳ ಅವಧಿಯಲ್ಲಿ ಕೊಡಗಿನಲ್ಲಿ ಸಂಭವಿಸುತ್ತಿರುವ ಮೂರನೇ ದುರ್ಘಟನೆ ಇದಾಗಿದೆ. ಹೋಂಸ್ಟೇನಲ್ಲಿ ಅಮೆರಿಕದ ಪ್ರವಾಸಿಗರೊಬ್ಬರ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಹಾಗೂ ತಡಿಯಾಂಡಮೋಳ್ ಪರ್ವತ ಚಾರಣದ ವೇಳೆ ಕೇರಳದ ಯುವತಿ ನಾಪತ್ತೆಯಾಗಿ, ಮೂರು ದಿನಗಳ ನಂತರ ಪತ್ತೆಯಾದ ಘಟನೆಗಳು ಕೊಡಗನ್ನು ಅನಪೇಕ್ಷಿತ ಘಟನೆಗಳಿಂದಾಗಿ ಸುದ್ದಿಯಲ್ಲಿರಿಸಿದ್ದವು. ಈಗ ದುಬಾರೆ ದುರಂತದ ಸರದಿ. ಇಂಥ ಘಟನೆಗಳಿಂದ ಕೊಡಗು ಮಾತ್ರವಲ್ಲ, ರಾಜ್ಯ ಹಾಗೂ ದೇಶದ ಪ್ರವಾಸೋದ್ಯಮಕ್ಕೂ ಹಿನ್ನಡೆ ಉಂಟಾಗುತ್ತದೆ. ಬದಲಾವಣೆಗೆ ಸಂಬಂಧಿಸಿದಂತೆ ದುಬಾರೆ ದುರಂತವನ್ನು ಸರ್ಕಾರ ಒಂದು ಸಂಕ್ರಮಣ ಬಿಂದುವನ್ನಾಗಿ ಪರಿಗಣಿಸಬೇಕು. ವನ್ಯಜೀವಿ ಪ್ರವಾಸೋದ್ಯಮವು ಅದೃಷ್ಟವನ್ನು ಆಧರಿಸಿ ನಡೆಯುವುದು ಸಾಧ್ಯವಿಲ್ಲ. ಪ್ರವಾಸಿಗರ ಸುರಕ್ಷತೆ ಹಾಗೂ ವನ್ಯಜೀವಿಗಳ ಹಿತಾಸಕ್ತಿ – ಎರಡಕ್ಕೆ ಸಂಬಂಧಿಸಿದಂತೆಯೂ ವೃತ್ತಿಪರತೆ, ವೈಜ್ಞಾನಿಕ ನಿರ್ವಹಣೆ ಹಾಗೂ ರಾಜಿಯಾಗದ ಸುರಕ್ಷತಾ ಮಾನದಂಡಗಳು ಅಪೇಕ್ಷಣೀಯ.

‘ಬ್ರ್ಯಾಂಡ್ ಬೆಂಗಳೂರು’ ಏನಾಯ್ತು?

ಬೆಂಗಳೂರಿನ ಬಹುತೇಕ ರಸ್ತೆಗಳ ಸ್ಥಿತಿ ಭಯಾನಕವಾಗಿದೆ. ಬಳಕೆಯಾಗದ ಸಾವಿರಾರು ಕಾರು ಮತ್ತು ದ್ವಿಚಕ್ರವಾಹನಗಳು ಫುಟ್‌ಪಾತ್ ಅತಿಕ್ರಮಿಸಿವೆ. ‘ಬ್ರ್ಯಾಂಡ್ ಬೆಂಗಳೂರು’ ಘೋಷಣೆ ಏನಾಯಿತು?

ಬಿ. ಭಾಸ್ಕರ ರಾವ್, ನಿವೃತ್ತ ಐಪಿಎಸ್ ಅಧಿಕಾರಿ, ‘ಎಕ್ಸ್’ನಿಂದ

ಕಿಡಿನುಡಿ

ದೇಶದಲ್ಲಿ ಆರ್ಥಿಕ ಬಿರುಗಾಳಿ ಉಲ್ಬಣಿಸುತ್ತಿದೆ. ರೈತರು, ಕಾರ್ಮಿಕರು, ವ್ಯಾಪಾರಿಗಳು ಕಣ್ಣೀರು ಸುರಿಸುತ್ತಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಇಟಲಿಯಲ್ಲಿ ಚಾಕೊಲೇಟ್ ಹಂಚಿ ರೀಲ್ಸ್ ಮಾಡುತ್ತಿದ್ದಾರೆ.

ರಾಹುಲ್ ಗಾಂಧಿ, ಲೋಕಸಭೆಯ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 21-5-2001

● **ಹಿಂದೂಗಳಿಗೆ ವಸ್ತ್ರಸಂಹಿತೆ**

ನವದೆಹಲಿ, ಮೇ 20 (ಯುಎನ್‌ಐ)– ಅಫ್ಗಾನಿಸ್ತಾನದಲ್ಲಿರುವ ಅಲ್ಪಸಂಖ್ಯಾತ ಹಿಂದೂಗಳು ಹಳದಿ ವಸ್ತ್ರ ಧರಿಸಬೇಕು ಹಾಗೂ ಶರಿಯತ್ ಅನುಸರಿಸಬೇಕು. ಇಲ್ಲದಿದ್ದಲ್ಲಿ ಕಾನೂನಿನ ಶಿಕ್ಷೆಗೆ ಒಳಗಾಗಬೇಕು ಎಂದು ತಾಲಿಬಾನ್‌ನ ಮೂಲಭೂತವಾದಿ ಆಡಳಿತಗಾರರು ಆದೇಶಿಸಿದ್ದಾರೆ.

ಮುಸ್ಲಿಮೇತರರು (ಹಿಂದೂಗಳು) ಪ್ರತ್ಯೇಕ ಹಳದಿ ವರ್ಣದ ಉಡುಗೆಗಳನ್ನು ಧರಿಸಬೇಕು ಎಂದು ತಿಳಿಸಿರುವ ವಸ್ತ್ರಸಂಹಿತೆಯಲ್ಲಿ, ಹಿಂದೂಗಳು ವಾಸಿಸುವ ಮನೆಯ ಮುಂಭಾಗದಲ್ಲಿ ಕನಿಷ್ಠ ಎರಡು ಮೀಟರ್ ಉದ್ದದ ಹಳದಿಬಟ್ಟೆ ತೂಗುಹಾಕಬೇಕಿದೆ.

● **ಫುಟ್‌ಬಾಲ್: ಭಾರತಕ್ಕೆ ಜಯ**

ಬೆಂಗಳೂರು, ಮೇ 20– ಭಾರತ ತಂಡವು ವಿಶ್ವಕಪ್ ಫುಟ್‌ಬಾಲ್ ಅರ್ಹತಾ ಸುತ್ತಿನ ಏಷ್ಯಾ ವಲಯದ 8ನೇ ಗುಂಪಿನ ಕೊನೆಯ ಪಂದ್ಯದಲ್ಲಿ 5–0 ಗೋಲುಗಳ ಅಂತರದಿಂದ ಬ್ರೂನಿ ವಿರುದ್ಧ ಜಯಗಳಿಸಿತು.

ಎರಡನೇ ಸುತ್ತಿಗೆ ಪ್ರವೇಶಿಸುವ ಅವಕಾಶವನ್ನು ಕಳೆದುಕೊಂಡಿರುವ ಭಾರತ ತಂಡವು ಎಂಟನೇ ಗುಂಪಿನಲ್ಲಿ ಎರಡನೇ ಸ್ಥಾನವನ್ನು ಪಡೆಯುವಲ್ಲಿ ಸಹ ವಿಫಲವಾಯಿತು. ಈ ಗುರಿ ಸಾಧನೆಗೆ ಭಾರತ ತಂಡವು ಬ್ರೂನಿ ವಿರುದ್ಧ ಆರು ಗೋಲು ಗಳಿಸಬೇಕಿತ್ತು.

75 ವರ್ಷಗಳ ಹಿಂದೆ

ಸೋಮವಾರ, 21-5-1951

● **ಬ್ಯಾಂಕ್ ಲೂಟಿಯ ಆರೂವರೆ ಲಕ್ಷ ರೂಪಾಯಿ ವಶ**

ಮುಂಬಯಿ, ಮೇ 20– ಲಾಯ್ಡ್ಸ್ ಬ್ಯಾಂಕ್ ದರೋಡೆಯಲ್ಲಿ ದರೋಡೆಕಾರರು ಉಪಯೋಗಿಸಿದ ಮೂರು ರಿವಾಲ್ವರುಗಳು ಮತ್ತು ಅವರು ಲೂಟಿ ಮಾಡಿದ ಆರೂವರೆ ಲಕ್ಷ ರೂ.ಗಳ ಮೊಬಲಗು ಮುಂಬೈ ಪೊಲೀಸರ ವಶವಾಗಿದೆ.

ಉಳಿದ ಐದೂವರೆ ಲಕ್ಷ ರೂ.ಗಳಷ್ಟು ಮೊಬಲಗು ವಶಪಡಿಸಿಕೊಳ್ಳುವುದಕ್ಕೆ ಸಹಕಾರಿಯಾಗುವ ಚಿಹ್ನೆಗಳು ಪೊಲೀಸರಿಗೆ ದೊರಕಿವೆಯೆಂದೂ ಹೇಳಲಾಗಿದೆ.

● **ಕಾಗೋಡಿನಲ್ಲಿ ಮತ್ತೆ ಏಳು ಮಂದಿ ಬಂಧನ**

ಸಾಗರ, ಮೇ 20– ಕಾಗೋಡಿನ ರೈತ ಸತ್ಯಾಗ್ರಹ ಮುಂದುವರಿಯುತ್ತಿದೆ. ಶಿವಮೊಗ್ಗದ ರಾಮಯ್ಯ ಮತ್ತಿತರ ಆರು ಮಂದಿ ಬಂಧಿತರಾಗಿದ್ದಾರೆ.

ಎಸ್‌ಐಆರ್: ಅವರು, ನಾವು-ನೀವು!

ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

> ಬಲಿಷ್ಠ ವರ್ಗ ಸಮಾಜದಲ್ಲಿ ಶುದ್ಧ–ಅಶುದ್ಧ ವರ್ಗಗಳನ್ನು ರೂಪಿಸುವಂತೆ, ದೇಶದ ಮತದಾರರ ಶುದ್ಧೀಕರಣ ಪ್ರಕ್ರಿಯೆ ‘ಎಸ್‌ಐಆರ್’ ರೂಪದಲ್ಲಿ ನಡೆಯುತ್ತಿದೆ. ದೇಶದ ಕೋಟ್ಯಂತರ ನಾಗರಿಕರ ಅಸ್ತಿತ್ವದ ಬಗ್ಗೆ ಪ್ರಶ್ನೆ ಎದುರಾಗಿದೆ. ಕರ್ನಾಟಕದ ಬಹುಭಾಷಿಕ ಪರಿಸರ ಎಚ್ಚರದಿಂದ ಇರಬೇಕಾದ ಸಮಯವಿದು.

ಫ್ರೆಂಚ್ ಮಾನವಶಾಸ್ತ್ರಜ್ಞ ಲೂಯಿ ಡ್ಯೂಮೋ ‘ಹಿಂದೂ ಸಮಾಜವು ಮೂಲತಃ ‘ಶುದ್ಧ’ ಮತ್ತು ‘ಅಶುದ್ಧ’ ಎಂಬ ಪರಸ್ಪರ ವಿರೋಧವಾಗಿರುವ, ಪರಸ್ಪರ ಅವಲಂಬಿತವೂ ಆಗಿರುವ ಪರಿಕಲ್ಪನೆಯ ಮೇಲೆ ನಿಂತಿದೆ’ ಎಂದು ವಾದಿಸಿದ್ದಾರೆ. ತಮ್ಮ ವಾದವನ್ನು ಮುಂದುವರಿಸಿದ ಅವರು, ‘ಜಾತಿಯ ಶ್ರೇಣೀಕರಣವು ಸಾಮಾಜಿಕ–ಆರ್ಥಿಕ ಅಸಮಾನತೆಯನ್ನು ಪ್ರತಿಪಾದಿಸುವುದರ ಜೊತೆಗೆ ಆಲೋಚನೆಗಳು ಮತ್ತು ಮೌಲ್ಯಗಳಲ್ಲಿಯೂ ಅಸಮಾನತೆಯನ್ನು ಪ್ರತಿಪಾದಿಸುತ್ತದೆ’ ಎಂದು ಹೇಳುತ್ತಾರೆ. ಸಮಾಜದ ಬಲಿಷ್ಠ ವರ್ಗವೇ ಯಾವುದು ಶುದ್ಧ, ಯಾವುದು ಅಶುದ್ಧ ಎಂಬುದನ್ನು ನಿರ್ಣಯಿಸಿ, ಶುದ್ಧವು ಅಶುದ್ಧಕ್ಕಿಂತ ಹೇಗೆ ಶ್ರೇಷ್ಠವಾಗಿರುತ್ತದೆ ಎಂದು ಇತರರಿಗೆ ನಿರ್ದೇಶನ ನೀಡುತ್ತದೆ. ದುರ್ಬಲರಿಗೆ ಅವುಗಳನ್ನು ಒಪ್ಪಿಕೊಳ್ಳದೆ ಬೇರೆ ಹಾದಿಯಿರುವುದಿಲ್ಲ.

ಭಾರತದ ಚುನಾವಣಾ ಆಯೋಗವು ತಂದಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಅಶುದ್ಧಗೊಂಡಿರುವ ಮತದಾರರ ಪಟ್ಟಿಯನ್ನು ಶುದ್ಧೀಕರಣಗೊಳಿಸುವ ಕೆಲಸವಾಗಿದೆ. ಈ ಕೆಲಸದಲ್ಲಿ ಅದು ಸುಮಾರು 5.20 ಕೋಟಿ ಜನರನ್ನು ಅನರ್ಹರೆಂದು ಪರಿಗಣಿಸಿತು. ಅನರ್ಹರಾದ ಇಷ್ಟು ದೊಡ್ಡ ಸಂಖ್ಯೆಯ ಜನರು ಏನಾಗುತ್ತಾರೆ? ಮತ್ತೆ ಅವರೆಲ್ಲ ಶುದ್ಧೀಕರಣಕ್ಕೆ ಒಳಪಟ್ಟು ‘ಘರ್‌ವಾಪ್ಸಿ’ಗೆ ಒಳಪಡುತ್ತಾರೋ, ಗಡೀಪಾರಾಗುತ್ತಾರೋ ಅಥವಾ ಶಂಕಿತ ಪ್ರಜೆಗಳಾಗಿ ಜೀವಮಾನಪರ್ಯಂತ ನರಳುತ್ತಿರುತ್ತಾರೋ ಗೊತ್ತಿಲ್ಲ. ಕಾನೂನುಗಳೂ ಸ್ಪಷ್ಟ ಹಾದಿ ತೋರಿಸುವುದಿಲ್ಲ. ಸುಪ್ರೀಂ ಕೋರ್ಟ್ ‘ಈಗ ಹೀಗೇ ಇರಲಿ, ಮುಂದೆ ನೋಡೋಣ’ ಎಂದು ಸಮಾಧಾನದ ಮಾತನ್ನಷ್ಟೇ ಹೇಳಿದೆ.

ಚುನಾವಣಾ ಆಯೋಗಕ್ಕೆ ಪೌರತ್ವವನ್ನು ನಿರ್ಧರಿಸುವ ಹಕ್ಕಿಲ್ಲ. ಆದರೆ, ಅದು ಕೋಟ್ಯಂತರ ಜನರನ್ನು ಮತದಾನ ಪ್ರಕ್ರಿಯೆಯಿಂದ ಹೊರಗಿಟ್ಟು ಅವರನ್ನು ಶಾಶ್ವತವಾದ ಸಂಶಯದ ಚೌಕಟ್ಟಿನಲ್ಲಿ ಬಂಧಿಸಬಹುದು. ‘ಸಂಶಯಾಸ್ಪದ ಮತದಾರರು’ ಎಂಬ ಮಾತನ್ನು ಆಯೋಗವು ಈಗಾಗಲೇ ಬಳಸಿದೆ. ಈ ಶಂಕಿತರು ಯಾರೆಂದರೆ, ಸರಿಯಾದ ವಿಳಾಸ ಇಲ್ಲದ ಬಡವರು, ಆಧಾರ್ ಕಾರ್ಡ್‌ನಲ್ಲಿ ಕಾಗುಣಿತ ತಪ್ಪಾದವರು, ಹುಟ್ಟುವಾಗ ತಮ್ಮದೇ ಬರ್ತ್ ಸರ್ಟಿಫಿಕೇಟ್ ಮಾಡಿಸಿಕೊಳ್ಳದವರು, ಹೊಟ್ಟೆಪಾಡಿಗೆ ವಲಸೆ ಬಂದವರು, ಒಟ್ಟಿನಲ್ಲಿ ತಾವು ಯಾರೆಂದು ತಮಗೇ ಗೊತ್ತಿಲ್ಲದವರು!

ಸರಿಯಾದ ವಿಳಾಸ ಇಲ್ಲದವರನ್ನು ಏನು ಮಾಡಬಹುದು ಎಂಬ ಪ್ರಶ್ನೆಗೂ ಆಯೋಗ ಉತ್ತರಿಸಲು ಪ್ರಯತ್ನಿಸಿದೆ. ಉದಾಹರಣೆಗೆ, 2025ರ ಡಿಸೆಂಬರ್‌ನಲ್ಲಿ ಅಸ್ಸಾಂನ ನಾಗಾಂವ್ ನಿವಾಸಿ ಅಹೇದಾ ಖತುನ್ ಅವರನ್ನು ಬಾಂಗ್ಲಾಕ್ಕೆ ಗಡೀಪಾರು ಮಾಡಲಾಯಿತು. ಕಾರಣ, 2019ರಲ್ಲಿ ವಿದೇಶಿಯರ ನ್ಯಾಯಮಂಡಳಿಯು ಅವರನ್ನು ವಿದೇಶಿಯೆಂದು ಘೋಷಿಸಿದ್ದು. ಇದರ ಅರ್ಥ ಇಷ್ಟೇ– ಮತದಾರರ ಪಟ್ಟಿಯಿಂದ ಹೊರಹೋದವರ ಪೌರತ್ವ ಉಳಿಯುವುದು ಕಷ್ಟ. ಅಂಥವರು ದೇಶವಿಲ್ಲದೇ ಬದುಕಬೇಕು ಅಥವಾ ದೇಶಾಂತರ ಹೋಗಬೇಕು. ರಾಷ್ಟ್ರೀಯತೆ ಪ್ರಜ್ವಲಿಸುತ್ತಿರುವ ಇಂದಿನ ಕಾಲದಲ್ಲಿ ದೇಶಪ್ರೇಮ ತೋರಿಸಲು ಯಾವುದಾದರೂ ಒಂದು ದೇಶ ಇಲ್ಲದಿದ್ದರೆ ಹೇಗೆ? ಈಚಿನ ದಿನಗಳಲ್ಲಿ ದೇಶವಿಲ್ಲದ ಬಡವರನ್ನು ‘ನುಸುಳುಕೋರರು’ ಎಂದು ಕರೆಯುತ್ತಾರೆ. ಇಂಥವರನ್ನು ಉಲ್ಲೇಖಿಸಿ ಚುನಾವಣೆಗಳನ್ನು ಗೆಲ್ಲುವವರೂ ಇದ್ದಾರೆ.

ಆಗಸ್ಟ್ 2024ರಲ್ಲಿ, ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಅಸ್ಸಾಂನಲ್ಲಿ 1,19,570 ‘ಡಿ’ ಮತದಾರರಿದ್ದಾರೆ ಎಂದು ಘೋಷಿಸಿದರು. ಅಸ್ಸಾಂನಲ್ಲಿ ಪೌರತ್ವ ಸಾಬೀತುಪಡಿಸಲು ವಿಫಲರಾದ ಅಥವಾ ಸಂಶಯಾಸ್ಪದ ಪೌರತ್ವ ಹೊಂದಿರುವವರನ್ನು ‘ಡಿ’ ಮತದಾರರು (Doubtful/Dubious Voters) ಎಂದು ಕರೆಯಲಾಗುತ್ತದೆ. 1997ರಲ್ಲಿ ಚುನಾವಣಾ ಆಯೋಗವು ಪರಿಚಯಿಸಿದ ಈ ವರ್ಗದ ಅಡಿಯಲ್ಲಿ ಬರುವ ‘ಅನುಮಾನಾಸ್ಪದ ವ್ಯಕ್ತಿ’ಗಳಿಗೆ ಮತದಾನದ ಹಕ್ಕು ಇರುವುದಿಲ್ಲ ಮತ್ತು ಅಂಥ ಪ್ರಕರಣಗಳ ತನಿಖೆಗೆ ವಿದೇಶಿಯರ ನ್ಯಾಯಮಂಡಳಿಗಳಿಗೆ (ಫಾರಿನರ್ಸ್ ಟ್ರಿಬ್ಯುನಲ್ಸ್) ‘ಅನುಮಾನಾಸ್ಪದ’ ವ್ಯಕ್ತಿಗಳನ್ನು ಕಳಿಸಿಕೊಡಲಾಗುತ್ತದೆ. ನ್ಯಾಯಮಂಡಳಿಯಿಂದ ನಿರ್ದೋಷಿ ಎಂದು ಸಾಬೀತಾದ ನಂತರವೇ ಈ ಹಣೆಪಟ್ಟಿಯನ್ನು ತೆಗೆದುಹಾಕಲಾಗುತ್ತದೆ. ವಲಸೆ ಅಕ್ರಮ ಸಾಬೀತಾದರೆ ಅಂಥವರನ್ನು ‘ಬಂಧನ ಶಿಬಿರ’ಗಳಲ್ಲಿ ಇರಿಸಬಹುದು, ಗಡೀಪಾರು ಮಾಡಬಹುದು. ಹೀಗಿದ್ದರೂ 1955ರ ಪೌರತ್ವ ಕಾಯ್ದೆಯಾಗಲಿ, 2003ರ ಪೌರತ್ವ ನಿಯಮಗಳಾಗಲಿ ‘ಸಂಶಯಾಸ್ಪದ ಮತದಾರರು’ ಅಥವಾ ‘ಸಂಶಯಾಸ್ಪದ ಪೌರತ್ವ’ ಎಂದರೇನು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವುದಿಲ್ಲ. ಆಗಸ್ಟ್ 2024ರಲ್ಲಿ, ಹಿಮಂತ ಬಿಸ್ವ ಶರ್ಮಾ ಘೋಷಿಸಿದ 1,19,570 ‘ಡಿ’ ಮತದಾರರಲ್ಲಿ 54,411 ಜನರನ್ನು ವಿದೇಶಿಯರೆಂದು ಘೋಷಿಸಲಾಯಿತು. ಏಪ್ರಿಲ್ 2025ರ ಹೊತ್ತಿಗೆ ಅಸ್ಸಾಂನಲ್ಲಿ ಬರೀ 25,000 ‘ಡಿ’ ವೋಟರ್‌ಗಳು ಉಳಿದಿದ್ದಾರೆ ಎಂದು ಹೇಳಲಾಯಿತು. ಈ ನಡುವೆ ವಿದೇಶಿಯರ ನ್ಯಾಯಮಂಡಳಿಗಳು ದೊಡ್ಡ ಸಂಖ್ಯೆಯ ಬಂಗಾಳಿ ಹಿಂದೂ ಮತದಾರರನ್ನು ‘ನಂಬಲರ್ಹ ವ್ಯಕ್ತಿ’ಗಳೆಂದು ಸಾರಿತು. ಮುಸ್ಲಿಮರು ಅನುಮಾನಾಸ್ಪದ ವ್ಯಕ್ತಿಗಳಾಗಿಯೇ ಉಳಿದರು.

ಮತದಾರರ ಪಟ್ಟಿಯ ಶುದ್ಧೀಕರಣವು ಪೌರತ್ವ (ತಿದ್ದುಪಡಿ) ಕಾಯ್ದೆ 2019 (ಸಿಎಎ) ಅನ್ನು ನೆನಪಿಸಿದರೆ ಅಚ್ಚರಿ ಪಡಬೇಕಾಗಿಲ್ಲ. ಆ ಕಾಯ್ದೆಯು ದಾಖಲೆರಹಿತ ಧಾರ್ಮಿಕ ಅಲ್ಪಸಂಖ್ಯಾತರನ್ನು ಮೊದಲು ಸಂಶಯದಿಂದ ಕಂಡಿತು. ಆಮೇಲೆ ಭಾರತೀಯ ಪೌರತ್ವಕ್ಕೆ ಅರ್ಹತೆ ಪಡೆಯಲು ಒಬ್ಬ ವ್ಯಕ್ತಿಯು ಗೃಹ ಸಚಿವಾಲಯವು ನಿಗದಿಪಡಿಸಿದ ಷರತ್ತುಗಳನ್ನು ಪೂರೈಸಬೇಕು ಎಂದು ಹೇಳಿತು. ಭಾರತ ಸರ್ಕಾರ ಇದನ್ನು ‘ದೇಶಕ್ಕಾಗಿ ಮಾನವೀಯ ಹಸ್ತಕ್ಷೇಪ’ ಎಂದು ಚಂದವಾಗಿ ಹೇಳಿತು. ಈ ಹಸ್ತಕ್ಷೇಪದಲ್ಲಿ ಮುಸ್ಲಿಮರನ್ನು ಹೊರಗಿಡುವ ಕೆಲಸ ನಡೆಯುತ್ತಿದೆ ಎಂದು ವಿಮರ್ಶಕರು, ವಿರೋಧ ಪಕ್ಷಗಳು ಮತ್ತು ಅಮ್ನೆಸ್ಟಿ ಇಂಟರ್‌ನ್ಯಾಷನಲ್‌ನಂತಹ ಮಾನವ ಹಕ್ಕುಗಳ ಸಂಸ್ಥೆಗಳು ಖಾರವಾಗಿ ಪ್ರತಿಕ್ರಿಯಿಸಿದವು.

ಬಡವರ ಸಮಸ್ಯೆ ಇರುವುದು ತಾವ್ಯಾರು ಎಂಬುದನ್ನು ಸರ್ಕಾರ ಅಪೇಕ್ಷಿಸಿದ ರೀತಿಯಲ್ಲಿ ಸಾಬೀತುಪಡಿಸಲು ಸಾಧ್ಯವಾಗದೆ ಇರುವುದರಲ್ಲಿ. ಅಧಿಕಾರಿಗಳು ಕಾಗದ ಪತ್ರಗಳನ್ನಷ್ಟೇ ನೋಡುತ್ತಾರೆ ಮತ್ತು ಹಾಗೆ ನೋಡುವಾಗ ಪ್ರಜೆಗಳಿಗೆ ಅಗತ್ಯವಿರುವ ಕಾಗದ ಪತ್ರಗಳನ್ನು ಸಿದ್ಧ ಮಾಡಿಕೊಡುವುದು ತಮ್ಮದೇ ಕೆಲಸ ಎಂಬುದನ್ನು ಮರೆತಿರುತ್ತಾರೆ. ದೈನಂದಿನ ಕೆಲಸಗಳಲ್ಲಿ ಮಗ್ನರಾಗಿರುವ ಕೂಲಿ ಕಾರ್ಮಿಕರಿಗೆ, ವಲಸಿಗರಿಗೆ ಮತ್ತು ಬಡವರಿಗೆ ಅಧಿಕಾರಿಗಳು ತಮ್ಮ ಅನುಕೂಲ ನೋಡಿಕೊಂಡು ನಿಗದಿಪಡಿಸಿದ ದಿನದಂದು ನ್ಯಾಯಾಲಯಕ್ಕೆ ಹಾಜರಾಗಲಾಗಲು ಸೂಚಿಸುತ್ತಾರೆ. ಮಳೆ, ಪ್ರವಾಹ, ಕಾಗದ ಪತ್ರಗಳ ರಕ್ಷಣೆಗೆ ಸರಿಯಾದ ಪೆಟ್ಟಿಗೆಗಳು ಇಲ್ಲದೇ ಇರುವುದು ಮೊದಲಾದ ಕಾರಣಗಳಿಂದ ಬಡವರ ದಾಖಲೆಗಳು ಹಾಳಾಗಿರುತ್ತವೆ. ಅನಕ್ಷರಸ್ಥರಿಗೆ ತಮ್ಮ ಹೆಸರನ್ನು ತಾವೇ ಬರೆದುಕೊಳ್ಳಲಾಗುವುದಿಲ್ಲ. ಬೇರೆಯವರು ಅವರ ಹೆಸರು ಬರೆಯುವಾಗ ಸಹಜವಾಗಿಯೇ ತಪ್ಪುಗಳನ್ನು ಮಾಡುತ್ತಾರೆ. ಮಹಮ್ಮದ್ ಹೆಸರನ್ನು ನಾಲ್ಕೈದು ವಿಧದ ಸ್ಪೆಲ್ಲಿಂಗ್ ಬಳಸಿ ಬರೆಯುತ್ತಾರೆ. ಇವುಗಳಲ್ಲಿ ಯಾವುದೋ ಒಂದು ಅಧಿಕೃತಗೊಳ್ಳುವುದು ಹೇಗೆ? ಅಥವಾ ಯಾರದನ್ನು ಅಧಿಕೃತಗೊಳಿಸುತ್ತಾರೆ? ಇಂಥ ಹಲವು ಕಾರಣಗಳಿಂದ ‘ಡಿ’ ಮತದಾರರು ಎಕ್ಸ್ ಪಾರ್ಟ ಆಗಿ ಶಿಕ್ಷೆ ಅನುಭವಿಸಿದ್ದೂ ವರದಿಯಾಗಿದೆ.

ಸರ್ಕಾರವು ತನಗೆ ಅಗತ್ಯವಾದ ಕಾನೂನನ್ನು ಜಾರಿ ಮಾಡಿ, ‘ಡಿ’ ಮತದಾರರು ತಾವೇ ಪೌರತ್ವವನ್ನು ಸಾಬೀತುಪಡಿಸುವ ಹೊರೆಯನ್ನು ಹೇರಿದಾಗ, ಬಡವರಿಗೆ ಬೇರೆ ಹಾದಿಗಳೇ ಇರುವುದಿಲ್ಲ. ಈ ಕಷ್ಟವನ್ನು ಬೇರೆ ಬೇರೆ ಹಂತಗಳಲ್ಲಿ ನಾವೆಲ್ಲರೂ ಅನುಭವಿಸುತ್ತಲೇ ಬಂದಿದ್ದೇವೆ. ಮೊದಲು ಆಧಾರ್ ಒಂದಿದ್ದರೆ ಸಾಕು ಎನ್ನಲಾಯಿತು. ನಂತರ ಎಲ್ಲೆಡೆ ಆಧಾರ್ ನಡೆಯುವುದಿಲ್ಲ ಎಂದಾಯಿತು. ಈಗ ನಮ್ಮ ಕುರಿತಾದ ದಾಖಲೆಗಳನ್ನು ರಕ್ಷಿಸಿಡುವುದೇ ಒಂದು ಸಮಸ್ಯೆಯಾಗಿದೆ. ಗುರುತಿನ ಚೀಟಿಗಳ ರಾಶಿಯೇ ನಮ್ಮ ಮನೆಗಳಲ್ಲಿ ಬಿದ್ದಿದೆ. ಪರಿಸ್ಥಿತಿ ಹೀಗಿರುವಾಗ ಮನೆಯಿಲ್ಲದವರ ಪಾಡೇನು?

ಗೊಂದಲಗಳ ನಡುವೆಯೇ ಸರ್ಕಾರವು ಮತದಾರರ ಶುದ್ಧೀಕರಣ ಕೆಲಸ ನಡೆಸಿ ಸುಮಾರು 5.2 ಕೋಟಿ ಮತದಾರರ ಹೆಸರನ್ನು ಪಟ್ಟಿಯಿಂದ ಅಳಿಸಿಹಾಕಿದೆ. ಇವರು ಸರ್ಕಾರದ ಯಾವುದೇ ಸವಲತ್ತುಗಳಿಗೆ ಅರ್ಹರಲ್ಲ ಎಂದೂ ಘೋಷಿಸಲಾಗಿದೆ. ಪತ್ರಿಕೆಗಳಲ್ಲಿ ವರದಿಯಾದಂತೆ, ಲಂಡನ್‌ನ ಕ್ವೀನ್ ಮೇರಿ ವಿಶ್ವವಿದ್ಯಾಲಯ ಮತ್ತು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ನಡೆಸಿದ ಅಧ್ಯಯನಗಳು ವಿದೇಶಿ ನ್ಯಾಯಮಂಡಳಿಗಳು ಹೇಗೆ ನ್ಯಾಯಾಂಗ ಸ್ವಾತಂತ್ರ್ಯವನ್ನು ಹೊಂದಿಲ್ಲ ಎಂಬುದನ್ನು ವಿವರಿಸಿ, ಇವುಗಳನ್ನು ಕಾರ್ಯಾಂಗ ಹೇಗೆ ನಿಯಂತ್ರಿಸುತ್ತಿದೆ ಎಂಬುದನ್ನು ವಿಶ್ಲೇಷಿಸಿವೆ. ಚುನಾವಣಾ ಆಯೋಗವು ಒಬ್ಬ ಮತದಾರರನ್ನು ‘ಶಂಕಿತ’ ಎಂದು ಪರಿಗಣಿಸಿದರೆ ಅಂಥ ವ್ಯಕ್ತಿಯು ಮುಂದೆ ನ್ಯಾಯಮಂಡಳಿಯ ಕರುಣೆಯಲ್ಲಿ ಬದುಕಬೇಕಾಗುತ್ತದೆ. ಇದು ಹೊಸ ಬಗೆಯ ಫ್ಯಾಸಿಸಂ!

ಕರ್ನಾಟಕದ ಬಹುಭಾಷಿಕ ಪರಿಸರವು ಬಹಳ ಸಂಕೀರ್ಣವಾದುದು. ಇಲ್ಲಿ 290 ಭಾಷೆಗಳನ್ನಾಡುವ ಜನರಿದ್ದಾರೆ. ಜಗತ್ತಿನಾದ್ಯಂತ ನೂರಾರು ಸಮುದಾಯಗಳು ಇಲ್ಲಿಗೆ ಬಂದು ನೆಲೆಸಿವೆ. ಇವರೆಲ್ಲರೂ ಕರ್ನಾಟಕ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕರ್ನಾಟಕ ಸಂಸ್ಕೃತಿಯ ಗುಣಗಳನ್ನು ಎಸ್‌ಐಆರ್ ಕಳೆದುಹಾಕದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ.

ವಾಚಕರ ವಾಣಿ

ಹತ್ತು ವರ್ಷದ ಆರ್ಥಿಕತೆಯ ಲಾಭ ಎಲ್ಲಿದೆ?

ಕೇಂದ್ರ ಸರ್ಕಾರ ನಿತ್ಯವೂ ಒಂದಿಲ್ಲೊಂದು ವಸ್ತುವಿನ ಬೆಲೆ ಏರಿಸುತ್ತಿದೆ. ಇದಕ್ಕೆ ನೀಡುವ ಕಾರಣ, ಗಡಿಯಾಚೆಗಿನ ಕೊಲ್ಲಿ ಯುದ್ಧ. ಎಲ್ಲಿಯೋ ನಡೆಯುವ ಯುದ್ಧದ ಪ್ರಸ್ತಾಪವಿಟ್ಟು ಬೆಲೆಯೇರಿಸಿ ಜನರ ಸಹಕಾರವನ್ನು ಸರ್ಕಾರ ಕೇಳುತ್ತಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿಯವರು, ಕಳೆದ ಹತ್ತು ವರ್ಷಗಳಲ್ಲಿ ಭಾರತದ ಆರ್ಥಿಕತೆ ಬೆಳವಣಿಗೆಯ ಪ್ರಶ್ನೆ ಬಂದಾಗ ಅದು ಏರುಪೇರಾಗಿದ್ದರೂ ‘ಆರ್ಥಿಕತೆಯ ಸ್ಥಿತಿಗತಿ ಚೆನ್ನಾಗಿದೆ’ ಎಂದೇ ಹೇಳುತ್ತಾ ಬಂದಿದ್ದಾರೆ. ಹಾಗಿದ್ದರೆ ಈ ಹತ್ತು ವರ್ಷಗಳ ಲಾಭವನ್ನು ಈಗ ಬಳಸಲು ಅಡ್ಡಿಯಾದರೂ ಏನು? ಅದು ಏನೇ ಇರಲಿ; ಮೋದಿಯವರ ಅಧಿಕಾರಾವಧಿಯಲ್ಲಿ ಜನರು ಹಲವು ರೀತಿಯ ಆರ್ಥಿಕ ಬಿಕ್ಕಟ್ಟನ್ನು ನೋಡಿದ್ದಾರೆ. ಸರ್ಕಾರ ಜನರ ಮುಂದೆ ಈಗ ಗೋಗರೆಯುವುದರಲ್ಲಿ ಅರ್ಥವಿಲ್ಲ; ಇದು ಆಡಳಿತದ ವೈಫಲ್ಯವಲ್ಲದೆ ಬೇರೇನೂ ಅಲ್ಲ.

ನಾಗಾರ್ಜುನ ಹೊಸಮನಿ, ಕಲಬುರಗಿ

ಹೆಸರು ಮಾರ್ಪಾಡು: ತರ್ಕವಿಲ್ಲದ ನಿಲುವು

ತುಮಕೂರು ಜಿಲ್ಲೆಯ ಹೆಸರನ್ನು ಬದಲಾಯಿಸಿ, ‘ಬೆಂಗಳೂರು ಉತ್ತರ’ ಎಂದು ಹೆಸರಿಸಲು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ ಅವರು ಮತ್ತೊಮ್ಮೆ ಪ್ರಸ್ತಾಪಿಸಿರುವುದು ವಿವೇಚನಾರಹಿತ ನಿಲುವಾಗಿದೆ. ಇದಕ್ಕೆ ಜಿಲ್ಲೆಯ ನಾಗರಿಕರ ವಿರೋಧವಿದೆ. ಜಿಲ್ಲೆಯು ಅಭಿವೃದ್ಧಿ ಹೊಂದಲು ಹೆಸರು ಬದಲಾಗಬೇಕಾಗಿಲ್ಲ; ರಾಜಕೀಯ ಇಚ್ಛಾಶಕ್ತಿ ಹಾಗೂ ಪ್ರಾಮಾಣಿಕ ಕಳಕಳಿ ಇದ್ದರೆ ಸಾಕು. ಬೇಕಾದಷ್ಟು ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ನೀರೆರೆದು ಪೋಷಿಸಬಹುದು. ಅಧಿಕಾರದ ಬಲದಿಂದ ಈ ಹೊತ್ತಿನ ಲಾಭಕ್ಕಾಗಿ ಹೆಸರು ಬದಲಿಸುವುದರಿಂದ ತುಮಕೂರು ಜಿಲ್ಲೆಗಿರುವ ಪಾರಂಪರಿಕ ಹಿನ್ನೆಲೆ, ಇತಿಹಾಸಕ್ಕೆ ಪರಮ ಅನ್ಯಾಯ ಮಾಡಿದಂತಾಗುತ್ತದೆ. ದುಡುಕಿನ ನಿರ್ಧಾರ ಕೈಗೊಂಡರೆ ಭವಿಷ್ಯದಲ್ಲಿ ರಾಜಕೀಯ ಹಿನ್ನಡೆಗೂ ಕಾರಣವಾದೀತು.

ಆರ್.ಎಸ್. ಅಯ್ಯರ್, ತುಮಕೂರು

ಗ್ಯಾರಂಟಿ: ಹುಲಿಯ ಮೇಲಿನ ಸವಾರಿ

ಇತ್ತೀಚೆಗೆ ನಡೆದ ಹಲವು ರಾಜ್ಯಗಳ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ ಪಕ್ಷಗಳು ಆಶ್ವಾಸನೆ ಕೊಟ್ಟಂತೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ತಿಂಗಳಿಗಿಷ್ಟು ಹಣ, ಉಚಿತ ವಿದ್ಯುತ್ ಇತ್ಯಾದಿ ಜಾರಿಗೊಳಿಸಿವೆ. ಉಚಿತ ಭಾಗ್ಯಗಳಿಂದ ಕರ್ನಾಟಕ ಸೇರಿದಂತೆ ಆರ್ಥಿಕವಾಗಿ ಸೊರಗುತ್ತಿರುವ ರಾಜ್ಯಗಳಿಂದ ಈ ರಾಜ್ಯಗಳು ಪಾಠ ಕಲಿಯಬೇಕಿತ್ತು. ಅವು ಇನ್ನೂ ಹೆಚ್ಚು ಮಾಡುತ್ತಾ ಸಾಗಿವೆ. ಇದರಿಂದ ಅಭಿವೃದ್ಧಿ ಕಾರ್ಯಗಳಿಗೆ ಆರ್ಥಿಕ ಸಂಪನ್ಮೂಲದ ಕ್ರೋಡೀಕರಣಕ್ಕೆ ತೊಡಕಾಗಲಿದೆ. ಸರ್ಕಾರಗಳು ಖಜಾನೆ ತುಂಬಿಸಿಕೊಳ್ಳಲು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ದರ ಹೆಚ್ಚಿಸುತ್ತಿವೆ. ಇದರಿಂದ ನಲುಗುವವರು ಜನರೇ ಹೊರತು ರಾಜಕಾರಣಿಗಳಲ್ಲ. ಗ್ಯಾರಂಟಿಗಳ ಅನುಷ್ಠಾನವು ಹುಲಿಯ ಮೇಲಿನ ಸವಾರಿ ಇದ್ದಂತೆ; ಇವು ಹೆಳವನಿಗೆ ಊರುಗೋಲಿನಂತೆ ಇರಬೇಕೇ ಹೊರತು ಎಲ್ಲರಿಗೂ ಅಲ್ಲ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವ್ಯಗ್ರ ಬೀದಿನಾಯಿಗಳ ಉಪಟಳ ನಿಲ್ಲಲಿ

ವ್ಯಗ್ರ ನಾಯಿಗಳನ್ನು ಕೊಲ್ಲಲು ಸುಪ್ರೀಂ ಕೋರ್ಟ್ ಆದೇಶಿಸಿದೆ. ಬೀದಿನಾಯಿಗಳ ಉಪಟಳದಿಂದ ಬೇಸತ್ತಿರುವ ಜನರ ಪಾಲಿಗೆ ಈ ತೀರ್ಪು ಆಶಾಕಿರಣ. ರಾಜ್ಯದ ಎಲ್ಲ ನಗರ, ಪಟ್ಟಣ ಪ್ರದೇಶಗಳಲ್ಲಿ ನಾಯಿಗಳ ಹಾವಳಿ ಇದೆ. ಇವುಗಳ ದಾಳಿಯಿಂದ ಹಲವು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಅಪಾಯವನ್ನು ಉಂಟುಮಾಡುವ ನಾಯಿಗಳ ನಿಯಂತ್ರಣಕ್ಕೆ ಸರ್ಕಾರ ಸರಿಯಾದ ವ್ಯವಸ್ಥೆ ರೂಪಿಸಿಲ್ಲ. ಹಾವಳಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನಿಯಮಾವಳಿ ರೂಪಿಸಬೇಕಿದೆ.

ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ದುಬಾರೆ ಪ್ರಕರಣ: ವ್ಯವಸ್ಥೆಗೊಂದು ಪಾಠ

ದುಬಾರೆ ಪ್ರವಾಸಿ ತಾಣದಲ್ಲಿ ಆನೆಗಳ ಕಾಳಗದಿಂದ ಪ್ರವಾಸಿ ಮಹಿಳೆಯೊಬ್ಬರು ಪ್ರಾಣ ಕಳೆದುಕೊಂಡಿರುವುದು ಶೋಚನೀಯ ಸಂಗತಿ. ಆನೆಗಳಿಗೆ ಸ್ನಾನ ಮಾಡಿಸುವ ಸ್ಥಳದಲ್ಲಿ ಅರಣ್ಯ ಇಲಾಖೆಯು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಈಗ ಕೆಟ್ಟಮೇಲೆ ಬುದ್ಧಿ ಬಂತು ಎಂಬಂತೆ ಅನಾಹುತ ಘಟಿಸಿದ ಮೇಲೆ ನಿಯಮಗಳನ್ನು ಜಾರಿಗೊಳಿಸಿದರೆ ಹೋದ ಪ್ರಾಣ ಮತ್ತೆ ಬರುತ್ತದೆಯೆ? ಪ್ರಾಣಿಗಳಿಗೂ ಸ್ವಚ್ಛಂದ ಬದುಕಿದೆ. ಅದನ್ನು ನಾವು ಗೌರವಿಸಬೇಕಿದೆ. ಗಿಜಿಗಿಡುವ ಜನಸಂದಣಿಯಿಂದ ಅವುಗಳ ಏಕಾಗ್ರತೆ ತಪ್ಪಿ ಅನಾಹುತಗಳಿಗೆ ದಾರಿ ಮಾಡಿಕೊಡುತ್ತದೆ. ಇದನ್ನು ನಾವು ಅರಿಯಬೇಕು. ಈ ಪ್ರಕರಣವು ಪ್ರವಾಸಿಗರಿಗೆ ಪಾಠವಾಗಿದೆ.

ಬೆಂ.ಮು. ಮಾರುತಿ, ಬೆಂಗಳೂರು

ಮೈಸೂರು ರಾಜರ ಕೊಡುಗೆ ಮರೆಯದಿರಿ

ಚಿತ್ರದುರ್ಗ ಜಿಲ್ಲೆಯ ನೀರಿನ ಕೊರತೆಯ ಪರಿಹಾರಕ್ಕಾಗಿ ಅಂದಿನ ರೀಜೆಂಟರಾದ ರಾಜಮಾತೆ ಕೆಂಪನಂಜಮ್ಮಣ್ಣಿಯವರು ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಬಳಿ ವೇದಾವತಿ ನದಿಗೆ ದೇಶದಲ್ಲೇ ಪ್ರಥಮ ಮಾನವ ನಿರ್ಮಿತ ಜಲಾಶಯ ನಿರ್ಮಿಸಿದರು. ಚಳ್ಳಕೆರೆ ತಾಲ್ಲೂಕಿನ ಮೀರಾಸಾಬಿಹಳ್ಳಿ ಬಳಿ 1907ರಲ್ಲಿ ಮತ್ತೊಂದು ಬೃಹತ್ ಕೆರೆ ಕಟ್ಟಿಸಿದರು. 1897–1907ರ ಅವಧಿಯಲ್ಲಿ ನೀರಿನ ಬವಣೆ ನೀಗಿಸಲು ಕೆಂಪನಂಜಮ್ಮಣ್ಣಿ, ಯುವರಾಜ ನಾಲ್ವಡಿ ಕೃಷ್ಣರಾಜ ಒಡೆಯರ್, ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಹಾಗೂ ಮುಖ್ಯ ಎಂಜಿನಿಯರ್ ಅವರು ನೀಡಿದ ಕೊಡುಗೆ ಸ್ಮರಣೀಯವಾದುದು. ಪ್ರಸ್ತುತ ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಇದು ಮುಗಿಯುವ ಮುನ್ನವೇ ರಾಜಕೀಯ ಲಾಭಕ್ಕಾಗಿ ಯೋಜನೆಗೆ ಹಲವರ ಹೆಸರಿಡುವಂತೆ ಸಭೆಗಳಲ್ಲಿ ಪ್ರಸ್ತಾಪಿಸುವುದು ಸರಿಯಲ್ಲ. ಮೈಸೂರು ಅರಸರು ಮತ್ತು ಅಧಿಕಾರಿಗಳ ಹೆಸರನ್ನು ಯೋಜನೆಯ ಮುಖ್ಯ ಕಾಲುವೆ, ಪ್ರಮುಖ ಶಾಖಾ ಕಾಲುವೆಗಳಿಗೆ ನಾಮಕರಣ ಮಾಡುವುದು ಸೂಕ್ತ.

ಎಂ.ಜಿ. ರಂಗಸ್ವಾಮಿ, ಹಿರಿಯೂರು

ಚುರುಮುರಿ

ಜರ್ನಲಿಸ್ಟ್ ಜವಾಬ್ದಾರಿ!

● ಗುರು ಪಿ.ಎಸ್.

‘ಇಲ್ಲ, ನಾನಿನ್ನು ವಿದೇಶ ಪ್ರವಾಸ ಮಾಡಲ್ಲ’ ಕಾರು ಇಳಿದ ತಕ್ಷಣ ಸಿಟ್ಟಿನಲ್ಲೇ ಒಳಬಂದರು ಸಾಹೇಬ್ರು.

‘ಯಾಕೆ ಸರ್, ಏನಾಯ್ತು?’ ತಣ್ಣಗೆ ಕೇಳಿದ ಪಿ.ಎ.

‘ನನ್ನ ಟೂರ್ ಪ್ರೋಗ್ರಾಂ ಚಾರ್ಟ್‌ನಲ್ಲಿ ಆ ದೇಶದ ಹೆಸರನ್ನ ಪರ್ಮನೆಂಟ್ ಆಗಿ ಬ್ಲಾಕ್ ಮಾಡಿ’ ಮತ್ತೆ ಗುಡುಗಿದರು ಸಾಹೇಬ್ರು.

‘ಯಾವ ದೇಶ ಸಾರ್?’ ನಡುಗುತ್ತಲೇ ಕೇಳಿದ ಪಿ.ಎ.

‘ಅದೇ ರೀ, ನಾರ್ವೆ. ಅದೇನೋ ಪತ್ರಿಕಾ ಸ್ವಾತಂತ್ರ್ಯದಲ್ಲಿ ಮೊದಲ ಸ್ಥಾನದಲ್ಲಿದೆಯಂತಲ್ಲ’.

‘ಅಲ್ಲಿಗ್ಯಾಕ್ ಹೋಗಲ್ಲ ಸಾರ್?’

‘ಅಲ್ಲಿನ ಪತ್ರಕರ್ತರಿಗೆ ಒಂದು ಸೌಜನ್ಯ ಅನ್ನೋದೇ ಇಲ್ವಲ್ರೀ, ಒಂದು ದೇಶದ ಮುಖ್ಯಸ್ಥನಾಗಿರುವ ನನಗೆ ಪ್ರಶ್ನೆ ಕೇಳೋ ರೀತಿನಾ ಅದು. ಬೀದೀಲಿ ಹೋಗೋರಿಗೆಲ್ಲ ರಿಯಾಕ್ಟ್ ಮಾಡಬೇಕೇನ್ರೀ ನಾನು’.

‘ಅಲ್ಲ ಸಾರ್, ನೀವು ಪ್ರೆಸ್‌ಮೀಟೇ ಮಾಡೋದಿಲ್ಲ, ಮತ್ತೆಲ್ಲಿ ಅವರು ನಿಮ್ಮನ್ನ ಪ್ರಶ್ನಿಸಬೇಕು’ ಹೆದರುತ್ತಲೇ ಹೇಳಿದ.

‘ನಾನು ನಮ್ಮ ದೇಶದಲ್ಲೇ ಪ್ರೆಸ್‌ಮೀಟ್ ಮಾಡಲ್ಲ, ಇನ್ನು ಅಲ್ಲಿ ಮಾಡಬೇಕೇನ್ರೀ? ಆ ದೇಶದವರಿಗಿಂತ ನಮ್ಮ ದೇಶದ ಪತ್ರಕರ್ತರೇ ಎಷ್ಟೋ ವಾಸಿ ಕಣ್ರೀ, ನಾನು ಟಿವಿಲಿ ಬಂದು ಹೇಳಿದ್ದನ್ನೆಲ್ಲ ಚಾಚೂತಪ್ಪದೇ ಬರ್ಕೋತಾರೆ, ಹೀಗೆ ಹಾದೀಲಿ ಬೀದೀಲೆಲ್ಲ ಏನೇನೋ ಕೇಳಿ ಮುಜುಗರ ಮಾಡಲ್ಲ’ ಎಂದರು ಸಾಹೇಬ್ರು.

‘ಅಧಿಕಾರದಲ್ಲಿರುವವರನ್ನ ಪ್ರಶ್ನಿಸೋದೇ ನಿಜವಾದ ಪತ್ರಕರ್ತನ ಕರ್ತವ್ಯ ಅಲ್ಲವಾ ಸಾರ್?’

‘ನಿಮ್ಮ ದೇಶದ ಮುಖ್ಯಸ್ಥನಿಗೆ ವಿದೇಶದಲ್ಲಿ ಅವಮಾನ ಆಗಿದೆ. ಅದನ್ನು ಖಂಡಿಸೋದು ಬಿಟ್ಟು ಅಣಕಿಸುತ್ತಿದ್ದೀರಾ?’

‘ಅಯ್ಯಯ್ಯೋ ನಮ್ ದೇಶಕ್ಕೆ ಅವಮಾನ ಆಗೋದನ್ನ ನಾನೂ ಸಹಿಸಲ್ಲ ಸಾರ್. ಆದರೆ, ಆ ಜರ್ನಲಿಸ್ಟ್ ಪ್ರಶ್ನೆಗೆ ಉತ್ತರ ಕೊಟ್ಟು, ಅಲ್ಲೇ ಅವರ ನೀರಿಳಿಸಿದ್ರೆ ನನ್ನಷ್ಟು ಖುಷಿ ಪಡೋನೇ ಯಾರು ಇರ್ತಿರಲಿಲ್ಲ. ಹೋಗಲಿ ಬಿಡಿ ಸಾರ್, ಒಂದ್ ಕೆಲಸ ಮಾಡಿ, ನೀವು ನಮ್ಮ ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಒಂದು ಪ್ರೆಸ್‌ಮೀಟ್ ಮಾಡಿ’.

‘ಯಾಕ್ರೀ, ಅಲ್ಲಿ ತುಂಬಾ ಪ್ರಶ್ನೆ ಕೇಳ್ತಾರಾ?’

‘ಪ್ರಶ್ನೆ ಕೇಳಲ್ಲ ಸಾರ್... ಕೇಳ್ತಾರಷ್ಟೇ...’

ಸಂಗತ

ಹೆಣ್ಣಿನ ಅಸ್ತಿತ್ವಕ್ಕೆ ಧಾರ್ಮಿಕ ವಸ್ತ್ರದ ಚೌಕಟ್ಟು!

ಶಾಲಾಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಸರ್ಕಾರ ಅವಕಾಶ ಕಲ್ಪಿಸಿದೆ. ವಸ್ತ್ರ ರಾಜಕಾರಣದ ಆಚೆಗೆ ಮಹಿಳೆಯ ಸಬಲೀಕರಣದ ಪ್ರಯತ್ನಗಳು ನಡೆಯಲಿ.

● ಆಶಾ ಬಗ್ಗನಡು

ಹಿಜಾಬ್ ಮತ್ತು ಕೇಸರಿ ಶಾಲಿನ ವಿವಾದವು ರಾಜ್ಯದಲ್ಲಿ ಮತ್ತೆ ಮುನ್ನೆಲೆಗೆ ಬಂದಿದೆ. 2022ರಲ್ಲಿ ಉಡುಪಿಯ ಕಾಲೇಜಿನಲ್ಲಿ ಆರಂಭವಾದ ಈ ವಿವಾದವು ತೀವ್ರಗೊಂಡ ನಂತರ, ಅಂದಿನ ಸರ್ಕಾರ ಶಾಲಾಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯಗೊಳಿಸಿತು; ರಾಜ್ಯದಾದ್ಯಂತ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿತು. ಪ್ರಸ್ತುತ ಆ ಆದೇಶವನ್ನು ಹಿಂದಕ್ಕೆ ಪಡೆದಿರುವ ಈಗಿನ ಸರ್ಕಾರ, ಶಾಲಾ ಕಾಲೇಜುಗಳಲ್ಲಿ ಸಮವಸ್ತ್ರಕ್ಕೆ ಪೂರಕವಾಗಿ ಹಿಜಾಬ್ ಧರಿಸಲು ಅವಕಾಶ ನೀಡಿದೆ.

2022ರ ಹಿಜಾಬ್ ಮತ್ತು ಕೇಸರಿ ವಿವಾದಕ್ಕೂ ಮುನ್ನ ಶಾಲಾಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಯಾವುದೇ ಏಕರೂಪದ ಅಧಿಕೃತ ಅನುಮತಿ ಮತ್ತು ನಿಷೇಧ ಇರಲಿಲ್ಲ. ಉಡುಪಿ ಕಾಲೇಜಿನಲ್ಲಿ ಮುಸ್ಲಿಂ ಹುಡುಗಿಯರು ತಾವು ತರಗತಿಗಳಲ್ಲಿಯೂ ಹಿಜಾಬ್ ಧರಿಸುವುದಾಗಿ ಪಟ್ಟು ಹಿಡಿದ ನಂತರ, ಕಾಲೇಜಿನ ಆಡಳಿತ ಮಂಡಳಿ ಮತ್ತು ವಿದ್ಯಾರ್ಥಿನಿಯರ ನಡುವೆ ಬಗೆಹರಿಯಬೇಕಿದ್ದ ವಿಷಯ, ಆ ಕಾಲೇಜಿನ ಹುಡುಗರು ಕೇಸರಿ ಶಾಲು ಧರಿಸಿ ಬರುವುದರೊಟ್ಟಿಗೆ ವಿವಾದದ ಸ್ವರೂಪ ಪಡೆದುಕೊಂಡಿತು. ಆ ಪ್ರಕರಣದಲ್ಲಿ ಬಳಕೆಗೊಂಡ ಕೇಸರಿ ಶಾಲು ಆ ಹೊತ್ತಿಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಭಾವನೆಗಳನ್ನು ಬಳಸಿಕೊಂಡು ಸೃಷ್ಟಿಯಾದ ರಾಜಕೀಯ ಪ್ರತಿಕ್ರಿಯೆಯಾಗಿತ್ತು. ಪ್ರಕರಣವನ್ನು ವಿವಾದಾತ್ಮಕಗೊಳಿಸುವ ವೋಟ್ ಬ್ಯಾಂಕ್ ರಾಜಕಾರಣದ ಭಾಗವಾಗಿ ಹಿಜಾಬ್ ನಿಷೇಧಕ್ಕೆ ಕಾರಣವಾಯಿತು. ಆ ಪ್ರಕರಣದ ನಂತರ ಮುಸ್ಲಿಂ ಹೆಣ್ಣುಮಕ್ಕಳು ಬಳಸುವ ಶಿರವಸ್ತ್ರವಾಗಿ ಮಾತ್ರ ಉಳಿಯದೆ, ರಾಜಕೀಯ ಅಸ್ತ್ರವಾಗಿ ಹಿಜಾಬ್ ಬಳಕೆಯಾಗುತ್ತಿದೆ. ಇದರ ಪರಿಣಾಮ, ಮುಸ್ಲಿಂ ಹೆಣ್ಣುಮಕ್ಕಳು ಅನುಭವಿಸಿದ ಮತ್ತು ಅನುಭವಿಸುತ್ತಿರುವ ನೋವು, ಅಪಮಾನ, ಹಿಂಸೆಗಳು ನೇಪಥ್ಯದಲ್ಲಿಯೇ ಉಳಿದಿವೆ.

ಶಾಲೆ ಮತ್ತು ಕಾಲೇಜುಗಳಲ್ಲಿ ಹಿಜಾಬ್ ನಿಷೇಧಗೊಂಡ ನಂತರ ಹಲವು ಮುಸ್ಲಿಂ ಹೆಣ್ಣುಮಕ್ಕಳು ಶಿಕ್ಷಣದಿಂದ ದೂರವಾದರು. ಮತ್ತಷ್ಟು ಹೆಣ್ಣುಮಕ್ಕಳು ಕಲಿಯುವ ವಯಸ್ಸಿನಲ್ಲಿ ತಾಳಿ ಬಿಗಿಸಿಕೊಂಡು ಗಂಡನ ಮನೆಯ ಹಾದಿ ಹಿಡಿದರು. ಸರ್ಕಾರಿ ಶಾಲಾಕಾಲೇಜುಗಳಲ್ಲಿ ಹಿಜಾಬ್‌ಗೆ ಅವಕಾಶವಿಲ್ಲದ ಕಾರಣ, ಕೆಲವರು ಖಾಸಗಿ ವಿದ್ಯಾಸಂಸ್ಥೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿದರಾದರೂ, ಬಡಪೋಷಕರಿಗೆ ಆ ಆಯ್ಕೆ ಇಲ್ಲವಾದುದರಿಂದ ಅವರ ಮಕ್ಕಳು ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹಗಳತ್ತ ನಡೆದರು. ಕೆಲವು ಹೆಣ್ಣುಮಕ್ಕಳು ಓಪನ್ ಸ್ಕೂಲ್ ಮೂಲಕ ವಿದ್ಯಾಭ್ಯಾಸ ಮುಂದುವರಿಸಿದರಾದರೂ, ಮತ್ತೆ ಕೆಲವರು ವಿವಾದದ ತೀವ್ರತೆಯಿಂದ, ಮಾನಸಿಕ ಒತ್ತಡ, ಸಾಮಾಜಿಕ ಟೀಕೆ ಎದುರಿಸಬೇಕಾಯಿತು. ಪ್ರಸ್ತುತ, ಶಾಲಾಕಾಲೇಜುಗಳಲ್ಲಿ ಹಿಜಾಬ್‌ಗೆ ಅನುಮತಿ ದೊರೆತಿರುವುದು ಮುಸ್ಲಿಂ ಹೆಣ್ಣುಮಕ್ಕಳ ಶೈಕ್ಷಣಿಕ ದೃಷ್ಟಿಯಿಂದ ಸ್ವಾಗತಾರ್ಹ. ಆದರೆ, ಈ ಹೆಣ್ಣುಮಕ್ಕಳ ಹಿತ ಕಾಯುವ ಸರ್ಕಾರದ ಉದ್ದೇಶ ನೈಜವಾಗಿದ್ದಲ್ಲಿ ಮೂರು ವರ್ಷಗಳ ವರೆಗೂ ಕಾಯುವ ಅಗತ್ಯವೇನಿತ್ತು ಎನ್ನುವ ಪ್ರಶ್ನೆ ಉಳಿದೇ ಉಳಿಯುತ್ತದೆ. ಅಂದರೆ, ಹಿಜಾಬ್‌ಗೆ ಅನುಮತಿ ನೀಡಿರುವುದು ಕೂಡ ರಾಜಕೀಯ ನಿರ್ಧಾರವೇ ಆಗಿರುವಂತಿದೆ.

ಹಿಜಾಬ್ ಪರವಾದ ಸರ್ಕಾರದ ಆದೇಶವನ್ನು ತಮ್ಮ ಹೋರಾಟಕ್ಕೆ ಸಂದ ಗೆಲುವಾಗಿ ಮುಸ್ಲಿಂ ಹೆಣ್ಣುಮಕ್ಕಳು ಸಂಭ್ರಮಿಸುತ್ತಿದ್ದಾರೆ. ಆದರೆ, ಇದು ಆ ಸಮುದಾಯದ ಹೆಣ್ಣುಮಕ್ಕಳ ಆತ್ಯಂತಿಕ ಗೆಲುವೇ ಎಂಬ ಪ್ರಶ್ನೆಯಂತೂ ಇದ್ದೇ ಇದೆ. ಮುಸ್ಲಿಂ ಧರ್ಮವಷ್ಟೇ ಅಲ್ಲ, ಜಗತ್ತಿನ ಬಹುತೇಕ ಧರ್ಮಗಳಲ್ಲಿ ಧಾರ್ಮಿಕ ಕುರುಹುಗಳು ಮಹಿಳೆಯರನ್ನು ನಿಯಂತ್ರಿಸಲು ಗಂಡಸರಿಗೆ ಅನುಕೂಲಕರ ಸಾಧನಗಳಾಗಿವೆ. ಧಾರ್ಮಿಕ ವಸ್ತ್ರಸಂಹಿತೆಗಳು ಹೆಣ್ಣಿನ ದೇಹ ಮತ್ತು ನಡವಳಿಕೆಗಳ ಮೇಲೆ ಹಿಡಿತ ಸಾಧಿಸುವ ಪುರುಷ ಹುನ್ನಾರಗಳಾಗಿವೆ. ಮಹಿಳೆಯರ ಸಭ್ಯತೆ ಮತ್ತು ಮಾನ ಮರ್ಯಾದೆಯನ್ನು ಕಾಪಾಡುವಲ್ಲಿ ಪುರುಷರ ದೃಷ್ಟಿಕೋನವನ್ನು ಸರಿಪಡಿಸುವ ಬದಲು, ಮಹಿಳೆಯರ ಓಡಾಟವನ್ನು ನಿರ್ಬಂಧಿಸುವ ಮೂಲಕ ಪರೋಕ್ಷವಾಗಿ ಹೆಣ್ಣುಮಕ್ಕಳನ್ನು ಇವು ಶೋಷಣೆಗೆ ಗುರಿಮಾಡುತ್ತವೆ. ಮಹಿಳೆಯರು ಪುರುಷನಿಗಿಂತ ಕೀಳು ಅಥವಾ ಅವರು ಪುರುಷನಿಗೆ ಆಕರ್ಷಣೆಯ ವಸ್ತುಗಳು ಎಂಬ ಭಾವನೆಗಳನ್ನು ಬಿತ್ತುವ ಮೂಲಕ ಸಮಾಜದ ಮುಖ್ಯವಾಹಿನಿಯಿಂದ ಹೆಣ್ಣುಮಕ್ಕಳನ್ನು ದೂರವಿಡುವಲ್ಲಿಯೂ ಧಾರ್ಮಿಕ ವಸ್ತ್ರಗಳು ಅಸ್ತ್ರಗಳಾಗುತ್ತವೆ.

ಅನೇಕ ಮಹಿಳೆಯರು ಧಾರ್ಮಿಕ ವಸ್ತ್ರಗಳನ್ನು ತಮ್ಮ ಸ್ವಂತ ಇಚ್ಛೆ, ಧಾರ್ಮಿಕ ನಂಬಿಕೆ ಮತ್ತು ಸಂಸ್ಕೃತಿಯ ಮೇಲಿನ ಗೌರವದಿಂದಲೇ ಧರಿಸುತ್ತಾರೆ. ಇದು ನಮ್ಮ ವೈಯಕ್ತಿಕ ಸ್ವಾತಂತ್ರ್ಯದ ಸಂಕೇತವೇ ಹೊರತು ಶೋಷಣೆಯಲ್ಲ ಎನ್ನುತ್ತಾರೆ. ಈ ಮನೋಭಾವದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ, ಎಲ್ಲ ಧರ್ಮಗಳಲ್ಲೂ ಇದ್ದಾರೆ.

ಪಿತೃಪ್ರಧಾನ ವ್ಯವಸ್ಥೆಯ ದೊಡ್ಡ ಯಶಸ್ಸು, ಶೋಷಣೆಗೆ ಒಳಗಾದವರೂ ಆ ವ್ಯವಸ್ಥೆಯನ್ನು ಸ್ವಯಂಪ್ರೇರಿತರಾಗಿ ಒಪ್ಪಿಕೊಳ್ಳುವಂತೆ ಮಾಡುವುದಾಗಿದೆ. ಮೈತುಂಬಾ ಸೀರೆ, ತಲೆಯ ಮೇಲೆ ಸೆರಗು, ಬುರ್ಖಾ, ಘುಂಗಟ್, ಹಿಜಾಬ್‌ಗಳ ಹಿಂದಿನ ಹಿತಾಸಕ್ತಿಗಳು ನಿಜಕ್ಕೂ ಯಾರದ್ದು? ಇವೆಲ್ಲವೂ ಹೆಣ್ಣುಮಕ್ಕಳ ಆಯ್ಕೆಯೇ ಎಂಬ ಸೂಕ್ಷ್ಮ ಪ್ರಶ್ನೆಯೊಂದು ಮುಸ್ಲಿಂ ಹೆಣ್ಣುಮಕ್ಕಳಲ್ಲಿ ಮಾತ್ರವಲ್ಲ, ಧಾರ್ಮಿಕ ವಸ್ತ್ರಾಚರಣೆಯಲ್ಲಿ ತೊಡಗುವ ಎಲ್ಲಾ ಸಮುದಾಯದ ಹೆಣ್ಣುಮಕ್ಕಳಲ್ಲಿಯೂ ಮೂಡಬೇಕು. ಇನ್ನಾದರೂ ಮಹಿಳೆಯರು ಧಾರ್ಮಿಕ ವಸ್ತ್ರಗಳಾಚೆಗಿನ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಬೇಕಿದೆ.

ಮುಸ್ಲಿಂ ಹೆಣ್ಣುಮಕ್ಕಳ ಪರವಾದ ಸರ್ಕಾರದ ಕಾಳಜಿ, ಶಾಲಾ–ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅನುಮತಿ ನೀಡುವುದಕ್ಕೆ ಮಾತ್ರ ಸೀಮಿತವಾಗಬಾರದು. ಅನಕ್ಷರತೆ, ಬಡತನ, ಧಾರ್ಮಿಕ ಕಟ್ಟುಪಾಡುಗಳಂತಹ ಸವಾಲುಗಳನ್ನು ಎದುರಿಸುತ್ತಿರುವ ಸಮುದಾಯದ ಹೆಣ್ಣುಮಕ್ಕಳ ಸಬಲೀಕರಣಕ್ಕೆ ಸೂಕ್ತ ಯೋಜನೆಗಳನ್ನು ರೂಪಿಸುವ ಗುರುತರ ಜವಾಬ್ದಾರಿಯೂ ಸರ್ಕಾರದ್ದಾಗಿದೆ.

ಲೇಖಕಿ: ಅಧ್ಯಾಪಕಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಲ್ಲವೂ ಹುಬ್ಬಳ್ಳಿ ಕೇಂದ್ರಿತ; ಧಾರವಾಡದಲ್ಲಿ ಸೊರಗಿದ ಆಡಳಿತ

ಪಾಲಿಕೆ ವಿಭಜನೆ ಕೂಗು ತೀವ್ರ

• ಬಿ.ಜೆ.ಧನ್ಯಪ್ರಸಾದ್

20 ಕಿ.ಮೀ	248 ಚದರ ಕಿ.ಮೀ	82	13.25 ಲಕ್ಷ
ಹುಬ್ಬಳ್ಳಿ- ಧಾರವಾಡ ನಗರಗಳ ನಡುವಿನ ಅಂತರ	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿ	ಮಹಾನಗರ ಪಾಲಿಕೆಯಲ್ಲಿರುವ ವಾರ್ಡ್‌ಗಳ ಸಂಖ್ಯೆ	2023ರ ಅಂದಾಜಿನಂತೆ ಪಾಲಿಕೆಯ ವ್ಯಾಪ್ತಿಯಲ್ಲಿರುವ ಜನಸಂಖ್ಯೆ



ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಕ್ಷೆ

ಧಾರವಾಡದಲ್ಲಿರುವ ಪಾಲಿಕೆ ಕಚೇರಿ

'ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ' ಎಂಬ ಬೇಡಿಕೆ ಈಗ ಮತ್ತೆ ಜೀವ ಪಡೆದಿದೆ. ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆಯು ಮೇ 15ರಿಂದ ಧಾರವಾಡದ ಪಾಲಿಕೆ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದು, ಬುಧವಾರ ಆರನೇ ದಿನಕ್ಕೆ ಕಾಲಿರಿಸಿದೆ. ಹೋರಾಟದ ಮೊದಲ ಹಂತದ ಭಾಗವಾಗಿ ಪಾಲಿಕೆಯ ಮೇಯರ್, ಆಯುಕ್ತ ಮತ್ತು ಶಾಸಕ ಅರವಿಂದ ಬೆಲ್ಲದ ಅವರ ಕಚೇರಿಗಳಿಗೆ ಬೀಗ ಹಾಕಿದ ಪ್ರತಿಭಟನಕಾರರು, ಮುಂದಿನ ಹಂತದ ವಿವಿಧ ಸ್ವರೂಪಗಳ ಚಳವಳಿಗೆ ಸಿದ್ಧತೆ ನಡೆಸಿದ್ದಾರೆ. ವಿವಿಧ ಸಂಘಟನೆಗಳಿಂದ ಬೆಂಬಲವೂ ವ್ಯಕ್ತವಾಗುತ್ತಿದೆ. 'ವರ್ಷಗಳಿಂದ ಧಾರವಾಡಕ್ಕೆ ಬೇರೆ ಬೇರೆ ಸ್ವರೂಪದಲ್ಲಿ ಅನ್ಯಾಯ ಆಗುತ್ತಿದೆ. ಈಗ ಅದನ್ನು ಯಾವುದೇ ಕಾರಣಕ್ಕೂ ಸಹಿಸಲ್ಲ. ಪ್ರತ್ಯೇಕ ಧಾರವಾಡ ಪಾಲಿಕೆಯೊಂದೇ ಪರಿಹಾರ' ಎಂದು ಪ್ರತಿಭಟನಕಾರರು ಪಟ್ಟು ಹಿಡಿದಿದ್ದಾರೆ.

'ಪಾಲಿಕೆಯ ಆಡಳಿತವು ಬಹುತೇಕ ಹುಬ್ಬಳ್ಳಿ ಕೇಂದ್ರಿತವಾಗಿದೆ. ಅನುದಾನ ಹಂಚಿಕೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಧಾರವಾಡ ನಗರವು ಉಪೇಕ್ಷೆಗೆ ಒಳಗಾಗಿದೆ. ಮಲತಾಯಿ ಧೋರಣೆಯಿಂದ ಸೊರಗಿದೆ. ವಾರದಲ್ಲಿ ಎರಡು ದಿನ (ಮಂಗಳವಾರ ಮತ್ತು ಶುಕ್ರವಾರ) ಮೇಯರ್ ಮತ್ತು ಆಯುಕ್ತರು ಧಾರವಾಡದಲ್ಲಿ ಕಾರ್ಯನಿರ್ವಹಿಸಬೇಕು ಎಂಬ ನಿಯಮವಿದೆ. ಆದರೆ, ಕಾರ್ಯದ ಒತ್ತಡದಿಂದ ಕಟ್ಟಳೆ ಸರಿಯಾಗಿ ಪಾಲನೆಯಾಗುತ್ತಿಲ್ಲ. ಪಾಲಿಕೆ ವಿಭಜನೆಯಾದರೆ, ಇಲ್ಲಿಗೇ ಪ್ರತ್ಯೇಕ ಮೇಯರ್, ಆಯುಕ್ತರು ಇರುತ್ತಾರೆ. ಅಭಿವೃದ್ಧಿ, ಅನುದಾನ, ಪರಿಣಾಮಕಾರಿ ಆಡಳಿತ ಎಲ್ಲದಕ್ಕೂ ಅನುಕೂಲವಾಗಲಿದೆ' ಎಂಬುದು ಹೋರಾಟಗಾರರ ಪ್ರತಿಪಾದನೆ.

ಈ ಬೆಳವಣಿಗೆಗಳು ದಿಢೀರ್ ಆರಂಭವಾಗಿದ್ದಲ್ಲ. ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚಿಸುವ ಸರ್ವಾನುಮತದ ನಿರ್ಣಯಕ್ಕೆ ಒಪ್ಪಿಗೆ ನೀಡಿ, ರಾಜ್ಯ ಸರ್ಕಾರವು ಅನುಮೋದನೆಗಾಗಿ ಈಗಾಗಲೇ ರಾಜ್ಯಪಾಲರ ಕಚೇರಿಗೆ ಕಳುಹಿಸಿದೆ. ಆದರೆ, 11 ತಿಂಗಳಿನಿಂದ ಪ್ರಸ್ತಾವ ಮೂಲೆಗುಂಪಾಗಿದೆ. ಕಾಂಗ್ರೆಸ್ ವಿಭಜನೆಯ ಪರವಾಗಿದ್ದರೆ, ಪಾಲಿಕೆಯ ಆಡಳಿತ ಚುಕ್ಕಾಣಿ ಹಿಡಿದಿರುವ ಬಿಜೆಪಿ ಇದರ ವಿರುದ್ಧವಿದೆ.

ವಿಭಜನೆ ಲೆಕ್ಕಾಚಾರ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜನೆಗೆ ಸಂಬಂಧಿಸಿ ಸರ್ಕಾರಕ್ಕೆ ವಿವರ ಸಲ್ಲಿಸಲಾಗಿದೆ. ಅದರಂತೆ ಧಾರವಾಡಕ್ಕೆ 1ರಿಂದ 26 ವಾರ್ಡ್ ವ್ಯಾಪ್ತಿ, ವಿಸ್ತೀರ್ಣ 120.94 ಚದರ ಕಿ.ಮೀ. ನಿಗದಿಪಡಿಸಲಾಗಿದೆ. ಈ ಪ್ರದೇಶದ 2023ರ ಯೋಜಿತ ಜನಸಂಖ್ಯೆ 3.65 ಲಕ್ಷ ಇದೆ. ಹುಬ್ಬಳ್ಳಿಗೆ 27ರಿಂದ 82 ವಾರ್ಡ್ (56 ವಾರ್ಡ್‌ಗಳು) ವ್ಯಾಪ್ತಿ, 127.05 ಚದರ ಕಿಲೋ ಮೀಟರ್ ವಿಸ್ತೀರ್ಣ ನಿಗದಿಪಡಿಸಲಾಗಿದೆ. 2023ರ ಯೋಜಿತ ಜನಸಂಖ್ಯೆ 9.60 ಲಕ್ಷ ಇದೆ.

ಬದಲಾದ ಬಿಜೆಪಿ ನಿಲುವು: ಮೊದಲು ವಿಭಜನೆ ಪರವಾಗಿದ್ದ ಪಾಲಿಕೆಯ ಬಿಜೆಪಿ ಸದಸ್ಯರ ನಿಲುವು ಈಗ ಏಕಾಏಕಿ ಬದಲಾಗಿದೆ. 'ವಿಭಜನೆಯಾದರೆ ಪಾಲಿಕೆಗೆ ಅನುದಾನ ಕಡಿಮೆ ಆಗಲಿದೆ' ಎಂದು ಹೇಳಿ ಅವರು ಏಪ್ರಿಲ್ 30ರಂದು ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ 'ಪಾಲಿಕೆ ವಿಭಜನೆ' ಕೈಬಿಡಲು ಠರಾವು ಮಾಡಿದರು. ಇದರ ಬೆನ್ನಲ್ಲೇ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಹೋರಾಟ ಶುರುವಾಗಿದೆ.

ವಿಭಜನೆಗೆ ಆಗ ಸಮ್ಮತಿಸಿ, ಈಗ ವರಸೆ ಬದಲಿಸಿರುವ ಬಿಜೆಪಿ ಸದಸ್ಯರು, 'ರಾಜ್ಯದ ಎರಡನೇ ದೊಡ್ಡ ಪಾಲಿಕೆ ಆಗಿರುವ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆ ಆಗಿಸಬೇಕು' ಎಂಬ ಹೊಸ ಆಲೋಚನೆಗೆ ಎಡೆ ಮಾಡಿಕೊಟ್ಟಿದ್ದಾರೆ. ಈ ನಿಲುವುವಿನಿಂದಾಗಿ ಪ್ರಸ್ತಾವ ನನೆಗುದಿಗೆ ಬಿದ್ದಿದೆ.

'ಪಾಲಿಕೆ ವಿಭಜಿಸದಿದ್ದರೆ ಕೇಂದ್ರ 16ನೇ ಹಣಕಾಸು ಆಯೋಗದಡಿ ವಿಶೇಷ ಅನುದಾನ ಲಭಿಸಲಿದೆ. 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳಿಗೆ ಹೆಚ್ಚು ಅನುದಾನ ಸಿಗುತ್ತದೆ. ಈ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆ ದರ್ಜೆಗೇರಿಸುವುದು ಒಳ್ಳೆಯದು' ಎಂಬುದು ಬಿಜೆಪಿ ಸದಸ್ಯರ ವಾದ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಅರವಿಂದ ಬೆಲ್ಲದ, ವೇದಿಕೆ ಸದಸ್ಯರು ಮಂಗಳವಾರ ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಶಾಸಕರಾದ ಪ್ರಸಾದ್ ಅಬ್ಬಯ್ಯ, ಎನ್.ಎಚ್.ಕೋನರಡ್ಡಿ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಸಂಘಟನೆಗಳ ಪ್ರಮುಖರು ಬುಧವಾರ ರಾಜ್ಯಪಾಲರನ್ನು ಭೇಟಿಯಾಗಿ, ಮನವಿಪತ್ರ ಸಲ್ಲಿಸಿದ್ದಾರೆ.

ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆಗೆ ಆಗ್ರಹಿಸಿ ಹೋರಾಟಗಾರರು ಈಚೆಗೆ ಧಾರವಾಡದ ಜಿಲ್ಲಾಧಿಕಾರಿ ಕಚೇರಿ ಮುಂದೆ ಈಚೆಗೆ ಪ್ರತಿಭಟನೆ ನಡೆಸಿದರು

> **ಪಾಲಿಕೆ ವಿಭಜನೆಯಾಗದಿದ್ದರೆ ಕೇಂದ್ರದ 16ನೇ ಹಣಕಾಸು ಆಯೋಗದ ಹೆಚ್ಚು ಅನುದಾನ ಲಭಿಸಲಿದೆ ಎಂಬುದು ಜನರನ್ನು ತಪ್ಪು ದಾರಿಗೆಳೆಯುವ ಪ್ರಯತ್ನ. ಪರಿಣಾಮಕಾರಿ ಆಡಳಿತ ಮತ್ತು ಅಭಿವೃದ್ಧಿಗಾಗಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಯಾಗಲೇಬೇಕು**
> **ವೆಂಕಟೇಶ ಮಾಚಕನೂರ,** ಪ್ರತ್ಯೇಕ ಪಾಲಿಕೆ ಹೋರಾಟಗಾರ

> **ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಗೆ ಸರ್ವಾನುಮತದ ನಿರ್ಣಯವಾಗಿದೆ. ರಾಜ್ಯಪಾಲರು ಪ್ರಸ್ತಾವಕ್ಕೆ ಕೂಡಲೇ ಅನುಮೋದನೆ ನೀಡಬೇಕು. ಯಾವ ಪಕ್ಷದವರೂ ಈ ವಿಚಾರದಲ್ಲಿ ರಾಜಕೀಯ ಮಾಡಬಾರದು. ಬೇಡಿಕೆ ಈಡೇರುವವರೆಗೆ ಹೋರಾಟ ಮುಂದುವರಿಸುತ್ತೇವೆ**
> **ಬಿ.ಡಿ.ಹಿರೇಮಠ,** ವಕೀಲ

> **ಆಡಳಿತದಲ್ಲಿ ಹಿಡಿತ, ಉತ್ತಮ ಆಡಳಿತಕ್ಕಾಗಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚಿಸುವುದು ಅಗತ್ಯ. ಆಡಳಿತ ವಿಕೇಂದ್ರೀಕರಣ ಮತ್ತು ಧಾರವಾಡದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಯ ಸರ್ಕಾರದ ಪ್ರಸ್ತಾವಕ್ಕೆ ರಾಜ್ಯಪಾಲರು ಅನುಮೋದನೆ ನೀಡಬೇಕು**
> **ಸಂತೋಷ ಲಾಡ್,** ಜಿಲ್ಲಾ ಉಸ್ತುವಾರಿ ಸಚಿವ, ಧಾರವಾಡ

> **ಪಾಲಿಕೆಯನ್ನು ಒಡೆದರೆ ಧಾರವಾಡ ಸಣ್ಣ ಪಾಲಿಕೆಯಾಗುತ್ತದೆ. ಇಲ್ಲಿನ ಜನಸಂಖ್ಯೆ ಕಡಿಮೆ ಇದೆ. ಇಲ್ಲಿಗೆ 16ನೇ ಹಣಕಾಸು ಆಯೋಗದಿಂದ ಕಡಿಮೆ ಅನುದಾನ ಲಭಿಸುತ್ತದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಬೃಹತ್ ಪಾಲಿಕೆಯಾಗಿಸುವುದು ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯದು**
> **ಈರೇಶ ಅಂಚಟಗೇರಿ,** ಸಭಾನಾಯಕ, ಮಹಾನಗರ ಪಾಲಿಕೆ

ಹಲವು ವರ್ಷಗಳ ಬೇಡಿಕೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 1962ರಲ್ಲಿ ಅಸ್ತಿತ್ವಕ್ಕೆ ಬಂತು. ಅದಕ್ಕೂ ಮೊದಲು ಎರಡೂ ನಗರಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಸರ್ ಸಿದ್ದಪ್ಪ ಕಂಬಳಿ, ರಾವ್ ಬಹದ್ದೂರ್ ಬಿ.ಎಲ್. ಪಾಟೀಲ, ದ.ಪ.ಕರ್ಮಕರ, ಜಿ.ಆರ್.ನಲವಡಿ ಮೊದಲಾದ ಘಟಾನುಘಟಿ ನಾಯಕರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ತರಲು ಶ್ರಮಿಸಿದ್ದರು. ಜಿ.ಆರ್.ನಲವಡಿ ಅವರು ಮಹಾನಗರ ಪಾಲಿಕೆಯ ಪ್ರಥಮ ಮೇಯರ್ ಆಗಿ ಕಾರ್ಯನಿರ್ವಹಿಸಿದ್ದರು.

ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆಯಾಗಬೇಕು ಎಂಬುದು ಹಲವು ವರ್ಷಗಳ ಬೇಡಿಕೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸಹಿತ ಎಲ್ಲ ಪಕ್ಷಗಳು, ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಅಭಿವೃದ್ಧಿ ವೇದಿಕೆ, ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆ ಸಹಿತ ವಿವಿಧ ಸಂಘಟನೆಗಳ ಕೂಗು ಇದು. 2018ರಿಂದ ಕೂಗು ಜೋರಾಗಿತ್ತು. ಧಾರವಾಡದಲ್ಲಷ್ಟೇ ಅಲ್ಲ, ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನ ಸಂದರ್ಭದಲ್ಲೂ ಪ್ರತಿಭಟನೆಗಳು ನಡೆದಿದ್ದವು. 2023ರಲ್ಲಿ ಕೂಗು ಇನ್ನೂ ಜೋರಾಗಿತ್ತು. ಬಿಜೆಪಿ ಶಾಸಕ ಅರವಿಂದ ಬೆಲ್ಲದ, ಕಾಂಗ್ರೆಸ್‌ನ ವಿನಯ ಕುಲಕರ್ಣಿ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದರು.

ಕೇಂದ್ರ ಆಹಾರ ಸಚಿವ, ಧಾರವಾಡ ಸಂಸದ, ಪ್ರಲ್ಹಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಎಸ್.ಲಾಡ್, ಶಾಸಕ ಅರವಿಂದ ಬೆಲ್ಲದ ಸಹಿತ ಇಲ್ಲಿನ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಾಲಿಕೆಯ 82 ಸದಸ್ಯರು ಪ್ರತ್ಯೇಕ ಪಾಲಿಕೆ ರಚನೆಗೆ ಒಪ್ಪಿಗೆ ಪತ್ರ ನೀಡಿದ್ದರು. 2024 ನವೆಂಬರ್ 29ರಂದು ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಅಂಗೀಕರಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು.

2025ರ ಜನವರಿ 2ರಂದು ರಾಜ್ಯ ಸರ್ಕಾರವು ಸಂಪುಟದಲ್ಲಿ ತೀರ್ಮಾನ ಕೈಗೊಂಡಿತ್ತು, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಘೋಷಣೆ ಮಾಡಿತ್ತು. ಅಧಿಸೂಚನೆ ಪ್ರಕಟಿಸಿತ್ತು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸಹಿತ ವಿವಿಧ ಪಕ್ಷಗಳವರು, ಹೋರಾಟಗಾರರು ಸ್ವಾಗತಿಸಿದ್ದರು.

ರಾಜ್ಯ ಸರ್ಕಾರ ಏಪ್ರಿಲ್‌ನಲ್ಲಿ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವವನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಿತ್ತು. ರಾಜ್ಯಪಾಲರು ಪ್ರಸ್ತಾವಕ್ಕೆ ಆಕ್ಷೇಪಣೆಯನ್ನೂ ವ್ಯಕ್ತಪಡಿಸಿಲ್ಲ, ತಿರಸ್ಕರಿಸಿಯೂ ಇಲ್ಲ, ಅನುಮೋದನೆಯನ್ನೂ ನೀಡಿಲ್ಲ.

ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಯಾದರೆ ರಾಜಕೀಯ ಲಾಭ ಕಾಂಗ್ರೆಸ್ ಪಾಲಾಗಲಿದೆ ಎಂಬ ಕಾರಣಕ್ಕೆ ಅನುದಾನದ ಕುಂಟು ನೆಪವೊಡ್ಡಿ ಸಚಿವ ಪ್ರಲ್ಹಾದ ಜೋಶಿ ಮತ್ತು ಅರವಿಂದ ಬೆಲ್ಲದ ಅವರು ರಾಜ್ಯಪಾಲರಿಂದ ಪ್ರಸ್ತಾವ ತಡೆಹಿಡಿಸಿ ಅಡ್ಡಗಾಲು ಹಾಕಿದ್ದಾರೆ ಎಂಬುದು ಕಾಂಗ್ರೆಸ್‌ನವರ ಆರೋಪ.

ರಾಜ್ಯಪಾಲರಿಗೆ ಪತ್ರ: ಪ್ರತ್ಯೇಕ ಪಾಲಿಕೆ ಪ್ರಸ್ತಾವವನ್ನು ಕೈಬಿಡುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಬೇಕು ಎಂದು ರಾಜ್ಯಪಾಲರಿಗೆ ವಿಧಾನಸಭೆ ವಿರೋಧ ಪಕ್ಷದ ಉಪನಾಯಕರೂ ಆಗಿರುವ ಶಾಸಕ ಅರವಿಂದ ಬೆಲ್ಲದ ಅವರು ಕೆಲ ದಿನಗಳ ಹಿಂದೆ ಪತ್ರ ಬರೆದಿದ್ದರು.

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.
https://bit.ly/3xFpoz4

ಕಾಲೇಜಿಗೆ ಪ್ರವೇಶ ಪಡೆದುಕೊಂಡೆ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನದಿಂದಾಗಿ ಗಂಗಾವತಿಯಲ್ಲಿ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆದುಕೊಳ್ಳಲು ಸಾಧ್ಯವಾಯಿತು. ಶಿಕ್ಷಣ ಮುಂದುವರಿಸುವ ಆಸೆಗೆ ಪತ್ರಿಕೆ ನೆರವಾಗಿದೆ. ಓದುವ ಹುಮ್ಮಸ್ಸು ಹೆಚ್ಚಿಸಿದ ಪತ್ರಿಕೆಯ ಸಹಾಯ ಪ್ರತಿ ವಿದ್ಯಾರ್ಥಿಗೂ ಸಂಜೀವಿನಿ ಇದ್ದಂತೆ. 'ಪ್ರಜಾವಾಣಿ' ಗೆ ಧನ್ಯವಾದಗಳು.
ಮಂಜುನಾಥ ನಿರುಪಾದಿ ವಾಲಿಕಾರ, ಕೊಪ್ಪಳ ಜಿಲ್ಲೆ

ಪುಸ್ತಕ, ನೋಟ್‌ಬುಕ್ ಖರೀದಿಸಿದೆ

'ಪ್ರಜಾವಾಣಿ' ಪತ್ರಿಕಾ ಸಂಸ್ಥೆಯವರು ನೀಡಿದ ನೆರವಿನಿಂದಾಗಿ ಪಿಯುಸಿ ಪಠ್ಯಪುಸ್ತಕ ಹಾಗೂ ನೋಟ್‌ಬುಕ್‌ಗಳನ್ನು ಖರೀದಿಸಿದೆ. ಕೊಪ್ಪಳದ ಚೈತನ್ಯ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿ ವೇತನ ನೆರವಾಯಿತು. ಬಡವರಿಗೆ ಬಹಳಷ್ಟು ಅನುಕೂಲವಾಗುತ್ತಿದೆ. ವಿದ್ಯಾರ್ಥಿ ವೇತನ ನೀಡುತ್ತಿರುವುದು ಖುಷಿಯ ವಿಚಾರ.
ಶಿವನಗೌಡ ಪೊಲೀಸ್‌ಪಾಟೀಲ, ಕೊಪ್ಪಳ

ಜಮ್ಮು: ಸರ್ಕಾರಿ ಶಾಲೆಗೆ ಆದಿಲ್ ಹುಸೇನ್ ಶಾ ಹೆಸರು

ಅನಂತನಾಗ್ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಸರ್ಕಾರಿ ಶಾಲೆಗೆ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಪ್ರವಾಸಿಗರನ್ನು ರಕ್ಷಿಸುವಾಗ ಮೃತಪಟ್ಟಿದ್ದ ಆದಿಲ್ ಹುಸೇನ್ ಶಾ ಅವರ ಹೆಸರನ್ನು ಇಡಲಾಗಿದೆ.

ಹಪತನಾರ್ ಸರ್ಕಾರಿ ಪ್ರೌಢ ಶಾಲೆಯನ್ನು ಆದಿಲ್ ಹುಸೇನ್ ಶಾ ಸ್ಮಾರಕ ಪ್ರೌಢ ಶಾಲೆ ಎಂದು ಮರುನಾಮಕರಣ ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಶಿಕ್ಷಣ ಸಚಿವ ಸಕೀನಾ ಇಟೂ ಮತ್ತು ಹುಸೇನ್ ಶಾ ಕುಟುಂಬಸ್ಥರು ಹಾಜರಿದ್ದರು.

'ಶಿಕ್ಷಣ ಸಂಸ್ಥೆಯನ್ನು ಮರುನಾಮಕರಣ ಮಾಡುವ ಮೂಲಕ ಪ್ರವಾಸಿಗರ ರಕ್ಷಣೆಯಲ್ಲಿ ತನ್ನ ಜೀವವನ್ನು ಮುಡಿಪಾಗಿಟ್ಟ ಶಾ ಅವರ ಧೈರ್ಯ ಮತ್ತು ತ್ಯಾಗವನ್ನು ಗೌರವಿಸಲಾಗಿದೆ. ಕಾಶ್ಮೀರ ಜನರ ಆತಿಥ್ಯ ಎಂತದ್ದು ಎಂಬುದು ಶಾ ಅವರ ತ್ಯಾಗದಿಂದ ಸಾಬೀತಾಗಿದೆ' ಎಂದು ಇಟೂ ಅವರು ತಿಳಿಸಿದರು.

'ಶಾ ಅವರ ತ್ಯಾಗಕ್ಕಾಗಿ ಶಾಲೆಗೆ ಅವರ ಹೆಸರನ್ನು ಇಡುವುದಾಗಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಘೋಷಿಸಿದ್ದರು' ಎಂದು ಅವರು ಹೇಳಿದರು.

'ಯಾವ ತಂದೆ ಮಗನನ್ನು ಪೊಲೀಸರಲ್ಲಿಗೆ ಕಳುಹಿಸುತ್ತಾರೆ?'

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ತಮ್ಮ ಪುತ್ರ ಬಂಡಿ ಸಾಯಿ ಭಗೀರಥನನ್ನು ಬಂಧಿಸಿರುವುದರ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್, 'ಯಾವ ತಂದೆ, ಪುತ್ರನನ್ನು ಪೊಲೀಸ್ ವಿಚಾರಣೆಗೆ ಕಳುಹಿಸುತ್ತಾರೆ, ಹೇಳಿ' ಎಂದು ಪ್ರಶ್ನಿಸಿದ್ದಾರೆ.

ಪುತ್ರನ ಬಂಧನದ ಬಳಿಕ ಬುಧವಾರ ಮೊದಲ ಬಾರಿ ಹೈದರಾಬಾದ್‌ನಲ್ಲಿರುವ ಬಿಜೆಪಿ ಪ್ರಧಾನ ಕಚೇರಿಗೆ ಬಂದ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ನಾನು ಜನರೊಂದಿಗೆ ಇರಲು ಬಯಸುತ್ತೇನೆ. ತನಿಖೆಗೆ ಸಹಕಾರ ನೀಡುವಂತೆ ಪೊಲೀಸರು ಮನವಿ ಮಾಡಿದ ಕೂಡಲೇ, ಪುತ್ರನಿಗೆ ಪೊಲೀಸರ ಎದುರು ಶರಣಾಗಲು ಸೂಚಿಸಿದೆ. ಇದಕ್ಕೂ ಮುನ್ನ ನನ್ನ ಮತ್ತು ಬಿಜೆಪಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡಲಾಯಿತು. ಇದರಿಂದ ಬಂಧನ ಪ್ರಕ್ರಿಯೆ ಸ್ವಲ್ಪ ವಿಳಂಬವಾಯಿತು' ಎಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇಸರಿ ಬಾವುಟ ಹಿಡಿದ ಕೆಲವರು ಕಟ್ಟಡವೊಂದರ ಮೇಲೆ ದಾಳಿ ಮಾಡುವ, ಮನೆಯನ್ನು ಧ್ವಂಸ ಮಾಡುವ ಮತ್ತು ವ್ಯಕ್ತಿಯೊಬ್ಬರ ಮೇಲೆ ತೀವ್ರವಾಗಿ ಹಲ್ಲೆ ನಡೆಸುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದು, ಅದನ್ನು ಅನುಸರಿಸಿ ಕೆಲವರು ಆರು ಮಸೀದಿಗಳನ್ನು ಒಡೆದುಹಾಕಿದ್ದಾರೆ, 52 ಮುಸ್ಲಿಮರ ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ ಮತ್ತು ಕೆಲವು ಮುಸ್ಲಿಮರನ್ನು ಜೀವಂತವಾಗಿ ಸುಡಲಾಗಿದೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ನಿಜವಲ್ಲ.

ವಿಡಿಯೊದ ಕೀಫ್ರೇಮ್‌ಗಳನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, 'ದೈನಿಕ್ ಭಾಸ್ಕರ್' ವರದಿಗೆ ಸಂಪರ್ಕ ಕಲ್ಪಿಸಿತು. ವರದಿಯು ಇಂಥದೇ ವಿಡಿಯೊ ಅನ್ನು ಒಳಗೊಂಡಿತ್ತು. ಉತ್ತರ ಪ್ರದೇಶದ ಹಾಪುರದಲ್ಲಿ ಮಹಾರಾಣಾ ಪ್ರತಾಪ್ ಜಯಂತಿಯ ಮೆರವಣಿಗೆ ಸಂದರ್ಭದಲ್ಲಿ ನಡೆದ ಸಣ್ಣ ಜಗಳವು ನಂತರ ಹಿಂಸಾಚಾರಕ್ಕೆ ತಿರುಗಿತ್ತು ಎಂದು ವರದಿ ಉಲ್ಲೇಖಿಸಿದೆ. ಗುಟ್ಕಾ ಸೇವನೆಯ ಕಾರಣಕ್ಕೆ ಆರಂಭವಾದ ಜಗಳವು ದೊಡ್ಡದಾಯಿತು, ಜನ ಮನೆಗಳ ಮೇಲೆ ಹತ್ತಿ ಕಟ್ಟಡ ಧ್ವಂಸ ಮಾಡಿದರು ಎಂದು 'ಅಮರ್ ಉಜಾಲಾ' ಪತ್ರಿಕೆಯ ವರದಿ ತಿಳಿಸಿದೆ. ಘಟನೆಯ ಸಂಬಂಧ ಹಲವರನ್ನು ಬಂಧಿಸಲಾಗಿದೆ ಎಂದು ಮೀರತ್ ಪೊಲೀಸರು ಸ್ಪಷ್ಟೀಕರಣ ನೀಡಿದ್ದಾರೆ. ಗಲಭೆಯ ವಿಡಿಯೊ ಹಂಚಿಕೊಂಡು ಅದಕ್ಕೆ ರಾಜಕೀಯ ಲೇಪ ಹಚ್ಚಿ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಆಡಂಬರ

ನುಡಿ ಬೆಳಗು

ಪಿ.ಚಂದ್ರಿಕಾ

ಪುರುಷೋತ್ತಮ ದಾಸ ಟಂಡನ್ ಅವರು ಸ್ವಾತಂತ್ರ್ಯ ಹೋರಾಟಗಾರರು. ಸ್ವಾತಂತ್ರ್ಯಾನಂತರ ದೇಶದಲ್ಲಿ ದುರ್ಭಿಕ್ಷ ಬಂದದ್ದರಿಂದ, ಸರ್ಕಾರವೇ ಆಹಾರ ಪದಾರ್ಥಗಳನ್ನು ಒದಗಿಸುತ್ತಿದ್ದರೂ ಜನರಿಗೆ ಅದು ಸಾಕಾಗುತ್ತಿರಲಿಲ್ಲ. ಅಂದೂ ಕದ್ದು ಮಾರುವವರು ಇದ್ದ ಕಾರಣ ಸರ್ಕಾರ ಒದಗಿಸುತ್ತಿದ್ದ ಆಹಾರ ಪಾದಾರ್ಥಗಳು ಕಾಳಸಂತೆಯಲ್ಲಿ ವ್ಯಾಪಾರವಾಗುತ್ತಿದ್ದವು. ಟಂಡನ್ ಅವರು ನೈತಿಕವಾಗಿ ಯಾವತ್ತೂ ತಪ್ಪು ಹೆಜ್ಜೆ ಇಟ್ಟವರಲ್ಲ. 'ಕಾಳಸಂತೆಯಲ್ಲಿ ಯಾವುದೇ ಕಾರಣಕ್ಕೂ ಧಾನ್ಯ ತರಕೂಡದು, ಅದು ಯಾರ ಪಾಲಿನ ಧಾನ್ಯವೋ. ಆದ್ದರಿಂದ ಕಸಿದು ತರುವುದು ಮಹಾಪಾಪ' ಎನ್ನುವುದು ಅವರ ನಿಲುವಾಗಿತ್ತು.

ಒಮ್ಮೆ ಅವರ ಮನೆಗೆ ಅತಿಥಿಗಳು ಬರುವವರಿದ್ದರು. ಅಂದು ಅವರ ಮನೆಯಲ್ಲಿ ದವಸ ಧಾನ್ಯ ಇರಲಿಲ್ಲ. ಅಡುಗೆಯವ, 'ಈಗ ಏನು ಮಾಡಲಿ? ಕಾಳಸಂತೆಯಿಂದ ತರದಿದ್ದರೆ ಅಡುಗೆಗೆ ಏನೂ ಇಲ್ಲ' ಎಂದ. 'ಬಡವರ ರಕ್ತಹೀರುವ ಕಾಳಸಂತೆಯಿಂದ ಯಾವ ಆಹಾರ ಪದಾರ್ಥವನ್ನೂ ತರುವುದು ಬೇಡ' ಎಂದರು ಟಂಡನ್. 'ಮತ್ತೆ ಅಡುಗೆ ಮಾಡುವುದು ಹೇಗೆ' ಎಂಬ ಅಡುಗೆಯವನ ಮಾತಿಗೆ, ಟಂಡನ್ ಅವರು ಮರುಮಾತಾಡದೆ ಕೈತೋಟಕ್ಕೆ ಹೋದರು. ಮನೆಯ ಅಗತ್ಯಗಳಿಗೆ ಕೆಲವು ಗಿಡಗಳನ್ನು ಅಲ್ಲಿ ಹಾಕಿಕೊಳ್ಳಲಾಗಿತ್ತು. ಅದರಲ್ಲಿ ಆಲೂಗಡ್ಡೆ ಕೂಡ ಇತ್ತು. ಟಂಡನ್ ಅದನ್ನು ಕಿತ್ತು ತೊಳೆದು ಅಡುಗೆಯವನಿಗೆ ಕೊಟ್ಟು, 'ಇದರಿಂದ ಪದಾರ್ಥ ಮಾಡು' ಎಂದರು. ಅಡುಗೆಯವ ಗಾಬರಿಯಾದ. 'ಮನೆಗೆ ಬಂದ ಅತಿಥಿಗಳಿಗೆ ಬರಿಯ ಆಲೂಗಡ್ಡೆ ಕೊಡುವುದೇ' ಎಂದ. 'ಇದು ತಿನ್ನಲು ಬರುವ ಪದಾರ್ಥ ಹೌದಲ್ಲವೇ? ಹೋಗಿ ಬೇಯಿಸಿ ಸಿಪ್ಪೆ ತೆಗೆದು ಉಪ್ಪು ಖಾರ ಹಾಕಿ ಹುರಿ. ಅದ್ಭುತವಾಗಿರುತ್ತದೆ' ಎಂದರು ಟಂಡನ್. 'ಬರುವವರು ನಿಮಗೆ ತುಂಬಾ ಹತ್ತಿರದವರು ಹಾಗಿದ್ದೂ ಅನ್ನ, ಚಪಾತಿ, ಪಾಯಸ ಯಾವುದೂ ಇಲ್ಲದೆ ಹಾಗೇ ಊಟಕ್ಕೆ ಹಾಕುವುದೇ' ಎಂದ ಅಡುಗೆಯವನಿಗೆ, 'ನೀನು ಅಡುಗೆ ಮಾಡು ಮಿಕ್ಕ ಸಂಗತಿಗಳನ್ನು ನನಗೆ ಬಿಡು' ಎಂದರು ಟಂಡನ್.

ಮನೆಗೆ ಬಂದ ಅತಿಥಿಗಳಿಗೆ ಟಂಡನ್ ಕೈ ಮುಗಿದು, 'ಇದು ಇವತ್ತಿನ ನಮ್ಮ ಮನೆಯ ಊಟ. ನನ್ನ ಮನೆಗೆ ಬರುವ ಅತಿಥಿ ಎಂದರೆ ದೇವರ ರೂಪ. ದೇವರಿಗೆ ಶುದ್ಧವಾದ ಆಹಾರವನ್ನು ಕೊಡಬೇಕು. ಅದಕ್ಕೆ ಯಾವುದೇ ಪಾಪದ ಲೇಪ ಇರಬಾರದು ಎನ್ನುವುದು ನನ್ನ ನಿಲುವು. ಇಂದು ಮನೆಯಲ್ಲಿ ಎಲ್ಲಾ ದವಸ ಧಾನ್ಯಗಳು ಮುಗಿದಿವೆ. ಈಗ ತರಬೇಕೆಂದರೆ ಕಾಳಸಂತೆಯಲ್ಲೇ ತರಬೇಕು. ಅದು ತಪ್ಪಾದ್ದರಿಂದ ಇಷ್ಟು ಊಟದಲ್ಲೇ ನೀವು ಸಂತೃಪ್ತಿಯನ್ನು ಪಡೆದುಕೊಳ್ಳಿರೆಂದು ವಿನಂತಿಸಿಕೊಳ್ಳುತ್ತೇವೆ' ಎಂದರು. ಬಂದವರ ಕಣ್ಣಲ್ಲಿ ಹನಿ ಮೂಡುತ್ತದೆ. 'ಇನ್ನೊಬ್ಬರ ಅನ್ನ ಕಸಿದು ನಾವು ತಿನ್ನುವುದು ಖಂಡಿತಾ ಒಳ್ಳೆಯದಲ್ಲ. ಇರುವುದರಲ್ಲೇ ತೃಪ್ತಿಯನ್ನು ಹೊಂದುವ ಪಾಠವನ್ನು ನಮಗೆ ನೀವು ಹೇಳಿಕೊಟ್ಟಿರಿ' ಎಂದು ಪ್ರತಿ ನಮಸ್ಕರಿಸಿ ಊಟ ಮಾಡುತ್ತಾರೆ.

ಮನೆಗೆ ಬಂದ ಅತಿಥಿಗಳ ಮುಂದೆ ನಮ್ಮಲ್ಲಿ ಎಲ್ಲಾ ಇದೆ ಎಂದು ತೋರಿಸಿಕೊಳ್ಳುವ ಆಡಂಬರ, ವೈವಿಧ್ಯಮಯ ಆಹಾರವನ್ನು ತಯಾರಿಸಿ ಎಸೆದರೂ ಚಿಂತೆಯಿಲ್ಲ ಎಂದುಕೊಳ್ಳುತ್ತೇವೆ. ಆದರೆ ಸರ್ವಹಿತದ ಜೊತೆ ತನ್ನ ಹಿತ, ಸರ್ವರ ಊಟದ ಜೊತೆ ನನ್ನ ಊಟ ಇರುತ್ತದೆಂದು ಕೆಲವರು ಮಾತ್ರ ಅರಿತುಕೊಳ್ಳಬಲ್ಲರು. ಸುಲಭಕ್ಕೆ ಸಿಗುತ್ತದೆ ಎಂದು ಇನ್ನೊಬ್ಬರಿಗೆ ಮೀಸಲಾದ ಊಟವನ್ನು ಕಸಿದುಕೊಳ್ಳುವ ರಾಕ್ಷಸತ್ವದ ಎದುರು ಟಂಡನ್ ಅವರ ನಿಲುವು ಎಷ್ಟು ಮಾನವೀಯ ಅಲ್ಲವೇ?

ಪದಬಂಧ 6409

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಶ್ರಮದ ಬಳಿಯಲ್ಲಿನ ಬಳಲಿಕೆ (4)
3.ರಂಪಾಟವಲ್ಲ! ಪಟದಲ್ಲಿರುವ ರೂಢಿ! (4)
5.ಯಾವ ಧ್ವನಿಯೂ ಇರದ ಮೌನ (3)
6.ಕೊನೆಗೆ ಗೆಲುವಿದ್ದರೂ ಇದು ಸೋಲು! (4)
8.ಆಯುಧಗಳನ್ನಿಡುವ ಕಟ್ಟಡ (4)
10.ಆಗಮಗಳನ್ನು ತಿಳಿದವನು (4)
12.ಕಸರತ್ತು ಮಾಡಿಯೇ ಹಾಕಿದ ಸಹಿ (4)
13.ಬೆಳ್ಳುಳ್ಳಿಯಿದು (3)
16.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
17.ಗಯ್ಯಾಳಿ ಮಾಡಿದ ನಿಂದೆ (4)

ಮೇಲಿಂದ ಕೆಳಕ್ಕೆ
1.ಪ್ರತ್ಯಯ ಸಹಿತವಾದ ಶಬ್ದವು ಪದವಿಯಲ್ಲಿದೆ (2)
2.ಗೌರವಕ್ಕೆ ಪಾತ್ರನಾದವನು (4)
3.ಬೇರೆಯವರ ಅಧೀನದಲ್ಲಿರುವಿಕೆ (4)
4.ಮೋಸವನ್ನು ಹೀಗೆನ್ನಿ (2)
7.ಉತ್ತರದ ಕಡೆಯವರ ಮಂಚ (3)
9.ಹಾಡುಗಾರ ಇಲ್ಲಿದ್ದಾನೆ (3)
11.ಮಧುರವಾದ ಧ್ವನಿಯಿದು (4)
12.ಈತ ಗೋಪಾಲಕ (4)
14.ಹಿರಿಯ ಸಹೋದರಿ ತಿರುಗಿ ನಿಂತಿದ್ದಾಳೆ (2)
15.ಶಂಕೆಯೇ ಬೇಡ ಇದು ಹತೋಟಿ! (2)



6408ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಲೋಹಚುಂಬಕ 3.ಸಿಕತ
5.ಪವನಸುತ 7.ವಸಂತ
8.ನಾಮಕರಣ 11.ಹರಕೆ
12.ಮೂಕರೋದನೆ 15.ರುಮಾಲು
16.ರಾವುಕನ್ನಡಿ

ಮೇಲಿಂದ ಕೆಳಕ್ಕೆ:
1.ಲೋಲುಪ 2.ಚುಂಬನ
4.ತಲಾಂತರ 6.ಸುಗಮ
7.ವರುಣ 8.ನಾಚಿಕೆ
9.ರಸಿಕ 10.ಮಹಜರು
13.ರೋಚಕ 14.ನೆಗಡಿ

ಸುಡೊಕು 6792

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		9			7	1		4
				3				
5		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		6

6791 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

21 ಮೇ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಪಂಚಮಿ ಗಂ. 8-27 ನಕ್ಷತ್ರ: ಪುಷ್ಯ ಗಂ. 26-50 ಯೋಗ: ಗಂಡ ಗಂ. 10-59 ಕರಣ: ಬಾಲವ ಗಂ. 8-27, ವೃಷಭ ಮಾಸದ 06 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-07 ಸೂರ್ಯಾಸ್ತ : 06-47, ಮುಸ್ಲಿಂ ದಿನಾಂಕ : 04 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 8, 5

ಮೇಷ: ಜಾಗತಿಕ ಮಟ್ಟದ ಆಗು-ಹೋಗುಗಳ ಅರಿತು ವ್ಯವಹಾರದಲ್ಲಿ ಮುಂದುವರಿಯುವುದು ಉತ್ತಮ. ತಂದೆಯ ಅಥವಾ ಹಿರಿಯರ ಮಾತಿಗೆ ಎದುರಾಡಬೇಡಿ. ಭೂ ವ್ಯವಹಾರಗಳಿಂದ ಲಾಭ ಗಳಿಸಬಹುದು.

ವೃಷಭ: ಇತರರೂ ಸಂತೋಷವಾಗಿರಬೇಕೆಂಬ ನಿಮ್ಮ ಮನೋಭಾವದಿಂದ ಗೌರವವನ್ನು ಪಡೆದುಕೊಳ್ಳುವಿರಿ. ಮೆಕ್ಯಾನಿಕ್ ಕೆಲಸಗಾರರಿಗೆ ಅಧಿಕ ವರಮಾನ ಇರಲಿದೆ.

ಮಿಥುನ: ಇನ್ನೊಬ್ಬರ ಮಾತುಗಳನ್ನು ಆಲಿಸಿಕೊಂಡು ವಿಚಾರಗಳನ್ನು ತೀರ್ಮಾನಿಸುವುದಕ್ಕಿಂತ ಸ್ವತಃ ಪರೀಕ್ಷೆ ನಡೆಸಿ ತೀರ್ಮಾನಕ್ಕೆ ಬನ್ನಿ. ಎಲೆಕ್ಟ್ರಿಕಲ್ ವಸ್ತುಗಳ ವ್ಯಾಪಾರ ಆರಂಭಿಸುವ ಬಗ್ಗೆ ಯೋಚಿಸಬಹುದು.

ಕರ್ಕಾಟಕ: ಕೆಲವರು ನಿಮ್ಮನ್ನು ಅಪಹಾಸ್ಯ ಮಾಡಬಹುದು. ಹೊಸ ಜನರ ಸಂಪರ್ಕ ಮಾಡಿಕೊಳ್ಳುವ ಅಭ್ಯಾಸ ರೂಢಿಸಿಕೊಳ್ಳಿರಿ. ವ್ಯವಹಾರದಲ್ಲಿ ಅಭಿವೃದ್ಧಿ ಆಗಲಿದೆ.

ಸಿಂಹ: ಸಂತೋಷದ ಮನೋಭಾವದಲ್ಲಿರುವ ನೀವು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ರಾಜಕೀಯ ಪಕ್ಷವೊಂದಕ್ಕೆ ಸೇರಲು ಒತ್ತಾಯ ಬರುವುದು. ಕಮಿಷನ್ ವ್ಯಾಪಾರಸ್ಥರಿಗೆ ಲಾಭ ವೃದ್ಧಿ.

ಕನ್ಯಾ: ಕೋರ್ಟ್ ಕಚೇರಿ ದೂರುಗಳಂಥ ಗೊಡವೆಗಳಿಗೆ ಪ್ರಾಮುಖ್ಯತೆ ಕೊಡುವುದು ಸರಿಯಲ್ಲ. ಜವಳಿ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಲಾಭ ಪಡೆಯಬಹುದು. ಆರಕ್ಷಕ ವರ್ಗದವರಿಗೆ ಕೆಲಸದ ಒತ್ತಡವಿರುತ್ತದೆ.

ತುಲಾ: ಹಣ ಸಂಪಾದಿಸುವ ಬಗ್ಗೆ ಎಷ್ಟು ಗಮನಹರಿಸುವಿರೋ ಗಳಿಸಿದ ಹಣವನ್ನು ಸದ್ಬಳಕೆ ಮಾಡಿ. ಇಲ್ಲದಿದ್ದಲ್ಲಿ ಬಂಧನದ ಭೀತಿ ಅಥವಾ ಮಾನ ಹಾನಿಯಾಗುವ ಲಕ್ಷಣಗಳಿವೆ.

ವೃಶ್ಚಿಕ: ಪ್ರಭಾವಿ ವ್ಯಕ್ತಿಗಳ ಪರಿಚಯವು ಭವಿಷ್ಯದ ಆಲೋಚನೆಗಳನ್ನು ಉತ್ತಮಗೊಳಿಸುತ್ತವೆ. ಸಜ್ಜನರ ಭೇಟಿಯಿಂದ ಹಾಗೂ ಸಹವಾಸದಿಂದ ಕಾರ್ಯಗಳು ಕೈಗೂಡಲಿವೆ.

ಧನು: ಹೋಟೆಲ್ ಉದ್ಯಮದವರಿಗೆ ಆದಾಯದಲ್ಲಿ ಬಹಳ ವ್ಯತ್ಯಾಸ ಉಂಟಾಗಲಿದೆ. ಕೌಟುಂಬಿಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಬಗ್ಗೆ ಯೋಚಿಸಿ. ಪುಣ್ಯಕ್ಷೇತ್ರಗಳ ದರ್ಶನದ ಯೋಗವಿದೆ.

ಮಕರ: ಶತ್ರುಗಳ ಉಪಟಳ ತಡೆಯಲು ತಂತ್ರಗಾರಿಕೆ ಮಾಡಬೇಕಾಗುತ್ತದೆ. ಕೃಷಿಕರು ಮಿಶ್ರ ಕೃಷಿ ಪದ್ಧತಿಯನ್ನು ಅನುಸರಿಸಿದರೆ ಲಾಭ. ವೈಯಕ್ತಿಕ ಕೆಲಸಗಳಿಗೆ ಅಡಚಣೆ ಇರುವುದಿಲ್ಲ.

ಕುಂಭ: ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಅವಕಾಶಗಳು ಸಿಗಲಿವೆ. ಐಷಾರಾಮಿ ಜೀವನ ನಿರ್ವಹಣೆ ಆರ್ಥಿಕ ನಷ್ಟಕ್ಕೆ ಕಾರಣವಾಗುವುದು. ತಂದೆಯ ಆರೋಗ್ಯ ಸುಧಾರಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ.

ಮೀನ: ಕನಸುಗಳನ್ನು ಸಾಕಾರಗೊಳಿಸಲು ಅವಿರತ ಪರಿಶ್ರಮ ಅಗತ್ಯ. ಸಂತಾನದ ಅಪೇಕ್ಷಿಗಳಿಗೆ ಶುಭ ಫಲ ಪ್ರಾಪ್ತಿ. ಕೆಲಸ ಕಾರ್ಯಗಳು ಕೈಗೂಡಲು ದೇವರಲ್ಲಿ ಹರಕೆ ಹೊತ್ತಿರುವ ವಿಚಾರವನ್ನು ಮರೆಯದಿರಿ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,618
ಇಂದಿನ ಅಂತ್ಯ:	23,659
ದಿನದ ಗಳಿಕೆ:	41

ಮೊಟ್ಟೆ ಧಾರಣೆ (ನೆಕ್‌ಕ್ರಿ) ಬೆಂಗಳೂರು	
100 ಕ್ಕೆ	₹600
12 ಕ್ಕೆ	₹86
ಮೈಸೂರು: 100 ಕ್ಕೆ	₹610

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹253
ಆರ್‌ಎಸ್‌ಎಸ್-5	₹247
ಗುಡ್ ಲಾಟ್	₹213.50

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಕೆ.ಜಿ.)	₹355-706
ದ್ವಿತಳಿ (ಕೆ.ಜಿ.)	₹382-880

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)	
ಶೇಂಗಾ (ರಿಫೈನ್ಡ್)	₹1640 (1600)
ಸೋಯಾ (ರಿಫೈನ್ಡ್)	₹1550 (1490)
ಸೂರ್ಯಕಾಂತಿ (ರಿಫೈನ್ಡ್)	₹1650 (1630)
ಪಾಮೋಲಿನ್	₹1530 (1480)

ಮುದ್ರಮನೆ ಕಾಫಿ	
ಎಪಿ	₹23000
ಎಪಿ	₹13850
ಆರ್‌ಪಿ	₹18000
ಆರ್‌ಸಿ	₹9650

ವ್ಯಾಪಾರ, ಹೂಡಿಕೆ: ಸಹಕಾರ ವೃದ್ಧಿಗೆ ಪಣ

ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ಮೋದಿ, ಮೆಲೋನಿ ಹೇಳಿಕೆ • ಭಾರತ–ಪಶ್ಚಿಮ ಏಷ್ಯಾ–ಯುರೋಪ್ ಆರ್ಥಿಕ ಕಾರಿಡಾರ್‌ಗೆ ಒತ್ತು

ರೋಮ್ (ಪಿಟಿಐ): ವ್ಯಾಪಾರ, ಹೂಡಿಕೆ ಹಾಗೂ ಹೊಸ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು ಹಾಗೂ ಮೈತ್ರಿಯನ್ನು ವಿಶೇಷ ಪಾಲುದಾರಿಕೆ ಮಟ್ಟಕ್ಕೆ ಕೊಂಡೊಯ್ಯಲು ಭಾರತ ಹಾಗೂ ಇಟಲಿ ಮಂಗಳವಾರ ನಿರ್ಧರಿಸಿವೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ಮಾತುಕತೆ ನಡೆದ ಬಳಿಕ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ಈ ಮಾತು ಹೇಳಿದ್ದಾರೆ.

ಮೆಲೋನಿ ಅವರ ಜೊತೆ ಮಾತುಕತೆಗೂ ಮುನ್ನ ಮಾತನಾಡಿದ ಮೋದಿ, 'ಭಾರತ ಮತ್ತು ಇಟಲಿ ನಡುವಿನ ಸಹಕಾರ ವೃದ್ಧಿ ಕುರಿತು ಮಾತುಕತೆ ನಡೆಸಲಾಗುವುದು. ವಿಶೇಷವಾಗಿ ಭಾರತ–ಪಶ್ಚಿಮ ಏಷ್ಯಾ–ಯುರೋಪ್ ಆರ್ಥಿಕ ಕಾರಿಡಾರ್ (ಐಎಂಇಸಿ) ಯೋಜನೆಗೆ ಒತ್ತು ನೀಡಲಾಗುವುದು' ಹೇಳಿದರು.

'ಜಂಟಿ ಕ್ರಿಯಾ ಯೋಜನೆ 2025–2029 ಅನ್ನು ಉಭಯ ದೇಶಗಳು ಮರುಪರಿಶೀಲನೆ ನಡೆಸಲಿವೆ. ಆ ಮೂಲಕ ವಿವಿಧ ಕ್ಷೇತ್ರಗಳಲ್ಲಿನ ಸಹಕಾರ ವೃದ್ಧಿಗೆ ಸಮಗ್ರ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲಾಗಿದೆ' ಎಂದು ಮೋದಿ ಅವರು ಹೇಳಿದ್ದಾರೆ.

ದ್ವಿಪಕ್ಷೀಯ ವ್ಯಾಪಾರ ಗುರಿ: 'ಇಡೀ ಐರೋಪ್ಯ ಒಕ್ಕೂಟದಲ್ಲಿ, ಇಟಲಿಯು ಭಾರತದ ನಾಲ್ಕನೇ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರ. ಭಾರತ ಮತ್ತು ಇಟಲಿ ನಡುವಿನ ದ್ವಿಪಕ್ಷೀಯ ವ್ಯಾಪಾರವು ಇತ್ತೀಚಿನ ವರ್ಷಗಳಲ್ಲಿ ಏರಿಕೆ ಕಂಡಿದೆ. 2025ರಲ್ಲಿ ಉಭಯ ದೇಶಗಳ ನಡುವಿನ ವ್ಯಾಪಾರವು ₹1.60 ಲಕ್ಷ ಕೋಟಿ ತಲುಪಿತ್ತು.

ಭಾರತದಿಂದ ಇಟಲಿಗೆ ರಫ್ತು ಕೂಡ ಹೆಚ್ಚಳವಾಗಿದೆ. ಕಳೆದ ವರ್ಷ ಭಾರತದಿಂದ ಇಟಲಿಗೆ ರಫ್ತಾದ ಪ್ರಮಾಣ ₹96 ಸಾವಿರ ಕೋಟಿ (ಅಂದಾಜು 8.55 ಶತಕೋಟಿ ಯುರೊ) ಇದ್ದರೆ, ಇಟಲಿಯು ಭಾರತಕ್ಕೆ ₹64 ಸಾವಿರ ಕೋಟಿ (ಅಂದಾಜು 5.70 ಯುರೊ) ಮೊತ್ತದ ಸರಕು ರಫ್ತು ಮಾಡಿದೆ.

ಇಟಲಿಯಲ್ಲಿ ವಾಸಿಸುತ್ತಿರುವ ಭಾರತೀಯರ ಸಂಖ್ಯೆಯೂ ದೊಡ್ಡದು.

'ನಿರ್ಣಾಯಕ ಹಂತಕ್ಕೆ ಭಾರತ, ಇಟಲಿ ಬಾಂಧವ್ಯ'

ನವದೆಹಲಿ: 'ಭಾರತ ಮತ್ತು ಇಟಲಿ ನಡುವಿನ ಬಾಂಧವ್ಯ ಈಗ ನಿರ್ಣಾಯಕ ಹಂತ ತಲುಪಿದೆ. ಉಭಯ ದೇಶಗಳ ನಡುವಿನ ಸೌಹಾರ್ದಯುತ ಮೈತ್ರಿಯು ಈಗ ವಿಶೇಷವಾದ ಕಾರ್ಯತಂತ್ರ ಪಾಲುದಾರಿಕೆಯಾಗಿ ಹೊರಹೊಮ್ಮಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಪ್ರತಿಪಾದಿಸಿದ್ದಾರೆ.

ಉಭಯ ನಾಯಕರು, ಭಾರತ ಮತ್ತು ಇಟಲಿ ಮಾಧ್ಯಮಗಳಿಗೆ ಜಂಟಿಯಾಗಿ ಬರೆದಿರುವ ಲೇಖನದಲ್ಲಿ ಈ ಕುರಿತು ಉಲ್ಲೇಖಿಸಿದ್ದಾರೆ.

'ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಸಂಬಂಧಗಳು ಹಾಗೂ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಕಂಡು ಬರುತ್ತಿವೆ. ಆದರೆ, ವಿವಿಧ ಕ್ಷೇತ್ರಗಳಲ್ಲಿನ ಸಂಬಂಧ ಬಲಪಡಿಸುವ ನಿಟ್ಟಿನಲ್ಲಿ ಭಾರತ ಮತ್ತು ಇಟಲಿ ನಡುವಿನ ಪಾಲುದಾರಿಕೆ ಗಟ್ಟಿಗೊಂಡಿದೆ' ಎಂದು ಮೋದಿ ಹಾಗೂ ಮೆಲೋನಿ ಹೇಳಿದ್ದಾರೆ.

'ಕ್ರಿಯಾಶೀಲವಾದ ಆರ್ಥಿಕತೆ, ಸೃಜನಶೀಲತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆ ಹಾಗೂ ಶತಮಾನಗಳಷ್ಟು ಹಳೆಯದಾದ ನಾಗರಿಕತೆಗಳನ್ನು ಹೊಂದಿರುವ ಪಾಲುದಾರ ಮತ್ತು ಅನುಭವದಿಂದಾಗಿ ಉಭಯ ದೇಶಗಳ ನಡುವಿನ ಬಾಂಧವ್ಯವು ಹೊಸ ಎತ್ತರಕ್ಕೆ ಏರಿದೆ' ಎಂದು ಅವರು ಬರೆದಿದ್ದಾರೆ.

'ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಸದೃಢಗೊಳಿಸಲು ನಾವು ಬದ್ಧರಾಗಿದ್ದೇವೆ. ವಿನ್ಯಾಸ ಹಾಗೂ ತಯಾರಿಕೆ ಕ್ಷೇತ್ರದಲ್ಲಿ ಇಟಲಿಯ ಸಾಮರ್ಥ್ಯ ಅಗಾಧವಾದುದು. ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾದ ಭಾರತದಲ್ಲಿ ಎಂಜಿನಿಯರಿಂಗ್ ಪ್ರತಿಭೆಗಳೂ ಕೂಡ ಇದ್ದು, ಉದ್ಯಮಶೀಲತೆಗೆ ಪೂರಕವಾದ ಪರಿಸರವೂ ಇದೆ. ಈ ಸಾಮರ್ಥ್ಯಗಳನ್ನು ಬಳಸಿಕೊಂಡು ಪ್ರಗತಿ ಸಾಧಿಸುವಲ್ಲಿ ಎರಡೂ ದೇಶಗಳ ಗುರಿಯಾಗಿದೆ' ಎಂದು ಅವರು ಲೇಖನದಲ್ಲಿ ವಿವರಿಸಿದ್ದಾರೆ.

ಲೇಖನದ ಪ್ರಮುಖ ಅಂಶಗಳು

- ಭಾರತ ಮತ್ತು ಇಟಲಿ ನಡುವಿನ ವ್ಯಾಪಾರದ ಪ್ರಮಾಣವನ್ನು 2029ರ ವೇಳೆಗೆ ₹2.24 ಲಕ್ಷ ಕೋಟಿಗೆ ತಲುಪಿಸುವ ಗುರಿ ಹೊಂದಲಾಗಿದೆ
- ರಕ್ಷಣೆ, ಏರೋಸ್ಪೇಸ್, ಶುದ್ಧ ತಂತ್ರಜ್ಞಾನಗಳು, ಆಟೊಮೊಬೈಲ್ ಬಿಡಿಭಾಗಗಳ ತಯಾರಿಕೆ, ರಾಸಾಯನಿಕಗಳು, ಔಷಧಗಳು, ಜವಳಿ, ಕೃಷಿ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಕಾರ್ಯನಿರ್ವಹಣೆ
- ಕೃತಕ ಬುದ್ಧಿಮತ್ತೆ (ಎ.ಐ) ಅಭಿವೃದ್ಧಿ ಮತ್ತು ಬಳಕೆಯು ಮಾನವ ಕೇಂದ್ರಿತವಾಗಿರಬೇಕು. ಇದನ್ನು ಖಾತ್ರಿಪಡಿಸಲು ಉಭಯ ದೇಶಗಳು ಶ್ರಮಿಸಲಿವೆ
- ಡಿಜಿಟಲ್ ಕ್ಷೇತ್ರದಲ್ಲಿ ಸಹಕಾರ, ಸೈಬರ್ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು
- ಭಾರತವು ಬಾಹ್ಯಾಕಾಶ ಹಾಗೂ ಉಪಗ್ರಹ ತಂತ್ರಜ್ಞಾನದಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಅಂತರಿಕ್ಷ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಇಟಲಿಯ ಸಾಧನೆ ದೊಡ್ಡದು. ಉಭಯ ದೇಶಗಳ ನಡುವಿನ ಸಹಕಾರ ವೃದ್ಧಿಯಿಂದ ಈ ಕ್ಷೇತ್ರಗಳಲ್ಲಿ ವಿಪುಲ ಉದ್ಯೋಗಾವಕಾಶ ಸೃಷ್ಟಿ ಸಾಧ್ಯ
- ಭಾರತೀಯ ಸಂಸ್ಕೃತಿಯಲ್ಲಿರುವ 'ಧರ್ಮ'ದ ಪರಿಕಲ್ಪನೆ ಪ್ರತಿಯೊಬ್ಬರಲ್ಲಿ ಹೊಣೆಗಾರಿಕೆಯನ್ನು ಜಾಗೃತಗೊಳಿಸುತ್ತದೆ. 'ವಸುಧೈವ ಕುಟುಂಬಕಂ' ತತ್ವವು ವಿಶ್ವವೇ ಒಂದು ಕುಟುಂಬವೆಂದು ಸಾರುತ್ತದೆ. ಇಟಲಿಯ ಪರಂಪರೆ ಕೂಡ ಇವೇ ಮೌಲ್ಯಗಳನ್ನು ಪ್ರತಿಧ್ವನಿಸುತ್ತದೆ

2025ರ ಜನವರಿಯಲ್ಲಿ ದಾಖಲಾದ ಮಾಹಿತಿಯಂತೆ, ಇಟಲಿಯಲ್ಲಿ 1,86,833 ಭಾರತೀಯರು ನೆಲಸಿದ್ದಾರೆ. ಇಟಲಿಯ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ಭಾರತೀಯರ ಸಂಖ್ಯೆ 5,100.

ಇಟಲಿ ಪ್ರಧಾನಿಗೆ 'ಮೆಲೋಡಿ' ಉಡುಗೊರೆ

ರೋಮ್/ನವದೆಹಲಿ (ರಾಯಿಟರ್ಸ್/ಪಿಟಿಐ): ಇಟಲಿ ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಅಲ್ಲಿನ ಪ್ರಧಾನಿ ಜಾರ್ಜಿಯಾ ಮೆಲೊನಿಯವರಿಗೆ 'ಮೆಲೋಡಿ' ಚಾಕೊಲೆಟ್ ಪ್ಯಾಕೆಟ್‌ಅನ್ನು ಉಡುಗೊರೆಯಾಗಿ ನೀಡಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸದ್ದು ಮಾಡಿದೆ.

ಈ ವಿದ್ಯಮಾನ ಕುರಿತ ಮೀಮ್‌ಗಳು ವ್ಯಾಪಕವಾಗಿ ಹರಿದಾಡುತ್ತಿವೆ. ತರಹೇವಾರಿ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ, ಹಲವರು ಈ ಬಗ್ಗೆ ಟೀಕೆಯನ್ನೂ ಮಾಡಿದ್ದಾರೆ.

ಈ ಉಡುಗೊರೆ ನೀಡಿದ್ದಕ್ಕಾಗಿ ಮೋದಿಯವರಿಗೆ ಧನ್ಯವಾದ ಹೇಳಿರುವ ಮೆಲೊನಿ, ಈ ಕುರಿತ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣದ ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಹಂಚಿಕೊಂಡ ಆರು ಗಂಟೆಯಲ್ಲಿ 11 ಕೋಟಿಗೂ ಹೆಚ್ಚು ಜನರು ಈ ವಿಡಿಯೊ ವೀಕ್ಷಿಸಿರುವುದು ಗಮನಾರ್ಹ. ಸಾವಿರಾರು ಜನರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

'ಪ್ರಧಾನಿ ಮೋದಿಯವರು ಬಹಳ ಸ್ವಾದಿಷ್ಟವಾದ ಟಾಫಿಯನ್ನು ಉಡುಗೊರೆಯಾಗಿ ತಂದಿದ್ದಾರೆ. ಈ ಉಡುಗೊರೆಗಾಗಿ ಧನ್ಯವಾದ' ಎಂದು ಮೆಲೊನಿಯವರು ಹೇಳಿರುವುದು ವಿಡಿಯೊದಲ್ಲಿದೆ. ಈ ವಿಡಿಯೊದಲ್ಲಿ ಮೋದಿಯವರೂ ಇದ್ದಾರೆ. ಮೆಲೊನಿಯವರ ಹಾಸ್ಯ ಚಟಾಕಿಗೆ ಅವರು ಜೋರಾಗಿ ನಕ್ಕಿದ್ದಾರೆ.

2023ರಲ್ಲಿ ದುಬೈನಲ್ಲಿ ನಡೆದಿದ್ದ 'ಸಿಒಪಿ28' ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ವೇಳೆ, ಮೆಲೊನಿಯವರು ಹ್ಯಾಷ್ ಟ್ಯಾಗ್‌ನೊಂದಿಗೆ 'ಮೆಲೊದಿ' ಎಂದು ಮಾಡಿದ್ದ ಪೋಸ್ಟ್ ಭಾರಿ ಹರಿದಾಡಿತ್ತು.

ಮೆಲೊನಿ ಮತ್ತು ಮೋದಿ ಹೆಸರಿನ ಆಯ್ದ ಅಕ್ಷರಗಳನ್ನು ಜೋಡಿಸಿ ಮೆಲೊನಿಯವರು ಟಂಕಿಸಿದ್ದ ಪದವೇ 'ಮೆಲೊದಿ'.

ಮೋದಿ ಅವರು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರಿಗೆ ಭಾರತದ ಚಾಕೊಲೇಟ್ ಮೆಲೋಡಿಯ ಪ್ಯಾಕೆಟ್‌ಅನ್ನು ಉಡುಗೊರೆಯಾಗಿ ನೀಡಿದರು ಪಿಟಿಐ ಚಿತ್ರ

ಪ್ರಶಂಸೆ... ಹಲವು ಪ್ರಶ್ನೆ

'ಮೆಲೋಡಿ'ಯ ಪ್ಯಾಕೆಟ್ ಅನ್ನು ಉಡುಗೊರೆಯಾಗಿ ನೀಡಿದ ಮೋದಿಯವರ ಒಂದು ನಡೆ ಸಾಮಾಜಿಕ ಜಾಲತಾಣದಲ್ಲಿ ಈ ಮಟ್ಟಿಗೆ ಸದ್ದು ಮಾಡಿದೆಯೇ? ಎಂದು ಹಲವರು ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಇನ್ನೂ ಕೆಲವರು ಇಂತಹ ನಡೆಯನ್ನೇ ಟೀಕಿಸಿದ್ದಾರೆ.

'ಇಬ್ಬರು ಪ್ರಧಾನಿಗಳು ಸಾರ್ವಜನಿಕವಾಗಿ ಈ ರೀತಿ ನಡೆದುಕೊಳ್ಳಬಹುದೇ' ಎಂಬ ಪ್ರಶ್ನೆಯನ್ನು ಹಲವರು ಮುಂದಿಟ್ಟಿದ್ದಾರೆ.

ಹೊಗಳಿದ ಬಿಜೆಪಿ: ಮೋದಿಯವರು ಮೆಲೊನಿಯವರಿಗೆ ಚಾಕೊಲೇಟ್ ಪ್ಯಾಕೆಟ್ ಉಡುಗೊರೆ ಕೊಟ್ಟಿರುವುದು ಹಾಗೂ ಅದಕ್ಕೆ ವ್ಯಕ್ತವಾದ ಪ್ರತಿಕ್ರಿಯೆಗಳನ್ನು ಬಿಜೆಪಿ ಕೂಡ ಹಂಚಿಕೊಂಡಿದೆ. 'ಇದು ಪ್ರಧಾನಿ ಮೋದಿಯವರ ಹಾಸ್ಯಪ್ರಜ್ಞೆಗೆ ನಿದರ್ಶನ' ಎಂದು ಬಣ್ಣಿಸಿದೆ.

'ಮೆಲೊಡಿ' ಉಮೇದಿನಲ್ಲಿ ಪಾರ್ಲೆ ಷೇರು ಖರೀದಿ

ನವದೆಹಲಿ (ಪಿಟಿಐ): ಪಾರ್ಲೆ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯ ಷೇರುಗಳನ್ನು ಹೂಡಿಕೆದಾರರು ಬುಧವಾರ ಮುಗಿಬಿದ್ದು ಖರೀದಿಸಿದರು. ಷೇರು ಮೌಲ್ಯವು ಶೇ 5ರಷ್ಟು ಜಿಗಿಯಿತು. ಒಂದು ಹಂತದಲ್ಲಿ ಕಂಪನಿಯ ಷೇರುಗಳನ್ನು ಮಾರುವವರೇ ಇಲ್ಲವಾಗಿದ್ದರು, ಎಲ್ಲರೂ ಖರೀದಿಸಲು ಬಯಸುತ್ತಿದ್ದರು!

ದಿನದ ವಹಿವಾಟು ಆರಂಭವಾದಾಗ ಪಾರ್ಲೆ ಇಂಡಸ್ಟ್ರೀಸ್ ಲಿಮಿಟೆಡ್‌ನ ಷೇರುಗಳಿಗೆ ಅಷ್ಟೇನೂ ಬೇಡಿಕೆ ಇರಲಿಲ್ಲ. ಆದರೆ, ಇಟಲಿಯಲ್ಲಿ ಉಡುಗೊರೆ ಪ್ರಸಂಗ ವರದಿಯಾದ ನಂತರ ಹೂಡಿಕೆದಾರರು ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಷೇರು ಖರೀದಿಗೆ ಮುಂದಾದರು.

ಆದರೆ, ಹೂಡಿಕೆದಾರರು ಖರೀದಿಸಿದ್ದುದು ಬಿಸ್ಕತ್ತು, ಟೊಫೀ ತಯಾರಿಸುವ ಪಾರ್ಲೆ ಪ್ರಾಡಕ್ಟ್ಸ್ ಕಂಪನಿಯ ಷೇರುಗಳನ್ನಾಗಿರಲಿಲ್ಲ. ಪಾರ್ಲೆ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯೇ ಬಿಸ್ಕತ್ತು, ಟೊಫೀ ತಯಾರಿಸುವ ಕಂಪನಿ ಎಂದು ತಪ್ಪಾಗಿ ಭಾವಿಸಿ ಹೂಡಿಕೆದಾರರು ಆ ಕಂಪನಿಯ ಷೇರುಗಳನ್ನು ಈ ಪರಿಯಲ್ಲಿ ಖರೀದಿಸಿದ್ದರು.

ಬಿಸ್ಕತ್ತು, ಟೊಫೀ ತಯಾರಿಸುವ ಪಾರ್ಲೆ ಪ್ರಾಡಕ್ಟ್ಸ್ ಕಂಪನಿಯು ಷೇರುಪೇಟೆ ನೋಂದಾಯಿತ ಅಲ್ಲ, ಅದರ ಷೇರುಗಳು ಖರೀದಿಗೆ ಲಭ್ಯವಿಲ್ಲ. ಪಾರ್ಲೆ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ಮೂಲಸೌಕರ್ಯ, ರಿಯಲ್ ಎಸ್ಟೇಟ್ ಮತ್ತಿತರ ವಲಯಗಳಲ್ಲಿ ವಹಿವಾಟು ನಡೆಸುತ್ತಿದೆ.

ಮೋದಿ ಗೌರವಾರ್ಥ ಮೆಲೊನಿ ಔತಣಕೂಟ

ಕೊಲೊಸಿಯಮ್‌ಗೂ ಪ್ರಧಾನಿ ಭೇಟಿ

ರೋಮ್ (ಇಟಲಿ) (ಪಿಟಿಐ): ವಿದೇಶ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಮಂಗಳವಾರ ಔತಣಕೂಟ ಏರ್ಪಡಿಸಿದ್ದರು.

ಯುರೋಪ್‌ನ ಐದು ರಾಷ್ಟ್ರಗಳ ಪ್ರವಾಸದ ಕೊನೆ ಭಾಗವಾಗಿ ಇಟಲಿಗೆ ಭೇಟಿ ನೀಡಿರುವ ಮೋದಿ ಅವರಿಗೆ, ದ್ವಿಪಕ್ಷೀಯ ಮಾತುಕತೆಗೂ ಮುನ್ನ ಮೆಲೊನಿ ಅವರು ಈ ಆತಿಥ್ಯ ನೀಡಿದ್ದಾರೆ.

ನಂತರ ಉಭಯ ನಾಯಕರು ನಗರದಲ್ಲಿರುವ ಐತಿಹಾಸಿಕ ಬಯಲು ರಂಗಮಂದಿರಕ್ಕೆ ಭೇಟಿ ನೀಡಿದರು.

'ರೋಮ್‌ಗೆ ಬಂದಿಳಿದ ಬಳಿಕ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಆಯೋಜಿಸಿದ್ದ ಔತಣಕೂಟದಲ್ಲಿ ಭಾಗಿಯಾಗಿದ್ದಲ್ಲದೇ, ಉಭಯ ದೇಶಗಳ ಸಂಬಂಧ ವೃದ್ಧಿಗೆ ಸಂಬಂಧಿಸಿ ಹಲವಾರು ವಿಷಯಗಳ ಕುರಿತು ಚರ್ಚಿಸಲಾಯಿತು' ಎಂದು ಮೋದಿ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಇದಕ್ಕೂ ಮುನ್ನ, ಇಲ್ಲಿಗೆ ಬಂದಿಳಿದ ಮೋದಿ ಅವರಿಗೆ ಇಟಲಿಯಲ್ಲಿ ನೆಲಸಿರುವ ಭಾರತೀಯರು ಅದ್ದೂರಿ ಸ್ವಾಗತ ಕೋರಿದರು.

ತಮಗೆ ದೊರೆತ ಭವ್ಯ ಸ್ವಾಗತಕ್ಕಾಗಿ ಭಾರತೀಯ ಸಮುದಾಯಕ್ಕೆ ಧನ್ಯವಾದ ತಿಳಿಸಿದ ಮೋದಿಯವರು, 'ಇಲ್ಲಿನ ಭಾರತೀಯರು ಭಾರತ ಮತ್ತು ಇಟಲಿ ನಡುವಿನ ಬಾಂಧವ್ಯ ಗಟ್ಟಿಗೊಳಿಸಲು ತೋರುತ್ತಿರುವ ಬದ್ಧತೆ ಶ್ಲಾಘನೀಯ. ಭಾರತೀಯರು ಎಲ್ಲಿಯೇ ಇರಲಿ ಅವರ ಬಗ್ಗೆ ದೇಶವೇ ಹೆಮ್ಮೆಪಡುವಂತೆ ಮಾಡುತ್ತಾರೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಮತ್ತೊಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಪ್ರಮುಖ ಅಂಶಗಳು

- ಇಟಲಿ ಕಲಾವಿದರಿಂದ ಕಥಕ್, ಕುಚಿಪುಡಿ ಹಾಗೂ ಭರತನಾಟ್ಯ ಪ್ರದರ್ಶನ
- ಸಂತೂರ್, ತಬಲಾ, ಕೊಳಲು ಹಾಗೂ ಸಿತಾರ ಸೇರಿ ಭಾರತೀಯ ವಾದ್ಯಗಳನ್ನು ನುಡಿಸಿ ಗಮನ ಸೆಳೆದ ಇಟಲಿ ಕಲಾವಿದರು
- ಇಟಲಿಯ ಖ್ಯಾತ ಚಿತ್ರಕಲಾವಿದ ಗಿಯಾಂಪಾಲೊ ತೊಮಸೆಟ್ಟಿ ಅವರು ವಾರಾಣಸಿ ಕುರಿತು ತಾವು ರಚಿಸಿರುವ ಕಲಾಕೃತಿಗಳನ್ನು ಮೋದಿಯವರಿಗೆ ಉಡುಗೊರೆಯಾಗಿ ನೀಡಿದರು

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಿಪ್ಪು	29089-34599	ಸರಕು	51509-94059	ಬೆಟ್ಟೆ	41399 -52099
ಕೋಕ	16099-33909	ಬೆಟ್ಟೆ	49699-65300	ಬಿಳಿಗೋಟು	21608-36599
ಫ್ಯಾಕ್ಟರಿ	12569-27299	ರಾಶಿ	43009-54309	ಚಾಲಿ	44299-47599
ಹಳೆಚಾಲಿ	46089-47898	ಗೊರಬಲು	19010-43111	ಕೆಂಪುಗೋಟು	21099-36899
ಹೊಸಚಾಲಿ	41009-47019			ರಾಶಿ	50699-53199
ಬೆಟ್ಟೆ	46419-46419				

ಪುತ್ತೂರು		ಸಿದ್ದಾಪುರ			
ಕೋಕ	20000-34500	ಬಿಳಿಗೋಟು	26789-34599	ಕೆಂಪುಗೋಟು	26579-35759
ಹೊಸತು	30000-47500	ಚಾಲಿ	41089-46739	ರಾಶಿ	48689-52889
ಹಳತು	49000-55000	ಕೋಕ	20189-26699	ತಟ್ಟಿಬೆಟ್ಟೆ	38969-46899

ಬೆಳ್ಳಿ ದರ ₹5 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರದ ವಹಿವಾಟಿನಲ್ಲಿ ಚಿನ್ನದ ದರ ಏರಿಕೆಯಾಗಿದ್ದರೆ, ಬೆಳ್ಳಿ ಬೆಲೆ ಇಳಿದಿದೆ.

ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹1,300ರಷ್ಟು ಏರಿಕೆಯಾಗಿ, ₹1,64,900ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹5 ಸಾವಿರದಷ್ಟು ಕಡಿಮೆಯಾಗಿ, ₹2.66 ಲಕ್ಷದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಚಿನ್ನದ ಖರೀದಿ ಹೆಚ್ಚಳದಿಂದ ದೇಶದ ಮಾರುಕಟ್ಟೆಯಲ್ಲಿ ಹಳದಿ ಲೋಹದ ಬೆಲೆ ಏರಿಕೆಯಾಗಿದೆ. ಆದರೆ, ಇದೇ ವೇಳೆ ಕೈಗಾರಿಕೆಗಳಲ್ಲಿ ಬೆಳ್ಳಿ ಬೇಡಿಕೆ ಕಡಿಮೆ ಆಗಿರುವುದು ಮತ್ತು ಲಾಭ ಗಳಿಕೆಗಾಗಿ ಹೂಡಿಕೆದಾರರು ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದರಿಂದ ಇದರ ಬೆಲೆ ಇಳಿದಿದೆ ಎಂದು ವರ್ತಕರು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

2ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ.ಎನ್.ವಾಸಂತಿ ಹೆಗ್ಗಡೆಯವರು
ದಿ॥ ಶ್ರೀ ಎಂ.ವಿ.ಪುಟ್ಟಪ್ಪ ಹೆಗ್ಗಡೆ ರವರ ಧರ್ಮಪತ್ನಿ
ಮುಡುಬ, ಶೃಂಗೇರಿ.
ಜನನ: 30-04-1944 ನಿಧನ: 21-05-2024
ನೀವು ನಮ್ಮನ್ನಗಲಿ ಎರಡು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಶಿವಮೊಗ್ಗ.
ಫೋನ್: 9481320229 / 9480204505
9845027001 / 9448210868

ಭಾರತದ ಆರ್ಥಿಕತೆಯ ಬೆಳವಣಿಗೆ ಶೇ 6.4ರಷ್ಟು ಇರಬಹುದು: ವಿಶ್ವಸಂಸ್ಥೆ

ಜಿಡಿಪಿ ಬೆಳವಣಿಗೆ ಅಂದಾಜು ಇಳಿಕೆ

ವಿಶ್ವಸಂಸ್ಥೆ (ಪಿಟಿಐ): ಭಾರತದ ಅರ್ಥ ವ್ಯವಸ್ಥೆಯ 2026ರ ಬೆಳವಣಿಗೆ ದರದ ಅಂದಾಜನ್ನು ವಿಶ್ವಸಂಸ್ಥೆಯು ಶೇ 6.4ಕ್ಕೆ ತಗ್ಗಿಸಿದೆ. ಇದು ಈ ಹಿಂದಿನ ಅಂದಾಜು ಆಗಿದ್ದ ಶೇ 6.6ಕ್ಕೆ ಹೋಲಿಸಿದರೆ ಕಡಿಮೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಜಾಗತಿಕ ಅರ್ಥ ವ್ಯವಸ್ಥೆಗೆ ಬಿದ್ದಿರುವ ಏಟುಗಳು ಹಾಗೂ ಅನಿಶ್ಚಿತತೆಗಳು ಅಂದಾಜನ್ನು ತಗ್ಗಿಸುವುದಕ್ಕೆ ಕಾರಣ ಎಂದು ವಿಶ್ವಸಂಸ್ಥೆ ಹೇಳಿದೆ.

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆ (ಯುಎನ್ ಡಿಇಎಸ್‌ಎ) ಬಿಡುಗಡೆ ಮಾಡಿರುವ ವರದಿಯ ಪ್ರಕಾರ, ಅಂದಾಜು ಇಳಿಕೆ ಮಾಡಲಾಗಿದ್ದರೂ ಜಗತ್ತಿನ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ದೇಶಗಳ ಸಾಲಿನಲ್ಲಿ ಭಾರತಕ್ಕೆ ಸ್ಥಾನ ಇದ್ದೇ ಇರಲಿದೆ.

ಯುದ್ಧವು ಜಾಗತಿಕ ಆರ್ಥಿಕತೆಗೆ ಇನ್ನೊಂದು ಪೆಟ್ಟು ಕೊಟ್ಟಿದೆ, ಬೆಳವಣಿಗೆ ದರವನ್ನು ತಗ್ಗಿಸಿದೆ, ಅನಿಶ್ಚಿತತೆಯನ್ನು ಹೆಚ್ಚು ಮಾಡಿದೆ ಹಾಗೂ ಹಣದುಬ್ಬರ ಜಾಸ್ತಿಯಾಗುವ ಅಪಾಯ ಉಂಟುಮಾಡಿದೆ ಎಂದು ವರದಿಯು ತಿಳಿಸಿದೆ.

ಮುಖ್ಯಾಂಶಗಳು

- ಪಶ್ಚಿಮ ಏಷ್ಯಾದ ಬಿಕ್ಕಟ್ಟು, ಜಿಡಿಪಿ ಅಂದಾಜು ತಗ್ಗಿಸಲು ಕಾರಣ
- ವೇಗದ ಬೆಳವಣಿಗೆಯ ಅರ್ಥ ವ್ಯವಸ್ಥೆಯಾಗಿ ಇರಲಿದೆ ಭಾರತ
- 2027ರಲ್ಲಿ ದೇಶದ ಬೆಳವಣಿಗೆ ದರವು ಶೇ 6.6ರಷ್ಟಾಗಬಹುದು

ಪಶ್ಚಿಮ ಏಷ್ಯಾ ಯುದ್ಧದ ಸಮಸ್ಯೆಯು ಎಲ್ಲ ದೇಶಗಳ ಮೇಲೆಯೂ ಎರಡು ಬಗೆಯ ಪರಿಣಾಮಗಳನ್ನು ಉಂಟುಮಾಡುತ್ತಿದೆ. ಬೆಳವಣಿಗೆ ಪ್ರಮಾಣವನ್ನು ತಗ್ಗಿಸುತ್ತಿದೆ ಮತ್ತು ಅದೇ ಸಂದರ್ಭದಲ್ಲಿ ಹಣದುಬ್ಬರ ಹೆಚ್ಚಾಗುವಂತೆ ಮಾಡುತ್ತಿದೆ. ಹೀಗೆ ಮಾಡುವ ಮೂಲಕ ಈ ಸಂಘರ್ಷವು ಸರ್ಕಾರಗಳಿಗೆ ಹೊಸ ತೀರ್ಮಾನಗಳನ್ನು ತೆಗೆದುಕೊಳ್ಳಲು ಹೆಚ್ಚಿನ ಅವಕಾಶಗಳು ಇಲ್ಲದಂತೆ ಮಾಡುತ್ತಿದೆ. ಭಾರತದಲ್ಲಿಯೂ ಇದೇ ಸ್ಥಿತಿ ಇರಲಿದೆ ಎಂದು 'ಯುಎನ್ ಡಿಇಎಸ್‌ಎ' ಜಾಗತಿಕ ಆರ್ಥಿಕತೆ ಕಣ್ಗಾವಲು ವಿಭಾಗದ ಹಿರಿಯ ಅರ್ಥಶಾಸ್ತ್ರಜ್ಞ ಇಂಗೊ ಪಿಟರ್ಲೆ ಹೇಳಿದ್ದಾರೆ.

'ಭಾರತದಲ್ಲಿ ರಾಚನಿಕವಾಗಿ ಬಹಳ ಒಳ್ಳೆಯ ಬೆಳವಣಿಗೆ ಆಗಿದೆ. ಗ್ರಾಹಕರಿಂದ ಉತ್ತಮ ಬೇಡಿಕೆ ಬಂದಿರುವುದು, ಸರ್ಕಾರದ ಕಡೆಯಿಂದ ಉತ್ತಮ ಹೂಡಿಕೆ ಆಗಿರುವುದು, ಸೇವಾ ವಲಯದಲ್ಲಿ ಉತ್ತಮ ರಫ್ತು ವಹಿವಾಟು ನಡೆದಿರುವುದು ಇದಕ್ಕೆ ಮುಖ್ಯ ಕಾರಣ. ಬೇಡಿಕೆ, ಹೂಡಿಕೆ ಮತ್ತು ಸೇವಾ ವಲಯದ ಚಟುವಟಿಕೆಗಳು ಬಹುಮಟ್ಟಿಗೆ ಚೆನ್ನಾಗಿಯೇ ಇರಲಿವೆ. ಹೀಗಾಗಿ, ಭಾರತವು ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಬೆಳವಣಿಗೆ ಸಾಧಿಸುವ ದೇಶಗಳ ಪೈಕಿ ಒಂದಾಗಿರಲಿದೆ' ಎಂದು ಅವರು ಹೇಳಿದ್ದಾರೆ.

2027ರಲ್ಲಿ ದೇಶದ ಬೆಳವಣಿಗೆ ದರವು ಶೇ 6.6ರ ಮಟ್ಟಕ್ಕೆ ಬರಬಹುದು ಎಂದು ವರದಿಯು ಅಂದಾಜು ಮಾಡಿದೆ.

96.86ರ ಮಟ್ಟಕ್ಕೆ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಬುಧವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಇನ್ನಷ್ಟು ಕುಸಿದಿದ್ದು, ಅಮೆರಿಕದ ಡಾಲರ್ ಎದುರು ಇದುವರೆಗಿನ ಕನಿಷ್ಠ ಮಟ್ಟವಾದ 96.86ಕ್ಕೆ ತಲುಪಿದೆ.

ಕಚ್ಚಾ ತೈಲದ ಬೆಲೆಯು ಕಡಿಮೆ ಆಗದಿರುವುದು ಹಾಗೂ ಹಣದುಬ್ಬರ ಹೆಚ್ಚಳದ ಭೀತಿಯು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾದವು. ಬುಧವಾರ ರೂಪಾಯಿ ಮೌಲ್ಯವು 16 ಪೈಸೆ ಕುಸಿದಿದೆ. ಸತತ ಒಂಬತ್ತು ವಹಿವಾಟಿನ ದಿನಗಳಿಂದ ರೂಪಾಯಿಯು ಡಾಲರ್ ಎದುರು ಕುಸಿಯುತ್ತಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ದಿನದ ವಹಿವಾಟಿನ ನಡುವಿನಲ್ಲಿ 96.95ರ ಮಟ್ಟದವರೆಗೂ ಕುಸಿದಿತ್ತು. ನಂತರ ತುಸು ಚೇತರಿಕೆ ಕಂಡಿತು. ಮಂಗಳವಾರದ ವಹಿವಾಟಿನಲ್ಲಿ ಮೌಲ್ಯವು 50 ಪೈಸೆಯಷ್ಟು ಇಳಿದಿತ್ತು.

'ಡಾಲರ್ ಬಲವರ್ಧನೆ, ಅಮೆರಿಕದ ಬಾಂಡ್ ಗಳಿಕೆಯು ಹೆಚ್ಚಾಗಿರುವುದು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾದವು' ಎಂದು ಮಿರೈ ಅಸೆಟ್ ಶೇರ್‌ಖಾನ್ ಸಂಸ್ಥೆಯ ಸರಕುಗಳ ಸಂಶೋಧನಾ ವಿಭಾಗದ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ರೂಪಾಯಿ ಮೌಲ್ಯವು ತೀವ್ರವಾಗಿ ಕುಸಿಯುತ್ತಿರುವುದು ನೀತಿ ನಿರೂಪಕರಿಗೆ, ಹೂಡಿಕೆದಾರರಿಗೆ ಹಾಗೂ ಉದ್ದಿಮೆಗಳಿಗೆ ಬಹಳ ದೊಡ್ಡ ಆರ್ಥಿಕ ಎಚ್ಚರಿಕೆಯಾಗಿ ಕಾಣಿಸುತ್ತಿದೆ. ಹಿಂದೊಂದು ಸಂದರ್ಭದಲ್ಲಿ ಏಷ್ಯಾದ ಅತ್ಯಂತ ಸ್ಥಿರವಾದ ಕರೆನ್ಸಿ ಆಗಿದ್ದ ರೂಪಾಯಿಯು ಈ ವರ್ಷದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳ ಕರೆನ್ಸಿಗಳ ಪೈಕಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ ಕರೆನ್ಸಿಗಳಲ್ಲಿ ಒಂದಾಗಿದೆ.

ಕಚ್ಚಾ ತೈಲದ ಬೆಲೆ ಏರಿಕೆ, ದೇಶದಿಂದ ಬಂಡವಾಳದ ನಿರಂತರ ಹೊರಹರಿವು ಮತ್ತು ಹೆಚ್ಚುತ್ತಿರುವ ವ್ಯಾಪಾರ ಕೊರತೆ ಅಂತರ, ಡಾಲರ್ ಬಲವರ್ಧನೆಯು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗುತ್ತಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ವರದಕ್ಷಿಣೆ ಕಿರುಕುಳ ಎಂಬ ಪಿಡುಗನ್ನು ನಿರ್ಮೂಲನೆ ಮಾಡಲು ಏನು ಮಾಡಬೇಕು?
- ಕಾನೂನು ಕ್ರಮ ಕಟ್ಟುನಿಟ್ಟಾಗಿ ಜಾರಿ
- ಸಾರ್ವಜನಿಕರು ಎಚ್ಚೆತ್ತುಕೊಳ್ಳಬೇಕು
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮುಂಬೈ ಧಾರಣೆ (ಶೇಂಗಾ)

20-05-2026

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1610)
ಒಂದು ವಾರದ ಡೆಲಿವರಿ	1645 (1605)
ಪಾಮ್ ವಾರದ ಡೆಲಿವರಿ	1528 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,58,000 (1,57,200)
ಬೆಳ್ಳಿ ಕೆ.ಜಿಗೆ	2,66,500 (2,62,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

₹6 ಸಾವಿರ ಕೋಟಿ ಹೂಡಿಕೆಗೆ ಆಕ್ಸಿಸ್‌ಕೇಡ್ಸ್ ಆಸಕ್ತಿ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವನಹಳ್ಳಿ ಸಮೀಪ ಈಗಾಗಲೇ ವೈಮಾಂತರಿಕ್ಷ ಪರಿಕರಗಳ ತಯಾರಿಕಾ ಘಟಕ ಹೊಂದಿರುವ ಆ್ಯಕ್ಸಿಸ್ ಕೇಡ್ಸ್ ಏರೋಸ್ಪೇಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೆಟ್ ಲಿಮಿಟೆಡ್, ರಾಜ್ಯದಲ್ಲಿ ಇನ್ನೂ ₹6,000 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ ಮುಂದೆ ಬಂದಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಎಂ.ಬಿ.ಪಾಟೀಲ

ಕಂಪನಿಯ ಪ್ರತಿನಿಧಿಗಳ ಜತೆ ಬುಧವಾರ ನಡೆದ ಸಭೆಯ ನಂತರ ಪ್ರಕಟಣೆ ನೀಡಿರುವ ಅವರು, 'ವೈಮಾಂತರಿಕ್ಷ, ರಕ್ಷಣಾ, ಸೆಮಿಕಂಡಕ್ಟರ್ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿ ಸಂಶೋಧನೆ–ಅಭಿವೃದ್ಧಿ, ತಯಾರಿಕೆ, ಪರೀಕ್ಷೆ ಮತ್ತು ನಿರ್ವಹಣೆ ಸೌಲಭ್ಯಗಳು ಇರುವ ಸಮಗ್ರ ಕೇಂದ್ರ ಸ್ಥಾಪನೆಗೆ ಕಂಪನಿಯು ಆಸ್ತಿ ತೋರಿಸಿದೆ' ಎಂದಿದ್ದಾರೆ.

'ಮೊದಲ ಹಂತದಲ್ಲಿ ₹1,290 ಕೋಟಿ, 2ನೇ ಹಂತದಲ್ಲಿ ₹2,898 ಕೋಟಿ ಮತ್ತು 3ನೇ ಹಂತದಲ್ಲಿ ₹1,512 ಕೋಟಿ ಸೇರಿದಂತೆ ಸುಮಾರು ₹6 ಸಾವಿರ ಕೋಟಿ ಹೂಡಿಕೆಗೆ ಕಂಪನಿಯು ಯೋಜನೆ ರೂಪಿಸಿದೆ. ಇದರಿಂದ ಪ್ರತ್ಯಕ್ಷವಾಗಿ 20,000 ಮತ್ತು ಪರೋಕ್ಷವಾಗಿ 54,000 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಇದೆ' ಎಂದು ಮಾಹಿತಿ ನೀಡಿದ್ದಾರೆ.

'ಇದಕ್ಕಾಗಿ 200 ಎಕರೆ ಪ್ರದೇಶದ ಅವಶ್ಯ ಇದ್ದು, ರನ್‌ವೇ ನಿರ್ಮಾಣದ ಅಗತ್ಯವೂ ಇದೆ ಎಂದು ಕಂಪನಿಯ ಪ್ರತಿನಿಧಿಗಳು ಹೇಳಿದ್ದಾರೆ. ಹಾಗಿದ್ದಲ್ಲಿ ಹಾಸನ, ವಿಜಯಪುರ ಮತ್ತು ಶಿವಮೊಗ್ಗ ವಿಮಾನ ನಿಲ್ದಾಣಗಳನ್ನು ಪರಿಗಣಿಸಿ ಎಂದು ಪ್ರಸ್ತಾವ ಮುಂದಿಡಲಾಯಿತು. ಆದರೆ, ಕಂಪನಿಯು ತನ್ನ ಈಗಿನ ಘಟಕದ ಸಮೀಪವೇ ನೂತನ ಘಟಕ ಸ್ಥಾಪನೆಗೆ ಹೆಚ್ಚು ಆಸಕ್ತಿ ತೋರುತ್ತಿದೆ. ಹೀಗಿದ್ದೂ, ಘಟಕ ಸ್ಥಾಪನೆಗೆ ಅವಕಾಶವಿರುವ ಸ್ಥಳಗಳನ್ನು ಗುರುತಿಸಿ ವರದಿ ನೀಡಿ ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಇರಾನ್ ಅಧ್ಯಕ್ಷರನ್ನಾಗಿ ಅಹ್ಮದಿನೆಜಾದ್ ನೇಮಕಕ್ಕೆ ಮುಂದಾಗಿದ್ದ ಅಮೆರಿಕ, ಇಸ್ರೇಲ್'

ವಾಷಿಂಗ್ಟನ್ (ಪಿಟಿಐ): ಇರಾನ್ ಆಡಳಿತದಲ್ಲಿ ಬದಲಾವಣೆ ಮಾಡಿ ತೀವ್ರವಾದಿ ಮಹಮೂದ್ ಅಹ್ಮದಿನೆಜಾದ್ ಅವರನ್ನು ಅಲ್ಲಿನ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಅಮೆರಿಕ ಮತ್ತು ಇಸ್ರೇಲ್ ಯುದ್ಧದ ಆರಂಭದ ದಿನಗಳಲ್ಲಿ ಯೋಜನೆ ರೂಪಿಸಿದ್ದವು.

ಯುದ್ಧ ತಂತ್ರಗಳನ್ನು ರೂಪಿಸುವಾಗ, ಇರಾನ್‌ನ ಮಾಜಿ ಅಧ್ಯಕ್ಷ ಅಹ್ಮದಿನೆಜಾದ್ ಅವರ ಜೊತೆ ಇಸ್ರೇಲ್ ಮತ್ತು ಅಮೆರಿಕ ಸಮಾಲೋಚನೆ ನಡೆಸಿದ್ದವು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಯುದ್ಧದ ಮೊದಲ ದಿನದಂದೇ ಇಸ್ರೇಲ್ ದಾಳಿಯಿಂದಾಗಿ ಅಹ್ಮದಿನೆಜಾದ್ ಗಾಯಗೊಂಡಿದ್ದರು ಮತ್ತು ಬಳಿಕ ಆಡಳಿತ ಬದಲಾವಣೆ ಬಗ್ಗೆ ಭ್ರಮನಿರಸನಗೊಂಡರು ಎಂದು ಅಮೆರಿಕ ಅಧಿಕಾರಿಗಳು ಹೇಳಿರುವುದಾಗಿ ವರದಿಯೊಂದು ತಿಳಿಸಿದೆ.

ಅಹ್ಮದಿನೆಜಾದ್ ಅವರನ್ನು ಗೃಹ ಬಂಧನದಿಂದ ಮುಕ್ತಗೊಳಿಸುವ ಉದ್ದೇಶದಿಂದ ಇಸ್ರೇಲ್ ಅವರ ನಿವಾಸದ ಮೇಲೆ ದಾಳಿ ನಡೆಸಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ

ತುಮಕೂರಿನಲ್ಲಿ ಮಾನ್+ಹುಮ್ಮೆಲ್‌ನ ತಂತ್ರಜ್ಞಾನ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜರ್ಮನಿ ಮೂಲದ ಮಾನ್ + ಹುಮ್ಮೆಲ್ ಕಂಪನಿಯು ತುಮಕೂರಿನಲ್ಲಿ ಅತ್ಯಾಧುನಿಕ 'ಜಾಗತಿಕ ತಂತ್ರಜ್ಞಾನ ಮತ್ತು ನಾವೀನ್ಯ ಕೇಂದ್ರ' ಆರಂಭಿಸಲಿದೆ.

ಕಂಪನಿಯು ವಾಹನಗಳು, ಕೈಗಾರಿಕೆಗಳಲ್ಲಿ ಬಳಕೆಯಾಗುವ ಶುದ್ಧೀಕರಣ ಉತ್ಪನ್ನಗಳನ್ನು ತಯಾರಿಸುತ್ತದೆ. ತುಮಕೂರಿನಲ್ಲಿ ಗುರುವಾರ ಆರಂಭವಾಗಲಿರುವ ಕೇಂದ್ರವು ಕಂಪನಿಯ ಪಾಲಿಗೆ ಜರ್ಮನಿಯ ಹೊರಗಿನ ಅತಿದೊಡ್ಡ ತಂತ್ರಜ್ಞಾನ ಮತ್ತು ನಾವೀನ್ಯ ಕೇಂದ್ರ ಎಂದು ಕಂಪನಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಸುದೀಶ್ ಕರಿಬಿಂಗಲ್ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಹೇಳಿದರು.

ಕಂಪನಿಯು ದೇಶದಲ್ಲಿ ತನ್ನ ಕಾರ್ಯಾಚರಣೆಯನ್ನು ಮತ್ತಷ್ಟು ವಿಸ್ತರಿಸಲು ಮುಂದಾಗಿದೆ. ಇದಕ್ಕಾಗಿ ₹100 ಕೋಟಿ ಹೂಡಿಕೆ ಮಾಡಲಿದೆ. ಎಂಜಿನಿಯರಿಂಗ್, ನಾವೀನ್ಯ ಮತ್ತು ಸುಧಾರಿತ ಫಿಲ್ಟರೇಶನ್ ತಂತ್ರಜ್ಞಾನಗಳಿಗೆ ಭಾರತವನ್ನು ಪ್ರಮುಖ ಕೇಂದ್ರವನ್ನಾಗಿ ಮಾಡಲಿದೆ. ಸುಧಾರಿತ ಸಂಶೋಧನಾ ಪ್ರಯೋಗಾಲಯಗಳು, ಪರೀಕ್ಷಾ ಮೂಲಸೌಕರ್ಯಗಳು, ಡಿಜಿಟಲ್ ಎಂಜಿನಿಯರಿಂಗ್ ಮತ್ತು ದತ್ತಾಂಶ ವಿಶ್ಲೇಷಣೆಯು ತುಮಕೂರಿನ ಈ ಒಂದೇ ಕೇಂದ್ರದಲ್ಲಿ ದೊರೆಯಲಿದೆ ಎಂದರು.

ಇರಾನ್ ಒಪ್ಪಂದಕ್ಕೆ ಸಹಿ ಹಾಕಲಿ: ಟ್ರಂಪ್

ವಾಷಿಂಗ್ಟನ್: 'ಇರಾನ್ ಜತೆಗಿನ ಸಂಘರ್ಷವನ್ನು ಕೊನೆಗೊಳಿಸಲು ಅಮೆರಿಕ ಆತುರ ಪಡುತ್ತಿಲ್ಲ. ಯುದ್ಧಾಂತ್ಯಕ್ಕೆ ಗಡುವು ನಿಗದಿಪಡಿಸುವ ಮೊದಲು, ಅವರು ಒಪ್ಪಂದಕ್ಕೆ ಸಹಿ ಹಾಕುವುದು ಅತಿ ಮುಖ್ಯವಾಗಿದೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಇರಾನ್ ಜತೆಗಿನ ಒಪ್ಪಂದವು ಅಂತಿಮ ಹಂತದಲ್ಲಿದೆ ಎಂದು ಪುನರುಚ್ಚರಿಸಿರುವ ಟ್ರಂಪ್, ಒಂದು ವೇಳೆ ಇರಾನ್ ಇದಕ್ಕೆ ಒಪ್ಪದಿದ್ದರೆ ಮತ್ತೆ ದಾಳಿ ಮಾಡುವುದಾಗಿ' ಎಚ್ಚರಿಕೆ ನೀಡಿದ್ದಾರೆ.

ಇರಾನ್ ಜತೆಗೆ ಒಪ್ಪಂದದ ಗುರಿಗಳನ್ನು ಅಂತಿಮಗೊಳಿಸುವುದು ಅಮೆರಿಕಕ್ಕೆ ಮುಖ್ಯವಾಗಿದೆ. ಇರಾನ್ ಬಗ್ಗೆ ನಮಗಿರುವ ಒಂದೇ ಒಂದು ಪ್ರಶ್ನೆ ಏನೆಂದರೆ, 'ಅವರು ಒಪ್ಪಂದಕ್ಕೆ ಸಹಿ ಹಾಕುತ್ತಾರಾ ಅಥವಾ ಅಮೆರಿಕದ ಪಡೆ ಈ ಕೆಲಸ ಪೂರ್ಣಗೊಳಿಸಬೇಕಾ ಎನ್ನುವುದು' ಎಂದು ಟ್ರಂಪ್ ಹೇಳಿದ್ದಾರೆ.

'ಇರಾನ್ ಮೇಲೆ ಯಾವುದೇ ಹೊಸ ದಾಳಿ ನಡೆದರೆ, ಪಶ್ಚಿಮ ಏಷ್ಯಾ ದೇಶಗಳ ಆಚೆಗೂ ಯುದ್ಧ ವಿಸ್ತರಿಸುತ್ತದೆ. ನೀವು ಊಹಿಸಲೂ ಆಗದ ಸ್ಥಳಗಳಲ್ಲಿ ಭಾರಿ ಹೊಡೆತ ನೀಡುತ್ತೇವೆ' ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಅಮೆರಿಕಕ್ಕೆ ಎಚ್ಚರಿಕೆ ನೀಡಿದೆ.

ಅಮೆರಿಕ ಮತ್ತು ಇರಾನ್‌ನ ಇತ್ತೀಚಿನ ಪ್ರತಿಕ್ರಿಯೆಗಳು ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ರಾಜತಾಂತ್ರಿಕ ಪ್ರಯತ್ನಗಳಿಗೆ ಹಿನ್ನಡೆ ಆಗಿದೆ ಎಂದು ಮೂಲಗಳು ಹೇಳಿವೆ.

'ಅಮೆರಿಕ ಹೊಸ ಯುದ್ಧ ಆರಂಭಿಸಲು ಪ್ರಯತ್ನಿಸುತ್ತಿದೆ'

ಟೆಹರಾನ್ (ಎಎಫ್‌ಪಿ): 'ಅಮೆರಿಕವು ಮತ್ತೆ ಯುದ್ಧ ಆರಂಭಿಸಲು ಯತ್ನಿಸುತ್ತಿದೆ. ಜತೆಗೆ ಇರಾನ್ ಶರಣಾಗಬಹುದು ಎನ್ನುವುದನ್ನು ಸಹ ಬಯಸುತ್ತಿದೆ' ಎಂದು ಇರಾನ್ ಸಂಸತ್ತಿನ ಸ್ಪೀಕರ್, ಮುಖ್ಯ ಸಮಾಲೋಚಕ ಮೊಹಮ್ಮದ್ ಬಾಖಿರ್ ಖಾಲೀಬಾಫ್ ತಿಳಿಸಿದ್ದಾರೆ.

ಮೊಹಮ್ಮದ್ ಬಾಖಿರ್ ಖಾಲೀಬಾಫ್

'ಆರ್ಥಿಕ, ರಾಜಕೀಯ ಒತ್ತಡದ ಹೊರತಾಗಿಯೂ ಶತ್ರುಗಳು ತಮ್ಮ ಉದ್ದೇಶವನ್ನು ಕೈ ಬಿಟ್ಟಿಲ್ಲ. ಹೊಸದಾಗಿ ಯುದ್ಧವನ್ನು ಆರಂಭಿಸಲು ಪ್ರಯತ್ನಿಸುತ್ತಿವೆ ಎಂಬುದಕ್ಕೆ ಬಹಿರಂಗ ಹಾಗೂ ಆಂತರಿಕ ಚಲನವಲನಗಳೇ ಹೇಳುತ್ತಿವೆ' ಎಂದು ಖಾಲೀಬಾಫ್ ಆಡಿಯೊವನ್ನು ಇರಾನ್‌ನ ಮಾಧ್ಯಮಗಳು ವರದಿ ಮಾಡಿವೆ.

'ಅಮೆರಿಕದ ಪಡೆಗಳು ಮತ್ತೆ ಯುದ್ಧ ಸನ್ನದ್ಧತೆಗೆ ತೊಡಗುವ ಪರಿಸ್ಥಿತಿಯನ್ನು ಹತ್ತಿರದಿಂದ ಗಮನಿಸುತ್ತಿದ್ದು, ಇರಾನ್ ಯಾವುದೇ ಸಂದರ್ಭದಲ್ಲಿಯೂ ಶರಣಾಗತಿಯಾಗಬಹುದು ಎಂದು ಭಾವಿಸಿದ್ದಾರೆ' ಎಂದು ಹೇಳಿದ್ದಾರೆ.

'ಅಣ್ವಸ್ತ್ರ ಸ್ಪರ್ಧೆಗೆ ಇರಾನ್ ಪ್ರಚೋದಿಸಬಹುದು'

ವಾಷಿಂಗ್ಟನ್ (ಪಿಟಿಐ): 'ಇರಾನ್ ಅಣ್ವಸ್ತ್ರ ಹೊಂದಿರುವುದು ಇಡೀ ವಿಶ್ವದಾದ್ಯಂತ ಪರಮಾಣು ಸ್ಪರ್ಧೆಗೆ ಪ್ರಚೋದಿಸಲಿದೆ' ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ತಿಳಿಸಿದ್ದಾರೆ.

'ಇರಾನ್ ಜತೆ ಶಾಂತಿ ಒಪ್ಪಂದ ವಿಫಲವಾದರೆ, ಮತ್ತೆ ಸೇನಾ ಕಾರ್ಯಾಚರಣೆ ನಡೆಸಲು ಅಮೆರಿಕ ಸದಾ ಸಿದ್ಧವಾಗಿದೆ' ಎಂದು ಈ ವೇಳೆ ಎಚ್ಚರಿಕೆ ನೀಡಿದ್ದಾರೆ.

ಸಂಯುಕ್ತ ಅರಬ್ ಒಕ್ಕೂಟ, ಕತಾರ್ ಸೇರಿದಂತೆ ಅರಬ್ ರಾಷ್ಟ್ರಗಳ ಮನವಿಯಂತೆ ಇರಾನ್ ಮೇಲಿನ ದಾಳಿಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಘೋಷಿಸಿದ್ದರು. ಇದರ ಬೆನ್ನಲ್ಲೇ, ವ್ಯಾನ್ಸ್ ಈ ಹೇಳಿಕೆ ನೀಡಿದ್ದಾರೆ.

'ನಮ್ಮ ಪ್ರಕಾರ, ಇರಾನಿಯನ್ನರು ಒಪ್ಪಂದ ಮಾಡಲು ಬಯಸಿದ್ದಾರೆ. ಉತ್ತಮ ನಂಬಿಕೆಯಿಂದ ಅಮೆರಿಕದ ಅಧ್ಯಕ್ಷರು ಮಾತುಕತೆ ನಡೆಸಿದ್ದು, ಇಲ್ಲಿಯವರೆಗೂ ಬಂದಿದೆ. ಇರಾನ್ ಯಾವುದೇ ಕಾರಣಕ್ಕೂ ಪರಮಾಣು ಶಸ್ತ್ರಾಸ್ತ್ರ ಹೊಂದಬಾರದು ಎಂಬ ಟ್ರಂಪ್ ಅವರ ಮೂಲ ಬೇಡಿಕೆಯಾಗಿದ್ದು, ಇದಕ್ಕಾಗಿ ರಾಜತಾಂತ್ರಿಕತೆಯನ್ನು ಬಲಿಕೊಡಲು ಸಿದ್ಧರಿಲ್ಲ' ಎಂದಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
Part-Time Jobs
ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

General
ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ವೈಯಕ್ತಿಕ
Change of Name
I P jyothilal R/o 004, mukodulu Road Girigowdanadoddi post: thatteguppe bengalore -560082 have changed my self name: from p jothilal to pecheti jyothilal

ಪ್ರವಾಸ
Travel
10.06.2026 ಚಾರ್‌ಧಾಮ ಪ್ರವಾಸ. 01.07.2026 ವೈಷ್ಣೋದೇವಿ ಕಾಶ್ಮೀರ್ ಗುಲ್ ಮಾರ್ಗ್ ಅಮರನಾಥ್ 15.07.2026, 14/16 ದಿನಗಳು ಪುರಿಜಗನ್ನಾಥ್ ನೇಪಾಳ ಮುಕ್ತಿನಾಥ್. 16.07.2026, 6 ದಿನಗಳು. ಬೈದ್ಯನಾಥ್ (ಜಾರ್ಖಂಡ್) ಕಲ್ಕತ್ತಾ, ಕೊನಾರ್ಕ್ ಪುರಿಜಗನ್ನಾಥ್ ಸಂಪರ್ಕಿಸಿ. ಏಷ್ಯಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು. 9342287551 998662444 9986254573

ನೀಲ್ ಡ್ರ್ಯಾಗನ್ ಜಗತ್ತಿನ ಪರಿಚಯ

ಜೂ.ಎನ್‌ಟಿಆರ್

ತೆಲುಗಿನ ಜೂನಿಯರ್ ಎನ್‌ಟಿಆರ್ ನಟನೆಯ ಪ್ರಶಾಂತ್ ನೀಲ್ ನಿರ್ದೇಶನದ 'ಡ್ರ್ಯಾಗನ್' ಸಿನಿಮಾ 2027ರ ಜೂನ್ 11ರಂದು ತೆರೆಕಾಣಲಿದೆ. ಬುಧವಾರ (ಮೇ 20) ಜೂನಿಯರ್ ಎನ್‌ಟಿಆರ್ ಜನ್ಮದಿನದಂದು 'ಡ್ರ್ಯಾಗನ್' ಜಗತ್ತಿನ ಖಳನಾಯಕರ ಪರಿಚಯವನ್ನು ಒಂದು ವಿಡಿಯೊ ತುಣುಕಿನ ಮೂಲಕ ಮಾಡಲಾಗಿದೆ.

ಸಿನಿಮಾದ ಕಥೆಯು 'ಹೆರಾಯಿನ್' ಮಾದಕವಸ್ತುವಿನ ವಹಿವಾಟು ನಡೆಸುವ ಅಫ್ಗಾನ್ ಟ್ರೇಡಿಂಗ್ ಕಂಪನಿಯ ಸುತ್ತ ಹೆಣೆಯಲಾಗಿದೆ. ಜೂನಿಯರ್ ಎನ್‌ಟಿಆರ್ ಈ ಕಂಪನಿಯ ಮುಖ್ಯ ಹಂತಕ 'ಲ್ಯೂಗರ್' ಆಗಿ ಕಾಣಿಸಿಕೊಂಡಿದ್ದಾರೆ. ನೀಲ್ ಅವರ ಹಿಂದಿನ ಸಿನಿಮಾಗಳಂತೆ ಈ ಸಿನಿಮಾದಲ್ಲೂ ಸಾಲು ಸಾಲು ಪಾತ್ರಗಳು ಕಥೆಯೊಳಗಿವೆ. 'ಅಫ್ಗಾನ್ ಟ್ರೇಡಿಂಗ್ ಕಂಪನಿ'ಯ ಮುಖ್ಯಸ್ಥ 'ದಾದಾ ಸರ್ಕಾರ್' ಆಗಿ ಅಶುತೋಷ್ ರಾಣಾ, 'ಜಲೀಲ್ ರಹಮಾನ್' ಎಂಬ ಪಾತ್ರದಲ್ಲಿ ಬಿಜು ಮೆನನ್, 'ರಘುವೀರ್ ರಾಥೋಡ್' ಪಾತ್ರದಲ್ಲಿ ಅನಿಲ್ ಕಪೂರ್ ನಟಿಸಿದ್ದಾರೆ.

ಖುಷ್ಬು ಸುಂದರ್, ಗುರು ಸೋಮಸುಂದರಂ, ರಾಜೀವ್ ಕನಕಾಲ ಸೇರಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಜೂನಿಯರ್ ಎನ್‌ಟಿಆರ್‌ಗೆ ಜೋಡಿಯಾಗಿ 'ಸಪ್ತ ಸಾಗರದಾಚೆ ಎಲ್ಲೋ', 'ಕಾಂತಾರ' ಖ್ಯಾತಿಯ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೆ.

ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆಯು ಈ ಸಿನಿಮಾವನ್ನು ಬಿಗ್ ಬಜೆಟ್‌ನಲ್ಲಿ ನಿರ್ಮಿಸುತ್ತಿದೆ. ಈ ಆ್ಯಕ್ಷನ್ ಪ್ಯಾಕ್ಡ್ ಸಿನಿಮಾಗೆ ನೀಲ್ ಅವರೇ ಚಿತ್ರಕಥೆ ಬರೆದಿದ್ದಾರೆ. 'ಕೆ.ಜಿ.ಎಫ್', 'ಸಲಾರ್' ಖ್ಯಾತಿಯ ಭುವನ್ ಗೌಡ ಛಾಯಾಚಿತ್ರಗ್ರಹಣ ಮಾಡುತ್ತಿದ್ದು, ರವಿ ಬಸ್ರೂರ್ ಸಂಗೀತವಿದೆ.

ಹೊಂಬಾಳೆ ಜೊತೆ ಸಿನಿಮಾ?

ನಿರ್ದೇಶಕ ಪ್ರಶಾಂತ್ ನೀಲ್ ಈಗಾಗಲೇ ಹೊಂಬಾಳೆ ಫಿಲ್ಮ್ಸ್‌ಗೆ 'ಕೆಜಿಎಫ್' ಮತ್ತು 'ಸಲಾರ್'ನಂತಹ ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಇದೀಗ ಜೂ.ಎನ್‌ಟಿಆರ್‌ಗೆ ಹೊಂಬಾಳೆ ಫಿಲ್ಮ್ಸ್ ಜನ್ಮದಿನದ ಶುಭಕೋರಿದ್ದು, ಹೊಂಬಾಳೆ ಬ್ಯಾನರ್ ಅಡಿಯಲ್ಲಿ ಜೂ.ಎನ್‌ಟಿಆರ್ ಸಿನಿಮಾ ಮಾಡಲಿದ್ದಾರೆಯೇ ಎನ್ನುವ ಬಗ್ಗೆಯೂ ಚರ್ಚೆಯಾಗುತ್ತಿದೆ. ಇತ್ತೀಚೆಗೆ ತೆಲುಗಿನ ದೊಡ್ಡ ಚಿತ್ರಗಳ ವಿದೇಶಿ ಹಾಗೂ ಕರ್ನಾಟಕದ ವಿತರಣಾ ಹಕ್ಕುಗಳನ್ನು ಪಡೆಯುತ್ತಿದೆ. 'ಡ್ರ್ಯಾಗನ್' ಚಿತ್ರದ ಬಿಡುಗಡೆ ಮತ್ತು ವಿತರಣೆಯ ಜವಾಬ್ದಾರಿಯನ್ನು ಹೊಂಬಾಳೆ ವಹಿಸಿಕೊಳ್ಳುವ ಸಾಧ್ಯತೆಯೂ ಹೆಚ್ಚಿದೆ.

'ಪ್ರಜಾವಾಣಿ ಸಿನಿ ಸಮ್ಮಾನ' ಶೀಘ್ರದಲ್ಲೇ ನಾಮನಿರ್ದೇಶನ

4ನೇ ಆವೃತ್ತಿ

ಜೂನ್ 19ಕ್ಕೆ ಕಾರ್ಯಕ್ರಮ

ಚಂದನವನದ ಪ್ರತಿಭೆಗಳನ್ನು ಗುರುತಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಸಮಾರಂಭ ಜೂನ್ 19ರಂದು ನಡೆಯಲಿದ್ದು, ಶೀಘ್ರದಲ್ಲೇ ನಾಮನಿರ್ದೇಶನಗಳು ಹೊರಬೀಳಲಿವೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿದ್ದು, ತೀರ್ಪುಗಾರರು ನಾಮನಿರ್ದೇಶನಗಳನ್ನು ಅಂತಿಮಗೊಳಿಸಿದ್ದಾರೆ.

ಇವುಗಳಿಗೆ 'ಸಿನಿ ಸಮ್ಮಾನ'ದ ಮುಖ್ಯತೀರ್ಪುಗಾರರು ಅಂತಿಮ ಮುದ್ರೆ ಒತ್ತಲಿದ್ದಾರೆ. ಮಾಸಾಂತ್ಯದೊಳಗೆ ನಾಮನಿರ್ದೇಶನಗಳು ಪ್ರಕಟವಾಗಲಿವೆ. ನಾಮನಿರ್ದೇಶನಗಳ ಪೈಕಿ ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ.

ಸಂಚಾರಿ ವಿಜಯ್ | ಶಿಶಿರ್ ಬೈಕಾಡಿ | ದುನಿಯಾ ವಿಜಯ್

'ಅತ್ಯುತ್ತಮ ನಟ' ಪ್ರಶಸ್ತಿ ಪಡೆದವರು

ಕಂಟ್ರಿ ಮೇಡ್ ಭಾಗ 2

ಅರವಿಂದ್ ಕೌಶಿಕ್ ನಟಿಸಿ, ನಿರ್ದೇಶಿಸಿರುವ 'ಕಂಟ್ರಿ ಮೇಡ್- ಭಾಗ 2' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಗ್ಯಾಂಗ್‌ಸ್ಟರ್ ಕಥೆ ಹೊಂದಿರುವ ಚಿತ್ರದ ಚಿತ್ರೀಕರಣ ಮುಗಿದಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

'ನನ್ನ ಹಿಂದಿನ ಸಿನಿಮಾ ಬಿಡುಗಡೆಯಾದ ಮೇಲೆ ಒಂದು ದಿನ ಪಾವಗಡಕ್ಕೆ ಹೋದೆ. ಬಾಲ್ಯದಿಂದಲೂ ನನಗೆ ಬಹಳ ಕಾಡಿದ ಊರದು. ಅಲ್ಲೇನಾದರೂ ಚಿತ್ರೀಕರಣ ಮಾಡಬೇಕೆಂದು ಆಸೆ ಇತ್ತು. ಆ ಊರಿನಲ್ಲಿ ನಾನು ನೋಡಿದ ಒಂದಷ್ಟು ವ್ಯಕ್ತಿಗಳನ್ನು ಆಧರಿಸಿ ಪಾತ್ರಗಳನ್ನು ಸೃಷ್ಟಿಸಿದೆ. ಕಾಜಲ್, ಮಿಲ್ಕಿ, ಮಜ್ಜಿಗೆ, ಬಾಂಬೆ ಬಂಟಿ, ಪಾಯ್ಸನ್ ರವಿ ಮೊದಲಾದ ಪಾತ್ರಗಳು ಸೃಷ್ಟಿಯಾಯಿತು. ಅಲ್ಲಿಂದ ಈ ಕಥೆ ಹುಟ್ಟಿದ್ದು. ದ್ವೇಷ, ರೋಷ, ಸಿಟ್ಟು, ಸೇಡಿನ ಯುದ್ಧಗಳನ್ನು ಹೆಚ್ಚಾಗಿ ಗಂಡಸರು ಮಾಡಿದರೂ, ಗಾಯಗಳಾಗೋದು ಮನೆಯಲ್ಲಿರುವ ಹೆಂಗಸರಿಗೆ ಎಂಬ ಸಂದೇಶವಿರುವ ಚಿತ್ರ. ಈ ಚಿತ್ರದಲ್ಲಿ ನಾಯಕ, ನಾಯಕಿ, ಹಾಸ್ಯ ನಟರು ಇಲ್ಲ. ಎಲ್ಲ ಪಾತ್ರಗಳಿಗೂ ಪ್ರಾಮುಖ್ಯವಿದೆ' ಎಂದರು ನಿರ್ದೇಶಕ.

ಅಭಿಲಾಷ್ ದ್ವಾರಕೀಶ್, ರಾಘವ್ ರಾಮ್, ಶಿಲ್ಪಾ ಅರವಿಂದ್, ಪ್ರದೀಪ್ ರೋಶನ್, ಗೌರವ್ ಆರ್ಯನ್, ಕುಲದೀಪ್, ಅಶ್ವಿತಾ ಗೌಡ, ಸುಜಿತ್ ಶೆಟ್ಟಿ, ಸುಧಾ ಪ್ರಸನ್ನ ಮುಂತಾದವರು ನಟಿಸಿದ್ದಾರೆ. ಉಮೇಶ್ ಮಠಪತಿ, ಸೂರ್ಯ, ಅರವಿಂದ್ ಕೌಶಿಕ್ ಮತ್ತು ಚಂದನ್ ಗೌಡ ಬಂಡವಾಳ ಹೂಡಿದ್ದಾರೆ. ಚಿತ್ರಕ್ಕೆ ಅರ್ಜುನ್ ರಾಮು ಸಂಗೀತ, ಸೂರ್ಯ ಛಾಯಾಚಿತ್ರಗ್ರಹಣವಿದೆ.

ಚಿತ್ರತಂಡ

'ಮೋದಿ, ಅಮಿತ್ ಶಾ ದೇಶದ್ರೋಹಿಗಳು'

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪ

ರಾಯ್‌ಬರೇಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಆರ್‌ಎಸ್‌ಎಸ್‌ನವರು ದೇಶ ದ್ರೋಹಿಗಳಾಗಿದ್ದು, ನಿತ್ಯ ಸಂವಿಧಾನದ ಮೇಲೆ ದಾಳಿ ಮಾಡುತ್ತಿದ್ದಾರೆ ಮತ್ತು ಕೈಗಾರಿಕೋದ್ಯಮಿಗಳಿಗೆ ದೇಶದ ಹಿತಾಸಕ್ತಿಗಳನ್ನು ಮಾರಿದ್ದಾರೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ರಾಯ್‌ಬರೇಲಿ ಕ್ಷೇತ್ರಕ್ಕೆ ಭೇಟಿ ನೀಡಿರುವ ಅವರು, 'ಬಹುಜನ ಸ್ವಾಭಿಮಾನ್ ಸಭಾ'ದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಬುಧವಾರ ಮಾತನಾಡಿದರು.

'ಇದರ ವಿರುದ್ಧ ನೀವು ಧ್ವನಿ ಎತ್ತಬೇಕು. ಆರ್‌ಎಸ್‌ಎಸ್ ಕಾರ್ಯಕರ್ತರು ನಿಮ್ಮ ಮನೆಗಳಿಗೆ ಬಂದು ಮೋದಿ, ಅಮಿತ್ ಶಾ ಅವರ ಬಗ್ಗೆ ಮಾತನಾಡಲು ಮುಂದಾದರೆ, ಅದನ್ನು ಟೀಕಿಸಬೇಕು. ಅಲ್ಲದೆ ಆರ್‌ಎಸ್‌ಎಸ್, ಮೋದಿ, ಶಾ ಅವರನ್ನು ದೇಶದ್ರೋಹಿಗಳು ಎಂದೂ ಹೇಳಬೇಕು' ಎಂದು ರಾಹುಲ್ ಕರೆ ನೀಡಿದರು.

'ಅವರೆಲ್ಲ ದೇಶದ ಸಂವಿಧಾನ, ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿ ವಿರುದ್ಧ ದಾಳಿ ನಡೆಸಿದ್ದಾರೆ' ಎಂದು ರಾಹುಲ್ ರ‍್ಯಾಲಿಯಲ್ಲಿ ಟೀಕಿಸಿದರು.

'ನರೇಗಾ ದುರ್ಬಲಗೊಳಿಸಿ, ಜಾತಿಗಣತಿ ನಡೆಸದೆ, ಕೆಲವೇ ಆಯ್ದ ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಿಕೊಡುವ ಮೂಲಕ ಪ್ರಧಾನಿ ಅವರು ದಿನದ 24 ಗಂಟೆಯೂ ಸಂವಿಧಾನದ ಮೇಲೆ ದಾಳಿ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.


ರಾಹುಲ್ ಗಾಂಧಿ

ಆರ್ಥಿಕ ಬಿರುಗಾಳಿ: ಇಂಧನ ಬಳಕೆ, ಚಿನ್ನ ಖರೀದಿ ಮತ್ತು ವಿದೇಶ ಪ್ರಯಾಣವನ್ನು ಕಡಿತಗೊಳಿಸಲು ಹೇಳುವ ಮೂಲಕ ಪ್ರಧಾನಿ ಮೋದಿ ಅವರು 'ಆರ್ಥಿಕ ಬಿರುಗಾಳಿ' ಬರಲಿದೆ ಎಂದು ಎಚ್ಚರಿಸಿದ್ದಾರೆ. ಮುಂದಿನ ದಿನಗಳಲ್ಲಿ ಹಣದುಬ್ಬರ ತೀವ್ರವಾಗಿ ಏರಲಿದೆ. ಪೆಟ್ರೋಲ್, ಡೀಸೆಲ್, ಅನಿಲ, ಆಹಾರ ಧಾನ್ಯಗಳ ಬೆಲೆಗಳೆಲ್ಲ ಏರಿಕೆಯಾಗಲಿವೆ. ಜೀವಿತ ಅವಧಿಯಲ್ಲಿ ಕಂಡರಿಯದಂತಹ ಹಣದುಬ್ಬರ ಎದುರಾಗಲಿದೆ ಎಂದು ರಾಹುಲ್ ಹೇಳಿದರು.

ರಸಗೊಬ್ಬರ ಕೊರತೆಯು ನೇರವಾಗಿ ರೈತರ ಮೇಲೆ ಪರಿಣಾಮ ಬೀರುತ್ತದೆ. ಸೀಮೆಎಣ್ಣೆ ಪೂರೈಕೆಯಲ್ಲೂ ಅಡಚಣೆ ಆಗಬಹುದು. ಆದರೆ ಆರ್ಥಿಕ ಪರಿಣಾಮದಿಂದ ಅಂಬಾನಿ ಮತ್ತು ಅದಾನಿಗೆ ಯಾವ ವ್ಯತ್ಯಾಸವೂ ಆಗುವುದಿಲ್ಲ, ತೊಂದರೆಗೆ ಸಿಲುಕುವವರು ಸಾಮಾನ್ಯ ನಾಗರಿಕರಷ್ಟೇ ಎಂದು ಅವರು ವಿವರಿಸಿದರು.

ದೇಶದಲ್ಲಿ ಪೆಟ್ರೋಲ್ ದರಗಳು ಏರುತ್ತಿರುವಾಗ, ಅಂಬಾನಿ ಕಂಪನಿಯು ಭಾರತದ ಹೊರಗೆ ಇಂಧನ ರಫ್ತು ಮಾಡುವುದರಲ್ಲಿ ತೊಡಗಿದೆ. ಅವರ ಕಂಪನಿಯು ರಷ್ಯಾದಿಂದ ತೈಲ ಖರೀದಿಸಿ ವಿದೇಶಗಳಿಗೆ ಮಾರಾಟ ಮಾಡುವ ಮೂಲಕ ಹಣ ಗಳಿಸುತ್ತಿದೆ ಎಂದು ಅವರು ದೂರಿದರು.

ಮೋದಿ ಅವರು ದೇಶದ ಆರ್ಥಿಕ ವ್ಯವಸ್ಥೆಯನ್ನು ಅದಾನಿ, ಅಂಬಾನಿ ಮತ್ತು ಅಮೆರಿಕಕ್ಕೆ ಹಸ್ತಾಂತರಿಸಿದ್ದಾರೆ ಎಂದು ಅವರು ಆರೋಪಿಸಿದರು.

> **ರಾಹುಲ್ ಗಾಂಧಿ ಹೇಳಿಕೆಯು ಅವರ ಅರಾಜಕ ಮನಃಸ್ಥಿತಿ ಮತ್ತು ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಸೋಲುಗಳಿಂದ ಹತಾಶರಾಗಿರುವ ಅವರು ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಿದ್ದಾರೆ**
> **ನಿತಿನ್ ನವೀನ್,** ಅಧ್ಯಕ್ಷ, ಬಿಜೆಪಿ

ಎಐಎಡಿಎಂಕೆ ಬಂಡಾಯ ಶಾಸಕರಿಗಿಲ್ಲ ಸ್ಥಾನ

ವಿಜಯ್ ಸಂಪುಟ ಇಂದು ವಿಸ್ತರಣೆ?

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ತಮ್ಮ ಸಚಿವ ಸಂಪುಟವನ್ನು ಗುರುವಾರ ವಿಸ್ತರಿಸುವ ಸಾಧ್ಯತೆಯಿದ್ದು, ರಾಜ್ಯವು 1952ರ ಬಳಿಕ ಮೊದಲ ಸಮ್ಮಿಶ್ರ ಸರ್ಕಾರಕ್ಕೆ ಸಾಕ್ಷಿಯಾಗಲಿದೆ.

ಆದಾಗಿಯೂ, ಕಳೆದ ವಾರ ನಡೆದ ಬಹುಮತ ಸಾಬೀತು ಪರೀಕ್ಷೆ ವೇಳೆ ಟಿವಿಕೆ ಸರ್ಕಾರವನ್ನು ಬೆಂಬಲಿಸಿದ ಎಐಎಡಿಎಂಕೆ ಬಂಡಾಯ ಶಾಸಕರನ್ನು ಸದ್ಯಕ್ಕೆ ಸಂಪುಟಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಕಡಿಮೆ ಎಂದು ಮೂಲಗಳು ತಿಳಿಸಿವೆ.

ಎಐಎಡಿಎಂಕೆ ಬಂಡಾಯ ಶಾಸಕರಿಗೆ ಅವಕಾಶ ನೀಡದಂತೆ ಎಡಪಕ್ಷಗಳು ಮತ್ತು ಮೈತ್ರಿಕೂಟದ ಇತರ ಪಾಲುದಾರ ಪಕ್ಷಗಳು ಮುಖ್ಯಮಂತ್ರಿ ವಿಜಯ್ ಅವರ ಮೇಲೆ ಒತ್ತಡ ಹೇರಿವೆ ಎಂದು ಗೊತ್ತಾಗಿದೆ. ಒಂದು ವೇಳೆ ಈ ಬಂಡಾಯ ಶಾಸಕರನ್ನು ಸಂಪುಟಕ್ಕೆ ಸೇರಿಸಿಕೊಂಡರೆ ಟಿವಿಕೆಗೆ ನೀಡಿರುವ ಬೆಂಬಲವನ್ನು ಮರು ಪರಿಶೀಲಿಸಲಾಗುವುದು ಎಂದು ಆ ಪಕ್ಷಗಳ ನಾಯಕರು ಎಚ್ಚರಿಸಿದ್ದಾರೆ.

ವಿಸಿಕೆ, ಐಯುಎಂಎಲ್‌ಗೆ ಆಹ್ವಾನ: ತಮಿಳುನಾಡಿನ ಆಡಳಿತಾರೂಢ ಟಿವಿಕೆ ಸರ್ಕಾರದ ಸಂಪುಟದಲ್ಲಿ ಭಾಗಿಯಾಗುವಂತೆ ವಿಸಿಕೆ ಮತ್ತು ಐಯುಎಂಎಲ್ ಪಕ್ಷಗಳಿಗೆ ತಮಿಳುನಾಡಿನ ಲೋಕೋಪಯೋಗಿ ಮತ್ತು ಕ್ರೀಡಾ ಅಭಿವೃದ್ಧಿ ಸಚಿವ ಆಧವ್ ಅರ್ಜುನ್ ಬುಧವಾರ ಆಹ್ವಾನಿಸಿದ್ದಾರೆ.

ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಒಂದು ಕುಟುಂಬದ ರೀತಿ ಸಂಪುಟ ಕಾರ್ಯ ನಿರ್ವಹಿಸಬೇಕು ಎಂದು ಬಯಸಿದ್ದಾರೆ ಎಂದಿರುವ ಅವರು, 'ಎಡಪಕ್ಷಗಳನ್ನೂ ಸಂಪುಟದಲ್ಲಿ ಸೇರಿಸಿಕೊಳ್ಳುವ ಇಚ್ಛೆಯನ್ನು ಮುಖ್ಯಮಂತ್ರಿ ಹೊಂದಿದ್ದಾರೆ' ಎಂದಿದ್ದಾರೆ.

ಟಿವಿಕೆ ಸರ್ಕಾರ ರಚಿಸದಂತೆ ಮಾಡಲು ಮತ್ತು ತಾವು ಅಧಿಕಾರಕ್ಕೇರಲು ಡಿಎಂಕೆ ಮತ್ತು ಎಐಎಡಿಎಂಕೆ ಒಂದಾಗಲು ಯತ್ನಿಸಿದ್ದವು ಎಂದು ಅವರು ಆರೋಪಿಸಿದ್ದಾರೆ.

ಸಂಪುಟಕ್ಕೆ ಸೇರಲು ಕಾಂಗ್ರೆಸ್ ಸಮ್ಮತಿ

ಕಾಂಗ್ರೆಸ್ ಶಾಸಕರಾದ ಎಸ್. ರಾಜೇಶ್ ಕುಮಾರ್ ಮತ್ತು ಪಿ. ವಿಶ್ವನಾಥನ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಮ್ಮತಿ ಸೂಚಿಸಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮಾಹಿತಿ ನೀಡಿದ್ದಾರೆ.

'59 ವರ್ಷಗಳ ಬಳಿಕ ಕಾಂಗ್ರೆಸ್ ತಮಿಳುನಾಡು ಸಚಿವ ಸಂಪುಟ ಸೇರುತ್ತಿರುವುದು ಐತಿಹಾಸಿಕ ಸಂದರ್ಭ' ಎಂದು ಅವರು ಬಣ್ಣಿಸಿದ್ದಾರೆ.

ಭಾಷಾವಾರು ಪ್ರಾಂತ್ಯಗಳ ಆಧಾರದ ಮೇಲೆ ರಾಜ್ಯಗಳ ಪುನರ್‌ರಚನೆ ಆದ ನಂತರ ತಮಿಳುನಾಡಿನಲ್ಲಿ ರಚನೆಯಾದ ಮೊದಲ ಸಮ್ಮಿಶ್ರ ಸರ್ಕಾರ ಇದಾಗಲಿದೆ. 1952ರಲ್ಲಿ ಮದ್ರಾಸ್ ರಾಜ್ಯದಲ್ಲಿ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವನ್ನು ರಚಿಸಿತ್ತು.

ರಾಷ್ಟ್ರೀಯವಾದಿ ಸರ್ಕಾರ: ಸುವೇಂದು

ಸಿಲಿಗುರಿ (ಪಿಟಿಐ): 'ಪಶ್ಚಿಮ ಬಂಗಾಳದ ಬಿಜೆಪಿ ಸರ್ಕಾರವು ರಾಷ್ಟ್ರೀಯವಾದಿಗಳದ್ದಾಗಿರಲಿದ್ದು, ಭಾರತದ ಸಂಪ್ರದಾಯ ಹಾಗೂ ಸಂಸ್ಕೃತಿಯನ್ನು ಎತ್ತಿಹಿಡಿಯಲಿದೆ' ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದ್ದಾರೆ.

ಉತ್ತರ ಬಂಗಾಳದ ಪ್ರವಾಸದಲ್ಲಿರುವ ಅವರು ಬುಧವಾರ ಇಲ್ಲಿನ ಬಿಜೆಪಿ ಕಚೇರಿಗೆ ಭೇಟಿ ನೀಡಿ ಮಾತನಾಡಿ, 'ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ನಿಗದಿತ ಅವಧಿಯೊಳಗೆ ಈಡೇರಿಸಲು ಸರ್ಕಾರ ಬದ್ಧವಾಗಿದೆ. ಸಂಕಲ್ಪಪತ್ರದಲ್ಲಿ ಘೋಷಿಸಿದ ಹಲವು ಯೋಜನೆಗಳ ಲಾಭಗಳನ್ನು ಜನರು ಈಗಾಗಲೇ ಪಡೆದುಕೊಳ್ಳುತ್ತಿದ್ದಾರೆ. ಜನರ ಇಚ್ಛೆಗೆ ತಕ್ಕಂತೆ ಕೆಲಸ ಮಾಡಲು ಬದ್ಧವಾಗಿದೆ' ಎಂದು ಹೇಳಿದ್ದಾರೆ.

'ನೂತನ ಸರ್ಕಾರವು ಅನ್ನಪೂರ್ಣ ಯೋಜನೆ, ಮಹಿಳೆಯರಿಗೆ ಮಾಸಿಕ ₹3 ಸಾವಿರ ನೆರವು, ಮಹಿಳೆಯರಿಗೆ ಉಚಿತ ಬಸ್ ಸೇವೆ, ಆಯುಷ್ಮಾನ್ ಭಾರತ್ ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿದೆ' ಎಂದು ಈ ವೇಳೆ ಪುನರುಚ್ಚರಿಸಿದ್ದಾರೆ.

'ಮಾಫಿಯಾ ಆಡಳಿತವು ಅಂತ್ಯಕಂಡಿದ್ದು, ದೇಶ ವಿರೋಧಿ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ' ಎಂದು ಹೇಳಿದ್ದಾರೆ.

'ಜಾತ್ಯತೀತ ನಿಲುವಿನಲ್ಲಿ ರಾಜಿ ಇಲ್ಲ'

ಕೋಮುವಾದಕ್ಕೆ ವಿರೋಧ: ಕೇರಳಂ ಮುಖ್ಯಮಂತ್ರಿ ವಿ.ಡಿ.ಸತೀಶನ್ ಹೇಳಿಕೆ

ತಿರುವನಂತಪುರ (ಪಿಟಿಐ): ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಜಾತ್ಯತೀತ ನಿಲುವಿನಲ್ಲಿ ಯಾವುದೇ ರಾಜಿ ಇಲ್ಲ ಎಂದು ಪ್ರತಿಪಾದಿಸಿದ ಕೇರಳಂ ಮುಖ್ಯಮಂತ್ರಿ ವಿ.ಡಿ.ಸತೀಶನ್, ಕೋಮುವಾದವನ್ನು ಯುಡಿಎಫ್ ಬಲವಾಗಿ ವಿರೋಧಿಸುತ್ತದೆ ಎಂದು ಹೇಳಿದರು.

ಸಚಿವ ಸಂಪುಟ ಸಭೆಯ ಬಳಿಕ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನ್ನ ಮತ್ತು ಯುಡಿಎಫ್‌ನ ಜಾತ್ಯತೀತ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದರು.

'ಕೋಮುವಾದದ ಧಾಟಿಯಲ್ಲಿ ಯಾರು ಮಾತನಾಡಿದರೂ ತೀವ್ರವಾಗಿ ವಿರೋಧಿಸುತ್ತೇವೆ. ಅದು ಯುಡಿಎಫ್‌ನ ದೃಢ ಜಾತ್ಯತೀತ ನಿಲುವು. ಅದರಲ್ಲಿ ಯಾವುದೇ ರಾಜಿ ಸಾಧ್ಯವಿಲ್ಲ' ಎಂದು ಪ್ರತಿಕ್ರಿಯಿಸಿದರು.

ಅಧಿಕಾರ ವಹಿಸಿಕೊಳ್ಳುವ ಮೊದಲು ಕ್ರಿಶ್ಚಿಯನ್ 'ಬಿಷಪ್ ಹೌಸ್'ಗಳಿಗೆ ಭೇಟಿ ನೀಡಿದ ಕುರಿತು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.

'ಬಿಷಪ್ ಹೌಸ್'ಗಳಿಗೆ ಹೋಗಿದ್ದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದ ಅವರು, 'ಅದು ಚುನಾವಣಾ ಗೆಲುವಿನ ನಂತರ ನೀಡಿದ ಭೇಟಿಯೇ ಹೊರತು ಅನುಕೂಲ ಪಡೆಯುವ ಉದ್ದೇಶದ್ದಲ್ಲ' ಎಂದರು. 'ಶಿವಗಿರಿ ಮಠಕ್ಕೂ ಭೇಟಿ ನೀಡಲು ಯೋಜಿಸಿದ್ದೇನೆ' ಎಂದು ಅವರು ಹೇಳಿದರು.

ಸೌಹಾರ್ದ ಸಂಬಂಧ ಬಯಸುವೆ: 'ನನ್ನನ್ನು ಟೀಕಿಸಿದವರೂ ಸೇರಿದಂತೆ ಎಲ್ಲರೊಂದಿಗೂ ಸೌಹಾರ್ದಯುತ ಸಂಬಂಧ ಹೊಂದುವ ಉದ್ದೇಶ ನನ್ನದು. ಎಲ್ಲರನ್ನೂ ಅಪ್ಪಿಕೊಳ್ಳುತ್ತೇನೆ, ವಿರೋಧಿಗಳನ್ನೂ ಭೇಟಿಯಾಗುತ್ತೇನೆ. ಈ ಹುದ್ದೆಯಲ್ಲಿ ಇರುವಾಗ ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಜವಾಬ್ದಾರಿ ನನ್ನ ಮೇಲಿರುತ್ತದೆ. ಹೀಗಾಗಿ ಎಲ್ಲರ ಜತೆಗೂ ಉತ್ತಮ ಸಂಬಂಧ ಕಾಪಾಡಿಕೊಳ್ಳಬೇಕು. ಹಾಗೆಂದ ಮಾತ್ರಕ್ಕೆ ಜಾತ್ಯತೀತ ನಿಲುವಿನಲ್ಲಿ ರಾಜಿ ಸಾಧ್ಯವಿಲ್ಲ' ಎಂದರು.

'ವಂದೇ ಮಾತರಂ' ಪ್ರಸ್ತುತಿ; ಗೊತ್ತಿರಲಿಲ್ಲ- ಸಿ.ಎಂ: 'ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ 'ವಂದೇ ಮಾತರಂ' ಪೂರ್ಣ ಹಾಡಲಾಗುತ್ತದೆ ಎಂಬುದರ ಕುರಿತು ನನಗಾಗಲೀ, ನನ್ನ ಸಹೋದ್ಯೋಗಿಗಳಿಗಾಗಲಿ ಮೊದಲೇ ತಿಳಿದಿರಲಿಲ್ಲ' ಎಂದು ಕೇರಳಂ ಮುಖ್ಯಮಂತ್ರಿ ವಿ.ಡಿ.ಸತೀಶನ್ ತಿಳಿಸಿದರು.

ಈ ಕುರಿತ ವಿವಾದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಸಮಾರಂಭ ಲೋಕಭವನದ ನಿರ್ಧಾರದಂತೆ ನಡೆದಿದೆ. ಆದರೆ ವಂದೇ ಮಾತರಂನ ಪೂರ್ಣ ಸಾಲುಗಳನ್ನು ಹಾಡಲಾಗುತ್ತದೆ ಎಂಬುದನ್ನು ಮುಂಬರುವ ಸರ್ಕಾರಕ್ಕೆ ಮುಂಚಿತವಾಗಿ ತಿಳಿಸಿರಲಿಲ್ಲ ಎಂದರು.

'ತಾಯಿ ಹೆಸರು ಹೇಳದ್ದಕ್ಕೆ ಬೇಸರ'

ವಿ.ಡಿ. ಸತೀಶನ್ ಅವರು ಪ್ರಮಾಣವಚನ ಸ್ವೀಕರಿಸುವ ವೇಳೆ, ಮೇಲ್ಜಾತಿಯ ನಾಯರ್ ಸಮುದಾಯ ಬಳಸುತ್ತಿರುವ ಮೆನನ್ ಉಪನಾಮವನ್ನು (ವಡಸೇರಿ ದಾಮೋದರನ್ ಮೆನನ್ ಸತೀಶನ್) ಉದ್ದೇಶಪೂರ್ವಕವಾಗಿ ಬಳಸಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ನನ್ನ ದಿವಂಗತ ಪೋಷಕರನ್ನು ಸ್ಮರಿಸುವ ಉದ್ದೇಶದಿಂದಲೇ ಪೂರ್ಣ ಹೆಸರನ್ನು ಉಲ್ಲೇಖಿಸಿದ್ದೇನೆ' ಎಂದರು.

'ನನ್ನ ತಂದೆಯ ಹೆಸರನ್ನು ಬಳಸಿದ್ದರಲ್ಲಿ ತಪ್ಪೇನಿದೆ. ನನ್ನ ತಾಯಿಯ ಹೆಸರನ್ನು ಬಳಸಲು ಸಾಧ್ಯವಾಗದಿದ್ದಕ್ಕೆ ಬೇಸರವಿದೆ. ನಾನು ಶಾಸಕನಾಗುವ ಮೊದಲೇ ಇಬ್ಬರೂ ನಿಧನರಾಗಿದ್ದಾರೆ. ತಂದೆ ಹೆಸರನ್ನು ಉಲ್ಲೇಖಿಸಲು ಪೂರ್ಣ ಹೆಸರು ಬಳಸಿದ್ದೇನೆ. ತಾಯಿ ಹೆಸರನ್ನು ಹೇಳಲು ಯಾವುದೇ ಆಯ್ಕೆ ಇಲ್ಲದ ಕಾರಣ, ಅದನ್ನು ಮನಸ್ಸಿನಲ್ಲಿಯೇ ಹೇಳಿಕೊಂಡಿದ್ದೇನೆ' ಎಂದು ಅವರು ಹೇಳಿದರು.

ಖಾತೆ ಹಂಚಿಕೆ–ಸಿ.ಎಂ ಬಳಿ 35 ಇಲಾಖೆ: ತನ್ನೊಂದಿಗೆ ಪ್ರಮಾಣವಚನ ಸ್ವೀಕರಿಸಿದ ಸಂಪುಟ ಸಚಿವರಿಗೆ ಮುಖ್ಯಮಂತ್ರಿ ವಿ.ಡಿ.ಸತೀಶನ್ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ.

ಮುಖ್ಯಮಂತ್ರಿ ಸತೀಶನ್ ಅವರು ಹಣಕಾಸು, ಕಾನೂನು, ಬಂದರು ಸೇರಿದಂತೆ 35 ಇಲಾಖೆ ನಿರ್ವಹಿಸಲಿದ್ದಾರೆ. ಕಾಂಗ್ರೆಸ್‌ನ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರಿಗೆ ಗೃಹ ಖಾತೆ ನೀಡಲಾಗಿದೆ.

ಟ್ವಿಶಾ ಶರ್ಮಾ ಆತ್ಮಹತ್ಯೆ ಪ್ರಕರಣ; ಪತಿಯ ಪತ್ತೆಗೆ ಮುಂದುವರಿದ ಶೋಧ

ವರದಿ ಕೇಳಿದ ಮಹಿಳಾ ಆಯೋಗ

ನವದೆಹಲಿ (ಪಿಟಿಐ): ಮದುವೆಯಾದ ಐದೇ ತಿಂಗಳಲ್ಲಿ ಭೋಪಾಲ್‌ನ ಪತಿಯ ಮನೆಯಲ್ಲಿ 33 ವರ್ಷದ ನೋಯ್ಡಾ ಮಹಿಳೆಯು ಅನುಮಾನಾಸ್ಪದವಾಗಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಹಿಳಾ ಆಯೋಗವು ಬುಧವಾರ ಸ್ವಯಂಪ್ರೇರಿತ ದೂರು ದಾಖಲಿಸಿದೆ.

ತೆಗೆದುಕೊಂಡ ಕ್ರಮದ ಕುರಿತು 7 ದಿನದ ಒಳಗೆ ವಿವರವಾದ ವರದಿಯನ್ನು (ಎಟಿಆರ್) ಸಲ್ಲಿಸುವಂತೆ ಮಧ್ಯಪ್ರದೇಶ ಪೊಲೀಸರಿಗೆ ಸೂಚನೆ ನೀಡಿದೆ.

'ಟ್ವಿಶಾಳ ಅನುಮಾನಾಸ್ಪದ ಸಾವಿಗೆ ಸಂಬಂಧಿಸಿ ಮಾಧ್ಯಮಗಳ ಗಂಭೀರವಾದ ವರದಿಗಳನ್ನು ಮಹಿಳಾ ಆಯೋಗವು ಸ್ವಯಂಪ್ರೇರಿತವಾಗಿ ಪರಿಗಣಿಸಿದೆ' ಎಂದು ಆಯೋಗವು 'ಎಕ್ಸ್'ನಲ್ಲಿ ತಿಳಿಸಿದೆ.

'ಟ್ವಿಶಾ ಮದುವೆಯಾದ ಐದು ತಿಂಗಳಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಆಕೆಯ ಪತಿ, ಅತ್ತೆಯೇ ವರದಕ್ಷಿಣೆ ಕಿರುಕುಳ, ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದರು ಎಂದು ಸಂತ್ರಸ್ತ ಕುಟುಂಬಸ್ಥರು ದೂರಿದ್ದಾರೆ. ಈ ಪ್ರಕರಣದ ಕುರಿತು ಮುಕ್ತ ಹಾಗೂ ನ್ಯಾಯಸಮ್ಮತ ತನಿಖೆಯನ್ನು ಕಾಲಮಿತಿಯಲ್ಲಿ ಮುಗಿಸಬೇಕು' ಎಂದು ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರಿಗೆ ಆಯೋಗದ ಅಧ್ಯಕ್ಷ ವಿಜಯಾ ರಹಾತ್‌ಕರ್ ಪತ್ರ ಬರೆದು ಒತ್ತಾಯಿಸಿದ್ದಾರೆ.

'ಆರೋಪಿ ಮೇಲೆ ಹಾಕಿರುವ ಎಫ್‌ಐಆರ್ ನಿಬಂಧನೆಗಳ ಕುರಿತ ವಿವರಗಳು, ಆರೋಪಿಯ ಬಂಧನದ ಸ್ಥಿತಿಗತಿ ಹಾಗೂ ವಿಚಾರಣೆ, ನಾಪತ್ತೆಯಾಗಿರುವ ಸಮರ್ಥ್ ಸಿಂಗ್ ಬಂಧನಕ್ಕೆ ತೆಗೆದುಕೊಂಡ ಕ್ರಮಗಳು, ಪಾಸ್‌ಪೋರ್ಟ್ ಮುಟ್ಟುಗೋಲಿಗೆ ವ್ಯವಸ್ಥೆ, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ, ಕರೆಗಳ ವಿವರ, ಎಲೆಕ್ಟ್ರಾನಿಕ್ ಹಾಗೂ ವಿಧಿವಿಜ್ಞಾನ ಸಾಕ್ಷ್ಯಗಳನ್ನು ಇದರ ಜೊತೆಗೆ ನೀಡಬೇಕು' ಎಂದು ಸ್ಪಷ್ಟಪಡಿಸಿದೆ.

2ನೇ ಮರಣೋತ್ತರ ಪರೀಕ್ಷೆ: ಕೋರ್ಟ್ ನಿರಾಕರಣೆ

ಭೋಪಾಲ್: ಟ್ವಿಶಾಳ ಎರಡನೇ ಮರಣೋತ್ತರ ಪರೀಕ್ಷೆಯ ಮನವಿಯನ್ನು ಸ್ಥಳೀಯ ನ್ಯಾಯಾಲಯವು ನಿರಾಕರಿಸಿದ್ದು, ಶವವನ್ನು ಸಂರಕ್ಷಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಿದೆ.

ಕಡಿಮೆ ತಾಪಮಾನ ಸಂರಕ್ಷಣಾ ಸೌಲಭ್ಯ ಹೊಂದಿರುವ ಕೇಂದ್ರದ ಮಾಹಿತಿ ಕಲೆಹಾಕುವಂತೆ ತಿಳಿಸಿದ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅನುದಿತಾ ಗುಪ್ತಾ, ಈ ಕುರಿತು ತಕ್ಷಣವೇ ವರದಿ ಸಲ್ಲಿಸುವಂತೆ ತಿಳಿಸಿದ್ದಾರೆ.

ರೇಣುಕೈ ಕೋಚಿಂಗ್ ಸೆಂಟರ್‌ಗೆ ಬೀಗ

ಪುಣೆ (ಪಿಟಿಐ): 'ನೀಟ್–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿರುವ ಆರೋಪಿ ಶಿವರಾಜ್ ರಘುನಾಥ್ ಮೋಟೆಗಾಂವ್ಕರ್ ಅವರ ಒಡೆತನದ ರೇಣುಕೈ ಕರಿಯರ್ ಸೆಂಟರ್ ಇರುವ ಆವರಣಕ್ಕೆ ಮುಂಬೈ ಮಹಾನಗರ ಪಾಲಿಕೆಯು ಬುಧವಾರ ಬೀಗ ಹಾಕಿದೆ.

ಕಟ್ಟಡಕ್ಕೆ ಸ್ವಾಧೀನ ದೃಢೀಕರಣ ಪತ್ರ ನೀಡುವ ಮುನ್ನವೇ ಕೋಚಿಂಗ್ ಸೆಂಟರ್ ನಡೆಸುತ್ತಿದ್ದ ಆರೋಪದಲ್ಲಿ ಈ ಕ್ರಮವನ್ನು ತೆಗದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೀಟ್ ಪರೀಕ್ಷೆ ನಡೆಯುವ 10 ದಿನ ಮುಂಚೆಯೇ ರಸಾಯನ ವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆ ಶಿವರಾಜ್ ಅವರಿಗೆ ತಲುಪಿತ್ತು ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ಸಿಬಿಐ ಅಧಿಕಾರಿಗಳು ಭಾನುವಾರ ಶಿವರಾಜ್ ಅವರನ್ನು ಬಂಧಿಸಿದ್ದರು.

ನೈಟ್‌ರೈಡರ್ಸ್‌ಗೆ ಮಣಿದ ಇಂಡಿಯನ್ಸ್

ಮನೀಷ್ ಪಾಂಡೆ– ಪಾವೆಲ್ ಜತೆಯಾಟ; ಸೌರಭ್ ದುಬೆ– ಕ್ಯಾಮರಾನ್ ಗ್ರೀನ್ ಮಿಂಚು

ಕೋಲ್ಕತ್ತ (ಪಿಟಿಐ): ವೇಗಿಗಳಾದ ಸೌರಭ್ ದುಬೆ ಮತ್ತು ಕ್ಯಾಮರಾನ್ ಗ್ರೀನ್ ಅವರ ಪರಿಣಾಮಕಾರಿ ಬೌಲಿಂಗ್ ಬಳಿಕ ಕರ್ನಾಟಕದ ಮನೀಷ್ ಪಾಂಡೆ– ರೋವ್‌ಮನ್ ಪಾವೆಲ್ ಅಮೋಘ ಜೊತೆಯಾಟವಾಡಿದರು. ಅವರ ಆಟದ ಬಲದಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ 4 ವಿಕೆಟ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿತು.

ಕೊನೆಯ ಏಳು ಪಂದ್ಯಗಳಲ್ಲಿ ಆರನೇ ಗೆಲುವು ದಾಖಲಿಸಿದ ಕೆಕೆಆರ್ ಪಡೆ ಪ್ಲೇಆಫ್ ಆಸೆಯನ್ನು ಜೀವಂತವಾಗಿ ಉಳಿಸಿಕೊಂಡಿತು.

ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕೋಲ್ಕತ್ತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸೌರಭ್ (34ಕ್ಕೆ2), ಗ್ರೀನ್ (23ಕ್ಕೆ2) ಹಾಗೂ ಸುನಿಲ್ ನಾರಾಯಣ್ (13ಕ್ಕೆ1) ಅವರು ಮುಂಬೈ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಇದರಿಂದಾಗಿ ಹಾರ್ದಿಕ್ ಪಾಂಡ್ಯ ಪಡೆ 15.2 ಓವರ್‌ಗಳಲ್ಲಿ 95 ರನ್‌ಗಳಿಗೇ 6 ವಿಕೆಟ್ ಕಳೆದುಕೊಂಡಿತ್ತು.

ಕೊನೆಯ ಹಂತದ ಓವರ್‌ಗಳಲ್ಲಿ ಕಾರ್ಬಿನ್ ಬಾಷ್ (32; 18ಎ, 4x2, 6x2) ಬೀಸಾಟವಾಡಿದರು. ಹೀಗಾಗಿ, ಮುಂಬೈ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 147 ರನ್ ಗಳಿಸಿತು.

ಸಾಧಾರಣ ಮೊತ್ತ ಬೆನ್ನಟ್ಟಿದ ಕೋಲ್ಕತ್ತ ತಂಡವು ಆರಂಭದಲ್ಲಿಯೇ ಫಿನ್ ಅಲೆನ್ (8; 5ಎ) ಅವರ ವಿಕೆಟ್ ಕಳೆದುಕೊಂಡಿತು. ನಾಯಕ ಅಜಿಂಕ್ಯ ರಹಾನೆ (21; 17ಎ) ಲಯ ಕಂಡುಕೊಳ್ಳುವ ಹಂತದಲ್ಲಿ ನಿರ್ಗಮಿಸಿದರು. ಬೌಲಿಂಗ್‌ನಲ್ಲಿ ಮಿಂಚಿದ್ದ ಆಲ್‌ರೌಂಡರ್ ಗ್ರೀನ್ (4; 8ಎ) ಅವರು ಬ್ಯಾಟಿಂಗ್‌ನಲ್ಲಿ ನಿರಾಶೆ ಅನುಭವಿಸಿದರು. ರಹಾನೆ ಪಡೆ 54 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಈ ವೇಳೆ ಜೊತೆಯಾದ ಮನೀಷ್ (45; 33ಎ, 4x6) ಹಾಗೂ ಪಾವೆಲ್ (40; 30ಎ, 4x2, 6x2) ನಾಲ್ಕನೇ ವಿಕೆಟ್‌ಗೆ 64 ರನ್ ಸೇರಿಸಿ ಆಸರೆಯಾದರು. ಅರ್ಧಶತಕದತ್ತ ಮುನ್ನುಗ್ಗುತ್ತಿದ್ದ ಮನೀಷ್ ಅವರು ಜಸ್‌ಪ್ರೀತ್ ಬೂಮ್ರಾಗೆ ವಿಕೆಟ್ ಒಪ್ಪಿಸಿದರು. ಪಾವೆಲ್ ಅವರು ಬಾಷ್ (30ಕ್ಕೆ3) ಅವರ ಬೌಲಿಂಗ್‌ನಲ್ಲಿ ಅಲ್ಲಾಹ ಘಜನಫರ್‌ಗೆ ಕ್ಯಾಚಿತ್ತರು.

ಮನೀಷ್ ಅವರು ಹಾಲಿ ಲೀಗ್‌ನಲ್ಲಿ ಮೊದಲ ಬಾರಿಗೆ ಬ್ಯಾಟ್ ಮಾಡುವ ಅವಕಾಶ ಪಡೆದರು. ಸಿಕ್ಕ ಅವಕಾಶದಲ್ಲಿ ಅಮೋಘ ಕಾಣಿಕ ನೀಡಿದರು.

ಕೊನೆಯಲ್ಲಿ ರಿಂಕು ಸಿಂಗ್ (9; 5ಎ) ಹಾಗೂ ಅನುಕೂಲ್ ರಾಯ್ (4) ತಂಡವನ್ನು ಗೆಲುವಿನ ದಡ ಸೇರಿಸಿದರು. ಕೆಕೆಆರ್ ತಂಡವು 18.5 ಓವರ್‌ಗಳಲ್ಲಿ 6 ವಿಕೆಟ್‌ಗೆ 148 ರನ್ ಗಳಿಸಿ ಸಂಭ್ರಮಿಸಿತು.

ಇದಕ್ಕೂ ಮೊದಲು, ಮುಂಬೈ ತಂಡದ ರೋಹಿತ್ ಶರ್ಮಾ (15; 13ಎ, 6x2) ಅವರು ಭರವಸೆಯ ಆಟವಾಡಿದರು. ಆದರೆ ಇನ್ನೊಂದು ಬದಿಯಲ್ಲಿದ್ದ ರಿಯಾನ್ ರಿಕೆಲ್ಟನ್ (6; 7ಎ) ಅವರು ಮನೀಷ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಸೂರ್ಯಕುಮಾರ್ ಯಾದವ್ (15; 6ಎ) ಮತ್ತೊಮ್ಮೆ ದೊಡ್ಡ ಇನಿಂಗ್ಸ್ ಆಡುವಲ್ಲಿ ವಿಫಲರಾದರು. ಸೌರಭ್ ದುಬೆ ಎಸೆತದ ವೇಗ ಅಂದಾಜು ಮಾಡುವಲ್ಲಿ ಎಡವಿದ ಅವರು ಕ್ಲೀನ್‌ಬೌಲ್ಡ್ ಆದರು.

ಈ ಸಂದರ್ಭದಲ್ಲಿ ತಿಲಕ್ ವರ್ಮಾ (20; 32ಎ, 6x1) ಮತ್ತು ನಾಯಕ ಹಾರ್ದಿಕ್ ಪಾಂಡ್ಯ (26; 27ಎ, 4x2, 6x1) ನಿಧಾನಗತಿಯಲ್ಲಿ ಬ್ಯಾಟಿಂಗ್ ಮಾಡಿದರು. ವಿಕೆಟ್ ಪತನವನ್ನು ತಡೆಯುವ ಪ್ರಯತ್ನ ಮಾಡಿದರು. ಕೊನೆಯಲ್ಲಿ ಬಾಷ್ ಮತ್ತು ಚಾಹರ್ ಚೇತರಿಕೆ ನೀಡಿದರು.

ಮಳೆ ಬಂದಿದ್ದರಿಂದ ಸ್ವಲ್ಪ ಹೊತ್ತು ಪಂದ್ಯ ಸ್ಥಗಿತವಾಗಿತ್ತು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 8ಕ್ಕೆ 147 (ರೋಹಿತ್ ಶರ್ಮಾ 15, ಸೂರ್ಯಕುಮಾರ್ ಯಾದವ್ 15, ತಿಲಕ್ ವರ್ಮಾ 20, ಹಾರ್ದಿಕ್ ಪಾಂಡ್ಯ 26, ಕಾರ್ಬಿನ್ ಬಾಷ್ ಔಟಾಗದೆ 32, ಸೌರಭ್ ದುಬೆ 34ಕ್ಕೆ2, ಕ್ಯಾಮರಾನ್ ಗ್ರೀನ್ 23ಕ್ಕೆ2) ಕೋಲ್ಕತ್ತ ನೈಟ್ ರೈಡರ್ಸ್: 18.5 ಓವರ್‌ಗಳಲ್ಲಿ 6 ವಿಕೆಟ್‌ಗೆ 148 (ಅಜಿಂಕ್ಯ ರಹಾನೆ 21, ಮನೀಷ್ ಪಾಂಡೆ 45, ರೋವ್‌ಮನ್ ಪಾವೆಲ್ 40; ಕಾರ್ಬಿನ್ ಬಾಷ್ 30ಕ್ಕೆ3)

ಪಂದ್ಯದ ಆಟಗಾರ: ಮನೀಷ್ ಪಾಂಡೆ

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ರೋವ್‌ಮನ್ ಪಾವೆಲ್– ಮನೀಷ್ ಪಾಂಡೆ ಜೊತೆಯಾಟ ಪಿಟಿಐ ಚಿತ್ರ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	13	9	4	0	18	1.065
ಜಿ ಟಿ	13	8	5	0	16	0.400
ಎಸ್‌ಆರ್‌ಎಚ್	13	8	5	0	16	0.350
ಆರ್ ಆರ್	13	7	6	0	14	0.083
ಪಿಬಿಕೆಎಸ್	13	6	6	1	13	0.227
ಕೆಕೆಆರ್	13	6	6	1	13	0.011
ಸಿಎಸ್‌ಕೆ	13	6	7	0	12	- 0.016
ಡಿ ಸಿ	13	6	7	0	12	- 0.871
ಎಂ ಐ	13	4	9	0	8	- 0.510
ಎಲ್‌ಎಸ್‌ಜಿ	13	4	9	0	8	- 0.702

ಆರೆಂಜ್ ಕ್ಯಾಪ್: ವೈಭವ್ ಸೂರ್ಯವಂಶಿ, ಆರ್‌ಆರ್ (579 ರನ್)

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)

ಇಂದಿನ ಪಂದ್ಯ

ಗುಜರಾತ್ ಟೈಟನ್ಸ್ V/s ಚೆನ್ನೈ ಸೂಪರ್ ಕಿಂಗ್ಸ್

ತಾಣ: ಅಹಮದಾಬಾದ್, ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಎಂ ಎಸ್ ಧೋನಿ ಚೆಪಾಕ್‌ಗೆ ವಿದಾಯ ಹೇಳಿದ್ದಾರೆ!

ಚೆನ್ನೈ ತಂಡಕ್ಕೆ ಗುಜರಾತ್ ಟೈಟನ್ಸ್ ಸವಾಲು ಇಂದು

ಸೂಪರ್ ಕಿಂಗ್ಸ್‌ಗೆ 'ಕೊನೆ' ಅವಕಾಶ

ಅಹಮದಾಬಾದ್ (ಪಿಟಿಐ): ಐಪಿಎಲ್ ಅಂಕಪಟ್ಟಿಯ ಅಗ್ರ ಎರಡು ತಂಡಗಳಲ್ಲಿ ಸ್ಥಾನ ಪಡೆಯುವತ್ತ ಚಿತ್ತ ನೆಟ್ಟಿರುವ ಗುಜರಾತ್ ಟೈಟನ್ಸ್ ಗುರುವಾರ ಚೆನ್ನೈ ಸೂಪರ್ ಕಿಂಗ್ಸ್ ಪಡೆಯನ್ನು ಎದುರಿಸಲಿದೆ.

ಉಭಯ ತಂಡಗಳಿಗೂ ಇದು ಲೀಗ್ ಹಂತದ ಕೊನೆಯ ಪಂದ್ಯವಾಗಿದೆ. ಶುಭಮನ್ ಗಿಲ್ ನಾಯಕತ್ವದ ಟೈಟನ್ಸ್ 16 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. 18 ಅಂಕ ಗಳಿಸಿರುವ 'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಋತುರಾಜ್ ಗಾಯಕವಾಡ ನಾಯಕತ್ವದ ಚೆನ್ನೈ ತಂಡವು ತನ್ನ 13ನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಸೋತಿತ್ತು. ಆದರೂ ಪ್ಲೇ ಆಫ್ ಪ್ರವೇಶಿಸುವ ಸಣ್ಣ ಅವಕಾಶವೊಂದು ಇನ್ನೂ ಇದೆ. ಅದೂ ದೊಡ್ಡ ಅಂತರದ ಗೆಲುವು ಸಾಧಿಸಿ ನೆಟ್‌ರನ್ ರೇಟ್ ಕೂಡ ಹೆಚ್ಚಿಸಿಕೊಳ್ಳಬೇಕು. ಚೆನ್ನೈ ಖಾತೆಯಲ್ಲಿ ಈಗ 12 ಅಂಕಗಳಿವೆ.


ಋತುರಾಜ್ ಗಾಯಕವಾಡ

ಶುಭಮನ್ ಗಿಲ್

ಬಲಾಬಲ	ಒಟ್ಟು ಪಂದ್ಯ 9
ಸಿಎಸ್‌ಕೆ ಜಯ	4
ಜಿ ಟಿ ಗೆಲುವು	5

ಪಂಜಾಬ್ ಕಿಂಗ್ಸ್, ರಾಜಸ್ಥಾನ ರಾಯಲ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ತಮ್ಮ ಪಾಲಿನಲ್ಲಿ ಉಳಿದಿರುವ ತಲಾ ಒಂದು ಪಂದ್ಯದಲ್ಲಿ ಸೋತಾಗ ಚೆನ್ನೈಗೆ ಅವಕಾಶ ಸಿಗಬಹುದು.

ಆದರೆ ಆಲ್‌ರೌಂಡ್ ಆಟವಾಡುತ್ತಿರುವ ಗುಜರಾತ್ ತಂಡವನ್ನು ಅದರ ತವರಿನಂಗಳದಲ್ಲಿ ಮಣಿಸುವುದು ಕಠಿಣ ಸವಾಲು. ಆರಂಭಿಕ ಬ್ಯಾಟರ್ ಸಾಯಿ ಸುದರ್ಶನ್, ನಾಯಕ ಗಿಲ್ ಹಾಗೂ ಜೋಸ್ ಬಟ್ಲರ್ ಅವರು ಉತ್ತಮ ಲಯದಲ್ಲಿದ್ದಾರೆ. ಆದರೆ ಅವರಿಗೆ ಚೆನ್ನೈ ತಂಡದ ಸ್ಪಿನ್ನರ್ ಅಕಿಲ್ ಹುಸೇನ್, ನೂರ್ ಅಹಮದ್, ವೇಗಿ ಅನ್ಷುಲ್ ಕಂಬೋಜ್, ಮುಕೇಶ್ ಚೌಧರಿ ಮತ್ತು ಸ್ಪೆನ್ಸರ್ ಜಾನ್ಸನ್ ಅವರು ಕಠಿಣ ಸವಾಲೊಡ್ಡಬಲ್ಲರು.

ಚೆನ್ನೈ ಬ್ಯಾಟಿಂಗ್ ಡೆವಾಲ್ಡ್ ಬ್ರೆವಿಸ್, ಊರ್ವಿಲ್ ಪಟೇಲ್, ಸಂಜು ಸ್ಯಾಮ್ಸನ್ ಹಾಗೂ ಕಾರ್ತಿಕ್ ಶರ್ಮಾ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ಶಿವಂ ದುಬೆ ಮಧ್ಯಮ ಕ್ರಮಾಂಕದಲ್ಲಿ ಒಂದಿಷ್ಟು ರನ್ ಗಳಿಸುವ ಸಮರ್ಥರು. ಗುಜರಾತ್ ತಂಡದ ಬೌಲಿಂಗ್ ವಿಭಾಗವು ಬಲಿಷ್ಠವಾಗಿದೆ. ಅನುಭವಿ ಮೊಹಮ್ಮದ್ ಸಿರಾಜ್, ಜೇಸನ್ ಹೋಲ್ಡರ್, ಕಗಿಸೊ ರಬಾಡ ಮತ್ತು ರಶೀದ್ ಖಾನ್ ಅವರು ಉತ್ತಮ ಲಯದಲ್ಲಿದ್ದಾರೆ. ತಂಡವು ಈಗಾಗಲೇ ಪ್ಲೇ ಆಫ್ ಪ್ರವೇಶ ಗಿಟ್ಟಿಸಿರುವುದರಿಂದ ಈ ಪಂದ್ಯದಲ್ಲಿ ಸೋತರೂ ಆತಂಕವಿಲ್ಲ. ಆದರೆ ಅಗ್ರಸ್ಥಾನಕ್ಕೇರಬೇಕಾದರೆ ಗೆಲುವು ಅಗತ್ಯ.

ವೈಭವ್ ಸಂಭ್ರಮ ಅಮ್ಮನಿಗಾಗಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಘಟಾನುಘಟಿ ಬೌಲರ್‌ಗಳೆಲ್ಲರಿಗೂ 15 ವರ್ಷದ ವೈಭವ್ ಸೂರ್ಯವಂಶಿ ಬಿಸಿ ಮುಟ್ಟಿಸಿದ್ದಾರೆ.

13 ಪಂದ್ಯಗಳಲ್ಲಿ 579 ರನ್ ಗಳಿಸಿದ್ದಾರೆ. 236.33ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗುಡ್ಡೆ ಹಾಕಿ ಆರೆಂಜ್ ಕ್ಯಾಪ್ ಧರಿಸಿದ್ದಾರೆ. ಬೌಂಡರಿ ಮತ್ತು ಸಿಕ್ಸರ್‌ಗಳ ಅರ್ಧಶತಕಗಳನ್ನೂ ದಾಖಲಿಸಿದ್ದಾರೆ 'ಬಿಹಾರಿ ಪೋರ' ವೈಭವ್. ಅವರು ಈಗ ತಮ್ಮ ಬೀಸಾಟದಿಂದಾಗಿ ಕ್ರಿಕೆಟ್ ಪ್ರಿಯರ ಗಮನವನ್ನು ಅಪಾರವಾಗಿ ಸೆಳೆದು ಕೊಂಡಿದ್ದಾರೆ. ಆದ್ದರಿಂದ ಅವರ ಪ್ರತಿಯೊಂದು ಚಲನವಲನವೂ ದೊಡ್ಡ ಸುದ್ದಿಯಾಗುತ್ತಿದೆ.

ಮಂಗಳವಾರದ ಪಂದ್ಯದಲ್ಲಿ ಅವರು ಅರ್ಧಶತಕ ಗಳಿಸಿದ ನಂತರ ಸಂಭ್ರಮಾಚರಣೆಯೂ ಈಗ ಸಾಮಾಜಿಕ ಜಾಲತಾಣಗಳಲ್ಲಿ ಕೌತುಕದ ಸುದ್ದಿಯಾಗಿ ಹರಿದಾಡುತ್ತಿದೆ. ಅವರು ತಮ್ಮ ಬಲಗೈನ ಎರಡು ಬೆರಳುಗಳ ಮೇಲೆ ಬಲಗೈ ತೋರುಬೆರಳನ್ನು ಇಟ್ಟು ಇಂಗ್ಲಿಷ್ ಭಾಷೆಯ 'ಎ' ಅಕ್ಷರದ ಸಂಕೇತವನ್ನು ತೋರಿಸಿದ್ದರು. ಇದು ಅವರ ತಾಯಿ ಆರತಿ ಸೂರ್ಯವಂಶಿ ಅವರಿಗೆ ಕೃತಜ್ಞತೆ ಸಲ್ಲಿಸಲು ತೋರಿದ ಸಂಕೇತ ಎಂದು ರಾಜಸ್ಥಾನ ರಾಯಲ್ಸ್ ತಂಡದ ಇನ್ಸ್ಟಾಗ್ರಾಮ್ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

'ಅದು ನನ್ನ ವೈಯಕ್ತಿಕ ಸಂಗತಿಯಾಗಿತ್ತು. ಆದ್ದರಿಂದ ನಾನು ಇದುವರೆಗೆ ಯಾರಿಗೂ ಹೇಳಿರಲಿಲ್ಲ. ಈಗ ನಿಮ್ಮ ಮುಂದೆ ಹೇಳುತ್ತಿರುವೆ. ನನ್ನ ತಾಯಿಗೆ ಸಮರ್ಪಿಸಿದ ಇನಿಂಗ್ಸ್ ಇದು ಎಂಬುದಕ್ಕೆ ಹಾಗೆ ತೋರಿಸಿದ್ದೆ ಅಷ್ಟೇ' ಎಂದು ವೈಭವ್ ಹೇಳಿದ್ದಾರೆ.

ಈ ಪಂದ್ಯದಲ್ಲಿ ಅವರು 93 ರನ್ ಗಳಿಸಿದರು. ತಂಡವು ಲಖನೌ ಸೂಪರ್ ಜೈಂಟ್ಸ್ ಎದುರು 7 ವಿಕೆಟ್‌ಗಳಿಂದ ಜಯಿಸಿತು. ವೈಭವ್ ಪಂದ್ಯಶ್ರೇಷ್ಠ ಗೌರವ ಪಡೆದರು. ಪ್ರಶಸ್ತಿ ಪ್ರದಾನದ ಸಂದರ್ಭದಲ್ಲಿ ನಿರೂಪಕ ಮುರಳಿ ಕಾರ್ತಿಕ್ ಅವರು ಸಂಭ್ರಮಾಚರಣೆಯ ಬಗ್ಗೆ ಕೇಳಿದಾಗ, 'ನನಗೇ ಗೊತ್ತಿಲ್ಲ. ಆ ಹೊತ್ತಿನಲ್ಲಿ ನನಗೆ ಏನು ತಿಳಿಯುತ್ತದೋ ಅದನ್ನು ಮಾಡಿ ಬಿಡುತ್ತೇನೆ. ಏನಾದರೂ ಒಂದು ಹೊಸದನ್ನು ಮಾಡಲು ಪ್ರಯತ್ನಿಸುತ್ತಿರುತ್ತೇನೆ' ಎಂದು ಹೇಳಿ ನಕ್ಕಿದ್ದರು.

ಈ ಐಪಿಎಲ್‌ನಲ್ಲಿ ವೈಭವ್ ಸಾಧನೆ	
ಪಂದ್ಯ	13
ರನ್	579
ಬೌಂಡರಿ	50
ಸಿಕ್ಸರ್	53
ಅರ್ಧಶತಕ	3
ಶತಕ	1
ಶ್ರೇಷ್ಠ	103

ವೈಭವ್ ಸೂರ್ಯವಂಶಿ ಸಂಭ್ರಮಾಚರಣೆ ಪಿಟಿಐ ಚಿತ್ರ

ಹಾಕಿ ಕೋಚ್ ಬಲದೇವ್‌ಗೆ 25ರಂದು ಪದ್ಮಶ್ರೀ ಪ್ರದಾನ

ನವದೆಹಲಿ (ಪಿಟಿಐ): ಹರಿಯಾಣದ ಶಾಹಬಾದ್ ಮಾರ್ಕಂಡ ನಗರವನ್ನು ಹಾಕಿ ಪ್ರತಿಭೆಗಳನ್ನು ಸಜ್ಜುಗೊಳಿಸುವ ಕೇಂದ್ರವನ್ನಾಗಿ ರೂಪಿಸಿದ ತರಬೇತುದಾರ ಬಲದೇವ್ ಸಿಂಗ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮ ಅವರು ಮೇ 25ರಂದು ಪದ್ಮಶ್ರೀ ಪುರಸ್ಕಾರವನ್ನು ಪ್ರದಾನ ಮಾಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

75 ವರ್ಷ ವಯಸ್ಸಿನ ಸಿಂಗ್ ಅವರು 1982ರಲ್ಲಿ ಶಾಹಬಾದ್– ಮಾರ್ಕಂಡಕ್ಕೆ ಹರಿಯಾಣ ಕ್ರೀಡಾ ಇಲಾಖೆಯ ಕೋಚ್ ಆಗಿ ನೇಮಕಗೊಂಡಿದ್ದರು. ನಾಲ್ಕು ವರ್ಷ ಕೆಲಸ ಮಾಡಿದ್ದ ಅವರು 1993ರಲ್ಲಿ ಮತ್ತೆ ಮರಳಿದರು. ಈ ನಗರವನ್ನು 'ಹಾಕಿ ಆಟಗಾರರನ್ನು ಸೃಷ್ಟಿಸುವ ತಾಣ' ವನ್ನಾಗಿ ರೂಪಿಸಿದರು.

2026–27ನೇ ಸಾಲಿನ ದೇಶಿ ಕ್ರಿಕೆಟ್ ವೇಳಾಪಟ್ಟಿ ಪ್ರಕಟಿಸಿದ ಬಿಸಿಸಿಐ

ಅಕ್ಟೋಬರ್ 11ರಿಂದ ರಣಜಿ ಟ್ರೋಫಿ

ನವದೆಹಲಿ (ಪಿಟಿಐ): ದೇಶಿ ಕ್ರಿಕೆಟ್‌ನ ಸಾರ್ವಭೌಮ ತಂಡವನ್ನು ನಿರ್ಧರಿಸಲಿರುವ ರಣಜಿ ಟ್ರೋಫಿ ಟೂರ್ನಿಯು ಅಕ್ಟೋಬರ್ 11ರಂದು ಆರಂಭವಾಗಲಿದ್ದು ಈ ಬಾರಿಯೂ ಎರಡು ಹಂತಗಳಲ್ಲಿ ನಡೆಯಲಿದೆ. 2026–27ನೇ ಸಾಲಿನ ದೇಶಿ ಕ್ರಿಕೆಟ್ ಋತು ಆಗಸ್ಟ್ 23ರಂದು ದುಲೀಪ್ ಟ್ರೋಫಿ ಟೂರ್ನಿಯೊಂದಿಗೆ ಆರಂಭವಾಗಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಬುಧವಾರ ಪ್ರಕಟಿಸಿದೆ.

ವಯೋವರ್ಗ (16, 19 ಮತ್ತು 23 ವರ್ಷದೊಳಗಿನವರು) ಮತ್ತು ಸೀನಿಯರ್ ವಿಭಾಗಗಳಲ್ಲಿ ಮಂಡಳಿಯು ಒಟ್ಟು 1,788 ಪಂದ್ಯಗಳನ್ನು ಆಯೋಜಿಸಲಿದೆ. ಇದರಲ್ಲಿ ಮಹಿಳೆಯರ ವಿಭಾಗದ 15, 19 ಮತ್ತು 23 ವರ್ಷದೊಳಗಿನವರ, ಸೀನಿಯರ್ ವಿಭಾಗದ ಪಂದ್ಯಗಳು ಒಳಗೊಂಡಿವೆ.

ಸಮಯದ ಇತಿಮಿತಿ ಗಮನದಲ್ಲಿಟ್ಟುಕೊಂಡು 23 ವರ್ಷದೊಳಗಿನವರ ನಿಯಮಿತ ಓವರುಗಳ ಟೂರ್ನಿ, ವಿಝಿ ಟ್ರೋಫಿ ಅಂತರ ವಲಯ ವಿಶ್ವವಿದ್ಯಾಲಯಗಳ ಕ್ರಿಕೆಟ್ ಟೂರ್ನಿಗಳನ್ನು ಟಿ20 ಮಾದರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ರಣಜಿ ಟ್ರೋಫಿಯ ಮೊದಲ ಹಂತ ನಡೆದ ಬಳಿಕ ರಾಷ್ಟ್ರೀಯ ಟಿ20 ಟೂರ್ನಿಯಾದ ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ (ಎಸ್‌ಎಂಎಟಿ) ಮತ್ತು ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಗಳು ನಡೆಯಲಿವೆ. ಈ ಎರಡು ಟೂರ್ನಿಗಳ ಬಳಿಕ ರಣಜಿ ಟ್ರೋಫಿ ಎರಡನೇ ಹಂತ ನಡೆಯಲಿದೆ.

16 ವರ್ಷದೊಳಗಿನವರಿಗೆ ನಡೆಯುವ ವಿಜಯ್ ಮರ್ಚೆಂಟ್ ಟ್ರೋಫಿ ನವೆಂಬರ್‌ನಿಂದ ಜನವರಿ ಅವಧಿಯಲ್ಲಿ ನಡೆಯಲಿದೆ. ಹೀಗಾಗಿ ಹಿಂದಿಗಿಂತ ಸುಧಾರಿತ ರೀತಿಯಲ್ಲಿ ವೇಳಾಪಟ್ಟಿ ರೂಪಿಸಲು ಮತ್ತು ಸಿದ್ಧತೆಗೆ ಅನುಕೂಲವಾಗಿದೆ. ಶಾಲಾ ಕ್ರಿಕೆಟಿಗರಿಗೆ ವಾರ್ಷಿಕ ಪರೀಕ್ಷೆಗೆ ಸಿದ್ಧತೆ ನಡೆಸಲೂ ಸಮಯ ಸಿಗಲಿದೆ.

ದೇಶಿ ಕ್ರಿಕೆಟ್ ವೇಳಾಪಟ್ಟಿ 2026-27	
ದುಲೀಪ್ ಟ್ರೋಫಿ	ಆ.23ರಿಂದ ಸೆ.10
ಇರಾನಿ ಕಪ್	ಅ.1ರಿಂದ 5 (ಶ್ರೀನಗರದಲ್ಲಿ)
ರಣಜಿ ಟ್ರೋಫಿ ಮೊದಲ ಹಂತ	ಅ.11ರಿಂದ ನ.5
ರಣಜಿ ಟ್ರೋಫಿ ಎರಡನೇ ಹಂತ	ಜ.7ರಿಂದ ಮಾ.3
ಎಸ್‌ಎಂಎಟಿ	ನ.14ರಿಂದ ಡಿ.6
ವಿಜಯ್ ಹಜಾರೆ ಟ್ರೋಫಿ	ಡಿ.14ರಿಂದ ಜ.8

ಬೆಂಗಳೂರಿನಲ್ಲಿ ದುಲೀಪ್ ಟ್ರೋಫಿ ಪಂದ್ಯಗಳು

ವಲಯ ಮಟ್ಟಕ್ಕೆ ಮರಳಿರುವ ದುಲೀಪ್ ಟ್ರೋಫಿ ಟೂರ್ನಿಯ ಎಲ್ಲ ಪಂದ್ಯಗಳು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ನಡೆಯಲಿವೆ.

ಎಸ್‌ಎಂಎಟಿ ಟೂರ್ನಿಯ ಲೀಗ್ ಹಂತದ ಪಂದ್ಯಗಳು ಮುಂಬೈ, ಮೊಹಾಲಿ, ವಿಶಾಖಪಟ್ಟಣ ಮತ್ತು ಕೋಲ್ಕತ್ತದಲ್ಲಿ ನಡೆಯಲಿವೆ. ನಾಕೌಟ್ ಹಂತ ನಾಗ್ಪುರದಲ್ಲಿ ನಡೆಯಲಿದೆ.

ಡಬ್ಲ್ಯುಟಿಸಿ: ಆರನೇ ಸ್ಥಾನಕ್ಕೆ ಕುಸಿದ ಭಾರತ

ದುಬೈ (ಪಿಟಿಐ): ಭಾರತ ತಂಡ, ಬುಧವಾರ ಪ್ರಕಟವಾದ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೆ ಇಳಿಯಿತು. ಪಾಕಿಸ್ತಾನದ ಎದುರು ಬುಧವಾರ ಸರಣಿ ಜಯಿಸಿದ ಬಾಂಗ್ಲಾದೇಶ ತಂಡವು ಭಾರತವನ್ನು ಹಿಂದೆಹಾಕಿ ಐದನೇ ಸ್ಥಾನ ಪಡೆದಿದೆ.

ಆಸ್ಟ್ರೇಲಿಯಾ ತಂಡವು 87.50 ಪರ್ಸೆಂಟೇಜ್ ಪಾಯಿಂಟ್‌ಗಳೊಂದಿಗೆ ಕ್ರಮಾಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಕಾಂಗರೂ ಪಡೆ ಆಡಿದ ಎಂಟು ಟೆಸ್ಟ್‌ಗಳಲ್ಲಿ ಏಳು ಗೆದ್ದು, ಒಂದು ಸೋತಿದೆ. ನ್ಯೂಜಿಲೆಂಡ್ (77.78 ಪಾಯಿಂಟ್ಸ್) ಎರಡನೇ, ದಕ್ಷಿಣ ಆಫ್ರಿಕಾ ಮೂರನೇ ಮತ್ತು ಶ್ರೀಲಂಕಾ ನಾಲ್ಕನೇ ಸ್ಥಾನದಲ್ಲಿವೆ.

ಹಾಲಿ ಡಬ್ಲ್ಯುಟಿಸಿ ಅವಧಿಯಲ್ಲಿ ಬಾಂಗ್ಲಾದೇಶ ನಾಲ್ಕು ಟೆಸ್ಟ್‌ಗಳಲ್ಲಿ ಎರಡು ಗೆದ್ದು, ಒಂದು ಸೋತು, ಒಂದು ಡ್ರಾ ಮಾಡಿದ್ದು 58.33 ಪರ್ಸೆಂಟೇಜ್ ಪಾಯಿಂಟ್ ಪಡೆದಿದೆ. ಭಾರತ 9 ಟೆಸ್ಟ್‌ಗಳಲ್ಲಿ (4 ಜಯ, 4 ಸೋಲು, 1 ಡ್ರಾ) 48.15 ಪಾಯಿಂಟ್ಸ್ ಪಡೆದಿದೆ.

ಶುಭಮನ್ ಗಿಲ್ ನೇತೃತ್ವದ ತಂಡ ಈ ವರ್ಷ ಒಂದೂ ಟೆಸ್ಟ್ ಆಡಿಲ್ಲ. ಏಷ್ಯಾ ಮಟ್ಟದಲ್ಲಿ ಭಾರತ ಈಗ ಪಾಕಿಸ್ತಾನಕ್ಕಿಂತ ಮಾತ್ರ ಮೇಲೆ ಇದೆ. ಭಾರತ ಜೂನ್ 6 ರಿಂದ ಅಫ್ಗಾನಿಸ್ತಾನ ವಿರುದ್ಧ ಏಕೈಕ ಟೆಸ್ಟ್ ಆಡಲಿದೆ. ಆದರೆ ಅದು ಡಬ್ಲ್ಯುಟಿಸಿ ರ‍್ಯಾಂಕಿಂಗ್ ಗಣನೆಗೆ ಬರುವುದಿಲ್ಲ.

ಭಾರತ ತಂಡ ಈ ವರ್ಷ ತಲಾ ಎರಡು ಟೆಸ್ಟ್ ಪಂದ್ಯಗಳ ಸರಣಿಯನ್ನು ಆಡಲು ಶ್ರೀಲಂಕಾ ಮತ್ತು ನ್ಯೂಜಿಲೆಂಡ್‌ಗೆ ತೆರಳಲಿದೆ. 2027ರ ಆರಂಭದಲ್ಲಿ ಆಸ್ಟ್ರೇಲಿಯಾ ತಂಡವನ್ನು ತವರಿನಲ್ಲಿ ಎದುರಿಸಲಿದೆ.

ತೈಜುಲ್ ದಾಳಿ; ಸರಣಿ ಸ್ವೀಪ್ ಮಾಡಿದ ಬಾಂಗ್ಲಾ

ಸಿಲ್ಹೆಟ್ (ಬಾಂಗ್ಲಾದೇಶ), (ಎಎಫ್‌ಪಿ): ಎಡಗೈ ಸ್ಪಿನ್ನರ್ ತೈಜುಲ್ ಇಸ್ಲಾಂ (34.2–4–120–6) ಅವರ ಅಮೋಘ ಬೌಲಿಂಗ್ ನೆರವಿನಿಂದ ಬಾಂಗ್ಲಾದೇಶ ತಂಡವು ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಅಂತಿಮ ದಿನವಾದ ಬುಧವಾರ 78 ರನ್‌ಗಳಿಂದ ಪಾಕಿಸ್ತಾನ ತಂಡವನ್ನು ಸೋಲಿಸಿತು. ಸರಣಿಯನ್ನು 2–0ಯಿಂದ ಗೆದ್ದುಕೊಂಡಿತು.

ತೈಜುಲ್ ಇಸ್ಲಾಂ

ಗೆಲುವಿಗೆ 437 ರನ್‌ಗಳ ಗುರಿ ಎದುರಿಸಿದ್ದ ಪಾಕಿಸ್ತಾನ (ಮಂಗಳವಾರ: 7ಕ್ಕೆ 316) ಕೊನೆಯ ದಿನ 358 ರನ್‌ಗಳಿಗೆ ಉರುಳಿತು. ವಿಕೆಟ್ ಕೀಪರ್ ಮೊಹಮ್ಮದ್ ರಿಜ್ವಾನ್ ಹೋರಾಟದ ಆಟವಾಡಿ 94 ರನ್ ಗಳಿಸಿದರು.

ಇದು ತವರಿನಲ್ಲಿ ಬಾಂಗ್ಲಾದೇಶ ತಂಡಕ್ಕೆ ಪಾಕ್ ವಿರುದ್ಧ ಮೊದಲ ಸರಣಿ ಜಯ. ಸತತ ಎರಡನೇ 'ಕ್ಲೀನ್ ಸ್ವೀಪ್' ಕೂಡ. 2024ರಲ್ಲಿ ಪಾಕ್ ನೆಲದಲ್ಲೂ ಬಾಂಗ್ಲಾದೇಶ 2–0 ಯಿಂದ ಸರಣಿಯನ್ನು ಜಯಿಸಿತ್ತು. ಬಾಂಗ್ಲಾದೇಶ ಸತತ ಎರಡು ಟೆಸ್ಟ್ ಸರಣಿ ಗೆದ್ದಿದ್ದು ಇದೇ ಮೊದಲು.

ತೈಜುಲ್ ಟೆಸ್ಟ್ ಪಂದ್ಯಗಳಲ್ಲಿ 18ನೇ ಬಾರಿ ಐದು ಅಥವಾ ಅದಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದರು. ಮೊದಲ ಇನಿಂಗ್ಸ್‌ನಲ್ಲಿ 3 ವಿಕೆಟ್ ಪಡೆದಿದ್ದರು.

ಮೊದಲ ಇನಿಂಗ್ಸ್‌ನಲ್ಲಿ 126 ರನ್ ಮತ್ತು ಎರಡನೇ ಇನಿಂಗ್ಸ್‌ನಲ್ಲಿ 69 ರನ್ ಬಾರಿಸಿದ ಲಿಟನ್ ದಾಸ್ ಪಂದ್ಯದ ಆಟಗಾರ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 278 ಮತ್ತು 390; ಪಾಕಿಸ್ತಾನ: 232 ಮತ್ತು 358 (ಸಲ್ಮಾನ್ ಆಘಾ 71, ಮೊಹಮ್ಮದ್ ರಿಜ್ವಾನ್ 94, ಸಾಜಿದ್ ಖಾನ್ 28, ನಹೀದ್ ರಾಣಾ 71ಕ್ಕೆ2, ತೈಜುಲ್ ಇಸ್ಲಾಂ 120ಕ್ಕೆ6)

ಮಾಳವಿಕಾ, ಅಶ್ಮಿತಾ ಮುನ್ನಡೆ; ಲಕ್ಷ್ಯ, ಪ್ರಣಯ್ ನಿರ್ಗಮನ

ಕ್ವಾಲಾಲಂಪುರ (ಪಿಟಿಐ): ಭಾರತದ ಮಾಳವಿಕಾ ಬನ್ಸೋಡ್, ದೇವಿಕಾ ಸಿಹಾಗ್ ಮತ್ತು ಅಶ್ಮಿತಾ ಚಾಲಿಹಾ ಅವರು ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿಯ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯಗಳಲ್ಲಿ ಜಯಗಳಿಸಿದರು. ಆದರೆ ಅನುಭವಿ ಆಟಗಾರರು ಸೋತು ಭಾರತಕ್ಕೆ ಬುಧವಾರ ನಿರಾಸೆ ಕಾಡಿತು.

ಮಾಳವಿಕಾ

ಮಾಳವಿಕಾ ಮೂರು ಗೇಮ್‌ಗಳ ಹೋರಾಟದಲ್ಲಿ ಯುವೊನೆ ಲಿ (ಜರ್ಮನಿ) ಅವರನ್ನು 21–17, 16–21, 21–9 ರಿಂದ ಹಿಮ್ಮೆಟ್ಟಿಸಿದರು. ಅಶ್ಮಿತಾ ಇನ್ನೊಂದು ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 56ನೇ ಸ್ಥಾನದಲ್ಲಿರುವ ತಲಿತಾ ರಾಮಧಾನಿ ವಿರ್ಯವನ್ (ಇಂಡೊನೇಷ್ಯಾ) ಅವರನ್ನು 21–16, 21–13 ರಿಂದ ಸೋಲಿಸಿದರು.

ಥಾಯ್ಲೆಂಡ್ ಮಾಸ್ಟರ್ಸ್ ಪ್ರಶಸ್ತಿ ವಿಜೇತರಾದ ದೇವಿಕಾ ಸಿಹಾಗ್ 19–21, 21–18, 21–19 ರಿಂದ ಕೊರಿಯಾದ ಪಾರ್ಕ್ ಗಾ ಯುನ್ ಅವರ ಹೋರಾಟ ಬದಿಗೊತ್ತಿದರು.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಭರವಸೆಯಾಗಿದ್ದ ಎಂಟನೇ ಶ್ರೇಯಾಂಕದ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಅವರು ವಿಶ್ವ ಕ್ರಮಾಂಕದಲ್ಲಿ 38ನೇ ಸ್ಥಾನದಲ್ಲಿರುವ ಮೊಹಮ್ಮದ್ ಝುಕಿ ಉಬೇದುಲ್ಲಾ ಅವರಿಗೆ 17–21, 11–21 ರಿಂದ ಮಣಿದರು. ಎಚ್.ಎಸ್.ಪ್ರಣಯ್ ಅವರು ಆರನೇ ಶ್ರೇಯಾಂಕದ ಆಟಗಾರ, ಜಪಾನ್‌ನ ಕೊಡೈ ನರವೋಕಾ ಅವರೆದುರು 17–21, 22–20, 22–24ರಲ್ಲಿ ಸೋಲನುಭವಿಸಿದರು.

ಕಿರಣ್ ಜಾರ್ಜ್ ಅವರು 15–21, 1–6 ರಲ್ಲಿ ಹಿನ್ನಡೆಯಲ್ಲಿದ್ದಾಗ ಏಳನೇ ಶ್ರೇಯಾಂಕದ ಅಲೆಕ್ಸ್ ಲನಿಯರ್ (ಫ್ರಾನ್ಸ್) ಅವರಿಗೆ ಪಂದ್ಯ ಬಿಟ್ಟುಕೊಟ್ಟರು.

ತರುಣ್ ಮನ್ನೆಪಲ್ಲಿ 21–17, 14–21, 8–21ರಲ್ಲಿ ಚೀನಾ ತೈಪೆಯ ವಾಂಗ್ ಪೊ–ವೀ ಅವರಿಗೆ ಸೋತರು.

ಎಸ್.ಎಂ.ಕೃಷ್ಣ ಸ್ಮರಣಾರ್ಥ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿ

ಕ್ವಾರ್ಟರ್‌ಫೈನಲ್‌ಗೆ ಮುಕುಂದ್ ಲಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮುಕುಂದ್ ಶಶಿಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಎಸ್.ಎಂ.ಕೃಷ್ಣ ಸ್ಮರಣಾರ್ಥ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಬುಧವಾರ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಅವರನ್ನು ಹೊರತುಪಡಿಸಿ ಭಾರತದ ಇತರ ಆಟಗಾರರ ಹೋರಾಟ 16ರ ಘಟ್ಟದಲ್ಲಿಯೇ ಅಂತ್ಯಗೊಂಡಿತು.

ಚೆನ್ನೈನ 29 ವರ್ಷ ವಯಸ್ಸಿನ ಆಟಗಾರ ಸೆಂಟ್ರಲ್ ಕೋರ್ಟ್‌ನಲ್ಲಿ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 6–4, 7–6(1)ರಲ್ಲಿ ನೇರ ಸೆಟ್‌ಗಳಿಂದ ಜಪಾನ್‌ನ ತೈಯೊ ಯಮಾನಕ ಅವರನ್ನು ಮಣಿಸಿದರು. 1 ಗಂಟೆ 54 ನಿಮಿಷಗಳವರೆಗೆ ಸಾಗಿದ ಪಂದ್ಯದಲ್ಲಿ ತಾಳ್ಮೆಯಿಂದಲೇ ಆಡಿದ ಮುಕುಂದ್ ಅವರು ಮೊದಲ ಸೆಟ್‌ಅನ್ನು ಸುಲಭವಾಗಿ ಗೆದ್ದರು. ಟೈಬ್ರೇಕರ್‌ವರೆಗೆ ಸಾಗಿದ ಎರಡನೇ ಸೆಟ್‌ಅನ್ನು ಜಯಿಸಲು ಭಾರತದ ಆಟಗಾರ ಬೆವರು ಹರಿಸಬೇಕಾಯಿತು.

ಮುಕುಂದ್ ಶಶಿಕುಮಾರ್ ಸಂಭ್ರಮ ಚಿತ್ರ: ಕೆಎಸ್‌ಎಲ್‌ಟಿಎ

ಎರಡನೇ ಶ್ರೇಯಾಂಕದ ಅಲಸ್ಟೇರ್ ಗ್ರೇ (ಬ್ರಿಟನ್) ಅವರು 6–3, 7–6 (2) ರಿಂದ ಜೆಕ್ ಗಣರಾಜ್ಯದ ಡೊಮಿನಿಕ್ ಪಾಲನ್ ಅವರನ್ನು ಸೋಲಿಸಿದರು. ಆ ಮೂಲಕ, ಗುರುವಾರ ನಡೆಯುವ ಎಂಟರ ಘಟ್ಟದಲ್ಲಿ ಮುಕುಂದ್ ಎದುರು ಸೆಣಸಲು ವೇದಿಕೆ ಸಿದ್ಧಪಡಿಸಿಕೊಂಡರು.

ಆದರೆ, ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದ ಬೆಂಗಳೂರಿನ ಕ್ರಿಶ್ ತ್ಯಾಗಿ ಅವರು 6–4, 4–6, 3–6ರಿಂದ ಬ್ರಿಟನ್‌ನ ಹಮಿಶ್ ಸ್ಟುವರ್ಟ್ ಅವರಿಗೆ ಮಣಿದರು.

ಅಗ್ರ ಶ್ರೇಯಾಂಕದ ಆಟಗಾರ ಕೀಗನ್ ಸ್ಮಿತ್ ಅವರಿಗೆ ಆಘಾತ ನೀಡಿದ್ದ ಮನೀಷ್ ಸುರೇಶ್‌ಕುಮಾರ್ ಅವರ ಹೋರಾಟವೂ ಕ್ವಾರ್ಟರ್‌ಫೈನಲ್‌ನಲ್ಲಿಯೇ ಅಂತ್ಯಗೊಂಡಿತು. ತಮಿಳುನಾಡಿನ ಆಟಗಾರ 1–6, 1–6ರಿಂದ ಹೆಚ್ಚು ಪ್ರತಿರೋಧ ತೋರದೆ ಬೆಲರೂಸ್‌ನ ಇಲ್ಯಾ ಇವಾಶ್ಕ ಎದುರು ಸೋತರು.

ಸಿದ್ಧಾರ್ಥ್ ರಾವತ್ ಅವರು 3–6, 1–6ರಿಂದ ಆರನೇ ಶ್ರೇಯಾಂಕದ ಆಟಗಾರ, ಸರ್ಬಿಯಾದ ಒಗ್ನೆಂಜನ್ ಮಿಲಿಕ್ ವಿರುದ್ಧ ಪರಾಭವಗೊಂಡರು.

ನಿಕಿ– ಸಾಕೇತ್ ಜೋಡಿ ಮುನ್ನಡೆ: ಕರ್ನಾಟಕದ ನಿಕಿ ಕಲಿಯಂಡ ಪೂಣಚ್ಚ– ಆಂಧ್ರ ಪ್ರದೇಶದ ಸಾಕೇತ್ ಮೈನೇನಿ ಜೋಡಿ ಎಂಟರ ಘಟ್ಟಕ್ಕೆ ಮುನ್ನಡೆಯಿತು. ಈ ಜೋಡಿ 6–2, 6–3ರಿಂದ ಫ್ರಾನ್ಸಿಸ್ ಕ್ಯಾಸಿ ಅಲ್ಕಂತಾರಾ (ಫಿಲಿಪ್ಪೀನ್ಸ್)– ಮ್ಯಾಕ್ಸಿಮಸ್ ಜೋನ್ಸ್ (ಥಾಯ್ಲೆಂಡ್) ಅವರನ್ನು ಹಿಮ್ಮೆಟ್ಟಿಸಿತು.

ಬೆಂಗಳೂರಿನ ಆದಿಲ್ ಕಲ್ಯಾಣಪುರ– ಮುಕುಂದ್ ಜೋಡಿ 6–3, 7–5ರಿಂದ ಡೊಮಿನಿಕ್ ಪಾಲನ್ ಹಾಗೂ ದಿಗ್ವಿಜಯ್ ಪ್ರತಾಪ್ ಸಿಂಗ್ ಅವರನ್ನು ಸೋಲಿಸಿತು.